ಕೃಷಿ ಸಂಸ್ಕೃತಿಯಲ್ಲಿ ಕರಾವಳಿಯ ಮಹಿಳೆ

ಶ್ರೀಮತಿ ಜ್ಯೋತಿ ಚೇಳ್ಯಾರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು - 6

ಕೃಷಿ ಸಂಸ್ಕೃತಿಯಲ್ಲಿ ಕರಾವಳಿಯ ಮಹಿಳೆ

ಶ್ರೀಮತಿ ಜ್ಯೋತಿ ಚೇಳ್ಯಾರು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು – 6

Krishi Samskritiyalli Karavaliya Mahile

A Research Study on The Role of Coastal Women in Cultivation Complied by Jyothi Chelairu, Kshithija, Site No.382, Chelyaru Post, Via Haleyangadi, Mangalore Dakshina Kannada – 574146, Mobile: 9480570882.

Chief Editor	:	**M. Janaki Brahmavara** President Karnataka Tulu Sahithya Academy
Publisher	:	**Chandrahasa Rai B** Registrar Karnataka Tulu Sahithya Academy
Published by	:	Karnataka Tulu Sahithya Academy Tulu Bhavana, Urvastore, Post: Ashoka Nagar Mangaluru - 575006 Tel: 0824-2459389 email: tulu.academy@yahoo.co.in
©	:	Karnataka Tulu Sahithya Academy
First Edition	:	2016
No. of Copies	:	300
Pages	:	96
Price	:	80/-
Design & Printed at	:	Pavan Graphics Industries First Floor, N.D. Complex, Opp.Gokarnanatheshwara Temple, Alake Kudroli, Mangalore. Ph. : 9242885743

ಅಧ್ಯಕ್ಷರ ಮಾತು

ತುಳುನಾಡು, ತುಳುನುಡಿ, ಹಾಗೆನೇ ಕೃಷಿ ಆಧಾರಿತ ಬದುಕಿನಲ್ಲಿ ತುಳುವರು ರೂಢಿಸಿಕೊಂಡ ಸಂಸ್ಕೃತಿಯ ಬಗೆಗಿನ ಅಧ್ಯಯನಕ್ಕೆ ಬಹಳಷ್ಟು ಅವಕಾಶವಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಈ ತರಹದ ಅಧ್ಯಯನಕ್ಕೆ ಮಹತ್ವ ನೀಡಿ, ತನ್ನ ಕ್ರಿಯಾಯೋಜನೆಯಲ್ಲಿ ಫೆಲೋಶಿಪ್ ಅಧ್ಯಯನ ಯೋಜನೆಯನ್ನೂ ಅಳವಡಿಸಿಕೊಂಡಿತು. ಸರಕಾರದ ಅನುದಾನವನ್ನು ಬಳಸಿಕೊಂಡು ಅರ್ಹ ವಿದ್ವಾಂಸರನ್ನು ಮುಖತ: ಸಂದರ್ಶನದ ಮೂಲಕ ಆಯ್ಕೆಮಾಡಿ, ಫೆಲೋಶಿಪ್ ನೀಡಿ, ಈ ಅಧ್ಯಯನಾತ್ಮಕ ಕೆಲಸದಲ್ಲಿ ತೊಡಗಿಸಿತು. 2012ನೇ ಇಸವಿಯಿಂದ ಆರಂಭಗೊಂಡ ಈ ಫೆಲೋಶಿಪ್ ಆಧಾರಿತ ಅಧ್ಯಯನ ಮುಂದುವರಿಯುತ್ತಾ ಬರುತಿದ್ದು, ಈಗಾಗಲೇ ಸಿದ್ಧಗೊಂಡ ಬರಹಗಳು ಇದೀಗ ಪ್ರಕಟಗೊಳ್ಳುತ್ತಿವೆ.

2012–2013ನೇ ಸಾಲಿನ ಫೆಲೋಶಿಪ್ ಪಡೆದು ಅಧ್ಯಯನಕ್ಕೆ ನಿಯುಕ್ತರಾದ ಶ್ರೀಮತಿ ಜ್ಯೋತಿಯವರು 'ಕೃಷಿ ಸಂಸ್ಕೃತಿಯಲ್ಲಿ ಕರಾವಳಿಯ ಮಹಿಳೆ' ಎಂಬ ವಿಷಯದಲ್ಲಿ ಡಾ. ಗಣೇಶ ಅಮೀನ್ ಸಂಕಮಾರ್‌ರವರ ಮಾರ್ಗದರ್ಶನದಲ್ಲಿ ನಡೆಸಿದ ಅಧ್ಯಯನ ವಿಚಾರಗಳನ್ನು ಕೃತಿರೂಪದಲ್ಲಿ ಅಕಾಡೆಮಿಗೆ ಸಲ್ಲಿಸಿರುತ್ತಾರೆ. ಪ್ರಪಂಚದ ಇತಿಹಾಸದ ಆರಂಭದಿಂದಲೂ ಕೃಷಿಕಾರ್ಯದಲ್ಲಿ ಮಹಿಳೆಯರದು ಪುರುಷರೊಂದಿಗೆ ಸಹಭಾಗಿತ್ವದ, ಸಮಭಾಗಿತ್ವದ ದುಡಿಮೆ. ಕರಾವಳಿ ಪ್ರದೇಶದ ಬಹುತೇಕ ಮಹಿಳೆಯರೂ ಕೃಷಿಕಾಯಕದಲ್ಲಿ ತೊಡಗಿಸಿಕೊಂಡವರೇ ಮತ್ತು ಕೃಷಿ ಬದುಕಿನ ಇಷ್ಟಕಷ್ಟಗಳನ್ನು ಅನುಭವಿಸಿದವರೇ. ಕರಾವಳಿ ಪ್ರದೇಶವನ್ನು ಬಹುಬಗೆಯ ಬೆಳೆಗಳಿಂದ ಸಂಪನ್ನಗೊಳಿಸಿದವರೇ. 'ದುಡಿಮೆಯೇ ದೇವರು' ಎಂಬ ತಾತ್ವಿಕತೆಯಲ್ಲಿ ಬದುಕು ಸವೆಸುತ್ತಾ ಕೃಷಿ ಸಂಸ್ಕೃತಿಯ ಉಳಿವು, ಏಳಿಗೆಗಾಗಿ ಶ್ರಮಿಸಿದ ಈ ಬಹುಸಂಖ್ಯಾತ ಮಹಿಳೆಯರ ಸಮಷ್ಟಿ ಸಾಧನೆಗಳೆಡೆಗೆ ಬೆಳಕು ಚೆಲ್ಲುವ ಈ ಅಧ್ಯಯನ ಗ್ರಂಥವನ್ನು ಪ್ರಕಟಿಸಲು ಅಕಾಡೆಮಿಯು ಸಂತೋಷ ಪಡುತ್ತಿದೆ. ಈ ಸಂದರ್ಭದಲ್ಲಿ ಸದಾ ಅಧ್ಯಯನಶೀಲೆಯಾದ ಸಂಶೋಧಕಿ, ಲೇಖಕಿ ಶ್ರೀಮತಿ ಜ್ಯೋತಿಯವರನ್ನು ಅಕಾಡೆಮಿ ಅಭಿನಂದಿಸುತ್ತಿದೆ. ಮಾರ್ಗದರ್ಶನ ಮಾಡಿದ ಡಾ. ಗಣೇಶ ಅಮೀನ್ ಸಂಕಮಾರ್‌ರವರಿಗೆ ಶುಭ ಹಾರೈಸುತ್ತಿದೆ. ಮತ್ತು ಮುದ್ರಣದಲ್ಲಿ ಸಹಕರಿಸಿದ 'ಪವನ್ ಗ್ರಾಫಿಕ್ಸ್' ನ ಪ್ರಸನ್ನ ಮತ್ತು ಬಳಗದವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

ಎಮ್. ಜಾನಕಿ. ಬ್ರಹ್ಮಾವರ
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯಅಕಾಡೆಮಿ
ಮಂಗಳೂರು.

14–10–2016

ಹೆಣ್ಣಿನ ಸತ್ಯದ ಒಂದು ಎಳೆ

ಸಂಶೋಧನೆ ಎನ್ನುವುದು ಅನ್ವೇಷಣೆಯ ಮನೋಧರ್ಮ. ನಮ್ಮ ಸುತ್ತಲಿನ ಜಗತ್ತನ್ನು ತೆರೆದ ಕಣ್ಣಿನಿಂದ ಪೂರ್ವಾಗ್ರಹಗಳು ಇಲ್ಲದೆ ನೋಡಿದಾಗ ಅಲ್ಲಿಯ ಸತ್ಯಗಳು ಸರಳವಾಗಿ ಗ್ರಹೀತವಾಗುತ್ತವೆ. ವರ್ತಮಾನದ ಬದುಕಿನ ಕ್ಲೀಷೆಗಳಿಗೆ ಕೇವಲ ಚರಿತ್ರೆಯ ಪುಟಗಳಲ್ಲಿ ಮುಖ ಹುದುಗಿಸಿ ತಮ್ಮ ವಿಚಾರದ ತರ್ಕಗಳನ್ನು ವೈಭವೀಕರಿಸುವುದಕ್ಕಿಂತ ವಸ್ತುನಿಷ್ಠವಾಗಿ ಅರ್ಥೈಸಿ ವಿಶ್ಲೇಷಿಸುವುದು ಬಹಳ ಮುಖ್ಯವೆನಿಸುತ್ತದೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕರಾವಳಿಯಲ್ಲಿನ ಬೇರು ಯಾವುದು ಎಂಬ ಕುತೂಹಲ ಇದ್ದದ್ದೇ. ವಾಣಿಜ್ಯ ಕೇಂದ್ರವಾಗಿ ಬೆಳೆಯುತ್ತಿರುವ ಕರಾವಳಿಯ ಉದ್ದ – ಅಗಲಗಳಲ್ಲೂ ಕಾಂಕ್ರೀಟ್ ಕಾಡು ವೃದ್ಧಿಸುತ್ತಾ ಇದೆ. ಬದಲಾಗುತ್ತಿರುವ ಹವಮಾನದ ಪರಿಸ್ಥಿತಿ ಆತಂಕವನ್ನು ಸೃಷ್ಠಿಸುತ್ತಿದೆ. ಹಾಗಿದ್ದೂ ಇವೆಲ್ಲದರ ಮಧ್ಯೆ ಇಲ್ಲಿಯ ಭೌಗೋಳಿಕತೆ ಬದುಕಿನ ಆಲೋಚನಾ ಕ್ರಮಗಳಿಗೆ ವಿಭಿನ್ನವಾಗಿ ತಮ್ಮದೇ ಅನನ್ಯತೆಯನ್ನು ಹೊಂದಿವೆ.

ಕೃಷಿ ಕುಟುಂಬದಿಂದ ಬಂದವಳಾದ ನನಗೆ ಕೃಷಿ ಬದುಕನ್ನು ಬಾಳಿ ತಿಳಿದಿತ್ತು. ಬಹುರಾಷ್ಟ್ರೀಯ ಕಂಪೆನಿಗಾಗಿ ವಿಸ್ತಾರವಾದ ಕೃಷಿಭೂಮಿ ಕಳಕೊಂಡು ನಿರ್ವಸಿತರಾದಾಗ ಕೃಷಿಯ ಮಹತ್ವವು ತಿಳಿದಿತ್ತು. ಸಂಸ್ಕೃತಿ ಚಿಂತನೆಯ ಅಧ್ಯಯನದಲ್ಲಿ ಹೆಣ್ಣು ಕೃಷಿಯ ಕೇಂದ್ರ ಭಾಗದಲ್ಲಿರುವುದು ಇನ್ನಷ್ಟು ಕೂತುಹಲವನ್ನು ಹೆಚ್ಚಿಸಿತು. ಅಧ್ಯಯನ ಮತ್ತು ಚಿಂತನೆಗಳಿಂದ ಉಳಿದ ಪ್ರದೇಶಗಳಿಗಿಂತ ಕರಾವಳಿಯ ಕೃಷಿ ಮತ್ತು ಮಹಿಳೆಯ ವಿಭಿನ್ನತೆ ಮೇಲ್ನೋಟಕ್ಕೆ ಸಾಬೀತಾಗಿತ್ತು. ಈ ವಿಚಾರವನ್ನೇ ಒಟ್ಟುಗೂಡಿಸಿ "ಕೃಷಿ ಸಂಸ್ಕೃತಿಯಲ್ಲಿ ಕರಾವಳಿಯ ಮಹಿಳೆ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ತನ್ನ ಕಾರ್ಯಯೋಜನೆಯಲ್ಲಿ ಸಂಶೋಧನೆಗೂ ಒತ್ತು ಕೊಟ್ಟಿದೆ. ನಿಯಮಾವಳಿಯಂತೆ ಪ್ರತಿ ವರ್ಷವೂ ಹಿರಿ–ಕಿರಿಯ ಸಂಶೋಧಕರನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿದೆ. ಸಂಶೋಧನೆಯ ಕಾರ್ಯ ಚಟುವಟಿಕೆಗಳನ್ನು ಬೆಂಬಲಿಸಿ ಪ್ರೋತ್ಸಾಹಿಸಿದೆ.

ಗೆಳತಿ ಸಾಯಿಗೀತಾಳ ಸಲಹೆ ಒಡನಾಟದೊಂದಿಗೆ, ಸಂದರ್ಶನಕ್ಕೆ ಹಾಜರಾಗಿ ಅಧ್ಯಯನಕ್ಕೆ ತೊಡಗಿದುದು ಒಂದು ಒಳ್ಳೆಯ ಅವಕಾಶವೇ ಆಗಿತ್ತು. ಈ ಹಿಂದಿನ ಸಾಲಿನ ಅಧ್ಯಕ್ಷರಾದ ಶ್ರೀ ಉಮನಾಥ ಕೋಟ್ಯಾನ್ ಮತ್ತು ಸರ್ವ ಸದಸ್ಯರು ನೇಮಿಸಿದ ಆಯ್ಕೆ ಸಮಿತಿ ಮುಂದೆ ಓರ್ವ ಸಂಶೋಧನಾರ್ಥಿಯಾಗಿ ಮಂಡಿಸಿದ ಸಾರಾಲೇಖದಿಂದ ಆಯ್ಕೆ ಮಾಡಿದರು. ಹೀಗೆ ಆಯ್ಕೆಯದವರು ಅಧ್ಯಯನವನ್ನು ಮುಂದುವರಿಸುವವರೇ ಅಕಾಡೆಮಿಯ

ಈಗಿನ ಅಧ್ಯಕ್ಷರು ಮತ್ತು ಸದಸ್ಯರು ಅನುವು ಮಾಡಿ ಕೊಟ್ಟರು. ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಯಾವುದೇ ಕೆಲಸ ಕಾರ್ಯಗಳು ಯಶಸ್ಸಿನ ಬೆನ್ನು ಹತ್ತಬೇಕಾದರೆ ಅದನ್ನು ಕಾರ್ಯರೂಪಕ್ಕಿಳಿಸುವವರು ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ. ಚಂದ್ರಹಾಸ ರೈ ಬಿ. ಇವರನ್ನು ಗೌರವದಿಂದ ನೆನೆಯುತ್ತೇನೆ.

ಆಯ್ಕೆ ಸಮಿತಿಯಲ್ಲಿ ಉಪಸ್ಥಿತರಿದ್ದ ಕಾ. ತ. ಚಿಕ್ಕಣ್ಣ ಮತ್ತು ಅಧ್ಯಯನದ ಮಾರ್ಗದರ್ಶಕರಾದ ಡಾ। ಗಣೇಶ್ ಅಮೀನ್ ಸಂಕಮಾರ್ ಹಿಂದಿನ ಅವಧಿಯ ತುಳು ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ಉಮನಾಥ ಕೋಟ್ಯಾನ್ ಹಾಗೂ ಅವರೊಂದಿಗಿನ ಸರ್ವ ಸದಸ್ಯರಿಗೂ ಗೌರವದ ವಂದನೆಗಳು.

ಡಿ.ಟಿ.ಪಿ. ಮಾಡಿದ ಚೈತ್ರಾಳಿಗೆ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಜಗದೀಶ್ ಅಂಚನ್ ರವರಿಗೆ, ಛಾಯಾಚಿತ್ರಗಳನ್ನು ಒದಗಿಸಿದ ರಾಮದಾಸ್ ಸಸಿಹಿತ್ಲು ಇವರಿಗೆ, ಮುದ್ರಿಸಿದ ಪವನ್ ಗ್ರಾಫಿಕ್ಸ್ ಇಂಡಸ್ಟ್ರೀಸ್‌ನ ಪ್ರಸನ್ನರವರಿಗೂ ನನ್ನ ವಂದನೆಗಳು.

ಅಧ್ಯಯನ ಮಾಡಿದ ಕೃತಿಯು ಬೀರುವಿನ ಭದ್ರಕೋಟೆಯಲ್ಲಿ ಬಂದಿಯಾಗದೆ ಓದುಗ ವರ್ಗಕ್ಕೆ ತಲುಪಲು ಕಾರಣರಾದವರು, ತುಳು ಆಕಾಡೆಮಿಯ ಅಧ್ಯಕ್ಷರು ಮತ್ತು ಸರ್ವ ಸದಸ್ಯರು. ಸಂಶೋಧನಾ ಕೃತಿಯನ್ನು ಪ್ರಕಟಿಸುತ್ತಿರುವ ಈ ಹೊತ್ತು ಸರ್ವರನ್ನು ಪ್ರೀತಿಯಿಂದ ಸ್ಮರಿಸುತ್ತಾ ಓದುಗರೂ ಕೃತಿಯನ್ನು ಕೊಂಡು ಓದಿ ಹರಸುವರೆಂದು ಆಶಿಸುತ್ತೇನೆ.

ವಂದನೆಗಳೊಂದಿಗೆ,

21/11/2016
ಚೇಳ್ಯಾರು

ಜ್ಯೋತಿ ಚೇಳ್ಯಾರು

ಅಧ್ಯಾಯಗಳು:

1. ಕರಾವಳಿ ಕೃಷಿ ಸಂಸ್ಕೃತಿಯ ಅರ್ಥದ ನಿಷ್ಪನ್ನ.
2. ಕೃಷಿ ಸಂಸ್ಕೃತಿಯ ಸಾಂಸ್ಕೃತಿಕ ಪರಂಪರೆ–ಚಾರಿತ್ರಿಕ ಮತ್ತು ಸಾಮಾಜಿಕ
3. ಮಹಿಳೆ ಮತ್ತು ಕೃಷಿ ಸಂಸ್ಕೃತಿಯ ಸಂಬಂಧ
4. ಕರಾವಳಿಯ ಕೃಷಿಯ ಚರಿತ್ರೆ
5. ಕರಾವಳಿಯ ಕೃಷಿಯಲ್ಲಿ ಬೆಳೆವ ಬೆಳೆಗಳು
6. ಬೆಳೆಯನ್ನು ಬೆಳೆಯುವ ಹಂತಗಳು
7. ಕರಾವಳಿಯ ಕೃಷಿ ಸಂಸ್ಕೃತಿಗೂ ಮಹಿಳೆಗೂ ಇರುವ ಸಂಬಂಧ
8. ಸಂಸ್ಕೃತಿ ಚಿಂತನೆಯಲ್ಲಿ ವ್ಯಕ್ತವಾಗುವ ಅರ್ಥಸಾಧ್ಯತೆಗಳು–ಆರಾಧನಾ ಪರಂಪರೆ ಮತ್ತು ಆಚರಣೆ–ವಿಧಿ ನಿಷೇಧಗಳು–ನಂಬಿಕೆಗಳು
9. ಕರಾವಳಿಯ ಕುಟುಂಬ ವ್ಯವಸ್ಥೆಗೂ ಕೃಷಿಗೂ ಇರುವ ಸಂಬಂಧ
10. ಕರಾವಳಿಯ ಕೃಷಿ ಬದುಕಿನ ಅನನ್ಯತೆ
11. ಫಲಿತಗಳು

ಅನುಬಂಧ:

ಆಕರ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಅಧ್ಯಾಯ 1 :

ಕರಾವಳಿ ಕೃಷಿ ಸಂಸ್ಕೃತಿಯ ಅರ್ಥದ ನಿಷ್ಪನ್ನ.

'ಕರಾವಳಿಯ ಕೃಷಿ ಸಂಸ್ಕೃತಿ' ಎನ್ನುವ ಈ ಪಾರಿಭಾಷಿಕ ಪದವೇ ಬಹಳಷ್ಟು ಪ್ರಶ್ನೆಗಳನ್ನು ಎತ್ತುತ್ತದೆ. ಸಮುದ್ರ ತೀರದ ಸಮೀಪದ ಮರಳು ಮಿಶ್ರಿತ ಮಣ್ಣು ಅದಕ್ಕೆ ಮುಖಾಮುಖಿಯಾಗಿ ತಲೆಯೆತ್ತಿ ನಿಂತ ಪಶ್ಚಿಮ ಘಟ್ಟದ ಸಾಲುಗಳು ಅದರ ಮಧ್ಯೆ ದೋಣಿಯಾಕಾರದಲ್ಲಿ ಹಬ್ಬಿರುವ ಈ ಮಣ್ಣಲ್ಲಿ ಕೃಷಿಯ ಅನ್ವೇಷಣೆಯಾದದ್ದು ಯಾವಾಗ ಮತ್ತು ಹೇಗೆ? ಎನ್ನುವುದು ಮೂಲಭೂತ ಪ್ರಶ್ನೆ. ಕರಾವಳಿಯಲ್ಲಿ ನಿಜವಾಗಿಯೂ ಕೃಷಿ ಇತ್ತೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡೇ ಅಧ್ಯಯನವನ್ನು ಮುಂದುವರಿಸಬೇಕಾಗುತ್ತದೆ. ಒಂದೆಡೆ ಮೊರೆಯುವ ಕಡಲು ಇನ್ನೊಂದೆಡೆ ನೀರವ ಕಾಡು ಇವುಗಳ ಮಧ್ಯೆ 'ಕೃಷಿ' ಅಥವಾ ಭೂಮಿಗೆ ಹಾಕಿದ ಬೆಳೆ ಬೆಳೆಸಿದ್ದು ಮನುಷ್ಯ ಪ್ರಯತ್ನಗಳ ಸಾಧನೆ, ಅನ್ವೇಷಣೆಗಳೊಂದಿಗೆ ಸಾಹಸವೂ ಕೂಡ ಆಗಿದೆ.

ನದಿ ಸಮುದ್ರವನ್ನು ಸೇರುವ ಅಳಿವೆ ಬಾಗಿಲುಗಳು ಎತ್ತರದ ಘಟ್ಟದಿಂದ ಮೆಕ್ಕಲು ಮಣ್ಣನ್ನು ಹೊತ್ತು ತಂದು ತನ್ನ ಪಾತ್ರ ಮತ್ತು ಗಾತ್ರಗಳನ್ನು ವಿಸ್ತರಿಸುತ್ತಾ ಸಾಗುತ್ತಿದೆ. ಎತ್ತರದ ಬೆಟ್ಟದ ಸಾಲುಗಳಲ್ಲಿ ಕಿರುತೊರೆಯಾಗಿ ನದಿ ಹುಟ್ಟಿದ್ದು ಮುಂದೆ ಸಾಗಿದಂತೆಲ್ಲಾ ಫಲವತ್ತಾದ ಭೂಮಿ ನಿರ್ಮಾಣವಾಗುವುದಕ್ಕೆ ಕಾರಣವಾಯಿತು. ನದಿಗಳು ಮತ್ತು ನದಿಯ ಒಳ ಹರವಿನ ಸಣ್ಣ-ದೊಡ್ಡ ತೋಡುಗಳು, ವಿಸ್ತಾರವಾದ ತೋಕೆ ಕಾನುಗಳು ಇದ್ದ ಪರಿಸರವೇ ಅತಿ ವಿಶಿಷ್ಟವಾದ ಕರಾವಳಿ ಪ್ರದೇಶ. ಕರಾವಳಿ ತೀರದ ಉದ್ದಕ್ಕೂ ಕಾಣಿಸುವ ವಿಶಿಷ್ಟವೆಂದರೆ ಎತ್ತರವಾದ ಬೆಟ್ಟ-ಗುಡ್ಡಗಳು ಅದರ ಬುಡದಲ್ಲಿರುವ ವಿಸ್ತಾರವಾದ ಪ್ರದೇಶಗಳು ಹೀಗೆ ನದಿ-ಹಳ್ಳ-ಕೊಳ್ಳ-ಗುಡ್ಡ-ಬಯಲು-ಕಡಲುಗಳಿಂದ ಕೂಡಿದ್ದ ವಿಶಿಷ್ಟವಾದ ಪ್ರದೇಶವಾಗಿದೆ.

ಕರಾವಳಿ ಹಿಂದೆ ಹೇಗಿತ್ತು ಎಂದು ತಿಳಿಯಬೇಕಾದರೆ ಭೌಗೋಳಿಕ ವಿವರಣೆಗಳ ಒಂದಿಷ್ಟು ಉಲ್ಲೇಖ ಮತ್ತು ಸ್ಥೂಲ ಪರಿಚಯ ಸಿಗುವುದು ತಮಿಳಿನ **'ಸಂಗಂ'** ಸಾಹಿತ್ಯದಲ್ಲಿ. ಕೆಲವು ಸಸ್ಯಗಳ ವಿವರಣೆಯನ್ನು ಹೇಳುವಾಗ ಈ ಉಲ್ಲೇಖ ಬರುತ್ತದೆ. ನಂತರ ಕಲ್ಲಚ್ಚಿನ ಬರಹಗಳಾದ ಅಶೋಕನ ಶಿಲಾ ಶಾಸನಗಳಲ್ಲಿ ಕರಾವಳಿಯ ಭೌಗೋಳಿಕತೆಯ ವಿವರಣೆ ಬರುತ್ತದೆ. ಇವೆಲ್ಲಕ್ಕಿಂತಲೂ ಬಹಳ ಮುಖ್ಯವಾದುದು ಮತ್ತು ಪ್ರಮುಖವಾದುದು ಜನಪದ ಸಾಹಿತ್ಯ ಮತ್ತು ಐತಿಹ್ಯಗಳು. ಪರಶುರಾಮನ ಕತೆಯನ್ನು ಹೇಳಿದರೂ ಅದು ಕಬ್ಬಿಣದ ಯುಗದ ಆರಂಭವನ್ನು ಮಾತ್ರ ಹೇಳಬಹುದು. ಪರಶುರಾಮನನ್ನು ಅರ್ಥೈಸುವ ನೆಲೆಯ ಜಿಜ್ಞಾಸೆಗಳು ಇಂದು ಬಹಳಷ್ಟು ಚರ್ಚೆಗೆ ಗ್ರಾಸವಾಗಿರುವುದರಿಂದ ಕರಾವಳಿಯ ಕೃಷಿ ಬದುಕನ್ನು ಅಲ್ಲಿಂದ ಊಹಿಸಲು ಸಾಧ್ಯವಿಲ್ಲ. ತುಳು ಜನಪದ ಅರಾಧನಾ ಪರಂಪರೆಯಲ್ಲಿ

ಬರುವ ಭೂತಗಳ ಪರಿಕಲ್ಪನೆಯಲ್ಲಿ ಪ್ರಾಣಿ ಜಗತ್ತು ಕೃಷಿ ಜಗತ್ತಿಗೆ ಒಂದಿಷ್ಟು ಸಾಮೀಪ್ಯವನ್ನು ಒದಗಿಸುತ್ತದೆ. ತುಳುವರ ಹೆಚ್ಚಿನ ಎಲ್ಲಾ ಭೂತಗಳು ಘಟ್ಟ ಇಳಿದು ಕೆಳಗೆ ಬಂದಿರುವುದು ಇಲ್ಲವೇ ಕಡಲಿನೊಂದಿಗೆ ಸೆಣಸಾಡಿ ಭೂತಗಳಾಗಿರುವುದು. ಕಾಡು ಮತ್ತು ಕಡಲು ಎರಡರ ಸಂಘರ್ಷದ ಮಧ್ಯೆ ಬದುಕು ಕಟ್ಟಿದ ತುಳುವರು ಬೆಳೆಯನ್ನು ಇದ್ದಕ್ಕಿದ್ದಂತೆ ಅನ್ವೇಷಿಸಲಿಲ್ಲ.

ಅಧ್ಯಾಯ 2 :

ಕೃಷಿ ಸಂಸ್ಕೃತಿಯ ಸಾಂಸ್ಕೃತಿಕ ಪರಂಪರೆ – ಚಾರಿತ್ರಿಕ ಮತ್ತು ಸಾಮಾಜಿಕ

ಕರಾವಳಿಯ ಕೃಷಿ ಬದುಕಿನ ಚರಿತ್ರೆಯನ್ನು ಅರ್ಥೈಸಬೇಕಾದರೆ ಜಗತ್ತಿನ ಸಂಸ್ಕೃತಿ ವಿಕಾಸದ ಹೆಜ್ಜೆಗಳು ಮತ್ತು ಭಾರತೀಯ ಸಮಾಜದ ಚರಿತ್ರೆಯ ಅರಿವು ಅಗತ್ಯ. ಈ ಭೂಮಿಯಲ್ಲಿ ಜೀವ ಸೃಷ್ಟಿಯಾಗುವುದಕ್ಕೆ ಇರುವ ಜಾನಪದ ಕತೆಗಳಲ್ಲಿ ಕೊರಗರ 'ಡೋಲಿನ ಕತೆ' (ಅಣ್ಣ–ತಂಗಿಯರ) ಸೃಷ್ಟಿಯ ಕತೆಯೂ ಒಂದು. ಭೂಮಿಯಲ್ಲಿ ಜೀವ ಹುಟ್ಟಿ, ಸಂತಾನೋತ್ಪತ್ತಿಯಾಗಿ, ಸಂತತಿ ಬೆಳೆಯುವ ಕ್ಷಣಕ್ಕೆ ಮನುಷ್ಯನಿಗೂ ಹಸಿವು ಅಗಾಧವಾಗಿ ಕಾಡಿತು. ಹಸಿವೆಯನ್ನು ನೀಗಿಸಿಕೊಳ್ಳಲು ಮೊದಲು ಗಮನಿಸಿದ್ದು ತಮ್ಮ ಸುತ್ತ ಇರುವ ಪ್ರಕೃತಿಯನ್ನು. ಏನನ್ನು ತಿನ್ನಬೇಕು ಏನನ್ನು ತಿನ್ನಬಾರದು ಎನ್ನುವ ಎಚ್ಚರ ಮತ್ತು ಕುತೂಹಲದ ಜತೆಗೇ ಬೆಳೆದ ಕಾಲವಿದು. ಆಹಾರ ಸಂಗ್ರಹಣೆ ಎನ್ನುವುದು ಆದಿಮಾನವ ಹಸಿವಿಗೆ ಕಂಡುಕೊಂಡ ಮೊದಲ ಹಂತದ ಹುಡುಕಾಟವಾಗಿತ್ತು. ಕಾಡುಗಳಲ್ಲಿ ವಾಸಿಸುತ್ತಿದ್ದ ಅವರಿಗೆ ಹಸಿವು ನೀಗಿಸುವುದಷ್ಟೇ ಸಮಸ್ಯೆಯಾದಾಗ ಪ್ರಾಣಿಗಳ ಬೇಟೆಯನ್ನು ಕಣ್ಣಲೇ ಕಂಡು ತಾನು ಬೇಟೆಯಾಡಲು ಆರಂಭಿಸಿದರು. ಬೇಟೆಯ ಹಂತದಿಂದ ಮುಂದೆ ಬೇಟೆಯಾಡುತ್ತಿದ್ದ ಪ್ರಾಣಿಗಳಿಗಿಂತ ಭಿನ್ನವಾದ ಸಾಕು ಪ್ರಾಣಿಗಳನ್ನಾಗಿಸಲು ಕೆಲವನ್ನು ಪಳಗಿಸಿ ಸಾಕಲು ಆರಂಭಿಸಿದರು. ಸಾಕುತ್ತಿರುವ ಪಶುವಿನ ಉತ್ಪನ್ನವನ್ನು ಮತ್ತು ಪಶುಗಳ ಮಾಂಸವು ಆಹಾರವಾಗಿ ಬಳಕೆಯಾಗಲು ಆರಂಭವಾದಾಗ ಪಶುಪಾಲನೆಯು ಅನಿವಾರ್ಯವಾಯಿತು. ಕಬ್ಬಿಣದೊಂದಿಗೆ ಬೆಂಕಿಯ ಅನ್ವೇಷಣೆಯು ನಾಗರಿಕತೆಯಲ್ಲಿ ಬಹಳ ದೊಡ್ಡ ಸ್ಥಿತ್ಯಂತರ. ಆಹಾರ ಸಂಗ್ರಹಣೆಯಿಂದ ಆಹಾರ ಉತ್ಪಾದನೆಯೆಡೆಗೆ ಸಾಗಿದ ಈ ಹಂತದ ಮಧ್ಯದಲ್ಲಿ ಪಶುಪಾಲನೆಯು ಸಾಗಿ ಬಂದಿದೆ ಎಂದು ಸಂಸ್ಕೃತಿ ಚಿಂತಕರು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ಪ್ರಾಚೀನ ಭಾರತ ದೇಶದ ಚರಿತ್ರೆಗೆ ಒಂದು ಅಂಶಸೂತ್ರವಾಗಿ ಒಂದು ಆರ್ಥಿಕ ಕ್ರಮ ನಡೆದು ಬಂದಿತೆಂಬುವುದನ್ನು ಕೊಸಾಂಬಿಯವರು ಸಮರ್ಥವಾಗಿ ನಿರೂಪಿಸುತ್ತಾರೆ. ಈ ಆರ್ಥಿಕ ಕ್ರಮದಲ್ಲಿ ಮೂರು ಹಂತಗಳಿವೆ. "ಮೊದಲಿನದ್ದು ಆಹಾರ ಸಂಗ್ರಹಣೆಯ ಸ್ಥಿತಿಯಲ್ಲಿ ಬದಲಾವಣೆಯಾಗಿ ಆಹಾರ ಉತ್ಪಾದನೆ ಮೊದಲಾದದ್ದು. ಇದರೆಡರ ನಡುವಿನ ಹಂತವಾಗಿ ಒಮ್ಮೊಮ್ಮೆ ಪಶುಪಾಲನೆ ಬರುತ್ತದೆ. ಎರಡನೆಯದು ಆಹಾರ ಉತ್ಪಾದನೆಯ ಕಾರಣವಾಗಿ ಸ್ಥಿರವಾಸಗಳು ಗ್ರಾಮಗಳು, ರೂಪುಗೊಂಡದ್ದು. ಮೂರನೆಯದ್ದು ಆ ಗ್ರಾಮಗಳಲ್ಲಿ ಶ್ರಮ ವಿಭಜನೆ ಮೊದಲಾಗಿದ್ದರಿಂದಾಗಿ ಸ್ವಯಂ ಘೋಷಣೆ ಸ್ವಭಾವವಾದ ಭೂಸ್ವಾಮ್ಯ ವ್ಯವಸ್ಥೆಗೆ ಅಡಿಪಾಯ ಬಿದ್ದದ್ದು. ಕ್ರಿ.ಪೂ.1000ದಲ್ಲಿ ಆರಂಭಗೊಂಡ ಈ ಪ್ರಕ್ರಿಯೆ ಕ್ರಿ.ಶ.1000ದ ಹೊತ್ತಿಗೆ ನೆಲೆಯೂರಿ ನಿಂತಿತು. ಅಂದ ಮಾತ್ರಕ್ಕೆ ಇದು ಇಂದಿಗೆ

ಕೊನೆಗೊಂಡಿದೆ ಎಂದೇನೂ ಅಲ್ಲ. ಈ ಪ್ರಕ್ರಿಯೆ ಇಂದಿಗೂ ಮುಂದುವರಿಯುತ್ತಲೇ ಬಂದಿದೆ". (ಡಿ.ಡಿ.ಕೋಸಾಂಬರಿ– ಪು 17)

ಈ ಮೂರು ಹಂತಗಳನ್ನು ಹೀಗೆ ಗುರುತಿಸಿದಾಗ ಅವು ಕಾಲಕ್ರಮದಲ್ಲಿ ಮೂರು ಸ್ಪಷ್ಟ ಬದಲಾವಣೆಗಳು ಎಂಬಂತೆ ಅಲ್ಲ. ಇವು ಒಂದಾದ ನಂತರ ಒಂದು ಅನುಕ್ರಮವಾಗಿ ಘಟಿಸಿದವು ಎಂದಲ್ಲ. "ಉತ್ತರ ಪ್ರಾಂತದಲ್ಲಿ ಸ್ಥಿರ ಗ್ರಾಮಗಳು ಇದ್ದಾಗ ದಕ್ಷಿಣ ಪ್ರಾಂತದಲ್ಲಿ ಸಂಗ್ರಹಣ ಕಾರ್ಯ ಸಾಗುತ್ತಿತ್ತು. ಒಂದು ಪ್ರಾಂತದಲ್ಲಿ ಆದ ಆರಂಭ ಮಿಕ್ಕುಳಿದ ಪ್ರಾಂತಗಳಿಗೆ ವಿಸ್ತರಿಸಿದ್ದೇ ಅದರ ಅಂತ ಸೂತ್ರದ ಕ್ರಮ. ಒಂದು ಜನಾಂಗ ಕೃಷಿಯನ್ನು ಅನ್ವೇಷಿಸಿದ್ದರೆ, ಇನ್ನೊಂದು ಆಹಾರ ಸಂಗ್ರಹಣೆಯಲ್ಲಿ, ಬೇಟೆಯಲ್ಲೇ ನಿಂತು ಬಿಟ್ಟಿತ್ತು. ಮತ್ತೊಂದು ಜನಾಂಗ ಪಶುಪಾಲನೆಯನ್ನು ನಡೆಸುತ್ತಿತ್ತು. ಈ ಬದಲಾವಣೆಗಳು ಒಂದಾದ ನಂತರ ಒಂದು ಘಟಿಸಿತು ಎಂದು ಸರಳರೇಖಾತ್ಮವಾಗಿ ನಿರೂಪಿಸುವುದು ಕಷ್ಟ. ಆಹಾರ ಉತ್ಪಾದನೆ ಜೀವನದ ಪದ್ಧತಿಯನ್ನು ಅನುಸರಿಸಿ ನಾಗರಿಕವೆನಿಸಿದ ಸಮುದಾಯ ತಮ್ಮ ಸುತ್ತ ಮುತ್ತಲಿನ ಕಾಡು ಜನರನ್ನು ಆಹಾರ ಉತ್ಪಾದನಾ ವಿಧಾನಕ್ಕೆ ಒಗ್ಗಿಸಿದೆ. ಅದಕ್ಕೆ ಉತ್ಪಾದನಾ ಸಂಬಂಧಗಳನ್ನು ಕಲ್ಪಿಸಿ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಿ ಆ ಕಾಡು ಜನರನ್ನು ಅದರ ಒಂದು ಸ್ತರದಲ್ಲಿ ಕೃಷಿಗೆ ಅಳವಡಿಸಿಬಿಟ್ಟರು. ಆಹಾರ ಸಂಗ್ರಹಣೆಯ ಜೀವನ ಪದ್ಧತಿಯನ್ನು ಬಾಳುತ್ತಿದ್ದ ಸಮುದಾಯಗಳ ಪ್ರದೇಶಕ್ಕೆ ಆಹಾರ ಉತ್ಪಾದನಾ ಜೀವನ ಪದ್ಧತಿಯ ಸಮಾಜವು ಪ್ರವೇಶಿಸಿ ತನ್ನಿಚ್ಛೆಯಂತೆ ನೆಮ್ಮದಿಯಾಗಿ ವಿಸ್ತರಿಸುತ್ತ ಸಾಗಿತ್ತು. ಸಮುದಾಯಗಳು ಜೀವನ ಮಾಡುತ್ತಿದ್ದ ಭೂ ಪ್ರದೇಶದೊಳಗೆ ವ್ಯವಸಾಯವನ್ನಾಧರಿಸಿದ ಗ್ರಾಮೀಣ ಆರ್ಥಿಕ ವ್ಯವಸ್ಥೆ ವಿಸ್ತರಿಸಲು ತೊಡಗಿದ್ದೇ ಭಾರತ ದೇಶದಲ್ಲಿ ಮೊಟ್ಟ ಮೊದಲಿಗೆ ಜರುಗಿದ್ದ ಪ್ರಮುಖ ಸಾಮಾಜಿಕ ವಿಪ್ಲವ." (ಪು 18.ಡಿ.ಡಿ.ಕೋಸಾಂಬಿ)

ಕೋಸಾಂಬಿಯವರ ಈ ವಿಚಾರಗಳನ್ನು ಅರ್ಥೈಸಿಕೊಂಡು ಕರಾವಳಿಯ ಕೃಷಿಜಗತ್ತನ್ನು ಅರ್ಥೈಸುವುದಾದರೆ ವರ್ತಮಾನದ ಈ ಕಾಲದಲ್ಲಿ ಕಾಡಿನಲ್ಲಿ ಬದುಕುವ ಬುಡಕಟ್ಟು ಸಮುದಾಯಗಳೊಂದಿಗೆ ಆಹಾರ ಉತ್ಪಾದನೆಯ ಸಾಮಾಜಿಕ ಆರ್ಥಿಕ ಪ್ರಭುತ್ವದ ಸಮುದಾಯಗಳು ಇಲ್ಲಿವೆ. ಕಾಡನ್ನು ಕಡಿದು ಬೆಳೆಯನ್ನು ಬಿತ್ತಿ ಫಸಲನ್ನು ಪಡೆದ ಮಲೆಕುಡಿಯ ಸಮುದಾಯದಂತೆ, ಕೃಷಿ ಜಗತ್ತಿನಿಂದ ದೂರ ಉಳಿದ ಬೇಟೆ ಪಶುಪಾಲನೆಗಳಲ್ಲೇ ಉಳಿದ ಬುಡಕಟ್ಟು ಸಮುದಾಯಗಳು ಕರಾವಳಿಯಲ್ಲಿವೆ. ಕೃಷಿಯ ಅನ್ವೇಷಣೆಯಿಂದ ಕೃಷಿ ವಿಸ್ತರಣೆಗೊಂಡ ಈ ಹಂತದವರೆಗಿನ ಸಂದರ್ಭದಲ್ಲೂ ಆಹಾರದ ಉತ್ಪಾದನೆ ಮತ್ತು ಸಂಪತ್ತಿನ ಒಡೆತನದ ಹಂತಗಳು ಮುಖ್ಯವಾಗುತ್ತವೆ. ಸಮುದಾಯಗಳ ಈ ಕಾರಣಕ್ಕಾಗಿಯೇ ಸಾಮಾಜಿಕ ಸ್ಥಿತ್ಯಂತರಗಳಿಗೆ ಒಳಗಾಗಿರುವುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಇಂದಿನ ಕರಾವಳಿಯ ಕೃಷಿ ಜಗತ್ತು ಇಷ್ಟು ದೀರ್ಘವಾಗಿ ಮುಂದುವರಿದು ಬರಲು ಹಲವು ಸಾವಿರ ವರ್ಷಗಳ ಚರಿತ್ರೆಯೇ ಇದೆ. ಕರಾವಳಿಯ ಕೆಂಪು ಗೋಡು ಮಣ್ಣು ಯಾವ ಬೆಳೆಯನ್ನು ಬೆಳೆಯಲು ಯೋಗ್ಯವಾದುದು ಎನ್ನುವ ಅನ್ವೇಷಣೆ ಪ್ರಮುಖ ಪ್ರಶ್ನೆಯಾಗುತ್ತದೆ.

ಅಧ್ಯಾಯ 3

ಮಹಿಳೆ ಮತ್ತು ಕೃಷಿ ಸಂಸ್ಕೃತಿಯ ಸಂಬಂಧ

ಕರಾವಳಿಯ ಕೃಷಿ ಸಂಸ್ಕೃತಿ ಮತ್ತು ಮಹಿಳೆ ಎಂಬ ಈ ವಿಷಯವನ್ನು ಪ್ರಮುಖ ವಿಷಯವನ್ನಾಗಿಸಿ ಆರಿಸಿಕೊಂಡಾಗ 'ಮಹಿಳೆ' ಏಕೆ ಎಂಬ ಪ್ರಶ್ನೆಯೂ ಮುಖ್ಯವಾಗುತ್ತದೆ. ಕೃಷಿ ಸಂಸ್ಕೃತಿಗೂ ಮಹಿಳೆಗೂ ಬಹಳ ಮುಖ್ಯವಾದ ಸಂಬಂಧವಿದೆ. ಜಗತ್ತಿನಲ್ಲಿಯೇ ಕೃಷಿಯನ್ನು ಅನ್ವೇಷಿಸಿದವಳು ಮಹಿಳೆ ಎಂದು ಬಹಳ ಹಿಂದೆಯೇ ನಮ್ಮ ಸಮಾಜಶಾಸ್ತ್ರಜ್ಞರು ಒಂದು ಧೃಡವಾದ ನಿಲುವನ್ನು ಒಪ್ಪಿಕೊಂಡಿದ್ದಾರೆ. ತನ್ನ ಕುಟುಂಬದ ಹೊಟ್ಟೆ ಮತ್ತು ನೆತ್ತಿಯನ್ನು ತಣ್ಣಗೆ ಇಡುವ ಅವಳ ಕಾಳಜಿ ಅವಳನ್ನು ಕೃಷಿಯತ್ತ ಹೊರಳಿಸಿತು. ಆಹಾರ ಸಂಗ್ರಹಣೆಯ ಹಂತದಲ್ಲಿದ್ದ ಮನುಷ್ಯ ಬೇಟೆಯಾಡುತ್ತಾ ಗಂಡು ದೂರ ದೂರ ಅಲೆಯುತ್ತಿದ್ದ ಸಂದರ್ಭದಲ್ಲಿ ತನ್ನ ಕುಟುಂಬದ ಹಸಿವಿಗಾಗಿ ಕಾಡಿನ ಹಣ್ಣು ಹಂಪಲು, ಗೆಡ್ಡೆ ಗೆಣ್ಣಸುಗಳನ್ನು ತಾನು ಸಂಗ್ರಹಿಸಿ ತಂದು ನೀಡುತ್ತಿದ್ದಳು. ಹೀಗೆ ಸಂಗ್ರಹಿಸಿ ತಂದು ತಿಂದ ಬೆಳೆಗಳ ಬೀಜಗಳನ್ನು ಮಣ್ಣಿಗೆ ಎಸೆದಾಗ ಅದು ಭೂಮಿಗೆ ಬಿದ್ದು ಮೊಳೆತು ಚಿಗುರಿದ್ದು ಆಕೆಗೆ ಒಂದು ವಿಸ್ಮಯವಾಗಿಯೇ ಕಂಡಿರಬೇಕು. ಒಂದು ಎರಡಾಗುತ್ತಾ, ಹಲವು ಸಾವಿರವಾಗುತ್ತಾ ಸಾಗಿದ ಈ ಕ್ಷಣದಲ್ಲಿಯೇ ಬೆಳೆಯನ್ನು ಬೆಳೆವ ಅನ್ವೇಷಕಿಯಾದಳು. ತಾನು ತಿಂದು ಎಸೆದದ್ದನ್ನು ಜತನದಿಂದ ಬೆಳೆಸಿ, ಬೀಜ ರಕ್ಷಣೆ ಮಾಡಿ ಮತ್ತೆ ಬಿತ್ತಿ ಜೀವ ಸಂಕುಲವನ್ನು ಚಿರಂತನವಾಗಿಸಿದಳು. ಕೃಷಿ ಸಂಸ್ಕೃತಿಯ ಅನ್ವೇಷಕಿಯಾಗಿ ಹೊಸ ಜೀವಕ್ಕೆ ಜನ್ಮ ಕೊಡುವ ಹೆಣ್ಣಿಗೂ ಬಿತ್ತಿದ್ದನ್ನು ಮೊಳೆತು ಕೊಡುವ ಪ್ರಕೃತಿ ಎರಡನ್ನು ಸಮೀಕರಿಸಿ ನೋಡಲಾಯಿತು. ಪ್ರಕೃತಿ, ಸಂಸ್ಕೃತಿ ಮತ್ತು ಸ್ತ್ರೀ ಎಂಬ ಈ ನಿಷ್ಪತ್ತಿ ಎಲ್ಲ ಸಂಸ್ಕೃತಿಗಳ ವಿಕಾಸದ ಮೂಲ ನಿಷ್ಪನ್ನವೂ ಆಗಿದೆ.

ಕೃಷಿಯನ್ನು ಆರಂಭಿಸುವ ಹಂತದಲ್ಲಿ ತಂತ್ರ ವಿದ್ಯೆಯನ್ನು ಕೃಷಿಗೆ ಅಳವಡಿಸಲಾಯಿತು. ಗರ್ಭಕೋಶವನ್ನು ಹೊಂದಿದ ಹೆಣ್ಣಿನ ದೇಹ ಮರುಸೃಷ್ಟಿಗೆ ಕಾರಣವಾಗುವಂತೆ, ಭೂಮಿಗೆ ಬಿದ್ದ ಬೀಜ ಮೊಳಕೆಯೊಡೆಯುವ ಪ್ರಕ್ರಿಯೆ ಒಂದು ವಿಸ್ಮಯವಾಗಿ ಗ್ರಹಿಸಿದ್ದರು. ವಿಶ್ವದ ಎಲ್ಲೆಡೆಯೂ ಬೇಸಾಯದ ಕ್ರಿಯೆಗಳನ್ನು ಮಾಂತ್ರಿಕ ವಿಧಿಗಳ ಅಧೀನವೆಂದು ಬಗೆಯಲಾಯಿತು. ಕೃಷಿಯಲ್ಲಿ ಮಾಂತ್ರಿಕ ನಂಬಿಕೆಗಳಿಗೆ ವಿಚಿತ್ರ ಪ್ರಾಮುಖ್ಯತೆ ಬಂದು ನೈಪುಣ್ಯ ಮತ್ತು ದೈಹಿಕ ಶ್ರಮ ಈ ನಂಬಿಕೆಗಳಿಗಿಂತ ಕಡಿಮೆ ಮುಖ್ಯ ಎಂದು ಅರ್ಥೈಸಲಾಗಿತ್ತು. ಜಗತ್ತಿನಾದ್ಯಂತದ ಜನಾಂಗಗಳಲ್ಲಿ ಕೃಷಿಯನ್ನು ಆರಂಭಿಸುವ ಪೂರ್ವದಲ್ಲಿ ತಂತ್ರದ ಬೇರೆ ಬೇರೆ ಮಾಂತ್ರಿಕ ವಿದ್ಯೆಗಳನ್ನು ಪೂರೈಸಿದ ಉಲ್ಲೇಖಗಳು ಸಿಗುತ್ತವೆ ತಂತ್ರ ವಿದ್ಯೆಯನ್ನು ಅರ್ಥೈಸುವಿಕೆಗೆ ಇಂದು ತಪ್ಪಾದ ಗ್ರಹಿಕೆಗಳು ಇರುವಾಗಲೂ ಆರಂಭಿಕ ಕೃಷಿ ಹಂತದ ನಂಬಿಕೆ ಮತ್ತು ಆಚರಣೆಗಳಲ್ಲಿ ತಂತ್ರದ ಅವಶೇಷಗಳಿರುವುದು ಸಹಜ. ಗುದ್ದಲಿಯಿಂದ ಭೂಮಿಯನ್ನು

ಅಗೆದು ಬಿತ್ತುವುದಕ್ಕೆ ಆರಂಭಿಸಿದ ಕೃಷಿ ಜಗತ್ತು ನೇಗಿಲ ಮೊನೆಯನ್ನು ಬಳಸಿದಂತೆಲ್ಲಾ ಪುರುಷಾಧಿಪತ್ಯಕ್ಕೆ ಸರಿಯಿತ್ತು. ಎನುತ್ತಾರೆ ಇತಿಹಾಸಕಾರರು. 'ಬೀಜಪ್ರಾಧಾನ್ಯ' ಮತ್ತು 'ಕ್ಷೇತ್ರಪ್ರಾಧಾನ್ಯ' ಎಂಬ ಚರ್ಚೆಗಳು ಬಹಳ ವಿಸ್ತಾರವಾಗಿ ಚರ್ಚೆಗೆ ಒಳಗಾಗುತ್ತಿರುವ ಸಂದರ್ಭದಲ್ಲಿ ಸ್ತ್ರೀ ಮೂಲವಾಗಿರುವ ಕೃಷಿಯು ಮತ್ತು ಸ್ತ್ರೀಯು ಬಂಧುತ್ವದ ಮೂಲವು ಆಗಿ ಗೋಚರಿಸುವ ಸಾಧ್ಯತೆಗಳು ಸ್ಪಷ್ಟವಿದೆ.

ಕರಾವಳಿಯಲ್ಲಿ ಇಂದಿಗೂ ಸ್ತ್ರೀ ಮೂಲದ ಮೂಲಕ ಬಂಧುತ್ವವನ್ನು ಗುರುತಿಸಲಾಗುತ್ತದೆ. ಸಮಾಜದಲ್ಲಿ ಬಂದಿರುವ 'ಕುಟುಂಬ' ಪರಿಕಲ್ಪನೆಯೇ ಸ್ತ್ರೀ ಮೂಲ ಚಿಂತನೆಯ ಮಾತೃಮೂಲೀಯವಾದುದು. ತಾಯಿ ಯಾರು ಎನ್ನುವ ಪ್ರಶ್ನೆ ಸಾಮಾಜಿಕ ಅಸ್ತಿತ್ವಕ್ಕೆ ಮುಖ್ಯವಾಗುತ್ತದೆ. ಕರಾವಳಿಯ ಕೃಷಿ ಸಂಸ್ಕೃತಿಗೂ ಇಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಮಾತೃಮೂಲೀಯ ಕುಟುಂಬ ವ್ಯವಸ್ಥೆಗೆ ಏನಾದರೂ ಸಂಬಂಧವಿದೆಯೇ ಎಂದು ಅರ್ಥೈಸುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಕರಾವಳಿಯ ಕೃಷಿ ಸಂಸ್ಕೃತಿಯನ್ನು ಅರ್ಥೈಸುವುದು ಹೇಗೆ? ಎನ್ನುವ ಮೂಲಭೂತ ಪ್ರಶ್ನೆಯನ್ನು ಇರಿಸಿಕೊಂಡೇ ಇಲ್ಲಿಯ ವಿಚಾರಗಳನ್ನು ಅರ್ಥೈಸಲಾಗಿದೆ. ಜಗತ್ತಿನ ಕೃಷಿ ಚರಿತ್ರೆಯ ಕ್ಯಾನವಾಸ್‌ನಲ್ಲಿ ಕರಾವಳಿಯ ಕೃಷಿ ಸಂಸ್ಕೃತಿಯ ಅರ್ಥವನ್ನು ಅನ್ವೇಷಿಸುವುದು ಮತ್ತು ಇದರೊಂದಿಗೆ ಇಲ್ಲಿಯ ವೈಶಿಷ್ಟ್ಯಗಳನ್ನು ಗುರುತಿಸುವುದು ಆಗಿದೆ.

ಅಧ್ಯಾಯ 4

ಕರಾವಳಿಯ ಕೃಷಿಯ ಚರಿತ್ರೆ

ಈಗಾಗಲೇ ಚರ್ಚಿಸಿರುವಂತೆ ಸ್ತ್ರೀ ಮೂಲವಾಗಿರುವ ಕೃಷಿ ಸಂಸ್ಕೃತಿ ಮತ್ತು ಕರಾವಳಿಯಲ್ಲಿ ಕೃಷಿ ಅನ್ವೇಷಣೆಗೊಂಡು ವಿಸ್ತರಣೆಗೊಂಡ ಸ್ಥಿತ್ಯಂತರಗಳು ಬಹಳ ಮುಖ್ಯವೆನಿಸುತ್ತದೆ. ಕಾಡಿನಲ್ಲಿ ಇಂದಿಗೂ ವಾಸವಾಗಿರುವ ಬುಡಕಟ್ಟು ಸಮುದಾಯಗಳಿಂದ ಆರಂಭಗೊಂಡ 'ಕುಮೆರಿ ಕೃಷಿ' ಇಂದಿಗೂ ಇಲ್ಲಿ ಚಾಲ್ತಿಯಲ್ಲಿದೆ. ಕಾಡಿನಲ್ಲಿಯೇ ವಾಸಿಸುವ ಮಲೆಕುಡಿಯರು ಒಂದು ತುಂಡು ಪ್ರದೇಶದ ಕಾಡನ್ನು ಸುಟ್ಟು ಅಲ್ಲಿ ತಮಗೆ ಅವಶ್ಯಕತೆಯಿರುವಷ್ಟು ಆಹಾರ ಧಾನ್ಯಗಳಾದ ಭತ್ತವನ್ನು ಬಿತ್ತಿ ಅಲ್ಲಿಯೇ ತಮ್ಮ ವಸತಿಯನ್ನು ನಿರ್ಮಿಸಿ ಬೆಳೆ ತೆಗೆಯುತ್ತಿದ್ದರು. ಮುಂದಿನ ವರ್ಷಕ್ಕಾಗುವಾಗ ಕಾಡಿನ ಇನ್ನೊಂದು ದಿಕ್ಕಿಗೆ ತೆರಳಿ ಬೆಳೆಯನ್ನು ಬೆಳೆಯುತ್ತಿದ್ದರು. ಬೇಟೆಯೊಂದಿಗೆ, ಪಶುಗಳನ್ನು ಪಾಲಿಸುತ್ತಾ ಭತ್ತವನ್ನು ಬೆಳೆಯುತ್ತಾ ಸ್ಥಿರವಾಗಿ ಎಲ್ಲೂ ನಿಲ್ಲದೆ ಅಲೆಮಾರಿಗಳಾಗಿ ಕಾಡಿನ ಉದ್ದ–ಅಗಲಕ್ಕೂ ಸಂಚರಿಸುತ್ತಿದ್ದರು. ಇಂದಿಗೂ ಅಂತಹ ಸಮುದಾಯಗಳನ್ನು ಕಾಡಿನ ತಪ್ಪಲುಗಳಲ್ಲಿ ಕಾಣಬಹುದು. ಇಂದು ವಲಸೆ ಕಡಿಮೆಯಾಗಿದ್ದರು, ಕಾಡಿನ ವಾಸ ಕಡಿಮೆಯಾಗಲಿಲ್ಲ. ಕಾಡುತ್ಪತ್ತಿಗಳಲ್ಲಿ ಬದುಕುವ ಅವರದ್ದು ಒಂದು ರೀತಿಯ ಕೃಷಿ ಬದುಕೇ.

ಕಾಡನ್ನು ಕಡಿದು ವಿಸ್ತಾರವಾದ ಪದವುಗಳಲ್ಲಿ ಕುಮೆರಿ ಕೃಷಿಯನ್ನು ನಡೆಸುವ ಕುಡುಬಿಗಳು ಮತ್ತು ಕ್ರೈಸ್ತರು ಕರಾವಳಿ ಕೃಷಿ ಜಗತ್ತಿನ ಇನ್ನೊಂದು ಮಾದರಿಗಳು. ಇಲ್ಲಿಗೆ ವಲಸೆ ಮತ್ತು ಮತಾಂತರಕ್ಕೆ ಒಳಗಾದ ಈ ಎರಡೂ ಸಮುದಾಯಗಳು ಪಿತೃಪ್ರಧಾನ ಮೌಲ್ಯವನ್ನು ಹೊಂದಿದೆ. ಅತ್ಯಂತ ಜೋರಾಗಿ ಬೀಳುವ ಕಾರ್ತಿ ತಿಂಗಳ ಮಳೆಗೆ ವಿಸ್ತಾರವಾದ ಹುಲ್ಲುಗಾವಲಿನಂತಹ ಪ್ರದೇಶವಾದ ಪದವುಗಳಲ್ಲಿ ಭತ್ತದ ಕೃಷಿಯಲ್ಲದೆ ಪ್ರಮುಖ ತರಕಾರಿಗಳು ಮತ್ತು ಗೆಡ್ಡೆ ಗೆಣಸುಗಳನ್ನು ಇವರು ಬೆಳೆಯುತ್ತಾರೆ. ಆದಾಯದ ಆರ್ಥಿಕ ಚೌಕಟ್ಟಿನಿಂದ ಬೆಳೆಯುವ ಈ ಕುಮೆರಿ ಕೃಷಿಯು ಕರಾವಳಿಗೆ ವಿಶಿಷ್ಟವಾದುದು. ಇನ್ನೊಂದೆಡೆ ತುಂಡು ಭೂಮಿಯ ಒಡೆತನವು ಇಲ್ಲಿದೆ. ಒಕ್ಕಲುಗಳಾಗಿ ದುಡಿಯುವ ಕೃಷಿ ಕೂಲಿ ಕಾರ್ಮಿಕರ, ಜೀತದಾಳುಗಳ ಒಂದು ದೊಡ್ಡ ಸಮುದಾಯವೇ ಕರಾವಳಿಯಲ್ಲಿದೆ. ಪಾಳೇಗಾರಿಕೆ ಮತ್ತು ಉಳಿಗ ಮಾನ್ಯ ಪದ್ಧತಿಯನ್ನು ಅತ್ಯಂತ ನಾಜೂಕಿನಿಂದ ಪೋಷಿಸಿಕೊಂಡು ಬಂದಿರುವ ಕೃಷಿ ಸಂಸ್ಕೃತಿಯು ಬಹುದೊಡ್ಡ ಸಂಖ್ಯೆಯ ಜಮೀನ್ದಾರರ ಹುಟ್ಟಿಗೂ ಕಾರಣವಾಯಿತು. 'ಆಕಾಶ ನೋಡಲು ನೂಕು ನುಗ್ಗಲೇಕೆ?' ಎಂಬ ಗಾದೆಯ ಮಾತಿಗೆ ವ್ಯತ್ಯಯವಾಗಿ 'ಭೂಮಿ'ಯ ಒಡೆತನದ ಪ್ರಶ್ನೆ ಪ್ರಮುಖ ಶಕ್ತಿ ಕೇಂದ್ರವಾಗಿ ಪರಿಣಮಿಸಿತು. ಭೂಮಿಯ ಒಡೆತನವೆಂದರೆ ಅಧಿಕಾರ ಮತ್ತು ಸಂಪತ್ತಿನ ಒಡೆತನ ಎನ್ನುವ ಪ್ರಜ್ಞೆಗಳು ಹುಟ್ಟುತ್ತಿರುವ ಕಾಲದಲ್ಲಿ, ಭೂಮಿ ಫಲವಂತಿಕೆಯ ತಾಣವಾಗಿ ಉಳಿದಿಲ್ಲ. ಹೆಣ್ಣು ಹೆರುವ ಪ್ರಕ್ರಿಯೆಗೆ

ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿಕೊಂಡು ಸಂತಾನವನ್ನು ನಿಯಂತ್ರಣ ಮಾಡಿಕೊಂಡಂತೆ ಭೂಮಿಯು ಗಡಿರೇಖೆಗಳನ್ನು ಕೊರೆದುಕೊಂಡು ಸೈಟುಗಳಾಗಿ ಪರಿವರ್ತನೆ ಹೊಂದಿದೆ. ಇಂತಹ ಸಂಕ್ರಮಣ ಕಾಲದಲ್ಲಿರುವ ಕರಾವಳಿಯ ಕೃಷಿ ಸಂಸ್ಕೃತಿಯನ್ನು ಅರ್ಥೈಸುವುದು ಮತ್ತು ವಿಶ್ಲೇಷಿಸುವುದು ಅಧ್ಯಯನದ ಮುಖ್ಯ ನೆಲೆಯಾಗಿದೆ.

ನೆಲಮೂಲದ ಬುಡಕಟ್ಟು ಸಂಸ್ಕೃತಿಯಿಂದ ಅಧಿಕಾರಶಾಹಿ ಜಗತ್ತಿನೆಡೆಗೆ ಸಾಗಿ ಕೃಷಿಯು ವ್ಯಾಪಾರ ಮೂಲವಾಗಿಯೂ ಗುರುತಿಸಿಕೊಂಡಿದೆ. ಪ್ರಭುತ್ವದ ನೆಲೆಯಲ್ಲಿ 'ಭೂಮಿ'ಯನ್ನು ದಾನವಾಗಿ, ಉಂಬಳಿಯಾಗಿ ರಾಜರು ನೀಡುತ್ತಿದ್ದರು. ಫಲವತ್ತಾದ ಭೂಮಿಯನ್ನು ಮೇಲ್ವರ್ಗದವರಿಗೆ ಅಧಿಕಾರ ಕೇಂದ್ರದಲ್ಲಿದ್ದವರಿಗೆ ದಾನ ನೀಡಿದರೆ ಶೂದ್ರರು ಮತ್ತು ದಲಿತರಿಗೆ ಬಂಜರು ಶುಷ್ಕ ಭೂಮಿಯನ್ನು ನೀಡಲಾಗುತ್ತಿತ್ತು. ಇದರಿಂದಾಗಿ ನೂರಾರು ಮುಡಿ ವಿಸ್ತೀರ್ಣದ ಗದ್ದೆಗಳಲ್ಲಿ ಶೂದ್ರರು ಮತ್ತು ದಲಿತರು ಖಾಯಂ ಜೀತದಾಳುಗಳಾಗಿ ದುಡಿಯುವುದು ಅನಿವಾರ್ಯವಾಗಿತ್ತು. ಭೂಮಿಯ ಸಾಗುವಳಿಯಲ್ಲಿ ಗದ್ದೆಯನ್ನು ಕೃಷಿ ಮಾಡಿದಕ್ಕಾಗಿ ರೈತರು ಇಂತಿಷ್ಟು ಮುಡಿ ಅಕ್ಕಿಯನ್ನು ಕೊಡಬೇಕೆಂಬ 'ಗೇಣಿ'ಯ ಲೆಕ್ಕಾಚಾರವು ಹುಟ್ಟಿಕೊಂಡಿತು. ಪುರೋಹಿತಶಾಹಿ ಆಡಳಿತ ವ್ಯವಸ್ಥೆಯಲ್ಲಿ ಧಾರ್ಮಿಕತೆ ಪ್ರಮುಖ ಪಾತ್ರ ವಹಿಸಿ ದೇವಸ್ಥಾನ ಮತ್ತು ಅದರ ಆಡಳಿತಕ್ಕೊಳಪಟ್ಟ ಗದ್ದೆಗಳೆಲ್ಲ 'ದೇವರ ಬೆನ್ನಿ'ಗಳಾದವು. ಸಂಪತ್ತು ದೇವಾಲಯಗಳಲ್ಲಿ ಕೇಂದ್ರಿಕೃತವಾಗುತ್ತಲೇ ಪುರುಷಪ್ರಾಧೀನತೆಯೆಡೆಗೆ ಸಾಗುತ್ತಾ ಸಾಮಾಜಿಕ ಅಸಮಾನತೆಗಳು ಹೆಚ್ಚಾದವು.

ವಸಹತೀಕರಣದ ಪೂರ್ವದಲ್ಲಿ ಭೂಮಿಯನ್ನು ಭೂಮಿಗೆ ಹಾಕುವ ಬಿತ್ತನೆ ಬೀಜದಿಂದ ವಿಸ್ತಾರವನ್ನು ನಿರೂಪಿಸಲಾಗುತ್ತಿತ್ತು. ಮೂರು ಕಳಸೆ ಗದ್ದೆ, ಆರು ಮುಡಿ ಗದ್ದೆ ಎಂದು ಕೃಷಿಕರು ಗದ್ದೆಯ ವಿಸ್ತಾರವನ್ನು ಹೇಳುತ್ತಿದ್ದರು. ಕರಾವಳಿಗೆ ಮಿಶನರಿಗಳ ಆಗಮನ ಮತ್ತು ಅವರಿಗಿದ್ದ ವ್ಯಾಪಾರಿ ದೃಷ್ಟಿಕೋನದ ಪ್ರಮುಖ ಹೆಜ್ಜೆಯಾಗಿ ಭೂಮಿಯನ್ನು ಅಳತೆ ಮಾಡಲಾಯಿತು. ಸೆನ್ಸ್, ಎಕರೆಗಳ ವಿಸ್ತೀರ್ಣದಲ್ಲಿ ಇಷ್ಟು ಕೊಳಿಕೆ, ಇಷ್ಟು ಸಂಕಲೆ ಎಂದು ವಿಶ್ಲೇಷಿಸಲಾಯಿತು ಮತ್ತು ಎಲ್ಲಾ ಭೂಮಿಯನ್ನು ಬೆಳೆ ಬೆಳೆಯುವ, ನೀರಾವರಿ ವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡು ಮೂರು ರೀತಿಯಲ್ಲಿ ಹೆಸರಿಸಿದರು. ಭೂಮಿ ಖುಷ್ಕಿ, ತರಿ, ಮತ್ತು ಖದೀಂಗಳಾದವು. ಖುಷ್ಕಿ ಭೂಮಿಯನ್ನು ಒಣಭೂಮಿಯೆಂದೂ, ತರಿಯನ್ನು ಗದ್ದೆಗಳೆಂದೂ, ಖದೀಂ ಎಂದರೆ ಹಳೆಯ ವರ್ಗದ ಭೂಮಿ ಎಂದು ಅರ್ಥೈಸಲಾಗುತಿತ್ತು. ಭೂಮಿಯಲ್ಲಿ ಬೆಳೆದ ಬೆಳೆಗಳಿಗೂ ತೆರಿಗೆ ಕೊಡಬೇಕು ಎಂಬ ಹೊಸ ಕಾನೂನನ್ನು ಬ್ರಿಟಿಷರು ತಂದರು. ಯಾವುದಕ್ಕೆ, ಯಾವ ಭೂಮಿಗೆ ಎಷ್ಟು ತೆರಿಗೆ ಎಂದು ಬ್ರಿಟಿಷ್ ಸರಕಾರವೇ ನಿರ್ಧರಿಸುತ್ತಿತ್ತು. ಕುಮೆರಿ ಬೇಸಾಯಕ್ಕೂ ತೆರಿಗೆ ಇತ್ತು. ತೆರಿಗೆ ಕಟ್ಟದಿದ್ದರೆ ದಂಡ ನೀಡಬೇಕಾಗುತ್ತಿತ್ತು. ಖಾಸಗಿ ಒಡೆತನದ ಭೂಮಿ, ಸರ್ಕಾರಿ ಒಡೆತನದ ಭೂಮಿಗಳೆಂಬ ವಿಭಾಗ ಕ್ರಮಗಳನ್ನು ಗುರುತಿಸಿದರು. ಖಾಸಗಿ ಭೂಮಿಯ ಗದ್ದೆಗಳಿಗಾಗಿ ಒಂದಿಷ್ಟು ಸರಕಾರಿ ಜಮೀನಿನ ಗುಡ್ಡಗಳಿದ್ದರೆ, ಅದು ಆ ಜಾಗದ **'ಕುಮ್ಕಿ'** ಹಕ್ಕು ಆಗಿ ಅನುಭವಿಸಲು ಮಾತ್ರ ಲಭ್ಯವಾಗುತಿತ್ತು. ಯಾವುದೇ ವ್ಯಕಿಯು ಕಟ್ಟಿದ ಮನೆ ಇರುವ ಜಾಗವು ಸಾಗುವಳಿ ಮಾಡುತ್ತಿದ್ದ ಗದ್ದೆಯಾಗಿದ್ದು ನಂತರದಲ್ಲಿ ಮಾಡದೆ ಹಾಗೆ ಇದ್ದರೆ ಅದನ್ನು **'ಪರಂಬೋಕು'** ಎನ್ನುತ್ತಿದ್ದರು. ಭೂಮಿಯ ಅಳತೆ, ತೆರಿಗೆಯ ವ್ಯವಸ್ಥೆಯ ಆ ಎಲ್ಲಾ ಸ್ಥಿತ್ಯಂತರಗಳೊಂದಿಗೆ 'ಭೂಮಿ'ಯ ಪರಿಭಾಷೆಯೇ ಬದಲಾಯಿತು.

ಕರಾವಳಿಯ ಕೃಷಿ ಜಗತ್ತು ಈ ಎಲ್ಲಾ ಬದಲಾವಣೆಗಳನ್ನು ಮುಕ್ತತೆಯಿಂದ ಸ್ವೀಕರಿಸಿತು, ಕೆಲವು ವೈಶಿಷ್ಟ್ಯಗಳನ್ನು ಕಾಯ್ದುಕೊಂಡಿತು. 'ಬೆಂದಡ ತಿನ್ಬ'(ದುಡಿದರೆ ತಿನ್ನಬಹುದು) ಎಂಬ ತೆಂಬರೆಯ ಮಾರ್ದನಿಯಂತೆ ಕರಾವಳಿಯ ಉದ್ದಗಲಕ್ಕು ದುಡಿಮೆಯ ಮಾರ್ದನಿ ಪ್ರತಿಧ್ವನಿಸಿದೆ. ಹೆಣ್ಣು ಗಂಡು ಸೇರಿ ಕಟ್ಟಿದ ಕೃಷಿ ಜಗತ್ತು ಕಾಲದ ಉರುಳಲ್ಲಿ ಪರಿಕ್ರಮಿಸಿತು. ತನ್ನನ್ನು ನಂಬಿದವರ ಹಸಿವನ್ನು ನೀಗಿಸುವುದು ಕುಟುಂಬದ ಹೆಣ್ಣು ಮಗಳ ಹೊಣೆಗಾರಿಕೆಯು ಆಗಿತ್ತು. ತನ್ನ ಸುತ್ತಲಿನ ಪರಿಸರದಲ್ಲಿ ವಿವಿಧ ಬೀಜಗಳನ್ನು ಬಿತ್ತಿ ಫಲ ತೆಗೆಯುವ ವಿವಿಧ ಋತುವಿಗೆ ಸಿಗುವ ಫಲಗಳನ್ನು ಅರಿತು ಅದನ್ನು ಸರ್ವಋತುಗಳಿಗೂ ಬೆಳೆಸಲು ಸಾಧ್ಯವಾದದ್ದನ್ನು, ಬೆಳೆಸುವ ಪ್ರಯತ್ನಗಳು ನಡೆಯುತ್ತಿದ್ದವು. ಈ ವರ್ಷ ಬೆಳೆದ ಬೆಳೆಯ ಬೀಜವನ್ನು ಮುಂದಿನ ವರ್ಷಕ್ಕೆ ಕಾಪಿಡುವ ಅಗತ್ಯವೂ ಆಕೆಗಿತ್ತು. ಹೆಣ್ಣು ಮಕ್ಕಳು ಬೀಜ ಸಂರಕ್ಷಣೆಗೆ ತಮ್ಮದೇ ಆದ ಸಾಂಪ್ರಾದಾಯಿಕ ಕ್ರಮವನ್ನು ಅನುಸರಿಸಿ ತಳಿಗಳನ್ನು ಬೆಳೆಸುವ ಕಾಪಿಡುವ ಕೆಲಸಗಳು ನಡೆಯುತ್ತಿದ್ದವು. ಪ್ರಕೃತಿಯ ವಿದ್ಯಮಾನಗಳನ್ನು ಅದರ ಸಸ್ಯ ವೈವಿಧ್ಯವನ್ನು, ಜೀವ ಸರಪಳಿಯನ್ನು ಅವುಗಳ ಪ್ರಾಮುಖ್ಯತೆಯನ್ನು ಗಂಡು–ಹೆಣ್ಣುಗಳಿಬ್ಬರು ಕಾಲ ಕಾಲಕ್ಕೆ ಅದನ್ನು ಅರಿತುಕೊಂಡು ಬಾಳಿದ ಬದುಕೇ ನಾಗರಿಕತೆ ಎನಿಸಿಕೊಂಡಿದೆ.

ಹೆಣ್ಣಿನ ಸಂಶೋಧನೆಯಾದ ಕೃಷಿಯನ್ನು ಸಣ್ಣ ಪ್ರಮಾಣದಿಂದ ದೊಡ್ಡ ಪ್ರಮಾಣಕ್ಕೆ ವಿಸ್ತರಿಸಿದಾಗ ಅದು ಪುರುಷಪ್ರಾಧೀನತೆಗೆ ಸಾಗಿತು. ಹೆಣ್ಣಿನ ಜ್ಞಾನ ಶ್ರಮಗಳು ಅಪ್ರಾಮುಖ್ಯತೆಗೆ ಸಂದು ಪುರುಷ ಪಾರಮ್ಯದ ಅಟ್ಟಹಾಸ ಇಂದು ಕೇಳುತ್ತಿದೆ. ಶ್ರಮದ ದುಡಿಮೆಗೆ ಪಾಲುದಾರಳಾದ ಹೆಣ್ಣು ಮಗಳು ಬೆಳೆದ ಫಸಲಿಗೆ ಹಕ್ಕುದಾರಳು ಮಾತ್ರ ಅಲ್ಲ ಎಂಬ ಎಚ್ಚರವನ್ನು ಗಮನದಲ್ಲಿಟ್ಟುಕೊಂಡೇ ಈ ಸೂಕ್ಷ್ಮ ಎಳೆಯನ್ನು ಅರ್ಥೈಸಬೇಕು. ಕರಾವಳಿಯಲ್ಲಿ ಈ ವಾದಕ್ಕೆ ವ್ಯತಿರಿಕ್ತವಾದ ಇನ್ನೊಂದು ಆಯಾಮವೂ ಇದೆ. ಮಾತೃಮೂಲೀಯ ಕುಟುಂಬದ ಆಸ್ತಿಯಾಗಿ ಮಕ್ಕಳನ್ನು, ಬಳಸಿ ಕೃಷಿ ಮಾಡುತ್ತಿದ್ದರೂ ಭೂಮಿಯ ಒಡೆತನದ ಪೂರ್ಣ ಹಕ್ಕು ಹೆಣ್ಣಿಗಿದೆ. ಸಾಮಾನ್ಯವಾಗಿ ಹೆಚ್ಚಿನ ಎಲ್ಲ ಬುಡ ಕಟ್ಟುಗಳಲ್ಲಿ ಇರುವಂತೆ ಹೆಣ್ಣಿನ ನಡೆಗೆ ಸ್ವಾಯತ್ತತೆ ಮತ್ತು ಅಧಿಕಾರವೂ ಇದೆ. ಭೂಮಿಯ ಒಡೆತನ ಮತ್ತು ಮಕ್ಕಳ ಹಕ್ಕು ಮತ್ತು ಕುಟುಂಬದಲ್ಲಿ ಹೆಣ್ಣಿಗೆ ಹೆಚ್ಚಿನ ಅಧಿಕಾರ ಲಭಿಸಿದೆ. ಹಾಗಿದ್ದು ಕರಾವಳಿಯ ಕೃಷಿ ಸಂಸ್ಕೃತಿಯು ಸ್ಥಿತ್ಯಂತರಗೊಂಡಿದೆ. ನೂರಾರು ಮಂದಿ ಒಟ್ಟಿಗೆ ನೆಲೆಸುತ್ತಿದ್ದ ಅವಿಭಕ್ತ ಕುಟುಂಬಗಳೆಲ್ಲ ಇಂದು ವಿಭಕ್ತವಾಗಿದೆ. ವಿಸ್ತೀರ್ಣವಾದ ಗದ್ದೆಯ ಬಯಲುಗಳು ಅದರಲ್ಲಿ ದುಡಿಯಲು ಬೇಕಾದ ನೂರಾರು ಯುವಕರು ಒಂದೇ ಮನೆಯೊಳಗೆ ಸಿಗುತ್ತಿದ್ದು, ಹಂಡೆಯಲ್ಲಿ ಉಣ್ಣಲು ಗಂಜಿ ಬೇಯಿಸುತ್ತಿದ್ದರು. ವೈಯಕ್ತಿಕತೆಯ ವ್ಯಷ್ಟಿ ಪ್ರಜ್ಞೆಗಳಿಲ್ಲದ ಮನೆಯೊಳಗೆ ಕುಟುಂಬದ ಹಿರಿಯ ಹೆಣ್ಣು ಮಗಳು ಮನೆಯೊಡತಿಯಾಗಿರುತ್ತಿದ್ದಳು. ಉಣ್ಣಲು ಮತ್ತು ತಂಗಲು ಆಸರೆಯಾಗುತ್ತಿದ್ದ ಕುಟುಂಬದಲ್ಲಿ ಭೂಮಿಯ ಹಂಚಿಕೆ ಮತ್ತು ಒಡೆತನ ಇಲ್ಲದೆ ನಡೆಸಿದ ಕೃಷಿಯ ವಿಭಿನ್ನ ಸ್ವರೂಪಗಳು ಕೃಷಿಯನ್ನು ವಿಸ್ತರಿಸಲು ಕಾರಣವಾಯಿತು . ನೂರು ಮುಡಿ ಇನ್ನೂರು ಮುಡಿ ಹುಟ್ಟುವಳಿ ಗದ್ದೆಯ ಮಧ್ಯೆ ಸಾವಿರ ಮುಡಿ ಉಟ್ಪೋಳಿಯ ಗದ್ದೆಗಳ ಒಡೆಯರಾಗುವುದು ಒಂದು ಕಾಲದ ಸಾಮಾಜಿಕ ಮಾನ್ಯತೆ ಮತ್ತು ಪ್ರತಿಷ್ಠೆಯ ಅಂಶವಾಗಿತ್ತು. ಇದರಿಂದ ಗುತ್ತು, ಸುತ್ತುಗುತ್ತು ಮತ್ತು ಬೂಡು ಎಂಬ ಅಧಿಕಾರಗಳು ಪ್ರಾಪ್ತಿಯಾಗುತಿತ್ತು. ಭೂಮಿಯ ಒಡೆತನ ಮತ್ತು ಬೂಡು ಎಂಬ ಅಧಿಕಾರಗಳೂ ಪ್ರಾಪ್ತಿಯಾಯಿತು ಭೂಮಿಯ ಒಡೆತನ ಮತ್ತು ಕೃಷಿಯ

ನಿರ್ವಹಣೆಯೇ ಸಾಮಾಜಿಕ ಮೌಲ್ಯವಾಗಿ ಪ್ರತಿಬಿಂಬಿಸುತ್ತದೆ.

ಕಾಲಾಂತರದಲ್ಲಿ ಹಂಡೆಯ ಗಂಜಿ ಮಡೆಕೆಯ ಗಂಜಿಯಾಗಿ ಮಡಕೆಯ ಗಂಜಿ ಕುದುಪೆಯ ಗಂಜಿಯಾದುದು ಕೃಷಿ ಸಂಸ್ಕೃತಿಯು ಬದಲಾದುದಕ್ಕೆ ಒಂದು ರೂಪಕವಾಗಿ ಗೋಚರಿಸುತ್ತದೆ. ವಿಸ್ತಾರವಾದ ಮನೆ ಮುಂದಿನ ಬಾಕಿಮಾರು ಗದ್ದೆಗೆ ಅಮರೆ, ಹಾಕಿ ಭಾಗ ಮಾಡುತ್ತಾ ಸಾಗಿದ್ದು ಮುಂದಿನ ಹಂತವಾಗುತ್ತದೆ. ಸ್ತ್ರೀ ಮೂಲವಾಗಿದ್ದ ತುಳುವರಲ್ಲಿ ಕವರ್ ಪಾಲು, ಮಂಡೆ ಪಾಲುಗಳಿಂದ ಭೂಮಿ ಹರಿದು ಹಂಚಲ್ಪಟ್ಟಿದೆ. ಇಂತಹ ಸಂದರ್ಭದಲ್ಲಿ ಸಂಘರ್ಷಗಳು ಸಂಭವಿಸಿ ಕೃಷಿ ಸಂಸ್ಕೃತಿಯ ಪಲ್ಲಟವೂ ಆಗುತ್ತಿರುವ ವರ್ತಮಾನದಲ್ಲಿ ಕೃಷಿ ಸಂಸ್ಕೃತಿಯನ್ನು ಅರ್ಥೈಸುವುದು ಅಗತ್ಯವೂ ಆಗಿದೆ.

ಅಧ್ಯಾಯ 5

ಕರಾವಳಿಯ ಕೃಷಿಯಲ್ಲಿ ಬೆಳೆವ ಬೆಳೆಗಳು

ಕರಾವಳಿಯ ಕೃಷಿ ಸಂಸ್ಕೃತಿಯನ್ನು ಅರ್ಥೈಸುವುದು ಹೇಗೆ? ಎಂಬ ಪ್ರಶ್ನೆ ಎದುರಾದಾಗ ಮುಖ್ಯವಾಗಿ ಗಮನ ಹರಿಯುವುದು ಇಲ್ಲಿ ಬೆಳೆಯುವ ಬೆಳೆಗಳು, ಬೆಳಗಳ ಅಧ್ಯಯನ, ಆಹಾರ ಕ್ರಮದ ರೀತಿ, ಜೀವನ ಕ್ರಮದ ಮರ್ಮವಾಗಿ ಬದುಕಿನ ಧರ್ಮವೂ ಆಗಿತ್ತು ಮೂಲಭೂತವಾಗಿ ಈ ಪ್ರದೇಶದಲ್ಲಿ ಬೆಳೆಯುವ ಪಾರಂಪರಿಕ ಬೆಳೆಗಳನ್ನು ಮತ್ತು ಅವು ಬೆಳೆಯುವ ರೀತಿ, ಆ ಬಗೆಗೆ ಇರುವ ಕೃಷಿ ಜಗತ್ತಿನ ಜ್ಞಾನವನ್ನು ತಿಳಿಯುವುದು ಮೊದಲ ಮೆಟ್ಟಿಲು. ಅದರೊಂದಿಗೆ ಮಣ್ಣು ಹಿಸುಕಿ ಬದುಕು ಕಟ್ಟಿದ ತುಳುವರು ತಮ್ಮ ಭಾಷೆ ಮತ್ತು ಪಾದ್ರೇಶಿಕತೆಯ ಅನನ್ಯತೆಯನ್ನು ಹೇಗೆ ಉಳಿಸಿಕೊಂಡಿದ್ದರು ಅದನ್ನು ಇಲ್ಲೂ ಗುರುತಿಸಲು ಸಾಧ್ಯವೇ ಎಂದು ಅನ್ವೇಷಿಸುವುದ.

ಕರಾವಳಿಯ ಕೃಷಿ ಸಂಸ್ಕೃತಿ ಎಂಬ ಪರಿಕಲ್ಪನೆ ಬಹಳ ವಿಸ್ತಾರವಾದ ಹಲವು ಆಯಾಮಗಳನ್ನು ಪಡೆದುಕೊಳ್ಳುವುದರಿಂದ ಅದನ್ನೆಲ್ಲವನ್ನು ಈ ಅಧ್ಯಯನದ ನಡೆಸಲಾಗುವುದಿಲ್ಲ, ಒಂದು ಮಿತಿಯ ಒಳಗೆ ಸಾಂದರ್ಭಿಕವಾಗಿ ಆ ಆಯಾಮಗಳನ್ನು ವಿಶ್ಲೇಷಿಸಿದರೂ ಪ್ರತ್ಯೇಕ ವಿಭಾಗಗಳಾಗಿ ಅಧ್ಯಯನದ ಶಿಸ್ತುಗಳಿಗೆ ಒಳಪಡಿಸಲು ಸಾಧ್ಯವಾಗಿಲ್ಲ. ಇದು ಈ ಅಧ್ಯಯನದ ಮಿತಿಯೂ ಹೌದು. ಕರಾವಳಿ ಎನ್ನುವ ಪರಿಭಾಷೆಗೂ ಒಂದು ಗಡಿರೇಖೆಯನ್ನು ಅಧ್ಯಯನದ ಅವಶ್ಯಕತೆಗಾಗಿ ಗುರುತಿಸಕೊಳ್ಳಬೇಕಾಗಿದೆ. ಚಂದ್ರಗಿರಿಯಿಂದ ಸೀತಾನದಿಯವರೆಗಿನ ವಿಸ್ತಾರ ಭೂಮಿ ಕರಾವಳಯೇ ಆದರೂ ಎಲ್ಲ ಸ್ಥಳಗಳಿಗು ತೆರಳಿ ಮಾಹಿತಿ ಸಂಗ್ರಹ ಸಾಧ್ಯವಿಲ್ಲ. ಕರಾವಳಿಯ ಓರ್ವ ಕೃಷಿಕಳ ಮಗಳಾಗಿ ನನ್ನ ಕೃಷಿ ಜಗತ್ತಿನ ಅನುಭವಗಳೊಂದಿಗೆ, ಪರಂಪರೆಯ ಕೃಷಿ ಜಗತ್ತಿನ ವೈವಿಧ್ಯಗಳ ಮಾಹಿತಿಯನ್ನು ಆಯ್ದು ವಕ್ತೃಗಳಿಂದ ಸಂಗ್ರಹಿಸಿ ಅಧ್ಯಯನದ ಶಿಸ್ತಿಗೆ ಒಳಪಡಿಸಲಾಗುವುದು. ಕರಾವಳಿಯ ಬೆಳೆಗಳ ಕೃಷಿ ಜ್ಞಾನಕೋಶವನ್ನು ವಿಶ್ಲೇಷಿಸುವ ಪ್ರಯತ್ನವೂ ಇಲ್ಲಿ ಬಹಳ ಮುಖ್ಯವಾಗಿದೆ. ಈ ಹಿನ್ನಲೆಯಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಕರಾವಳಿಯ ಕೃಷಿಯಲ್ಲಿ ಬೆಳೆಯುವ ಬೆಳೆಗಳನ್ನು ಈ ಒಂಬತ್ತು ವಿಭಾಗಗಳಲ್ಲಿ ವಿಂಗಡಿಸಲಾಗುವುದು.

ಕರಾವಳಿಯಲ್ಲಿ ಬೆಳೆವ ಬೆಳೆಗಳು

1) ಧಾನ್ಯಗಳು
2) ಬೇಳೆಕಾಳುಗಳ
3) ಸಾಂಬಾರ ಬೆಳೆಗಳು
4) ಎಣ್ಣೆಕಾಳುಗಳು

5) ವಾಣಿಜ್ಯ ಬೆಳೆಗಳು
6) ತರಕಾರಿಗಳು
7) ಹೂಗಳು
8) ಹಣ್ಣುಗಳು
9) ಸುಗಂಧದ್ರವ್ಯಗಳು

1. **ಧಾನ್ಯಗಳು** : ಭತ್ತ ಧಾನ್ಯದ ಬೆಳೆಯಾಗಿ ಬೆಳೆಯುವ ಪ್ರಮುಖ ಬೆಳೆಯಾಗಿದೆ. ರಾಗಿ, ಗೋಧಿ, ಜೋಳಗಳನ್ನು ಪ್ರಯೋಗಾತ್ಮಕವಾಗಿ ಬೆಳೆಸಬಹುದೇ ಹೊರತು ಆಹಾರದ ಬೆಳೆಯ ಕೃಷಿಯ ಮಹತ್ವ ಭತ್ತಕ್ಕಕಿರುವಷ್ಟು ಪ್ರಮುಖವಾಗಿ ಇಲ್ಲ. ಅಕ್ಕಿ ಕರಾವಳಿಯ ಆಹಾರದ ಬೆಳೆಯು ಆಗಿದ್ದು ಪ್ರಮುಖವಾಗಿ ಕೆಲವು ತಳಿಗಳು ಪ್ರಾದೇಶಿಕವಾಗಿ ವಿಶಿಷ್ಟವಾಗಿದೆ.
2. **ಬೇಳೆ ಕಾಳುಗಳು** : ಇಲ್ಲಿ ಬೆಳೆಯುವ ದ್ವಿದಳ ಧಾನ್ಯಗಳಲ್ಲಿ ಬಹಳ ಮುಖ್ಯಸ್ಥಾನ ಪಡೆಯುವುದು ಹುರುಳಿ, ಉದ್ದು, ಹೆಸರು, ಎಳ್ಳು, ಅವರೆ. ಕರಾವಳಿಯಲ್ಲಿ ಬೆಳೆಯುವ ಧಾನ್ಯದ ಬೆಳೆಗಳು ಉಪ ಬೆಳೆಗಳಾಗಿ, ಆಹಾರದ ಬೆಳೆಗಳಾಗಿಯೂ ಪ್ರಚಲಿತದಲ್ಲಿದೆ.
3. **ಸಾಂಬಾರ ಬೆಳೆಗಳು** : ಪ್ರಾಚೀನ ಕಾಲದಿಂದಲೂ ಭಾರತ ದೇಶ ಸಾಂಬಾರ ಪದಾರ್ಥಗಳಿಗೆ ಪ್ರಸಿದ್ಧವಾದುದು. ಇಲ್ಲಿಂದ ವಿದೇಶಗಳಿಗೆ ರಫ್ತುಕಾರ್ಯಗಳು ಸಾಂಬಾರು ಬೆಳೆಗಳಾಗಿ ನಡೆಯುತ್ತಿರುವುದರಿಂದ ಮತ್ತು ಬ್ರಿಟಿಷರು ಈ ಬೆಳೆಗಳನ್ನು ಹೆಚ್ಚು ಒತ್ತಾಸೆ ಕೊಟ್ಟು ಬೆಳೆದಿದ್ದುದರಿಂದ ಬಹಳ ವೇಗವಾಗಿ ಮತ್ತು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಈ ಬೆಳೆಗಳನ್ನು ಬೆಳೆಯುವರು. ಇಲ್ಲಿ ಬೆಳೆವ ಸಾಂಬಾರ ಬೆಳೆ ಎಂದರೆ ಮೆಣಸು, ಕರಿಮೆಣಸು,ಹುಣಸೆ ಮತ್ತು ಶುಂಠಿ, ಜಾಯಿಕಾಯಿ, ಲವಂಗ, ಇಜಿನಿನ ಸೊಪ್ಪು, ಕರಿಬೇವು, ಇತ್ಯಾದಿ
4. **ಎಣ್ಣೆ ಕಾಳುಗಳು** : ಎಣ್ಣೆಗಾಗಿ, ತೆಂಗು ಮತ್ತು ಎಳ್ಳು ಕಾಳುಗಳನ್ನು ಬಿಟ್ಟರೆ ಬೇರೆ ಯಾವ ಬೆಳೆಯನ್ನು ಇಲ್ಲಿ ಬೆಳೆಯುವುದಿಲ್ಲ. ಹಿಂದೆ ಹೊನ್ನೆಕಾಯಿಯಿಂದ ಎಣ್ಣೆಯನ್ನು ತೆಗೆದು ಅದನ್ನು ಬಳಸುತ್ತಿದ್ದರು ದೀಪ ಉರಿಸಲು ಮತ್ತು ತಲೆಗೆ ಹಾಕಲು ಈ ಎಣ್ಣೆ ಬಹಳ ತಂಪಾಗಿತ್ತು. ಹೊನ್ನೆ ಎಣ್ಣೆಯಿಂದ ಉರಿದ ದೀಪದ ಮಸಿಯಿಂದ ಕಾಡಿಗೆಯನ್ನು ತಯಾರಿಸುತ್ತಿದ್ದರು. ಹೊನ್ನೆ ಮರವನ್ನು ಬೆಳೆಯಾಗಿ ಬೆಳೆಸುತ್ತಿರಲಿಲ್ಲ. ಗದ್ದೆಯ ಬದುವು, ಪಡ್ಪಿನಂಥ ಗುಡ್ಡಗಳಲ್ಲಿ ಇದು ಪ್ರಾಕೃತಿಕವಾಗಿ ಬೆಳೆಯುತಿತ್ತು.
5. **ವಾಣಿಜ್ಯ ಬೆಳೆಗಳು** : ಬೆಳೆಗಳನ್ನು ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಯಲಾರಂಭಿಸಿದ್ದು ವಸಾಹತೋತ್ತರಕಾಲದ ಬೆಳವಣಿಗೆ. ಬೆನ್ನಿ ಮತ್ತು ಬೇರ ಯಾವತ್ತು ಪರ್ಯಾಯ ಪದಗಳಾಗಿರಲಿಲ್ಲ. 'ಬೆನ್ನಿ'(ಕೃಷಿ) ಬದುಕಾಗಿದ್ದರೆ 'ಬೇರ'(ವ್ಯಾಪಾರ) ಲಾಭ–ನಷ್ಟಗಳ ವ್ಯವಹಾರವಾಗಿ ಮಾತ್ರ ಉಳಿಯಿತು. ಬೆಳೆದ ಬೆಳೆಗಳನ್ನು ವ್ಯಾಪಾರದ ದೃಷ್ಟಿಯಿಂದ ನೋಡುವುದು ಆಧುನಿಕತೆಯ ಪ್ರತೀಕ. ಕೃಷಿ ಜಗತ್ತು ಬದಲಾಗುತ್ತಾ ಬಂದುದು ಇದಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳೆಂದರೆ

ತೆಂಗು, ಅಡಿಕೆ, ಕೊಕ್ಕೊ, ಕಬ್ಬು, ಗೋಡಂಬಿ, ವೀಳ್ಯದೆಲೆ, ವೆನಿಲ್ಲಾ, ರಬ್ಬರ್, ಕರಿಮೆಣಸು.

6. **ತರಕಾರಿಗಳು** : ಸಾರು, ಸಾಂಬಾರು, ಪಲ್ಯ, ಮೇಲೋಗರಗಳಿಗಾಗಿ ಕರಾವಳಿಯಲ್ಲಿ ಹಲವಾರು ರೀತಿಯ ತರಕಾರಿಗಳನ್ನು ಬೆಳೆಯುತ್ತಾರೆ. ಸೌತೆ, ಮುಳ್ಳುಸೌತೆ, ಬೂದುಗುಂಬಳ, ಸಿಹಿಗುಂಬಳ, ಹಾಗಲಕಾಯಿ, ಪಡುವಲಕಾಯಿ, ಸೋರೆಕಾಯಿ, ಹೀರೆಕಾಯಿ, ಬದನೆ, ಗುಳ್ಳ, ತೊಂಡೆಕಾಯಿ, ಬೆಂಡೆ, ಅಲಸಂಡೆ, ಸುವರ್ಣಗೆಡ್ಡೆ, ಸಾಮ್ರಣಿಗೆಡ್ಡೆ, ಮರಗೆಣಸು, ಸಿಹಿಗೆಣಸು, ಜೀಗುಜ್ಜೆ, ಸೊಪ್ಪುಗಳಾದ ಹರಿವೆ, ಬಸಳೆ, ಇತ್ಯಾದಿ. ಆಯಾಯ ಕಾಲಮಾನಕ್ಕೆ ಅನುಗುಣವಾಗಿ ಈ ತರಕಾರಿಗಳನ್ನು ಬೆಳೆಯುತ್ತಾರೆ.

7. **ಹೂಗಳು** : ಕರಾವಳಿ ಬಹಳ ಪ್ರಸಿದ್ಧವಾದುದು ಇಲ್ಲಿ ಬೆಳೆಯುವ ಮಲ್ಲಿಗೆ ಹೂವಿಗೆ ಆ ಮಲ್ಲಿಗೆಯಲ್ಲಿ ಹಲವಾರು ವಿಧಗಳಿವೆ. ಸೂಜಿಮಲ್ಲಿಗೆ, ಇರುವಂತಿಗೆ, ಜಾಜಿ, ದುಂಡುಮಲ್ಲಿಗೆ, ಭಟ್ಕಳ ಮಲ್ಲಿಗೆ, ಮಂಗಳೂರು ಮಲ್ಲಿಗೆ, ಉಡುಪಿ ಮಲ್ಲಿಗೆ, ಇತ್ಯಾದಿ. ಇದಲ್ಲದೆ ಸೇವಂತಿಗೆ, ಸಂಪಿಗೆ, ಗುಲಾಬಿ, ಚೆಂಡುಹೂ, ಸುಗಂಧರಾಜ, ಅಬ್ಬಮಲ್ಲಿಗೆ, ದಾಸವಾಳ, ನಂದಿಬಟ್ಟಲು, ಪಚ್ಚೆಕೊರಳು, ಪಾರಿಜಾತ, ರತ್ನಗಂಧಿ, ರಥಹೂ ಇತ್ಯಾದಿ

8. **ಹಣ್ಣುಗಳು** : ಹಣ್ಣುಗಳ ರಾಜನೆಂದೇ ಗುರುತಿಸಲ್ಪಡುವ ಮಾವಿನ ಹಣ್ಣಿನ ವೈವಿಧ್ಯತೆಗೆ ಕರಾವಳಿ ಪ್ರಸಿದ್ಧ. ಮಾವು ಮತ್ತು ಹಲಸುಗಳಲ್ಲಿ ಹಲವು ತಳಿಗಳ ಪ್ರಕಾರಗಳು ಇಲ್ಲಿವೆ. ಬಾಳೆ, ಪಪ್ಪಾಯಿ, ಅನಾನಸು, ಚಿಕ್ಕು, ಸೀಬೆ, ಸೀತಾಫಲ, ರಾಮಫಲ, ಕಲ್ಲಂಗಡಿ, ನಿಂಬೆ, ಜಂಬುನೇರಳೆ, ನೇರಳೆ ಹಣ್ಣು, ಹೀಗೆ ವಿವಿಧಜಾತಿಯ ಹಣ್ಣುಗಳನ್ನು ಇಲ್ಲಿ ಬೆಳೆಯುತ್ತಾರೆ. ಮನೆಯ ಕೈತೋಟ, ಹಿತ್ತಲುಗಳಲ್ಲಿದ್ದ ವಿಸ್ತಾರವಾದ ತೋಪುಗಳಲ್ಲಿಯು ಈ ಬೆಳೆಗಳನ್ನು ಬೆಳೆಯಲಾಗುತ್ತದೆ.

9. **ಸುಗಂಧ ಬೆಳೆಗಳು** : ತುಳಸಿ ಮತ್ತು ಲಾವಂಚ ಪ್ರಮುಖ ಸುಗಂಧದ ಬೆಳೆಗಳಾಗಿ ಬೆಳೆಯುತ್ತಾರೆ. ಧಾರ್ಮಿಕ ದೃಷ್ಟಿಕೋನ ಮತ್ತು ವ್ಯಾಪಾರಿ ದೃಷ್ಟಿಕೋನಗಳಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತದೆ.

ಕರಾವಳಿಯ ಉದ್ದಕ್ಕೂ ವೈವಿಧ್ಯಪೂರ್ಣವಾಗಿ ಬೆಳೆಯುವ ಈ ಬೆಳೆಗಳನ್ನು ವಿವರಣಾತ್ಮಕವಾಗಿ ವಿಸ್ತರಿಸುತ್ತ ಹೋಗುವುದು ಅಧ್ಯಯನದ ಅಳತೆಗೆ ಅಗಾಧತೆಯನ್ನು ಒದಗಿಸುತ್ತದೆ ಇಲ್ಲಿ ಬೆಳೆಯುವ ಬೆಳೆಗಳ ರೀತಿಯನ್ನು ವೈವಿಧ್ಯವನ್ನು, ಬಿತ್ತಬೇಕಾದ ಕಾಲಮಾನಗಳು, ಪೋಷಿಸಬೇಕಾದ ವಿವರಗಳು, ಸಂರಕ್ಷಣೆಗಳು, ಬೆಳೆಯ ನಿರ್ವಹಣೆಗಳು ಒಕ್ಕಣೆ ಮಾಡಬೇಕಾದ ರೀತಿ, ಇವೆಲ್ಲವೂ ಜ್ಞಾನಕೋಶಗಳು. ಕೃಷಿ ಕಾರ್ಯ ಕೆಲಸ ಮಾಡುವ ಅನುಭವದಿಂದ ಮಾತ್ರ ತಿಳಿಯಲು ಸಾಧ್ಯ. ಕೇವಲ ಬರೆದು ಓದುವ ಲೆಕ್ಕಾಚಾರದಿಂದ ಯಾವುದೇ ಬೆಳೆಗಳನ್ನು ಬೆಳೆಯಲಾಗುವುದಿಲ್ಲ. ಗದ್ದೆ ಉಳ ಬೇಕಾದರೆ, ಬಿತ್ತನೆ ಮಾಡಲು, ಗದ್ದೆಯಲ್ಲಿ ನಾಟಿ ಮಾಡಲು, ಪಾತಿಯಲ್ಲಿ ಬೀಜ ಹಾಕಲು ಗೊಬ್ಬರ ಹಾಕಲು ನೀರು ಹಾಯಿಸಲು ವಿಶೇಷ ಲೋಕ ಜ್ಞಾನ ಬೇಕು. ಅಂತಹ ವಿಶಿಷ್ಟ ಜ್ಞಾನದ ಎಳೆಗಳು ಅಲ್ಲಲೇ ಮರೆಯಾಗಿ

ಹೋಗದೆ ಇರಬೇಕಾದರೆ ಅವನ್ನು ಸಂಗ್ರಹಿಸಿ ಅರ್ಥೈಸಿ ದಾಖಲಿಸುವುದು ಮುಖ್ಯ ಆಗಿರುತ್ತದೆ. 'ನಮ್ಮ ಹಿರಿಯರು' ಜಗತ್ತನ್ನು ಕಂಡ ದೃಷ್ಟಿಕೋನದೊಂದಿಗೆ ಬದುಕಿನ ಸಮಗ್ರ ಚಿತ್ರಣವು ಇದರಿಂದ ಅರಿವಾಗುತ್ತದೆ. ತುಳುವರು ಕೃಷಿ ಮಾಡುವ ಕಾರ್ಯಾ ಚಟುವಟಿಕೆಗಳೊಂದಿಗೆ ಅವರು ಬೆಳೆಯನ್ನು ಬದುಕನ್ನು ಗ್ರಹಿಸಿದ ರೀತಿಯನ್ನು ಅರ್ಥೈಸಬಹುದು. ಅಧ್ಯಯನದ ಅನುಕೂಲಕ್ಕಾಗಿ ಯಾವುದೇ ಬೆಳೆಯನ್ನು ಬೆಳೆಯುವ ವಿವಿಧ ಹಂತಗಳನ್ನು ಗಮನದಲ್ಲಿರಿಸಿ ಅವುಗಳ ವಿಭಾಗಕ್ರಮವನ್ನು ವಿಭಾಗಿಸಿ ವಿಶ್ಲೇಷಿಸುವುದು. ಬೆಳೆಯನ್ನು ಬೆಳೆಯುಲು ಬೇಕಾದ ಭೂಮಿಯ ಆಯ್ಕೆ, ಬೆಳೆಯ ಆಯ್ಕೆ, ತಳಿಯ ಆಯ್ಕೆ, ಬಿತ್ತನೆ, ನಾಟಿ ಇವೆಲ್ಲದರ ಬಗೆಗೆ ಸೂಕ್ಷ್ಮವಾದ ದೃಷ್ಟಿಕೋನ ದೃಢ ನಿರ್ಧಾರಗಳನ್ನು ಕೈಗೊಳ್ಳುವ ಜಾಣ್ಮೆ ಕರಾವಳಿಯ ಮಹಿಳೆಗಿತ್ತು ಆಕೆ ಅವುಗಳನ್ನು ಹೇಗೆ ನಿರ್ವಹಣೆ ಮಾಡಿದಳು ಎನ್ನುವ ವಿಚಾರವು ಮುಖ್ಯವಾಗುತ್ತದೆ.

ಕರಾವಳಿಯ ಕೃಷಿ ವೈಶಿಷ್ಟ್ಯ:

ಕಾಡು ಮತ್ತು ಕಡಲಿನ ಮಧ್ಯದ ನೆಲದಲ್ಲಿದ್ದ ಗದ್ದೆಗಳನ್ನು ಗಮನಿಸಿದಾಗಲೂ ಇಲ್ಲಿಯ ಗದ್ದೆಗಳ ವಿನ್ಯಾಸ, ನೀರಾವರಿಗೆ ಅನುಗುಣವಾಗಿ ಗದ್ದೆಗಳನ್ನು ಹೆಸರಿಸುವ, ಗುರುತಿಸುವ ಅನನ್ಯತೆಯು ಇಲ್ಲಿದೆ. ಎತ್ತರದ ಗುಡ್ಡಗಳಿಂದ ಹರಿದು ಬರುವ ನೀರು ಎಲ್ಲೆಲ್ಲೋ ಪೋಲಾಗಿ ಹೋಗದ ಹಾಗೆ ಇಳಿಜಾರಿಗೆ ಹರಿಯುವಂತೆ ಮತ್ತು ಕೆರೆ ತೋಡುಗಳಿಗೆ ಕಟ್ಟವನ್ನು ಕಟ್ಟಿ ನೀರನ್ನು ಉಪಯೋಗಿಸುವಂತಹ ವ್ಯವಸ್ಥೆ ಸೊಗಸಾಗಿತ್ತು. ಯಾವ ಆಧುನಿಕ ತಂತ್ರಜ್ಞಾನವನ್ನು ಮೀರಿಸುವಂತಹ ಸುರಂಗಗಳನ್ನು ಕೊರೆದು ನೀರನ್ನು ಹಾಯಿಸಿ ಕೃಷಿ ಮಾಡುತ್ತಿದ್ದರು. ತುಂಬಾ ದೂರದಿಂದ ಮೈಲುಗಟ್ಟಲೆ ದೂರದಿಂದಲೂ ನೀರನ್ನು ಸಣ್ಣ ತನ್ನೆ ತೋಡುಗಳಲ್ಲಿ ಹರಿಯಿಸಿ ತಂದು ಕೃಷಿ ಮಾಡುವ ಪರಿಪಾಠವು ಚಾಲ್ತಿಯಲ್ಲಿತ್ತು. ಜಾಣ್ಮೆ, ತಂತ್ರಗಾರಿಕೆ ಮತ್ತು ಕೌಶಲ್ಯದೊಂದಿಗೆ ಬೆಳೆಯನ್ನು ಬೆಳೆಯಬೇಕಾದ ಸಕಾಲಿಕ ಎಚ್ಚರವೂ ಅವರದಾಗಿತ್ತು.

ಸಾಮಾನ್ಯವಾಗಿ ರಾಜ್ಯದ ಹೆಚ್ಚಿನ ಎಲ್ಲಾ ಕಡೆ ಕೃಷಿ ಜಗತ್ತಿನಲ್ಲಿ ಕೇವಲ ಎರಡು ಬೆಳೆಗಳನ್ನು ಮಾತ್ರ ಬೆಳೆಯುತ್ತಾರೆ. ಕರಾವಳಿಯಲ್ಲಿ ಒಂದು ವರ್ಷದ ಋತುಮಾನದಲ್ಲಿ ಮೂರು ಬೆಳೆಗಳನ್ನು ಬೆಳೆಯುತ್ತಾರೆ, ಸುರಿಯುವ ಸೋನೆ ಮಳೆಯ ಮುಂಗಾರಿಗೆ 'ಎಣೆಲು' ಬೆಳೆಯ ಬೆಳೆಯನ್ನು ಬೆಳೆಯುತ್ತಾರೆ. ಹಿಂಗಾರಿನಲ್ಲಿ ಬೆಳೆಯುವ ಬೆಳೆ ಸುಗ್ಗಿ. ಎರಡನೆ ಬೆಳೆ ಸುಗ್ಗಿ ಕೊಯಿಲು ಮುಗಿದ ತಕ್ಷಣ ಬೆಳೆಯುವ ಬೆಳೆ ಕೊಳಕೆ. ಇದಲ್ಲದೆ ಸುಗ್ಗಿ ಮತ್ತು ಕೊಳಕೆಯ ಮಧ್ಯದ ಕಾಲದಲ್ಲಿ ಇಡೆ ಕೊಳಕೆ ಎಂಬ ಬೆಳೆಯನ್ನು ಬೆಳೆಯುತ್ತಾರೆ. ಸಾಮಾನ್ಯವಾಗಿ ಮೂರು ಬೆಳೆಯಾಗಿ ಎಣೆಲು ಸುಗ್ಗಿ ಕೊಳಕೆಗಳನ್ನು ಬೆಳೆದರೂ, ಸಾಮರ್ಥ್ಯವಿರುವವರು ಎಡೆ ಕೊಳಕೆಯನ್ನು ಸೇರಿಸಿ ನಾಲ್ಕು ಬೆಳೆಯನ್ನು ಬೆಳೆಯುತ್ತಾರೆ. ವರ್ಷದಲ್ಲಿ ಋತುಮಾನಕ್ಕೆ ಮತ್ತು ನೀರಿನ ಲಭ್ಯತೆಯನ್ನು ಗಮನದಲ್ಲಿರಿಸಿ ಭತ್ತ ಇಲ್ಲವೇ ಧಾನ್ಯಗಳ ಬೆಳೆ ಬೆಳೆಯುವುದು ಕರಾವಳಿಗರ ವೈಶಿಷ್ಟ್ಯ. ನದಿ ಬದಿಯ ಗದ್ದೆಗಳು ಮಳೆಗಾಲದಲ್ಲಿ ನೀರು ನಿಂತು ಕೃಷಿ ಮಾಡಲು ಅಸಾಧ್ಯವಾಗಿರುವುದರಿಂದ ಅಂತಹ ಗದ್ದೆಗಳಿಗೆ ಮಳೆಗಾಲದಲ್ಲಿ ನದಿ ನೀರು ಒಳಗೆ ಬರದಂತೆ ಅಲ್ಲಲ್ಲಿ ಕಿಂಡಿ ಅಣೆಕಟ್ಟುಗಳನ್ನು ರಚಿಸುತ್ತಿದ್ದರು. ನದಿ ಸಮೀಪದ ಗದ್ದೆಗಳಲ್ಲಿ ನದಿಯ ಸಿಹಿ ನೀರಿನೊಂದಿಗೆ ಸಮುದ್ರದ ಉಪ್ಪು ನೀರು ಬೆರೆತು ಸಾಗುವಳಿ ಮಾಡಲು ಸಾಧ್ಯವಾಗುತ್ತಿರಲ್ಲಿಲ್ಲ. ಗದ್ದೆಗೆ ಉಪ್ಪು ನೀರು ಬಂದು ಬೀಳದಂತೆ

ಎಚ್ಚರವಹಿಸುತ್ತಿದ್ದ ಜಾಣ್ಮೆ ಕೃಷಿಕರಿಗೆ ಇತ್ತು. ಏಕೆಂದರೆ ಗದ್ದೆ ಸಾಗುವಳಿಗೆ ಉಪ್ಪು ನೀರು ಬಂದು ಬಿದ್ದರೆ ಯಾವ ಭತ್ತದ ತಳಿಯು ಫಸಲು ನೀಡುವುದಿಲ್ಲ ಈ ಜ್ಞಾನ ತಿಳಿದು ಬೇಕಾದ ಜಾಗರೂಕತೆ ವಹಿಸಬೇಕಾಗುತ್ತಿತ್ತು. ಬೆಳೆ ಬೆಳೆಯ ಬೇಕಾದರೆ ನೀರು ಬೇಕು. ನದಿ ದಡದ ಗದ್ದೆಗಳಾದರೂ ಉಪ್ಪು ನೀರು ಬಂದು ತುಂಬಿದರೆ ಪ್ರಯೋಜನವಿಲ್ಲ. ಹೀಗೆ ಯಾವ ನೀರು ಎಷ್ಟು ಯೋಗ್ಯ ಅಥವಾ ಅಯೋಗ್ಯವಾಗಿ ಬೆಳೆ ಹಾನಿಯಾಗಿತ್ತದೆ ಎಂಬ ತಿಳುವಳಿಕೆ ಇಲ್ಲದಿದ್ದರೆ ಬೆಳೆ ಬೆಳೆಯಲು ಸಾಧ್ಯವಿಲ್ಲ.

ಕರಾವಳಿಯಲ್ಲಿ ಪ್ರಮುಖ ಬೆಳೆಯಾಗಿ ಬೆಳೆಯುವುದು ಭತ್ತ ಮತ್ತು ತೆಂಗು. ಗದ್ದೆಯಲ್ಲಿ ಲಭಿಸುವ ಫಸಲುಗಳನ್ನು ಗಮನದಲ್ಲಿರಿಸಿ ಗದ್ದೆಗಳನ್ನು ಐದು ರೀತಿಯಲ್ಲಿ ಹೆಸರಿಸುತ್ತಿದ್ದರು.

1. ಪಟ್ಲ
2. ಬೈಲು
3. ಮಜಲು
4. ಬೆಟ್ಟು ಗದ್ದೆ
5. ಬಾನ ಬೆಟ್ಟು

ಪಟ್ಲ ಗದ್ದೆ : ನದಿ ಮತ್ತು ನದಿಯ ಒಳ ಹರಿವಿನ ಕೈಗಳು, ತಾರುಗಳು ಇರುವ ಹತ್ತಿರದ ತಗ್ಗು ಪ್ರದೇಶಗಳನ್ನು ಒಂದಷ್ಟು ಮಣ್ಣು ಹೊತ್ತು ಹಾಕಿ ಗದ್ದೆಗಳನ್ನಾಗಿ ಮಾಡುತ್ತಿದ್ದರು. ಈ ಗದ್ದೆಗಳು ನೀರಾವರಿಯ ಜೌಗು ಪ್ರದೇಶವಾಗಿದ್ದು ಮಳೆಗಾಲದಲ್ಲಿ ಬೀಳುವ ಧಾರಕಾರ ಮಳೆಗೆ ಮೊಣಕಾಲಿಗಿಂತಲೂ ಮೇಲೆ, ಕಾಲು ಹೂತು ಹೋಗುವಷ್ಟು ಕೆಸರಿನ ಹೂಳು ಮತ್ತು ನೀರು ತುಂಬುತ್ತಿತ್ತು. ನದಿಯ ಮೇಲು ಹರಿವು ಮತ್ತು ಗದ್ದೆಯ ನೀರಿನ ಮೇಲ್ಮೈ ಒಂದೇ ರೀತಿಯಾಗಿರುತ್ತಿತ್ತು. ಇಂತಹ ಗದ್ದೆಗಳನ್ನು ಉಳುಮೆ ಬಿತ್ತನೆ ನಾಟಿ ಮಾಡಲು ಅಸಾಧ್ಯ. ಕಡಿಮೆ ಮಳೆ ಇದೆಯೆಂದು ಸಾಗುವಳಿ ಮಾಡಿದರೂ ಪ್ರವಾಹದ ನೀರಿಗೆ ಎಲ್ಲವೂ ವ್ಯರ್ಥವಾಗಿ ನೀರಿನಲ್ಲಿ ಮಾಡಿದ ಹೋಮವಾಗುತ್ತದೆ. ಇಂತಹ ಗದ್ದೆಗಳಲ್ಲಿ ಮಳೆಯಾಧಾರಿತ ಎಣೆಲು ಬೆಳೆ ಬೆಳೆಯುವುದಿಲ್ಲ ಸುಗ್ಗಿಯ ಬೆಳೆ ಮತ್ತು ಕೊಳಕೆ ಅಥವಾ ಇಡೆ ಕೊಳಕೆಯಲ್ಲಿ ಒಂದು ಬೆಳೆಗೆ ಭತ್ತದ ಫಸಲು ತೆಗೆಯುತ್ತಿದ್ದರು. ಈ ಪಟ್ಲ ಗದ್ದೆಗಳಲ್ಲಿ ಉಪ್ಪು ನೀರು ಬಂದು ತುಂಬುತ್ತಿದ್ದರಿಂದ ಭೂಮಿಯ ಸಾರ ಕಡಿಮೆಯಾಗುತ್ತದೆ ಎಂಬ ಕಾರಣಕ್ಕಾಗಿಯೂ ಅನಿವಾರ್ಯವಾದ ಸಂದರ್ಭದಲ್ಲಿ ಪ್ರಕೃತಿಯೊಂದಿಗೆ ಸ್ಪರ್ಧಿಸದೆ ಸುಗ್ಗಿ ಬೆಳೆಯನ್ನು ಬೆಳೆಯುತ್ತಿದ್ದರು. ಕೃಷಿಗೆ ಯೋಗ್ಯವಾಗಿರುವ ಗದ್ದೆಗಳಲ್ಲಿ ಸುಗ್ಗಿ ಬೆಳೆ ತೆಗೆದರೆ, ಹಾಗೆ ಬಿಟ್ಟ ಪ್ರದೇಶಗಳಲ್ಲಿ ಕೃಷಿಗೆ ಪೂರಕವಾದ ಕಳೆ ಹುಲ್ಲೊಂದು ಬೆಳೆಯುತ್ತದೆ ಇದನ್ನು 'ಕಜೆ' ಎನ್ನುತ್ತಾರೆ. ವರ್ಷದ ಎಲ್ಲಾ ದಿನಗಳಲ್ಲೂ ಹುಲುಸಾಗಿ ಬೆಳೆಯುವ ಈ ಕಳೆ ಹುಲ್ಲನ್ನು ಕೋಣ–ಹಸುಗಳಿಗೆ ಮೇವಾಗಿ ಬಳಸುತ್ತಾರೆ ಅತಿಯಾಗಿ ಲಭಿಸುವ ಈ ಹುಲ್ಲನ್ನು ಕತ್ತರಿಸಿ ತಂದು ರಾಶಿ ಹಾಕಿ ಹಟ್ಟಿಯ ದನ ಕರುಗಳಿಗೆ 'ಕಿದಡಿ' (ಮಲಗುವ ಬೆಚ್ಚನೆಯ ಹಾಸು)ಯಾಗಿಯೂ ಬಳಸುತ್ತಿದ್ದರು. ಹಸಿ ಹುಲ್ಲಿನ ಕಜೆ ಆಹಾರವಾದರೆ, ಒಣ ಹುಲ್ಲಿನ ಕಜೆ ಹಟ್ಟಿಗೆ ಗೊಬ್ಬರದ ಬಳಕೆಗೂ ಅವಶ್ಯವಿತ್ತು. ಒಂದಲ್ಲ ಒಂದು ರೀತಿಯಲ್ಲಿ ಗದ್ದೆಯ ಮಣ್ಣನ್ನು ಅಲ್ಲಿ ಬೆಳೆಯುವ ಹುಲ್ಲನ್ನು ಬಳಸಿಕೊಳ್ಳುವ ಜಾಣ್ಮೆ ರೈತಾಪಿ ವರ್ಗದವರಾಗಿತ್ತು.

ಬಯಲು ಗದ್ದೆ : ಗದ್ದೆಗಳಲ್ಲಿ ಅತ್ಯಂತ ಫಲವತ್ತಾದ ಪ್ರದೇಶಗಳಿವು. ಸಾಮಾನ್ಯವಾಗಿ ಎರಡು

ಬೆಳೆಯನ್ನ ಸಾಧ್ಯವಾದರೆ ಮೂರು ಬೆಳೆಯನ್ನು ಈ ಗದ್ದೆಗಳಲ್ಲಿ ಬೆಳೆಯುತ್ತಿದ್ದರು. ಎಣೆಲು, ಸುಗ್ಗಿ, ಮತ್ತು ಕೊಳಕೆ ಬೆಳೆಗಳನ್ನು ಬೆಳೆಯಲು ಸಾಧ್ಯವಿರುವ ಗದ್ದೆಗಳೇ ಬೈಲು ಗದ್ದೆಗಳು. ಮಳೆ ನೀರು, ಕೆರೆ, ಕಟ್ಟೆ, ಬಾವಿ, ತೋಡಿನ ನೀರನ್ನು ಹಾಯಿಸಿ ಬೆಳೆಯನ್ನು ಬೆಳೆಯುತ್ತಾರೆ. ಅತ್ಯಂತ ಫಲವತ್ತಾದ ಮಣ್ಣು ಮತ್ತು ನೀರನ್ನು ಹೊಂದಿರುವ ಗದ್ದೆಗಳು ಬೈಲು ಗದ್ದೆಗಳು. ಇಲ್ಲಿ ಮೂರು ಬೆಳೆಯನ್ನು ನಿರಾಯಾಸವಾಗಿ ಪಡೆಯಬಹುದು. ಎರಡು ಬೆಳೆ ಭತ್ತದ ಬೆಳೆಯಾದರೆ ಒಂದು ಬೆಳೆ ಧಾನ್ಯದ ಬೆಳೆಯಾಗಿರುತ್ತದೆ. ಹದವಾದ ಮಣ್ಣು ಮತ್ತು ಹಿತ ಮಿತವಾದ ನೀರು ಒಳ್ಳೆಯ ಫಸಲನ್ನು ಕೊಡುತ್ತದೆ. ಬೈಲು ಗದ್ದೆಗಳು ಬಹಳ ವಿಸ್ತಾರವಾದ ಪ್ರದೇಶವನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಈ ಗದ್ದೆಗಳಿಗೆ "ಅಮರೆ" ಹಾಕುವ ಕ್ರಮ ಇತ್ತು.

ಮಜಲು ಗದ್ದೆ : ಮಜಲು ಗದ್ದೆಗಳು ಒಂದರ್ಥದಲ್ಲಿ ಎರಡನೆ ದರ್ಜೆಯ ಗದ್ದೆಗಳು. ಬಯಲು ಗದ್ದೆಯ ಹಾಗೆ ವರ್ಷದ ಹೆಚ್ಚಿನ ದಿನ ಇಲ್ಲಿ ನೀರಿನ ವ್ಯವಸ್ಥೆ ಇರುವುದಿಲ್ಲ. ಮಳೆಗಾಲದಲ್ಲಿ ಮುಂಗಾರು ಮಳೆಯ ನೀರಿನಿಂದ ಬೆಳೆ ತೆಗೆದರೆ ಎರಡನೆ ಬೆಳೆಗೆ ಹಿಂಗಾರಿನ ಮಳೆ ಮತ್ತು ಹಾಯಿಸುವ ನೀರಿನ ವ್ಯವಸ್ಥೆ ಇರುತ್ತದೆ. ಒಂದು ಬೆಳೆ ಭತ್ತ, ಒಂದು ಬೆಳೆ ಧಾನ್ಯ ಇಲ್ಲದಿದ್ದರೆ ಎರಡು ಬೆಳೆ ಭತ್ತ, ಒಂದು ಬೆಳೆ ಧಾನ್ಯವನ್ನು ಬೆಳೆಯುತ್ತಾರೆ. ನೀರಾವರಿಯ ಸ್ವರೂಪವನ್ನು ಗಮನಿಸಿ ಈ ವಿಭಾಗ ಕ್ರಮವನ್ನು ಮಾಡಲಾಗುತ್ತದೆ. ಬೈಲು ಗದ್ದೆಗಳಿಗಿಂತ ವಿಸ್ತಾರದಲ್ಲಿ ಕೊಂಚ ಕಡಿಮೆ ಇರುವ ಗದ್ದೆಗಳಿವು.

ಬೆಟ್ಟು ಗದ್ದೆ: ಗುಡ್ಡವನ್ನು ಅಗೆದು ಮಾಡಿರುವ ಗದ್ದೆಗಳಿವು. ಎತ್ತರದ ಗುಡ್ಡ ಪ್ರದೇಶಗಳಿಂದ ಹರಿದು ಬರುವ ನೀರಿನ ವ್ಯವಸ್ಥೆ ಇರುವ ಈ ಗದ್ದೆಗಳಿಂದ ಬೆಳೆ ತೆಗೆಯುವುದು ತ್ರಾಸದಾಯಕ. ಮಳೆಗಾಲದ ಎಣೆಲು ಬೆಳೆಗಳಲ್ಲದೆ ನೀರಾವರಿ ವ್ಯವಸ್ಥೆ ಮಾಡಿಕೊಂಡು ಇನ್ನೊಂದು ಬೆಳೆಯಲ್ಲಿ ಭತ್ತ ಇಲ್ಲವೆ ಧಾನ್ಯ, ತರಕಾರಿಯನ್ನು ಬೆಳೆಯುತ್ತಾರೆ. ಬೈಲು ಮಜಲು ಗದ್ದೆಗಳಿಂದ ವಿಸ್ತೀರ್ಣದಲ್ಲಿ ಚಿಕ್ಕದಾಗಿರುವ ಈ ಗದ್ದೆಗಳು ಸಾಮಾನ್ಯವಾಗಿ ಮನೆ, ಹಟ್ಟಿಯ ಸುತ್ತಮುತ್ತ ಇರುತ್ತದೆ. ಕರಾವಳಿಯ ವೈಶಿಷ್ಟ್ಯವಿರುವುದೇ ಇಂತಹ ಗದ್ದೆಗಳ ವಿನ್ಯಾಸದಿಂದ. ಯಾಕೆಂದರೆ ಕರಾವಳಿಯ ಭೌಗೋಳಿಕತೆಯನ್ನು ಗಮನಿಸಿದರೆ ಎತ್ತರವಾದ ಗುಡ್ಡ ಮತ್ತು ಆ ಗುಡ್ಡದ ಬುಡದಲ್ಲಿ ಮನೆಯಿರುತ್ತದೆ. ಮನೆಯ ಸುತ್ತಮುತ್ತ ಇರುವ ಗದ್ದೆಗಳು ಮತ್ತು ಕೃಷಿಗೆ ಬೇಕಾದ ಸೊಪ್ಪು ಗೊಬ್ಬರಗಳಿಗೆ ಅವಶ್ಯವಿದ್ದ ಬೆಟ್ಟ-ಗುಡ್ಡ-ಪಡ್ಪುಗಳು ಮನೆಯ ಸುತ್ತಮುತ್ತಲೂ ಆವರಿಸಿಕೊಂಡು ಇರುತ್ತದೆ. ಒಂಟಿ ಮನೆಗಳೇ ಹೆಚ್ಚಾಗಿರುವ ಕರಾವಳಿಯಲ್ಲಿ ಒಂದು ತೋಟ, ಒಂದು ಬೈಲು ಅದನ್ನು ಆವರಿಸಿಕೊಂಡಿರುವ ಗುಡ್ಡಗಳು ಒಬ್ಬ ಕೃಷಿಕನ ಅಧೀನದಲ್ಲಿರುವುದು ಸಾಮಾನ್ಯ. ಮನೆ ಮುಂದಿನ ಗದ್ದೆ ಬಾಕಿಮಾರಾದರೆ ಮನೆ ಹಿಂದಿನ ಗದ್ದೆಗಳಿಗೂ ವಿಶಿಷ್ಟ ಹೆಸರುಗಳಿರುತ್ತದೆ. ಸಾಮಾನ್ಯವಾಗಿ ಚಿಕ್ಕ ಚಿಕ್ಕ ಗದ್ದೆಗಳನ್ನು ಕೊಲೆಂಜಿ ಎಂದು ಕರೆಯುತ್ತಾರೆ. ನೇಗಿಲಿನಿಂದ ಉಳಲಾಗದೆ ಬರಿಯ ಹಾರೆಯಿಂದ ಕೊಚ್ಚಿ ಸಾಗೋಳಿ ಮಾಡುವ ಗದ್ದೆಗಳನ್ನು 'ಕೋಡಿ ಕೊಲೆಂಜಿ' ಎಂದು ಕರೆಯುತ್ತಾರೆ ಇಂತಹ ಗದ್ದೆಗಳನ್ನು ಗಂಡಸರು ಉಳುಮೆ ಮಾಡದೆ ಹೆಂಗಸರೋ ಮಕ್ಕಳೋ ಹಾರೆಯಿಂದ ಕೊಚ್ಚಿ ನಾಟಿ ಮಾಡುತ್ತಾರೆ. ಇದನ್ನು 'ಬಜಿಲ್‌ದ ಕಂಡ' ಎಂದು ಕರೆಯುತ್ತಾರೆ. ಈ ಗದ್ದೆಯಲ್ಲಿ ಬೆಳೆದ ಭತ್ತವನ್ನು ಮಕ್ಕಳ ತಿಂಡಿಗಾಗಿ ಅವಲಕ್ಕಿ ಮಾಡುವುದು ಸಾಮಾನ್ಯವಾಗಿ ಎಲ್ಲಾ ಕೃಷಿ

ಕುಟುಂಬಗಳಲ್ಲೂ ಇರುತ್ತದೆ. ವ್ಯಾಪಾರದ ಮೂಲವಾಗುವ ಮೊದಲು ಭತ್ತ ಆಹಾರದ ಮೂಲವಾಗಿರುವುದಕ್ಕೆ ಇದು ಸಾಕ್ಷಿಯಾಗಿದೆ.

ಬಾನ ಬೊಟ್ಟು: ಈ ಗದ್ದೆಗಳು ಕೇವಲ ಮಳೆ ನೀರನ್ನು ಆಶ್ರಯಿಸಿ ಕೃಷಿ ಮಾಡುವ ಗದ್ದೆಗಳು. ಕೆರೆ, ಕಟ್ಟೆ, ಬಾವಿಗಳಿಂದ ಹಾಯಿಸುವ ನೀರಾಗಲೀ, ನೀರಿನ ಒರತೆ ಇರುವ ಪ್ರದೇಶಗಳಿಂದ ಕಾಲುವೆಗಳಿಂದ ಹಾಯಿಸುವ ನೀರಾಗಲೀ ಈ ಗದ್ದೆಗಳಿಗೆ ಲಭ್ಯವಾಗುವುದಿಲ್ಲ. ಅತಿಯಾಗಿ ಮಳೆ ಬಂದರು ಪ್ರಯೋಜನವಿಲ್ಲ. ಬಿತ್ತನೆ ಮತ್ತು ನಾಟಿ ಎರಡನ್ನೂ ಮಾಡುವ ಈ ಗದ್ದೆಗಳಿಗೆ ಹಿತ ಮಿತವಾಗಿ ನೀರು ಲಭಿಸಿದರೆ ಉತ್ತಮ ಫಸಲು ಪಡೆಯಲು ಸಾದ್ಯವಾಗುತ್ತದೆ. ಆಕಾಶದ ಕಡೆ ಮುಖ ಮಾಡುತ್ತಲೇ ಕೃಷಿ ಆರಂಭವಾಗುವ ಈ ಗದ್ದೆಗಳು ಅತ್ಯಂತ ಎತ್ತರದ ಸ್ಥಳಗಳಲ್ಲಿ ಇರುತ್ತದೆ. ಮಳೆ ಬಂದರೆ ಬೆಳೆ ಎಂದಿರುವ ಗದ್ದೆಗಳನ್ನು ಮುಂಗಾರಿನ ಒಂದೆರಡು ಮಳೆ ಬಂದ ತಕ್ಷಣ ಸಾಗುವಳಿ ಕಾರ್ಯ ಆರಂಭಿಸಿ ಬೇಗನೆ ಮುಗಿಸುತ್ತಾರೆ. ಮಳೆ ಕೈ ಕೊಟ್ಟರೆ ಈ ಗದ್ದೆಗಳಲ್ಲಿ ಫಸಲು ಪಡೆಯುವುದು ಬಹಳ ಕಷ್ಟ ಆಗ ಮುಂಗಾರಿನ ಕೊನೆಯಲ್ಲಿ ಇಲ್ಲಿ ಸಾಗುವಳಿ ಮಾಡುತ್ತಾರೆ. ಎಲ್ಲೆಲ್ಲಾ ಅವಕಾಶಗಳಿವೆಯೋ ಅಲ್ಲೆಲ್ಲಾ ಭತ್ತ ಬೆಳೆಯುವ ಹುಮ್ಮಸು ರೈತಾಪಿ ವರ್ಗದ್ದು.ಜಾಣ್ಮೆ ಇರುವುದು ಮಣ್ಣು ಮತ್ತು ನೀರಿನ ಲಭ್ಯತೆಯನ್ನು ಗಮನದಲ್ಲಿರಿಸಿ ತಳಿಗಳನ್ನು ಆವಿಷ್ಕರಿಸಿದ್ದು ಮತ್ತೆ ಅವುಗಳನ್ನು ಕಾಪಿಟ್ಟು ಬೆಳೆಸುವುದರಲ್ಲಿ ಎನ್ನುವ ಸೂಕ್ಷ್ಮ ಎಚ್ಚರವನ್ನು ಗಮನಿಸಬೇಕು.

ಕುಮೇರಿ ಬೇಸಾಯ: ಕರಾವಳಿಯ ಕೃಷಿ ಸಂಸ್ಕೃತಿಯಲ್ಲಿ ಇಂದಿಗೂ ಚಾಲ್ತಿಯಲ್ಲಿರುವುದು ಕುಮೇರಿ ಬೇಸಾಯ. ಕೃಷಿ ಸಂಸ್ಕೃತಿಯು ಆರಂಭವಾದ ಹಂತದಲ್ಲಿ ಕೃಷಿಯ ಅನ್ವೇಷಣೆಯ ಮೊದಲ ಘಟ್ಟವಿದು. ಒಂದು ಪುಟ್ಟ ಪ್ರದೇಶದ ಕಾಡಿನ ಸಣ್ಣ ಪುಟ್ಟ ಪೊದೆಗಳನ್ನು ಸವರಿ ಅವೆಲ್ಲವನ್ನು ಬೆಂಕಿ ಇಟ್ಟು ಸುಟ್ಟು ಭೂಮಿಯನ್ನು ಗುದ್ದಲಿ ಹಾರೆಯಿಂದ ಅಗೆದು ಅಣಿಗೊಳಿಸಿ ಭತ್ತ ಬಿತ್ತಿ ಬೆಳೆಯನ್ನು ತೆಗೆಯುತ್ತಿದ್ದರು. ಕರಾವಳಿಯಲ್ಲಿ ಈ ರೀತಿಯ ಕೃಷಿ ಪರಂಪರೆಯನ್ನು ಕಾಡಿನಲ್ಲಿ ವಾಸಿಸುತ್ತಿದ್ದ ಕೆಲವು ಬುಡಕಟ್ಟು ಸಮುದಾಯಗಳು ಕಾಡು ಪ್ರಾಣಿಗಳಿಂದ ಬೆಳೆಯನ್ನು ಕಾಯಲು ಗದ್ದೆಯ ಸಮೀಪದಲ್ಲಿ ಬುಡಾರಗಳನ್ನು ಕಟ್ಟಿ ಬೆಳೆಯನ್ನು ಬೆಳೆಯುತ್ತಿದ್ದರು. ಸ್ಥಿರ ಗ್ರಾಮಗಳಾಗಲೀ, ಸ್ಥಿರ ನಿವಾಸಗಳಾಗಲೀ ಚಾಲ್ತಿಗೆ ಬರುವುದಕ್ಕಿಂತ ಪೂರ್ವ ಸ್ಥಿತಿ ಇದು. ಇಂದಿಗೂ ಕಾಡಿನಲ್ಲಿ ಬೆಳೆ ಬೆಳೆಯುವ 'ಮಲೆಕುಡಿಯ' ಸಮುದಾಯ ತಮ್ಮ ಅಲೆಮಾರಿತನವನ್ನು ಒಂದಿಷ್ಟು ಕಡಿಮೆ ಮಾಡಿಕೊಂಡದ್ದರು ಹೊಟ್ಟೆ ಪಾಡಿಗಾಗಿ ಕಾಡಿನ ಉದ್ದಗಲಕ್ಕೂ ಅಲೆಯುವುದು ಅನಿವಾರ್ಯವಾಗಿದೆ. ಒಂದೆರಡು ವರ್ಷ ಒಂದು ಪ್ರದೇಶದ ಕಾಡು ಸವರಿ ಫಸಲು ಪಡೆದರೆ ಮತ್ತೆ ಅಲ್ಲಿಂದ ಗುಡಾರ ಕೀಳುತ್ತಿದ್ದರು. ಇಂತಹ ವಲಸೆಯ ಸ್ವರೂಪವನ್ನು ಹೊಂದಿದ ಕೃಷಿ ಪರಂಪರೆ ಇಂದಿಗೂ ಚಾಲ್ತಿಯಲ್ಲಿದೆ.

ಕುಮೇರಿ ಕೃಷಿಯ ಸ್ಥಿತ್ಯಂತರದ ಇನ್ನೊಂದು ಸ್ವರೂಪವು ಕರಾವಳಿಯಲ್ಲಿದೆ. ಎತ್ತರದ ಗುಡ್ಡದ ತಪ್ಪಲುಗಳು, ವಿಸ್ತಾರವಾದ ಪದವುಗಳು ನೀರಾವರಿ ಆಶ್ರಯವಿಲ್ಲದೆ ಒಂದರ್ಥದಲ್ಲಿ ಬರಡು ಭೂಮಿಗಳಾಗಿದ್ದವು. ಅಲ್ಲಿ ಏನಿದ್ದರೂ ಪ್ರಾಕೃತಿಕವಾಗಿ ಬೆಳೆಯುವ ಹುಲ್ಲುಗಳು ಮಾತ್ರ ಬೆಳೆಯುತ್ತಿದ್ದವು. ಇವುಗಳನ್ನು ಮುಳಿ ಹುಲ್ಲಾಗಿಸಿ ಮನೆಯ ಛಾವಣಿಗೆ ಬಳಸಿಕೊಳ್ಳುತ್ತಾರೆ. ಇದಲ್ಲದೆ ಮಳೆಗಾಲದಲ್ಲಿ ಹುಲುಸಾಗಿ ಬೆಳೆಯುವ ಮುಳಿ ಹುಲ್ಲಿನ ಹಾಡಿ ಅಥವಾ ಪದವುಗಳಲ್ಲಿ ತಮಗೆ ಅವಶ್ಯಕವಾದ ಭತ್ತವನ್ನು ಬೆಳೆಯಲು ಪ್ರಯತ್ನಿಸಿದ್ದಾರೆ.

ಕುಮೆರಿ ಬೇಸಾಯಕ್ಕಾಗಿ ಬಳಸುವ ಭತ್ತದ ತಳಿಗಳು ಪ್ರತ್ಯೇಕವಾಗಿವೆ. ಬರಿಯ ಭತ್ತವನ್ನಲ್ಲದೆ ಜೀವನಾವಶ್ಯಕದ ತರಾಕಾರಿ, ಗೆಡ್ಡೆ – ಗೆಣಸುಗಳನ್ನು ಬೆಳೆಯುತ್ತಾರೆ. ಬೆಂಡೆ, ಅಲಸಂಡೆ, ಹೀರೆ, ಹರಿವೆ, ಸೋರೆಕಾಯಿ, ಪಡುವಲ, ಗರ್ಬಿಜ, ಬಸಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಕುಮೆರಿಗಳಲ್ಲಿ ಬೆಳೆಯುತ್ತಾರೆ. ಗೆಣಸುಗಳಲ್ಲಿಯೂ ಬೂನ ಕೆರೆಂಗ್, ತುಪ್ಪೆ ಕೆರೆಂಗ್, ಮರ ಕೆರೆಂಗ್, ಕೆರೆಂಗ್, ಸಾಮ್ರಾಣಿಗಳನ್ನು ಬೆಳೆಯುತ್ತಿದ್ದಾರೆ. ಇದನ್ನು ಹೆಚ್ಚಾಗಿ ಬೆಳೆಯುವವರು ಕುಡುಬಿಗಳು, ಕ್ರೈಸ್ತರು, ನಾಯ್ಕರು ಮತ್ತು ಬೆರಳೆಣಿಕೆ ಸಂಖ್ಯೆಯ ಶೂದ್ರರು. ದಲಿತರು ಭೂಮಿಯ ಒಡೆತನ ಹೊಂದಿ ಸಾಗುವಳಿ ಮಾಡಿರುವ ವಿವರಣೆಗಳು ಬಹಳ ವಿರಳ. ಇಂದಿಗೂ ಎಕರೆಗಟ್ಟಲೆ ಕುಮೆರಿ ಬೇಸಾಯ ಮಾಡುವವರಿದ್ದು ಭೂಮಿಯ ಒಡೆತನ ಹೊಂದಿ ಸ್ಥಿರ ಕೃಷಿಯ ಸ್ವರೂಪವನ್ನು ಪಡೆದಿದೆ. ಬೇಸಾಯದ ಈ ಕ್ರಮವು ಕರಾವಳಿಯ ಪಾರಂಪರಿಕ ಕೃಷಿಯ ಕಾಣ್ಕೆಯೊಂದಿಗೆ ಅತಿ ವಿಶಿಷ್ಟವಾಗಿ ವಿಸ್ತಾರವನ್ನು ಹೊಂದಿದೆ. ಬೆಳೆಯುವ ಬೆಳೆ ಮತ್ತು ಬಳಸುವ ತಳಿಗಳು ಆ ಕಾರಣಕ್ಕಾಗಿಯೇ ವಿಶಿಷ್ಟವಾಗಿ ಅನನ್ಯತೆಯನ್ನು ಪಡೆದುಕೊಂಡಿದೆ.

ಹಿತ್ತಲು(ಬಿತ್ತಿಲ್): ಮನೆಯೊಂದರ ಅಡಿಗೆ ಮನೆಗೆ ಅವಶ್ಯವಿರುವ ಜೀವನವಶ್ಯಕ ವಸ್ತುಗಳಲ್ಲಿ ಕೆಲವನ್ನು ಹಿತ್ತಲಿನಿಂದಲೇ ಪಡೆಯುತ್ತೇವೆ. ಅಡುಗೆಗೆ ಬೇಕಾದ ತರಾಕಾರಿ, ಹಸಿಮೆಣಸು, ಕರಿಬೇವುಸೊಪ್ಪುಗಳು, ಬೇರುಗಳು, ಚಿಗುರುಗಳು, ತೊಗಟೆಗಳು, ಕಾಯಿ–ಹಣ್ಣುಗಳು ಎಲ್ಲವನ್ನೂ ಇಲ್ಲಿ ಬೆಳೆಯುತ್ತಾರೆ. ಮನೆಯ ಹಿಂಭಾಗದಲ್ಲಿ ಒಂದೆರಡು ಬಾಳೆ ಗಿಡಗಳು, 'ಉಪ್ಪುಂಚಿ'ಗೆ ಬೇಕಾದ ಜೀರಿಗೆ ಹಸಿ ಮೆಣಸು ಇಲ್ಲಿ ಇರುವುದು ಸಾಮಾನ್ಯ. ಪುಂಡಿ, ಗಟ್ಟಿ, ರೊಟ್ಟಿಗೆ ಬೇಕಾದ ಎಲೆಗಳನ್ನು ಇಲ್ಲಿ ಬೆಳೆಯುತ್ತಾರೆ. ದೋಸೆ, ರೊಟ್ಟಿಗೆ ಎಣ್ಣೆ ಹಚ್ಚುವ ಬಾಳೆಯ ದಿಂಡನ್ನು ಗಿಡದಿಂದ ಕತ್ತರಿಸಿ ಸಂಗ್ರಹಿಸುತ್ತಾರೆ. ಅಡುಗೆ ಮನೆಯೊಳಗಿನ ತ್ಯಾಜ್ಯಗಳು ಹಿತ್ತಲಿನ ಗಿಡಗಳಿಗೆ ನೀರು–ಗೊಬ್ಬರವಾಗಿ ಬಳಕೆಯಾಗುತ್ತದೆ. ಒಲೆಯೊಳಗಿನ ಬಿಸಿ ಆರಿದ ಬೂದಿ ಕೀಟ ನಾಶಕವಾಗಿ ಉಪಯೋಗವಾಗುತ್ತದೆ. ಪರಸ್ಪರ ಕೊಳು ಕೊಡುಗೆಗಳ ಚಕ್ರದಲ್ಲಿ ಈ ರೀತಿಯ ಬೆಳೆ ವರ್ತುಲ ಸಾಗುತ್ತದೆ.

ಕರ್ನಾಟಕದ ಉಳಿದ ಪ್ರದೇಶಗಳಲ್ಲಿ ಮನೆಯ ಹಿಂದಿರುವ ಭಾಗ ಮಾತ್ರ ಹಿತ್ತಿಲು ಎಂದು ಗುರುತಿಸಿಕೊಳ್ಳುತ್ತದೆ. ಕರಾವಳಿಯಲ್ಲಿ ಹಿತ್ತಿಲು ಬಿತ್ತಿಲಾಗಿ ಲಚ್ಚಿಲ್‌ವರೆಗೂ ವಿಸ್ತಾರಗೊಂಡಿದೆ. ಮನೆ ಹಿಂದಿರುವ ಸಣ್ಣ ಭೂ ಪ್ರದೇಶ ಇಲ್ಲವೆ ಪುಟ್ಟ ಗದ್ದೆಯಲ್ಲಿ ಹಿತ್ತಲಿನಲ್ಲಿ ಬೆಳೆಯುವುದನ್ನ ಬೆಳೆಸುತ್ತಾರೆ. ತರಕಾರಿಗಳು ಸಾಂಬಾರು ಪದಾರ್ಥಗಳಾದ ಶುಂಠಿ ಮೆಣಸುಗಳಲ್ಲದೆ ಇನ್ನಿತರ ಅವಶ್ಯಕವಾದುದನ್ನು ಬೆಳೆಯತ್ತಾರೆ. ನದಿ ಕಿನಾರೆಯಲ್ಲಿರುವವರು ಹೂಳು ತುಂಬಿದ ನದಿ ಬದಿಯ ಗದ್ದೆಗಳನ್ನು ಬಿತ್ತಿಲ್ ಆಗಿ ಪರಿವರ್ತಿಸುತ್ತಾರೆ. ವಿಸ್ತಾರವಾಗಿರುವ ಈ ಗದ್ದೆಗಳು ನೀರಾವರಿ ಅನುಕೂಲವಿದ್ದು ಉಪ್ಪು ನೀರು ಒಳ ಹರಿಯದಂತೆ ನೋಡಿಕೊಂಡು ಹೆಚ್ಚಾಗಿ ಗಿಡ್ಡ ಮೆಣಸು, ಗೆಣಸು, ತರಕಾರಿಗಳಾದ ಕುಂಬಳ, ಬೂದುಕುಂಬಳ, ಸೌತೆ ಮುಳ್ಳು ಸೌತೆ, ತೊಂಡೆ, ಬೆಂಡೆ, ಹೀರೆ, ಹರಿವೆ, ಬಸಳೆಗಳನ್ನು, ಬೆಳೆಯುತ್ತಾರೆ. ಹೀಗೆ ಬೆಳೆಯುವ ಮೆಣಸಿನಲ್ಲಿ ನೇತ್ರಾವತಿ ನದಿ ದಡವಾದ ಹರೇಕಳದ ಮೆಣಸು ತುಂಬಾ ಪ್ರಸಿದ್ಧ. 'ಪರಿಯಾಲದ ಮುಂಚಿ' ಎಂದು ಕರಿಯುವ ಮೆಣಸನ್ನು ವರ್ಷಗಟ್ಟಲೇ ಕಾಪಿಡುವ ಉಪ್ಪಿನಕಾಯಿಗಾಗಿ ಬಳಸುತ್ತಾರೆ. ಹುಳ ಬೀಳದಿರುವ ಉಪ್ಪಿನ ಕಾಯಿಯ ರಹಸ್ಯಗಳಲ್ಲಿ

ಮೆಣಸಿನ ತಳಿಯ ಗುಣಮಟ್ಟವು ಒಂದು ಮುಖ್ಯ ಅಂಶವಾಗಿದೆ. ಪೊಳಲಿಯ ಸಮೀಪದಲ್ಲಿ ಬೆಳೆಯುವ ನದಿ ತೀರದಲ್ಲಿ ಬೆಳೆಯುವ ಕಲ್ಲಂಗಡಿ ಹಣ್ಣು ಕೂಡ ಪ್ರಸಿದ್ಧವಾದುದು. ಚೆಂಡು ದಂಟುವ ಜಾತ್ರೆಯಲ್ಲಿ ಬಚ್ಚಂಗಾಯಿ(ಕಲ್ಲಂಗಡಿ) ಖರೀದಿಸದವರೇ ಇಲ್ಲ. ಹೀಗೆ ಕರಾವಳಿಯ ಬಿತ್ತಿಲ್ ಕೂಡ ಕೃಷಿ ಪರಂಪರೆಯ ಪ್ರಮುಖ ಭಾಗವಾಗಿದೆ.

ಲಚ್ಚಿಲ್: ಮನೆಯ ಸಮೀಪವಿರುವ ಕೈತೋಟದಂತಹ ಪ್ರದೇಶವನ್ನು ಲಚ್ಚಿಲ್ ಎಂದು ಕರೆಯುತ್ತಾರೆ. ಮನೆಗೆ ದಿನಾ ಅವಶ್ಯಕತೆ ಇರುವ ಹಣ್ಣುಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಸಣ್ಣ ಪುಟ್ಟ ಗಿಡಗಳಲ್ಲದೆ ಮರವಾಗಿ ಬೆಳೆಯುವ ಸಸ್ಯಗಳನ್ನು ನೆಟ್ಟು ಲಚ್ಚಿಲ್ ಎನ್ನುತ್ತಾರೆ. ಗೇರು-ಮಾವು-ಹಲಸಿನಂತಹ ಮರಗಳಲ್ಲದೆ ಪೇರಳೆ ಪನ್ನೇರಳೆಯ ವೈವಿಧ್ಯದ ಹಣ್ಣಿನ ಮರಗಳನ್ನು ಬೆಳೆಯಲಾಗುತ್ತದೆ. ಮನೆಗಿಂತ ಸ್ವಲ್ಪ ದೂರದಲ್ಲಿ ಇರುವ ಈ ಪ್ರದೇಶ ವ್ಯವಸಾಯಕ್ಕೆ ಬೇಕಾಗಿರುವ ಸೊಪ್ಪು-ಗೊಬ್ಬರಗಳ ಸಂಗ್ರಹದ ತಾಣವಾಗಿಯೂ ಇರುತ್ತದೆ.

ಪಡ್ಪು: ಗುಡ್ಡವನ್ನು ಅಗೆದು ಇಲ್ಲವೇ ಹುಲ್ಲುಗಾವಲಿನಂತಹ ಸಮತಟ್ಟಾದ ಪ್ರದೇಶವನ್ನು ಪಡ್ಪು ಎನ್ನುತ್ತಾರೆ. ಇಲ್ಲಿ ಪ್ರಾಕೃತಿಕವಾಗಿ ಬೆಳೆಯುವ ಆಲದ ಮರದಂತಹ ಮರಗಳಲ್ಲದೆ, ಗೇರು-ಮಾವು-ಹಲಸಿನ ಬೀಜಗಳನ್ನು ತಿಂದು ಎಸೆದು 'ಉರ'ಕೊಡಿದು ಮರಗಳಾಗಿರುತ್ತವೆ. ಪಡ್ಪುವಿನಲ್ಲಿ ಕಾಟು ಮರಗಳಲ್ಲದೆ ನೆಟ್ಟು ಬೆಳೆಸಿದ ಮರಗಳಿರುತ್ತವೆ. ಈ ಮರಗಳ ಬಗ್ಗೆ ವಿಶೇಷ ಗಮನವನ್ನು ವಹಿಸದೆ ಬಿಸಿಲು-ಮಳೆ-ಗಾಳಿಗೆ ತಮ್ಮನ್ನು ಒಡ್ಡಿಕೊಂಡು ಬೆಳೆಯುವ ಸಸ್ಯರಾಶಿ ಫಲ ಬಿಟ್ಟರೆ ಆದಾಯವಾಗಿಯೂ ಇಲ್ಲದಿದ್ದರೆ ಉರುವಲಾಗಿಯೂ ಉಪಯೋಗವಾಗುತ್ತದೆ.

ಗುಡ್ಡೆ-ಕಾಡು: ಸಾಗುವಳಿ ಮಾಡುವವನಿಗೆ ಗದ್ದೆ ಫಲವತ್ತಾಗಿರ ಬೇಕಾದರೆ ಅದಕ್ಕೆ ಗೊಬ್ಬರಕ್ಕಾಗಿ, ವಿಸ್ತಾರದ ಎತ್ತರದ ಗುಡ್ಡ-ಕಾಡಿನ ಸೊಪ್ಪು-ಸದೆಗಳ ಅವಶ್ಯಕವಿದೆ. ಇಷ್ಟು ಮುಡಿ ಗದ್ದೆಗೆ ಇಷ್ಟು ವಿಸ್ತಾರವಾದ ಗುಡ್ಡ ಎಂಬ ಲೆಕ್ಕಾಚಾರ ಕೃಷಿಕರಲ್ಲಿದೆ. ಕೆಲವೊಂದು ಸಂದರ್ಭದಲ್ಲಿ ಗುಡ್ಡ ಇಲ್ಲದೆ ಹೋದರೆ ಹುಲ್ಲು, ಸೊಪ್ಪುಗಳಿಗಾಗಿ ಒಂದು ಅಳತೆಯ ಮಾಪನದಲ್ಲಿ ಗುಡ್ಡದ ಹುಲ್ಲು, ಕಟ್ಟಿಗೆಗಳನ್ನು ಬಾಡಿಗೆ ಪಡೆಯುತ್ತಿದ್ದರು. ಒಂದು ವರ್ಷಕ್ಕೆ ಒಂದು ಮುಡಿ ಅಕ್ಕಿಯ ಸೊಪ್ಪು, ಹುಲ್ಲು ಎಂಬ ಲೆಕ್ಕವಿರುತ್ತಿತ್ತು. ಒಂದು ಕತ್ತಿ ಹುಲ್ಲು, ಒಂದು ಕತ್ತಿ ಸೊಪ್ಪು ಎಂದು ಅಳೆದು ಅದಕ್ಕೆ ಸಮನಾದ ಅಕ್ಕಿ ಇಲ್ಲವೆ ಭತ್ತವನ್ನು ಪ್ರತಿಯಾಗಿ ಕೊಡುತ್ತಿದ್ದರು. ಪ್ರತಿಯೊಂದು ಭೂ ಪ್ರದೇಶವು ಒಂದಕ್ಕೊಂದು ಪೂರಕವಾಗಿ ಬಳಕೆಯಾಗುವುದು ಕರಾವಳಿ ಕೃಷಿ ಜಗತ್ತಿನ ವಿಶೇಷ. ಇಲ್ಲಿ ಯಾವುದೂ ಒಂದು ಇನ್ನೊಂದಕ್ಕೆ ವಿರೋಧವಾಗಿರಲಿಲ್ಲ. ಎಲ್ಲರ ಮೂಲ ಉದ್ದೇಶ ಹಸಿವು ನೀಗಿಸುವುದು. ಅದಕ್ಕಾಗಿ ಉತ್ತಮ ಫಸಲಿನ ಬೆಳೆ ಬೆಳೆಯುವುದು ಆಗಿತ್ತು.

ಬೆಳೆಗಳನ್ನು ಬೆಳೆಯುವ ಹಂತಗಳು: ಯಾವುದೇ ಕೃಷಿ ಪರಂಪರೆಯಲ್ಲಿ ಬೆಳೆಯುವ ಬೆಳೆಯ ಆಯ್ಕೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಬೆಳೆಗಳನ್ನು ಬೆಳೆಸುವ ವಿವಿಧ ಹಂತಗಳು. ಭೂಮಿಗೆ ಹಾಕಿದ ಬೀಜವೊಂದು ಮೊಳಕೆಯೊಡೆದು ಸಸಿಯಾಗಿ

ಫಸಲು ತುಂಬಿ ಮರಳಿ ಧಾನ್ಯ ಸಂಗ್ರಹಣೆಯವರೆಗೆ ಸಾಗುವುದು ಬಹಳ ದೀರ್ಘವಾದ ಹಂತ. ಕೆಲವು ಬೆಳೆಗಳು ಕೆಲವೇ ತಿಂಗಳಲ್ಲಿ ಫಸಲು ನೀಡಿದರೆ ಮತ್ತೆ ಕೆಲವು, ಹಲವು ವರ್ಷಗಳ ನಂತರ ಫಸಲನ್ನು ನಿರೀಕ್ಷಿಸುವುದು ಆಗಿರುತ್ತದೆ. ವಾರ್ಷಿಕ ಬೆಳೆಗಳು, ಋತುಮಾನದ ಬೆಳೆಗಳಲ್ಲದೆ ದೀರ್ಘವಾದ ಕಾಲದ ನಿರೀಕ್ಷೆಯಲ್ಲಿಯ ಬೆಳೆಗಳಿರುತ್ತವೆ. ಅವು ಯಾವುದೆಂದರೆ,

1. ಋತುಮಾನದ ಬೆಳೆಗಳು
2. ವಾರ್ಷಿಕ ಬೆಳೆಗಳು
3. ಬಹುವಾರ್ಷಿಕ ಬೆಳೆಗಳು.

ಋತುಮಾನದ ಬೆಳೆಗಳು: ಪ್ರತಿ ಋತುಮಾನವನ್ನು ಅರ್ಥೈಸಿಕೊಂಡು ಆಯಾ ಕಾಲಮಾನಕ್ಕೆ ಅನುಗುಣವಾಗಿ ಬೆಳೆಗಳನ್ನು ಬೆಳೆಯುತ್ತಾರೆ. ಮುಂಗಾರು, ಹಿಂಗಾರು ಮತ್ತು ನೈರುತ್ಯ ಹಿಂಗಾರುಗಳ ತಿಳುವಳಿಕೆಯೊಂದಿಗೆ ಬೆಳೆಯುವ ಬೆಳೆಗಳ ತಳಿಗಳು ಭತ್ತ, ಧಾನ್ಯದ ಬೆಳೆಗಳಲ್ಲಿ ವ್ಯತ್ಯಾಸವಾಗುತ್ತಾ ಹೋಗುತ್ತದೆ. ತರಕಾರಿಗಳು, ಗೆಣಸು, ಸೊಪ್ಪು ಇವುಗಳನ್ನು ಬೆಳೆಯುವಲ್ಲಿಯೂ ಋತುಮಾನ ಬಹಳ ಮುಖ್ಯ. ಮಳೆಗಾಲ, ಚಳಿಗಾಲ, ಬೇಸಿಗೆಕಾಲಗಳಲ್ಲಿ ಬೆಳೆಯಲ್ಪಡುವ ತರಕಾರಿ ಮತ್ತು ಸೊಪ್ಪುಗಳು ವೈವಿಧ್ಯವನ್ನು ಹೊಂದಿವೆ. ಕಳೆ ಗಿಡಗಳಂತೆ ಬೆಳೆಯುವ ಎಷ್ಟೋ ಸೊಪ್ಪುಗಳನ್ನು ಮಳೆಗಾಲದಲ್ಲಿ ಆರ್‍ಯೋಗ್ಯಪೂರ್ಣ ಆಹಾರವಾಗಿ ಬಳಸುತ್ತಾರೆ.

ವಾರ್ಷಿಕ ಬೆಳೆಗಳು: ಕೆಲವು ಬೆಳೆಗಳ ಫಸಲುಗಳು ವಾರ್ಷಿಕವಾಗಿ ಲಭ್ಯವಾಗುವವುಗಳು. ಇವುಗಳನ್ನು ಪ್ರತಿವರ್ಷ ನಾಟಿ ಕಾರ್ಯವನ್ನು ಮಾಡಬೇಕಾಗಿಲ್ಲ ನೀರು, ಗೊಬ್ಬರ, ರೋಗನಿರ್ವಹಣೆಗಳೊಂದಿಗೆ ಸಸ್ಯಗಳ ನಿರ್ವಹಣೆಯನ್ನು ಮಾಡಿದರೆ ಸಾಕಾಗುತ್ತದೆ. ಮುಖ್ಯವಾಗಿ ತೆಂಗು, ಅಡಿಕೆ, ಮಾವು, ಗೇರು, ರಬ್ಬರ್, ಶುಂಠಿ ಈ ರೀತಿಯ ಫಸಲುಗಳು. ತರಕಾರಿಗಳಲ್ಲಿ ಬಸಳೆ ಮತ್ತು ತೊಂಡೆ ಕಾಯಿಯ ಚಪ್ಪರಗಳು ವರ್ಷವಿಡಿ ಫಸಲನ್ನು ನೀಡುತ್ತದೆ.

ಬಹುವಾರ್ಷಿಕ ಬೆಳೆಗಳು: ಒಮ್ಮೆ ನಾಟಿಯಾದರೆ ಮತ್ತೆ ಮತ್ತೆ ಫಸಲು ಕೊಡುವ ಸಸ್ಯಗಳೇ ಬಹುವಾರ್ಷಿಕ ಬೆಳೆಗಳು. ಇವು ವರ್ಷ ವರ್ಷ ಫಸಲು ನೀಡುವುದರೊಂದಿಗೆ ತಮ್ಮ ಜೀವಿತಾವಧಿಯ ಉದ್ದಕ್ಕೂ ಫಸಲನ್ನು ಕೊಡುತ್ತದೆ. ವಾರ್ಷಿಕ ಬೆಳೆಗಳೊಂದಿಗೆ ಬಹುವಾರ್ಷಿಕ ಬೆಳೆಗಳಾಗಿಯೂ ಇವು ನಿರ್ವಹಣೆ ಹೊಂದುತ್ತದೆ. ಸುವರ್ಣ ಗೆಡ್ಡೆಯನ್ನು ಒಮ್ಮೆ ನಾಟಿ ಮಾಡಿದರೆ ಎರಡು ಮೂರು ವರ್ಷಕೊಮ್ಮೆ ಮಣ್ಣಿನಾಳದಿಂದ ಅಗೆದು ಫಸಲು ಪಡೆಯುತ್ತಾರೆ. ತೊಂಡೆ ಕಾಯಿಯ ಬೇರೊಂದನ್ನು ಒಂದು ವರ್ಷ ನೆಟ್ಟರೆ ಅದು ಪ್ರತಿ ವರ್ಷವೂ ಫಸಲು ಕೊಡುತ್ತಿರುತ್ತದೆ.

ಕರಾವಳಿ ಪ್ರದೇಶದ ವೈಶಿಷ್ಟ್ಯವೆಂದರೆ ಮನೆ ಮುಂದಿರುವ ತೆಂಗಿನ ಮರದ ಕಟ್ಟೆ, ಬಸಳೆ, ತೊಂಡೆಕಾಯಿಯ ಚಪ್ಪರ, ಮನೆ ಮುಂದೆ ನೆಟ್ಟ ಮಲ್ಲಿಗೆ ಬಳ್ಳಿಯೊಂದಿಗೆ, ತೆಂಗಿನ ಮರದ ಬುಡವನ್ನು ಹಬ್ಬಿಕೊಂಡ ಒಳ್ಳೆ ಮೆಣಸಿನ ಬಳ್ಳಿ, ಅಡಿಕೆ ಮರವನ್ನು ತಬ್ಬಿದ ವೀಳ್ಯದೆಲೆಗಳು ಮನೆಯಂಗಳಕ್ಕೆ ಒಂದು ಅನನ್ಯತೆಯನ್ನು ತಂದು ಕೊಡುತ್ತದೆ. ಮನೆ

ಮತ್ತು ಕೃಷಿಯೊಂದಿಗೆ ವರ್ಣನೆಗೊಳ್ಳುವ ಪರಿಸರದ ನಿರೂಪಣೆ ಕರಾವಳಿಯಲ್ಲಿ ಸಾಮಾನ್ಯ. ಜನಪದ ಮಹಾಕಾವ್ಯಗಳಾದ ಪಾಡ್ದನಗಳಲ್ಲಿ, ಜನಪದ ಕತೆಗಳಲ್ಲಿ,ಸಾಮಾನ್ಯವಾಗಿ ವರ್ಣಿಸಲ್ಪಡುವ ಪರಿಸರಗಳು ಇವು. ಗದ್ದೆಗಳೆಂದರೆ ಗದ್ದೆ ಬಯಲಿನ ಕಟ್ಟ ಹುಣಿಗಳು ಆಲಂಕಾರಿಕವಾದವುಗಳೇ ಆಗಿದೆ. ಮಳೆ ನೀರು ಹರಿದು ಹೋಗಲು ನಿರ್ಮಿಸುತ್ತಿದ್ದ ದೊಡ್ಡ ಕಾಲುವೆಗಳಲ್ಲಿ ಗಟ್ಟಿ ಮುಟ್ಟಾಗಿ ಕಟ್ಟಿ ಅದು ಇನ್ನಷ್ಟು ಬಲಗೊಳ್ಳಲು ಉದ್ದಕ್ಕೂ ತೆಂಗಿನ ಮರವನ್ನು ನೆಟ್ಟು ಸೊಗಸುಗೊಳಿಸುತ್ತಿದ್ದರು. ಇಂತಹ ಗದ್ದೆ ಬಯಲು ಕರಾವಳಿಯ ದೃಶ್ಯವನ್ನೇ ವೈಭವೀಕರಣಗೊಳಿಸಿದೆ.

ಮಳೆ ಮತ್ತು ಬೆಳೆ : "ಉಡಲ್‌ಡ್ ಪುಟ್ಟೊಡು ಬುದ್ಧಿ ಭೂಮಿಡ್ ಪುಟ್ಟೊಡು ಒಸರು"(ಮನದಲ್ಲಿ ಹುಟ್ಟ ಬೇಕು ಬುದ್ಧಿ ಭೂಮಿಯಲ್ಲಿ ಹುಟ್ಟ ಬೇಕು ಅಂತರ್‌ಜಲ.) ಎಂದು ಹೇಳುವ ತುಳುವರು ಭೂಮಿಯ ಸತ್ವವನ್ನು ನೀರಿನ ಹದದೊಂದಿಗೆ ಸಮ್ಮಿಳಿತಗೊಳಿಸಿದರು. ಋತುಮಾನಕ್ಕೆ ಅನುಗುಣವಾಗಿ ಬೆಳೆಯನ್ನು ಹೇಗೆ ಬೆಳೆಯ ಬೇಕು ಎನ್ನುವುದಕ್ಕೆ ಮಳೆಯ ನಕ್ಷತ್ರ ಬೆಳೆಯುವ ಬೆಳೆಗಳೊಂದಿಗೆ ಸಂಬಂಧ ಕಲ್ಪಿಸಿ ಬರುವ ಫಸಲಿನ ನಿರೀಕ್ಷೆಯನ್ನು ನುಡಿಗಟ್ಟಿನಂತೆ ದಾಖಲುಗೊಳಿಸಿದವರಾಗಿದ್ದಾರೆ. ಆ ಮೂಲಕ ಮಳೆಯ ಕುರಿತಾದ ಜ್ಞಾನದೊಂದಿಗೆ ಬೆಳೆಯ ಕುರಿತಾದ ಅರಿವೂ ಇತ್ತು. ಪಗ್ಗುವಿನಿಂದ ಸುಗ್ಗಿಯವರೆಗೂ ಕಾಲಮಾನದಲ್ಲಿ ಆಯಾಯ ತಿಂಗಳಲ್ಲಿ ಬರುವ ಮಳೆಯ ನಕ್ಷತ್ರ ಅದರ ಪ್ರತಿಫಲ ಬೆಳೆಯ ಮೇಲೆ ಹೇಗಾಗುತ್ತದೆ ಎನ್ನುವುದು ಮುಖ್ಯ. ಈ ಗಾದೆ ಮಾತುಗಳನ್ನು ಕಟ್ಟಿ ಕೊಡುವ ಕಾಲಕ್ಕೆ ಕರಾವಳಿಯಲ್ಲಿ ಆಹಾರದ ಬೆಳೆಯಾದ ಭತ್ತ ಮಾತ್ರ ಚಾಲ್ತಿಯಲ್ಲಿ ಇದ್ದಿತೋ? ಅಥವಾ ಉಳಿದ ಬೆಳೆಗಳ ಬಳಕೆ ಇದ್ದಿರಲ್ಲಿಲ್ಲವೋ ಏನೋ? ಯಾಕೆಂದರೆ ಈ ಮುತ್ತಿನಂಥ ಮಾತುಗಳು ಭತ್ತದ ಬೇಸಾಯಕ್ಕೆ ಮಾತ್ರ ಅನ್ವಯಿಸಿ ಚಾಲ್ತಿಯಲ್ಲಿದೆ. "ಬೇಶಡ್ ಬಿತ್ತ್ ಬೂರುಂಡ ಅಡ್ಡಿ ಇಜ್ಜಂದೆ ಬುಳೆವು." ಮಳೆಗಾಲದ ಆರಂಭಕ್ಕೆ ಭೂಮಿಯಲ್ಲಿ ಹೊಸ ಮಳೆ ಬಂದರೆ ಮಣ್ಣು ಹದವಾಗುತ್ತದೆ, ಉತ್ತಮ ಫಸಲು ಲಭಿಸುತ್ತದೆ ಎಂದು ಒಂದೆ ಮಾತಿನಲ್ಲಿ ನಿರೂಪಿಸುತ್ತಾರೆ.

ತುಳುವರು ನಿರೂಪಿಸಿದ ಕಾಲಮಾನಕ್ಕೆ ಅನುಗುಣವಾಗಿ ಬರುವ ಮಳೆಗಳ ನಕ್ಷತ್ರಗಳನ್ನು ಹೀಗೆ ನಿರೂಪಿಸಬಹುದು.

1. ಪತ್ತನಾಜೆಗ್ ಪತ್ತ್ ಪನಿ ಅಂಡಲಾ ಬೂರಂದೆ ಆವಂದ್.(ಪತ್ತನಾಜೆಗೆ ಹತ್ತು ಹನಿಯಾದರೂ ಬೀಳದೆ ಆಗದು)
2. ಆದ್ರ ನಕ್ಷತ್ರೊಡು ಬಿತ್ತ್‌ಂಡ ಅಡರ್‌ದ ಲೆಕ್ಕ ಆವು ಪುನರ್ವಸುಡು ಬಿತ್ತಂಡ ಪುಣಕೆದ ರೋಮದ ಲೆಕ್ಕ ಆವು.(ಆದ್ರೆ ನಕ್ಷತ್ರದಲ್ಲಿ ಬಿತ್ತಿದರೆ ಅಡರಿನ ಹಾಗೆ ಆಗುತ್ತದೆ ಪನರ್ವಸುವಲ್ಲಿ ಬಿತ್ತಿದರೆ ಹುಣಸೆಯ ರೋಮದ ಹಾಗೆ ಆಗುತ್ತದೆ.)
3. ಮೃಗಶಿರೊಡು ಮುಳ್ಳುಡು ಗೀರ್‌ಂಡಲಾ ಯಾವೂ(ಮೃಗಶಿರೆಯಲ್ಲಿ ಮುಳ್ಳಲ್ಲಿ ಗೀರಿದರೂ ಸಾಕು)
4. ಮೃಗಶಿರೊಡು ನಡ್‌ಂಡ ಮುರ್ಗ ತಿಂದ್‌ಂಡಲಾ ಅಳಿಯಂದ್, ಆದ್ರೆದ ಉಲಯಿ

ನಡ್‌ಂಡ ಆತೀತೆ ಆಪುಂಡ್, ಪುನರ್ವಸುದುಲಯಿ ನಡ್‌ಂಡ ಪುಣ್ಯ ಇತ್ತಿನಾತ್ತ್ ಆಪುಂಡು(ಮೃಗಶರೆಯಲ್ಲಿ ನೆಟ್ಟರೆ ಮೃಗ ತಿಂದರೂ ಅಳಿಯದು, ಆದ್ರೆಯೊಳಗೆ ನೆಟ್ಟರೆ ಅಷ್ಟಿಷ್ಟು ಆಗುತ್ತದೆ, ಪುನರ್ವಸು ಒಳಗೆ ನೆಟ್ಟರೆ ಪುಣ್ಯ ಇದ್ದಷ್ಟು ಆಗುತ್ತದೆ)

5. ಪುಶ್ಯಡ್ ಬಿತ್ತ್‌ಂಡ ಪುರಿ ಪತ್ತುಂಡು(ಪುಶ್ಯೆಯಲ್ಲಿ ನೆಟ್ಟರೆ ಹುಳು ಹಿಡಿಯುತ್ತದೆ.)
6. ಪುಷ್ಯಡ್ ಬರ್ಸ ಬತ್ತ್‌ಂಡ ಪುನಿ ಕಡಪಂದ್. (ಪುಷ್ಯೆಯಲಿ ಮಳೆ ಬಂದರೆ ಹುಣಿ ದಾಟುವುದಿಲ್ಲ.)
7. ಅಟಿಡ್ ತೆಡ್ಲ್ ಬತ್ತ್‌ಂಡ ಅಟ್ಟ ಪೊಲಿವು, ಸೋಣಡ್ ತೆಡ್ಲ್ ಬತ್ತ್‌ಂಡ ಸೊಂಟ ಪೊಲಿವು (ಆಟಿಯಲ್ಲಿ ಸಿಡಿಲು ಬಂದರೆ ಅಟ್ಟ ಮುರಿಯುತ್ತದೆ, ಸೋಣದಲ್ಲಿ ಸಿಡಿಲು ಬಡಿದರೆ ಸೊಂಟ ಮುರಿಯುತ್ತದೆ.)
8. ಅನುರಾಧ ಬರ್ಸ ಪಂತಿ ಬಾಪೆಲೆ. (ಅನುರಾಧ ಮಳೆಗೆ ಹುಲ್ಲು ಹೆಚ್ಚುತ್ತದೆ.)
9. ಮಘೆಟ್ ಪೊಟ್ಟೆ ಹುಬೆಟ್ಟ್ ಪೇರ್ ಉತ್ತರೆಡ್ ಒತ್ತರೆ. (ಮಘೆಯಲ್ಲಿ ಮೊಗ್ಗೆ ಹುಬೆಯಲ್ಲಿ ಹಾಲು ಉತ್ತರೆಯಲ್ಲಿ ಒತ್ತರೆ.)
10. ಮಕ್ಕೆ ಬರ್ಸೊಗು ಮಗಲೆನ್‌ಲಾ ಕೊರಯೆ. (ಮಕ್ಕೆ ಮಳೆಗೆ ಮಗಳನ್ನು ಕೊಡಲಾಗದು.)
11. ಅಶ್ಲೇಷ ಬರ್ಸೊಡ್ದ್ ದೊಂಬೇ ಎಡ್ಡೇ. (ಅಶ್ಲೇಷ ಮಳೆಗಿಂತ ಬಿಸಿಲೇ ಒಳ್ಳೆಯದು)
12. ಪುಶ್ಯೆಡ್ ಬರ್ಸ ಬತ್ತ್‌ಂಡ ಪುಚ್ಚೆಗ್‌ಲಾ ನುಪ್ಪು ತಿಕ್ಕಂದ್. (ಪುಶ್ಯೆಯಲ್ಲಿ ಮಳೆ ಬಂದರೆ ಬೆಕ್ಕಿಗೂ ಅನ್ನ ಸಿಗದು)
13. ಪುನರ್ವಸು ಪುನ ಪಿದಯಿ ದೀಯೆರೆ ಬುಡಂದ್. (ಪುನರ್ವಸುವಿನಲ್ಲಿ ಹೆಣ ಹೊರಗೆ ಇಡಲಾಗದು).
14. ಸ್ವಾತಿಡ್ ಬಿತ್ತ್ ಬೂರುಂಡ ಶಾಶ್ವತ. (ಸ್ವಾತಿಯಲ್ಲಿ ಬೀಜ ಬಿದ್ದರೆ ಶಾಶ್ವತ).

ಕೃಷಿ ಸಂಸ್ಕೃತಿಯ ಅನನ್ಯತೆ ಮತ್ತು ಸೂಕ್ಷ್ಮತೆಗಳ ದಾಖಲಾತಿಗಾಗಿ ಬೆಳೆಗಳನ್ನ ಬೆಳೆಯುವ ವಿವಿಧ ಹಂತಗಳನ್ನು ಗಮನಿಸಿದರೆ, ಕರಾವಳಿಯ ಜನರ ಲೋಕ ದೃಷ್ಟಿಯ ಭಿನ್ನತೆಯನ್ನು ಗುರತಿಸಬಹುದು. ಕರಾವಳಿಯ ತುಳುವರು ಕಟ್ಟಿಕೊಂಡ ಬದುಕಿನ ಮೌಲ್ಯ ಮತ್ತು ಗ್ರಹಿಕೆಗಳು ಅವರು ಬೆಳೆಯನ್ನು ಬೆಳೆವ ರೀತಿ ಮತ್ತು ನೋಡುವ ದೃಷ್ಟಿಕೋನದಿಂದ ವ್ಯಕ್ತವಾಗುತ್ತದೆ.

"ಕಾಡ ಬರಿತ್ತ ಕಂಡಲಾ ತೋಡ ಬರಿತ್ತ ಇಲ್ಲ್‌ಲಾ ಬೊಡ್ಚಿ" ಎಂದು ಸಾಗುವಳಿಯ ಕಷ್ಟವನ್ನು ಸಹಜವಾಗಿಯೇ ನಿರೂಪಿಸುವ ತುಳುವರು ಕಾಡಿನ ಬದಿಯ ಗದ್ದೆಗಳಿಗೂ ತೋಡಿನ ಬದಿಯ ಮನೆಗಳಿಗೂ ಇರುವ ಕಷ್ಟವನ್ನು ಸ್ಪಷ್ಟವಾಗಿ ನಿರೂಪಿಸಿ ಕೃಷಿಯ ಬವಣೆಗಳನ್ನು ಅರ್ಥೈಸಿಕೊಂಡವರು. ಕಾಡು ಮತ್ತು ಕಡಲು ಕರಾವಳಿಯ ಅನನ್ಯತೆಯ ಅಂಶವಾಗಿರುವುದೇ ಅದರೊಂದಿಗೆ ಕಟ್ಟಿದ ಜನರ ಸಂಘರ್ಷದ ಬದುಕಿನ ಸಂಕಟಗಳನ್ನು ಬಹಳ ಸಂಕ್ಷಿಪ್ತವಾಗಿಯಾದರೂ ವ್ಯಕ್ತಪಡಿಸುತ್ತದೆ. ತಾವು ಬೆಳೆವ ಬೆಳೆಗೆ ಕಾಡಿನಿಂದ ಒದಗುವ ತೊಂದರೆ ಹಾಗೂ ಕಡಲಿನಿಂದ ಆಯಾಚಿತವಾಗಿ ಬರುವ ಸಂಕಟಗಳ ಮಧ್ಯೆಯೂ ಬೆಳೆಯನ್ನು ಬೆಳೆದು ಆಹಾರದ ಮೂಲದ ದಾಹವನ್ನು ಇಲ್ಲವಾಗಿಸಿದ್ದ ಹಿರಿಮೆ ತುಳುವರದ್ದು. ಅನೂಹ್ಯವಾದ ಕಾಡು ಮತ್ತು ಕಡಲು ಅನೇಕ ನಿಗೂಢತೆಗಳನ್ನು ಹುದುಗಿಸಿಕೊಂಡಿರುವಂತೆಯೇ

ಆ ಕುರಿತಾದ ಕುತೂಹಲವೂ ಜನ ಸಾಮಾನ್ಯರಲ್ಲಿ ಹೆಚ್ಚಿತ್ತು. ಜನರು ತಮ್ಮ ನಂಬಿಕೆ, ಭಯ, ಪ್ರಶ್ನೆಗಳಿಗೆಲ್ಲಾ ಉತ್ತರ ಕಂಡುಕೊಂಡ ರೀತಿ ವಿಶಿಷ್ಟವಾದದ್ದು.

ಯಾವುದೇ ಬೆಳೆಯ ಬೆಳವಣಿಗೆಯ ಹಂತದ ವಿವಿಧ ಮಜಲುಗಳು ಕೃಷಿಯ ಸ್ವರೂಪದ ಸೂಕ್ಷ್ಮತೆಯನ್ನು ಅರ್ಥೈಸಿಕೊಳ್ಳಲು ಸಾದ್ಯಾವಾಗುತ್ತದೆ. ಪ್ರತಿಯೊಂದು ಬೆಳೆಯನ್ನು ಬೆಳೆಯುವ ರೀತಿ, ಬೀಜ ಸಂಸ್ಕರಣೆ ತಳಿಗಳು, ನಾಟಿ ಇವೆಲ್ಲವೂ ಏಕರೂಪವಾಗಿರುವುದಿಲ್ಲ. ಒಂದಕ್ಕೊಂದು ವಿಭಿನ್ನವಾಗಿರುತ್ತದೆ.

ಬೆಳೆಯೊಂದನ್ನು ಆವಿಷ್ಕರಿಸಬೇಕಾದರೆ ಅದಕ್ಕೆ ಮೂಲಭೂತವಾಗಿ ಮೂಲರೂಪದ ಒಂದು ಕಾಡು ತಳಿ ಇದ್ದಿರಬೇಕು. ಸಾಮಾನ್ಯವಾಗಿ ಎಲ್ಲಾ ಬೆಳೆಗಳಲ್ಲೂ ಈ ರೀತಿಯ ತಳಿಗಳ ಅನ್ವೇಷಣೆ ಮಾಡಬಹುದು. ಕಾಡಿನ ತಳಿಗಳು ಇಲ್ಲದೆ ಬೆಳೆ ಇಲ್ಲ ಸಾಮಾನ್ಯವಾಗಿ ಪ್ರತಿಯೊಂದು ಬೆಳೆಗೂ ಒಂದು ಪ್ರಾಕೃತಿಕವಾದ ಕಾಡು ತಳಿ ಇರುತ್ತದೆ. ತಮಿಳಿನ ಆದಿಮ ಕೃತಿ "ಸಂಗಂ"ನಲ್ಲಿ ಕೆಲವು ಸಸ್ಯಗಳ ಉಲ್ಲೇಖಗಳು ಬರುತ್ತದೆ. ಸಸ್ಯಗಳ ಗುಣ ಲಕ್ಷಣ ಹೇಳುತ್ತಾ ಹೆಸರಿಸುವ ಈ ವಿವರಣೆಯಲ್ಲಿ ಮೂಲತಃ ಕಾಡಿನ ಕಾಡು ತಳಿಗಳ ಮೂಲದಿಂದಲೂ ಪ್ರತ್ಯೇಕಿಸಿರಬೇಕು.

ಆದಿಮ ಸಂಸ್ಕೃತಿಯ ಜಗತ್ತಿನಲ್ಲಿ ಈ ಕಾಡು ತಳಿಗಳನ್ನು ಗಮನಿಸದೇ ಇದ್ದಿದ್ದರೆ ನಾಡಿನಲ್ಲಿ ಆ ಸಸ್ಯಗಳು ಬೆಳೆಯಲು ಮತ್ತು ಬಳಸಲು ಸಾಧ್ಯವಾಗುತ್ತಿರಲಿಲ್ಲ. ಅದು ಆಹಾರ ಧಾನ್ಯದ ಬೆಳೆಗಳಾಗಿರಲಿ, ಸೊಪ್ಪು ತರಕಾರಿಗಳಾಗಿರಲಿ, ಪ್ರತಿಯೊಂದು ಬೆಳೆಗು ಕಾಡು ತಳಿಗಳು ಇಲ್ಲದ್ದಿದ್ದರೂ, ಹೆಚ್ಚಿನವುಗಳಿಗೆ, ಲಭ್ಯವಾಗುತ್ತದೆ. ಯಾವುದು ತಿನ್ನಲು ಯೋಗ್ಯ, ಯಾವುದು ಅಯೋಗ್ಯ ಎಂಬ ತಿಳಿವಳಿಕೆಯೊಂದಿಗೆ ಅವುಗಳನ್ನು ಪರಿಷ್ಕರಿಸಿ ತಿನ್ನಲು ಯೋಗ್ಯವಾದ ತಳಿಯಾಗಿಸಿದ್ದು ವೈಶಿಷ್ಟ್ಯ. ಇದಕ್ಕಾಗಿ ಹೆಣ್ಣು ಮಕ್ಕಳು, ಪ್ರಕೃತಿಯನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸಿದರು ಮತ್ತು ಅರ್ಥೈಸಿಕೊಂಡರು ಎನ್ನುವುದು ಸ್ಪಷ್ಟ. ಧಾನ್ಯ, ತರಕಾರಿ, ಹಣ್ಣುಗಳು, ಹೂವು, ಗಿಡ, ಬಳ್ಳಿಗಳು ಎಲ್ಲವನ್ನು ಮನುಷ್ಯ ಹಸಿವು ಮತ್ತು ಆರೋಗ್ಯ ಕ್ಷಮತೆಗಾಗಿ ಬಳಸಿಕೊಂಡ ರೀತಿ ಅನನ್ಯ. ಋತುಮಾನಕ್ಕೆ ಅನುಗುಣವಾಗಿ ಬದಲಾಗುವ ಪ್ರಕೃತಿ ಬೆಳೆಯುವ ಫಸಲು ಇದೆಲ್ಲವನ್ನು ಸೂಕ್ಷ್ಮವಾಗಿ ಗ್ರಹಿಸಿದ್ದರಿಂದಲೇ ಇದು ಸಾಧ್ಯವಾಗಿರಬೇಕು. ಕರಾವಳಿಯು ಇದಕ್ಕೆ ಹೊರತಾಗಿರಲಿಲ್ಲ.

ಬೀಜವೊಂದು ಮೊಳಕೆಯೊಡೆದು ಸಸಿಯಾಗುವ ವಿಸ್ಮಯವನ್ನು ಬರಿಯ ಬೆರಗುಗಣ್ಣಿನಿಂದ ನೋಡಿದ್ದು ಮಾತ್ರವಲ್ಲ, ಕಾಲಮಾನಕ್ಕೆ ಅನುಗುಣವಾಗಿ ಅದು ಬದಲಾಗುತ್ತ ಹೋಗುವ ರೀತಿಯೂ ವಿಶಿಷ್ಟ. ಎಲ್ಲ ಸಸ್ಯಗಳು ಬೀಜದಿಂದ ಹುಟ್ಟುವುದಿಲ್ಲ. ಬೇರಿನಿಂದ, ಕಾಂಡದಿಂದ,ಗೆಡ್ಡೆಯಿಂದ ಹುಟ್ಟುವ ಸಸಿಗಳನ್ನು ಗಮನಿಸಿದ್ದಾರೆ. ನೀರು ಗೊಬ್ಬರಗಳ ಅವಶ್ಯಕತೆ ಇಲ್ಲದೆ, ಸಹಜವಾಗಿ ಬೆಳೆಯುವ ಸಸ್ಯಗಳು ಪ್ರಕೃತಿಯಲ್ಲಿ ಬಹಳಷ್ಟು ಇವೆ. ಸಸ್ಯಗಳ ಜೀವಿತಾವಧಿಯೂ ಫಲವಂತಿಕೆಯೂ ಏಕರೂಪವಾಗಿಲ್ಲ. ಮನುಷ್ಯನಿಗೆ ಪ್ರಕೃತಿಯಲ್ಲಿರುವ ಸಸ್ಯಗಳ ಹೂವು ಹಣ್ಣು ಕಾಯಿಗಳಲ್ಲದೆ ಎಲೆ, ತೊಗಟೆ, ನಾರು, ಬೇರು, ರಸ, ಮೇಣ ಎಲ್ಲವನ್ನು ಹೇಗೆ ಬಳಸಿಕೊಳ್ಳಬಹುದು ಎಂಬ ಅರಿವನ್ನು ಹೊಂದುತ್ತ ಬಾಳಿದ್ದು ಸಂಸ್ಕೃತಿಯ ವಿಶಿಷ್ಟ ಹೆಜ್ಜೆ ಗುರುತುಗಳಾಗಿವೆ. ಪ್ರತಿ ಹಂತ-ಹಂತದಲ್ಲೂ ಅವರಲ್ಲಿ ಇದ್ದ ಚಿಕಿತ್ಸಕ ದೃಷ್ಟಿಕೋನ ಹೊಸ ಅರಿವಿನ ವಿಸ್ತಾರವನ್ನು ಹೊಂದಲು ಸಾಧ್ಯವಾಯಿತು.

ಪ್ರಕೃತಿಯ ನಿಯಮಗಳಿಗೆ ವಿಧೇಯರಾಗಿ ಬಾಳುತ್ತ ಅದನ್ನು ಅರ್ಥೈಸುವ ಪ್ರಯತ್ನವನ್ನು ಮಾಡುತ್ತ ಬಾಳಿದ ಹಿರಿಯರಿಗೆ ಪ್ರಾಣಿಗಳು ತಮ್ಮ ಅನಾರೋಗ್ಯಗಳ ಸಂದರ್ಭದಲ್ಲಿ ಪ್ರಾಕೃತಿಕವಾಗಿ ನಡೆಸುತ್ತಿದ್ದ ಪ್ರಕ್ರಿಯೆಗಳನ್ನು ಗಮನಿಸಿದ್ದರು. ಹಾಗಾಗಿ ತಾವು ಕೂಡ ಮರ ಗಿಡಗಳ ಬೇರು ನಾರುಗಳನ್ನು ಔಷಧಿಯಾಗಿ ಬಳಸಲು ಆರಂಭಿಸಿರಬೇಕು. ದೇಹವನ್ನು ಸುಸ್ಥಿತಿಗೆ ತರುವ ರೋಗ ನಿವಾರಕ ಸಸ್ಯಗಳನ್ನು ಆಹಾರವಾಗಿಯೂ ಬಳಸುವ ಮೂಲಕ ಆಯಸ್ಸು ಮತ್ತು ಆರೋಗ್ಯಗಳನ್ನು ಹೆಚ್ಚಿಸಿಕೊಂಡರು. ಇವಲ್ಲದೆ, ತಮ್ಮ ಆವಶ್ಯಕತೆಗಳಿಗೆ ಐಹ್ಲಿಕ ಕಾರ್ಯಗಳಿಗಾಗಿ ದಿನನಿತ್ಯದ ಬಳಕೆಗಾಗಿಯೂ ಗಿಡ ಮರಗಳನ್ನು ಅವುಗಳ ಬೇರೆ ಬೇರೆ ಭಾಗಗಳನ್ನು ಬಳಸಿಕೊಂಡರು. ಹಲ್ಲು ಉಜ್ಜಲು, ಮೈತೊಳೆಯಲು, ತಲೆಕೂದಲನ್ನು ಆರೋಗ್ಯಪೂರ್ಣವಾಗಿಡಲು, ಮೈಚರ್ಮ ಸುಕ್ಕು ಆಗದಿರಲು, ಯೌವ್ವನವನ್ನು ಕಾಪಾಡಲು, ಮುಖಕಾಂತಿ ಹೆಚ್ಚಿಸಲು ಹೀಗೆ ಹಲವು ರೀತಿಗಳಲ್ಲಿ ಬಳಸಿಕೊಳ್ಳುವ ಜಾಣ್ಮೆಯನ್ನು ಅರ್ಥೈಸಿಕೊಂಡರು. ಎಲ್ಲಕ್ಕಿಂತ ಮುಖ್ಯವಾಗಿ ಪ್ರಕೃತಿಯಲ್ಲಿ ಯಾವುದು ತ್ಯಾಜ್ಯವಲ್ಲ ಪ್ರತಿಯೊಂದು ಒಂದಕ್ಕೊಂದು ಪೂರಕ ಎಂಬ ಸರಳ ಸತ್ಯ ತಿಳಿಯಲು ಹಲವು ಕಾಲಗಳೆ ಸಂದಿರಬಹುದು. ಹಾಗಿದ್ದುದು ಅದರ ಸದ್ಬಳಕೆ ಇಂದಿಗೂ ಪರಿಪೂರ್ಣ ರೀತಿಯಲ್ಲಿ ಆಗುತ್ತಿದೆ ಎಂದು ವರ್ತಮಾನದಲ್ಲಿ ಹೇಳಲು ಸಾಧ್ಯವಿಲ್ಲ. ಇಂದು ಬಳಕೆಗಿಂತ ದುರ್ಬಳಕೆಗಳೆ ಹೆಚ್ಚುತ್ತಿವೆ. ಈ ಅಂಶವನ್ನು ಮೊದಲು ಅರಗಿಸಿಕೊಂಡ ಮಾನವ ಪ್ರಕೃತಿಯನ್ನು ಪ್ರಾಯೋಜನಿಕ ದೃಷ್ಟಿಯಿಂದಲೇ ಗಮನಿಸಿದ್ದನು ಎಂದು ಸರಳವಾಗಿ ಹೇಳಲಾಗದು.

ಕೃಷಿ ಅನ್ವೇಷಣೆಯ ಪೂರ್ಣ ಹಂತದಲ್ಲಿ ಅಥವಾ ಕೃಷಿ ಅನ್ವೇಷಣೆಯಾಗಿ ವಿಸ್ತರಣೆಯಾಗುವ ಸಮಯದಲ್ಲಿ ಈ ರೀತಿಯ ಬಳಕೆ ಆವಿಷ್ಕಾರ ನಡೆಯಿತೋ ಎಂದು ಹೇಳಲಾಗದು. ಗರಿಕೆಯಂತಹ ಪುಟ್ಟ ಹುಲ್ಲಿನಿಂದ ಹಿಡಿದು ವಿಸ್ತಾರವಾಗಿ ಬೆಳೆದ ಆಲದ ಮರದವರೆಗೂ ಮರ ಗಿಡ ಬಳ್ಳಿಗಳನ್ನು ಅರಿಯುತ್ತಾ ಬಳಕೆ ಮಾಡುತ್ತಾ ಬೆಳೆದ ರೀತಿ ಅನನ್ಯವಾದದ್ದು. ಪ್ರತಿಯೊಂದು ಸಸ್ಯವೂ ಎಲ್ಲಿ ಹುಟ್ಟಿ ಹೇಗೆ ಬೆಳೆಯುತ್ತದೆ ಫಲವನ್ನು ನೀಡುತ್ತದೆ ಎನ್ನುವ ಪರಿಜ್ಞಾನ ತಿಳಿಯದೆ ಇದ್ದಿದ್ದರೆ ಇದೆಲ್ಲವು ಸಾಧ್ಯವಾಗುತ್ತಿರಲಿಲ್ಲ. ತೆರೆದ ಕಣ್ಣಿನಿಂದ ನೋಡಿ ತನ್ನ ಅರಿವಿನ ವಿಸ್ತಾರಕ್ಕೆ ಅವೆಲ್ಲವನ್ನು ಅರಗಿಸಿಕೊಂಡು ಭೂಮಿಯಲ್ಲಿ ಸೆಣಸಾಡುತ್ತಲೇ ಬಾಳಿದ ರೀತಿಯೂ ನಿಜಕ್ಕೂ ರೋಮಾಂಚಕವಾದದ್ದು. ಮನುಷ್ಯ ಜೀವಿಗೆ ಕುತೂಹಲ ಇಲ್ಲದೆ ಇದ್ದಿದ್ದರೆ, ಯಾಕೆ ಎಂಬ ಪ್ರಶ್ನೆ ಹುಟ್ಟಿಕೊಳ್ಳದೆ ಇದ್ದಿದ್ದರೆ ಯಾವ ಅರಿವಿನ ವಿಸ್ತಾರಗಳು ವಿಸ್ತೃತಗೊಳ್ಳುತ್ತಿರಲಿಲ್ಲ. ತನ್ನ ಕಣ್ಣ ಮುಂದಿರುವುದನ್ನು ಅರಗಿಸಿಕೊಳ್ಳುವ ವಿವೇಕದಲ್ಲಿ ಮನುಷ್ಯ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಜಾಣ್ಮೆ ತೋರುತ್ತಲೇ ಆ ಸಸ್ಯಗಳನ್ನು ಪೋಷಿಸುವ ಬೆಳೆಸುವ ಎಚ್ಚರವೂ ಇತ್ತು.ಕೃಷಿ ಜಗತ್ತು ಅನ್ವೇಷಣೆಗೊಂಡು ವಿಸ್ತರಣೆಗೊಂಡ ಹಂತದಲ್ಲಿ ತಾನು ಬಳಸಿದ್ದನ್ನು ಮತ್ತಷ್ಟು ಬೆಳೆಯ ಬೇಕು, ಅದಕ್ಕಾಗಿ ಭೂಮಿಯ ವಿಸ್ತರಣೆಯೊಂದಿಗೆ ಬೆಳೆಯ ಪ್ರಮಾಣವು ಹೆಚ್ಚುತ್ತ ಹೋಯಿತು. ಬಳಕೆಯ ಸ್ವರೂಪಗಳು ಬದಲಾಗುತ್ತ ಹೋದವು. ಬೆಳೆಗಳನ್ನು ಬೆಳೆಯುವಲ್ಲಿ, ಸಂಸ್ಕರಿಸುವಲ್ಲಿ, ಬಳಸುವಲ್ಲಿ ಹೊಸ ಹೊಸ ಆವಿಷ್ಕಾರಗಳು ಸಾಗುತ್ತಾ ಹೋದವು. ಜೀವಕ್ಕೆ ಹಸಿವು ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಬೆಳೆ ಬೆಳೆಯುವುದು ಅನಿವಾರ್ಯವಾಗಿರುತ್ತದೆ. ದುಡಿಯುವುದು ಮತ್ತು ಉಣ್ಣುವುದು ಎನ್ನುವ ಮೌಲ್ಯ ಕಾಲ ಬದಲಾದಂತೆ ವ್ಯತ್ಯಾಸವಾಗಿದ್ದು ಮಾತ್ರ ಸತ್ಯ.

ಅಧ್ಯಾಯ 6

ಬೆಳೆಯನ್ನು ಬೆಳೆಯುವ ಹಂತಗಳು

ಕರಾವಳಿಯಲ್ಲಿ ಬೆಳೆಯುವ ಪ್ರಮುಖ ಬೆಳೆಗಳನ್ನು ಗಮನದಲ್ಲಿರಿಸಿದರೆ ಬೆಳೆ ಬೆಳೆಯುವ ಹಂತಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

1. ಭೂಮಿ ಹದಗೊಳಿಸುವುದು
2. ಬೀಜ ಸಂಸ್ಕರಣೆ ಬಿತ್ತನೆ ಬೀಜದ ತಯಾರಿ
3. ಬಿತ್ತನೆ ಮತ್ತು ನಾಟಿ
4. ನೀರಾವರಿ
5. ಕಳೆ ನಿರ್ವಹಣೆ
6. ಗೊಬ್ಬರ
7. ರೋಗ ನಿರ್ವಹಣೆ
8. ಕಟಾವು
9. ಒಕ್ಕಣೆ
10. ಧಾನ್ಯ ಸಂಗ್ರಹಣೆ–ಸಂಸ್ಕರಣೆ

ಭೂಮಿಯನ್ನು ಹದಗೊಳಿಸುವುದು :– ಯಾವುದೇ ಬೆಳೆಯಲ್ಲಿ ಒಳ್ಳೆಯ ಫಸಲನ್ನು ಪಡೆಯಬೇಕಾದರೆ ಬಿತ್ತನೆ ನಾಟಿಗಿಂತ ಮೊದಲು ಕೃಷಿ ಭೂಮಿಯನ್ನು ಹದಗೊಳಿಸುವ ಜಾಣ್ಮೆ ತಿಳಿದಿರಬೇಕು. ಉಳುಮೆ ಮಾಡುವವನು ಗಂಡಾದರೂ ಉಳುಮೆಗೆ ತೆರಳುವಾಗ ಕೋಣ ಒಂದರ ಮೂಗುದಾರ ಹಿಡಿಯಲು ಹೆಣ್ಣು ಮಕ್ಕಳು ಬೇಕು. ಯಾವ ಗದ್ದೆಯನ್ನು ಉಳುಮೆ ಮಾಡಬೇಕು, ಯಾವುದು ಬೇಡ ಎಂಬ ತಿಳುವಳಿಕೆ ಆಕೆಗೆ ಇತ್ತು. ಯಾವ ಭೂಮಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದು ಆಕೆಗೆ ತಿಳಿದಿದ್ದ ಸರಳ ಸತ್ಯ. ಗದ್ದೆಗೆ ನೀರು ಹಾಯಿಸಿ ಅದನ್ನು ಉಳುಮೆಗೆ ಯೋಗ್ಯವನ್ನಾಗಿ ಮಾಡುವುದು ಮುಖ್ಯ ಕಾಯಕ. ಉಳುಮೆ ನೀರಿಲ್ಲದ ಗದ್ದೆಯ ಹುಡಿ ಮಣ್ಣಿಗೋ ಅಥವಾ ನೀರು ಹಾಯಿಸಿದ ಅಂಟು ಮಣ್ಣಿಗೋ ಎನ್ನುವುದು ನಿರ್ಧರಿತವಾಗುತ್ತಿತ್ತು. ಗದ್ದೆಯನ್ನು ಒಂದು ಸಾಲು ಉತ್ತರೆ ಅದನ್ನು 'ವರ್ಲ" ಎನ್ನುತ್ತಾರೆ. ಎರಡು ಸಾಲು ಉತ್ತರೆ 'ಇರ್ಲ' ವಾಗುತ್ತದೆ. ಹೀಗೆ ಎರಡು ಸಾಲು, ನಾಲ್ಕು ಸಾಲು ಉತ್ತು ಆದ ಮೇಲೆ ಹಲಗೆ ಹಾಕಲಾಗುತ್ತದೆ. 'ಪೊರಿ' ಕಟ್ಟಿ ಉಳುಮೆ ಮಾಡಿದ ಮೇಲೆ ನಾಟಿಯಾದರೆ ಹಲಗೆ ಹಾಕುವುದಿಲ್ಲ. ಬಿತ್ತನೆಯಾದರೆ 'ಕುರುಂಟು' ಕಲ್ಲು ಎಳೆದು ನೀರು ಹರಿದು ಹೋಗುವ ಬದುವನ್ನು ಗದ್ದೆಯೊಳಗೆ ನಿರ್ಮಿಸಲಾಗುತ್ತದೆ. ನಾಟಿಯಾದರೆ ಹಲಗೆ ಹಾಕದೆ ಉಳುಮೆ ಮಾಡಿ ಬಿಡಲಾಗುತ್ತದೆ. ಹೀಗೆ ಭೂಮಿಯನ್ನು ಹದಗೊಳಿಸುವಲ್ಲೂ ಗದ್ದೆಗೆ ನೀರು ಕಟ್ಟಿ ಕೆಸರು ಮಣ್ಣಿನಿಂದ ಉಳುಮೆ ಮಾಡುವುದಕ್ಕೂ,

ಬೇಸಗೆಯಲ್ಲಿ ಹುಡಿ ಮಣ್ಣನ್ನು ಹದಗೊಳಿಸುವುದಕ್ಕೂ ವ್ಯತ್ಯಾಸವಿದೆ. ಸಾಮಾನ್ಯ ಕರಾವಳಿಯ ಕೃಷಿ ಬದುಕು ಆರಂಭವಾಗುವುದೇ ಪಗ್ಗು ತಿಂಗಳಲ್ಲಿ ಹದಿನೆಂಟು ಹೋಗುವ ದಿನ. ಆ ಗದ್ದೆಗೆ 'ಪುಂಡಿ ಬಿತ್ತ್' ಹಾಕಿ ಕೃಷಿ ಚಟುವಟಿಕೆ ಆರಂಭವಾಗುತ್ತದೆ. ಮೂರು ಬೆಳೆಯನ್ನು ಬೆಳೆಯುವ ಕರಾವಳಿಯಲ್ಲಿ ಎಣೆಲಿನ ಕೊಯಿಲು ಸುಗ್ಗಿಗೆ ಕಳೆದು ಕೆಸರು ನೀರಿನ ಉಳುಮೆಯನ್ನೇ ಮಾಡುತ್ತಾರೆ. ಕೊಳಕೆ ಬೆಳೆ ಬೆಳೆಯದ ಮಜಲು ಗದ್ದೆ ಮತ್ತು ಬೈಲು ಗದ್ದೆಗಳಲ್ಲಿ ಕೊಯಿಲಾದ ನಂತರ ಗದ್ದೆಯನ್ನು ಹಾಗೆಯೇ ಬಿಟ್ಟು ಬಿಡುವುದಿಲ್ಲ. ಎರಡು ಸಾಲು ಉಳುಮೆ ಮಾಡಿ ಮೇಲಿನ ಮಣ್ಣು ಕೆಳಗೆ , ಕೆಳಗಿನ ಮಣ್ಣು ಮೇಲೆ ಮಾಡುತ್ತಾರೆ. ಹಾಗೆ ಮಾಡಿದ ಮೇಲೆ ಧಾನ್ಯ ಬಿತ್ತನೆಯೂ ನಡೆಯುತ್ತದೆ. ಧಾನ್ಯ ಬಿತ್ತನೆ ಇಲ್ಲದಿದ್ದರೂ ಗದ್ದೆಗಳನ್ನು ಹಾಗೆ ಬಿಟ್ಟು ಬಿಡುವುದಿಲ್ಲ. ಇದಕ್ಕೆ ಕಾರಣ ಪೈರಿನ ಬುಡದ 'ಒಡ್ಡು' ಹಾಗೆ ಉಳಿದು ಮಳೆ ಬಂದಾಗ ಮತ್ತೆ ಚಿಗುರಬಾರದು ಎಂಬ ದೂರದೃಷ್ಟಿ ಒಂದೆಡೆಯಾದರೆ ಮಣ್ಣಿನಲ್ಲಿ ಸೇರಿರುವ ಕ್ರಿಮ ಕೀಟಗಳು ಬಿಸಿಲಿಗೆ ಮೇಲೆ ಬಂದು ಆ ಝಳಕ್ಕೆ ಸತ್ತು ಹೋಗಲಿ ಎಂಬ ಉದ್ದೇಶವೂ ಇರುತ್ತದೆ. ಒಣ ಗದ್ದೆಯನ್ನು ಹುಡಿ ಮಣ್ಣಿಗೆ ಉಳುಮೆ ಮಾಡುವಾಗಲೂ ಎರಡು ಸಾಲು ಉತ್ತು ಆದ ಮೇಲೆ ಹಲಗೆ ಹಾಕುತ್ತಾರೆ. ಹೀಗೆ ಮಾಡುವುದರಿಂದ ಭೂಮಿಯು ಆಳದಲ್ಲಿ ತೇವಾಂಶವೂ ಆರಿ ಹೋಗುವುದಿಲ್ಲ ಮತ್ತೆ ಉಳುಮೆಯನ್ನು ಮಾಡುವಾಗ ಮಣ್ಣು ಹಾಸು ಗಲ್ಲಿನಂತೆ ಆಗಿ ಕಠಿಣವಾದ ದುಡಿಮೆಯೂ ಆಗುವುದಿಲ್ಲ. ಸಾಮಾನ್ಯವಾಗಿ ಹುಡಿ ಮಣ್ಣಿಗೆ ಉಳುಮೆ ಬೈಲು ಮತ್ತು ಕೆಲವೊಮ್ಮೆ ಮಜಲು ಗದ್ದೆಗಳಲ್ಲದೆ ಬೆಟ್ಟುಗದ್ದೆಗಳನ್ನು ಈ ರೀತಿ ಉಳುವ ಸಂದರ್ಭ ಇಲ್ಲ. ಬೆಟ್ಟು ಗದ್ದೆಯಲ್ಲಿ ಎಣೆಲು ಬೆಳೆ ತೆಗೆದ ನಂತರ ಒಂದು ಧಾನ್ಯದ ಬೆಳೆ ಪಡೆದ ಮೇಲೆ ನೀರಿನ ಅನುಕೂಲತೆ ಇದ್ದರೆ ಕೊಳಕೆ ಬೆಳೆಗಾಗಿ ಉಳುಮೆ ನಡೆಯುತ್ತದೆ. ಇಲ್ಲದಿದ್ದರೆ ಅಂತಹ ಗದ್ದೆಗಳನ್ನು ಹಾಗೆಯೇ ಬಿಟ್ಟು ಬಿಡುತ್ತಾರೆ. ಪೈರಿನ ಬುಡದ ಒಡ್ಡನ್ನು ತೆಗೆದು ಸಂಗ್ರಹಿಸುತ್ತಾರೆ.

ಬೇಸಾಯ ಪೂರ್ವ ಗದ್ದೆಗಳನ್ನು ಎರಡು ಸಾಲು ಉಳುಮೆ ಮಾಡುತ್ತಾರೆ. ಹಟ್ಟಿ ಗೊಬ್ಬರವನ್ನು ಹೆಣ್ಣು ಮಕ್ಕಳು ಹೊತ್ತು ಹಾಕಿ ಪಸರಿಸಿ ಮೇಲೆ ಬೂದಿ ಸಿಂಪಡಿಸಿ ಎರಡು ಸಾಲು ಉಳುಮೆಯಾಗುತ್ತದೆ. ಹೀಗೆ ಉತ್ತು ಆದ ಮೇಲೆ ಅವಶ್ಯವಿದ್ದರೆ ಹಲಗೆ ಹಾಕಿ ಬಿತ್ತನೆಯೋ ನಾಟಿಯೋ ಮಾಡುತ್ತಾರೆ. ಭತ್ತದ ಗದ್ದೆಗಳು ಮತ್ತು ಧಾನ್ಯದ ಗದ್ದೆಗಳ ಉಳುಮೆಯ ಸ್ವರೂಪದಲ್ಲಿ ವ್ಯತ್ಯಾಸವಿಲ್ಲ. ಧಾನ್ಯವನ್ನು ಸುಗ್ಗಿ ಬೆಳೆಗೆ ಬಿತ್ತುವುದರಿಂದ ನೀರಾವರಿ ಹಸಿ ಮಣ್ಣಿಗೆ ಒಂದು ಸಾಲು ಉತ್ತು ಬಿತ್ತಲಾಗುತ್ತದೆ. ಗದ್ದೆಗೆ ಗೊಬ್ಬರ ಬೂದಿ ಹಾಕಿಯಾದ ಬಳಿಕ ಗದ್ದೆಯ ನೀರು ಹೊರ ಹರಿವಿನಿಂದ ಬಸಿದು ಹೋಗದಂತೆ ನೋಡುತ್ತಾರೆ.

ಧಾನ್ಯಗಳು ತರಕಾರಿಗಳನ್ನು ಗದ್ದೆಗಳಲ್ಲಿ ಬೆಳೆಯುವಾಗ ಉಳುಮೆ ಅನಿವಾರ್ಯ. ಮಡಿಗಳನ್ನಾಗಿ, ಪಾತಿಯ ಸಾಲುಗಳನ್ನಾಗಿ, ಹೂಗಳು, ಹಣ್ಣುಗಳನ್ನು ಸುಗಂಧ ದ್ರವ್ಯಗಳಿಗೆ ಭೂಮಿಯನ್ನು ಹದಗೊಳಿಸಲಾಗುತ್ತದೆ. ವಾಣಿಜ್ಯ ಬೆಳೆಗಳಾದ ಅಡಿಕೆ, ಕೊಕ್ಕೋ, ವೆನಿಲ್ಲ

ವೀಳ್ಯದೆಲೆ, ಕರಿಮೆಣಸು, ವೆನಿಲ್ಲಾ ಬೆಳೆಗಳ ಬಳ್ಳಿಗಳನ್ನು ನಾಟಿ ಮಾಡುವಾಗಲೂ ನೆಟ್ಟ ಗಿಡದ ಬುಡದಲ್ಲಿ ನಾಟಿ ಮಾಡಲಾಗುತ್ತದೆ. ಮರಗೆಣಸು, ಸಿಹಿಗೆಣಸು, ತರಕಾರಿಗಳಾದ ಅಲಸಂಡೆ, ಹೀರೆ, ಬೆಂಡೆ, ಕುಂಬಳ, ಸಿಹಿಕುಂಬಳ, ಮುಳ್ಳುಸೌತೆ, ಪಡುವಲ, ಇವನ್ನೆಲ್ಲ ಪಾತಿಗಳಲ್ಲಿ ನಾಟಿ ಮಾಡುವಾಗಲೂ ಈ ಎಲ್ಲ ಬೆಳೆಗಳನ್ನು ಆಯಾಯ ಕಾಲ ಮಾನಕ್ಕೆ

ಅನುಗುಣವಾಗಿ ಪಾತಿಯ ಸಾಲಿನಲ್ಲಿ ಒಂದೊಂದಾಗಿಯೂ ನಾಟಿ ಮಾಡಲಾಗುತ್ತದೆ.

ಭೂಮಿಯನ್ನು ಹದಗೊಳಿಸುವ ಜಾಣ್ಮೆಯಲ್ಲಿ ಹೆಣ್ಣು ಮಕ್ಕಳು ಸಮ ಪಾಲು ಪಡೆಯುತ್ತಾರೆ. ನೇಗಿಲು ಹಿಡಿದು ಉಳುಮೆ ಮಾಡಬಾರದು ಎಂಬ ವಿಧಿ ನಿಷೇಧವಿದ್ದರೂ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾರೆ, ಹೊಲದಲ್ಲಿ ದುಡಿಯುವವರಿಗೆ ಹೊತ್ತು ಹೊತ್ತಿನ ಅನ್ನ ಪಾನಾದಿಗಳನ್ನು ನೀಡುವ ಹೊಣೆಯೂ ಇವರದೇ ಅದರೊಂದಿಗೆ ಮನೆ ವಾರ್ತೆಯ ಕೆಲಸಗಳನ್ನು ಜತೆಯಾಗಿಯೇ ನಿರ್ವಹಿಸಬೇಕಾಗುತ್ತದೆ.

ಕರಾವಳಿಯಲ್ಲಿ ಎಣೆಲು ಬೆಳೆಗೆ ನಡೆಸುವ ಪೂರ್ವ ತಯಾರಿ ವಿಭಿನ್ನವಾಗಿದೆ. ಪಗ್ಗುವಿನಲ್ಲಿ ಹದಿನೆಂಟು ಹೋಗುವಾಗ ಹಾಕುವ 'ಪುಂಡಿ ಬಿತ್ತಿ'ಗೆ ಪೂರ್ವಭಾವಿಯಾಗಿ ಸುಗ್ಗಿ ತಿಂಗಳಲ್ಲಿ 'ಕರುಮೆಲಿ' ಕಡಿಯುತ್ತಾರೆ. ಸಾಗುವಳಿಯಾಗುವ ಭತ್ತದ ಗದ್ದೆಗಳಲ್ಲಿ ಸೊಪ್ಪು- ಸದೆ, ಮುಳ್ಳು, ತರಗೆಲೆ ನೆರಳಾಗುವ ಮರದ ಗೆಲ್ಲುಗಳು ಎಲ್ಲವನ್ನು ಕತ್ತರಿಸಿ ಗದ್ದೆಯಲ್ಲಿ ಅಲ್ಲಲ್ಲಿ ರಾಶಿ ಹಾಕುತ್ತಾರೆ. ಅದು ಒಣಗಿಯಾದ ಮೇಲೆ ಅದಕ್ಕೆ ಬೆಂಕಿ ಹಚ್ಚುತ್ತಾರೆ. ಒಣಗಿದ ಈ ಕಣಕ್ಕೆ ಹಾಕುವ ಬೆಂಕಿಯನ್ನು 'ತೂಟಾನ್' ಎನ್ನುತ್ತಾರೆ. ತೂಟಾನ್ ಉರಿಯುವಾಗ ಅದರ ಸುತ್ತ ನಿಂತು ಸುತ್ತಲಿನ ಮಣ್ಣನ್ನು ತೆಗೆದು ಬೆಂಕಿಯ ಮಧ್ಯಕ್ಕೆ ಎಸೆಯುತ್ತಾರೆ. ಬೆಂಕಿ ಪೂರ್ತಿ ಉರಿದು ಮಣ್ಣು ಪೂರ್ತಿ ಕರಕಲಾಗಬಾರದು, ಅರ್ಧಂಬರ್ಧ ಸುಡುವ ಹಾಗೆ ನೋಡಲಾಗುತ್ತದೆ. ಮಣ್ಣು ಪೂರ್ತಿ ಸುಟ್ಟರೆ ಕೆಂಪು ಬಣ್ಣಕ್ಕೆ ತಿರುಗದಂತೆ ನೋಡಿಕೊಳ್ಳುತ್ತಾರೆ. 'ತೂಟಾನ್' ಎಂದು ಕರೆಯಲ್ಪಡುವ ಈ ಪ್ರಕ್ರಿಯೆ ಭೂಮಿಯನ್ನು ಹದಗೊಳಿಸುವುದಲ್ಲದೆ ಗೊಬ್ಬರದ ಒಂದು ವಿಧಾನವೂ ಆಗಿದೆ. ಈ ರೀತಿಯ ಪ್ರಕ್ರಿಯೆ ಕರಾವಳಿಯ ವೈಶಿಷ್ಟ್ಯವೂ ಹೌದು.

ಭತ್ತವು ಪ್ರಮುಖ ಬೆಳೆಯಾದುದರಿಂದ ಭತ್ತದ ಬೆಳೆಯ ಹದಗೊಳಿಸುವಿಕೆಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಸುಗ್ಗಿಯ ಬೆಳೆಗಳಲ್ಲಿ ಪಾತಿಗಳಲ್ಲಿ ನೆಡುವ ತರಕಾರಿಗಳು, ಹಣ್ಣು ಹಂಪಲುಗಳಲ್ಲಿ , ಗುಂಡಿಗಳಲ್ಲಿ ನೆಡಲು ಹದಗೊಳಿಸಲಾಗುತ್ತದೆ.ಸಾಗುವಳಿಗಾಗಿ ಭತ್ತವನ್ನು ವಿಸ್ತಾರವಾದ ಮಡಿಗಳಲ್ಲಿ ಬಿತ್ತಿ ಬುಡಕ್ಕೆ ಕೈ ಹಾಕಿ ನೇಜಿಯನ್ನು ತೆಗೆಯಲು ಕೌಶಲ್ಯ ಬೇಕು. ಮಧ್ಯದಲ್ಲಿ ನೇಜಿ ತುಂಬಾ ಸೂಕ್ಷ್ಮ ಭಾಗವಾದುದರಿಂದ ಅದರ ಸೊಂಟ ಮುರಿಯದೆ ತುದಿ ಕತ್ತರಿಸಲ್ಪಡದೆ, ಬೇರು ನೆಲದಿಂದ ಮೇಲೆ ಏಳದಂತಾಗುತ್ತದೆ. ಹಾಗಾಗದಂತೆ ಎಚ್ಚರವಹಿಸಬೇಕು. ನಾಟಿ ವೇಗವಾಗಿ ಸಾಗಿದರೆ ಒಂದು ಮುಡಿ ಗದ್ದೆಯ ಪ್ರದೇಶವನ್ನು ಎಂಟು ಜನ ನೆಟ್ಟು ಮುಗಿಸಬಹುದು.

ಕೆಲವು ದೊಡ್ಡ ದೊಡ್ಡ ಗದ್ದೆಗಳನ್ನು ಒಂದೇ ದಿನದಲ್ಲಿ ನಾಟಿ ಮಾಡಿ ಮುಗಿಸಿ 'ಕಂಡದ ಕೋರೆ ಮಾಡಬೇಕೆಂಬ ಕ್ರಮವಿದೆ. ಹೆಚ್ಚಾಗಿ ಕಂಬಳದ ಗದ್ದೆ, ದೇವಸ್ಥಾನದ , ಭೂತಸ್ಥಾನದ ಮುಂದಿನ ಬಾಕಿಮಾರು ಗದ್ದೆಗಳು ಪೂಕರೆ ಹಾಕುವ ಗದ್ದೆಗಳು ಬಹಳ ವಿಸ್ತಾರವಾದುದು. ಸುಮಾರು ಐವತ್ತು-ನೂರು ಜನರು ಒಂದೇ ದಿನದಲ್ಲಿ ನಾಟಿ ಮಾಡುವುದೇ ಬಹು ದೊಡ್ಡ ಸಂಭ್ರಮ. ಸಾಮೂಹಿಕವಾಗಿ ನಾಟಿಯ ಸಂಭ್ರಮದಲ್ಲಿ ಪಾಲ್ಗೊಳ್ಳುವ ಅವನ್ನು ರಂಗೇರಿಸಲು ಕಬಿತ, ಓ ಬೇಲೆಗಳನ್ನು ಹಾಡುತ್ತಾರೆ. ಹೀಗೆ ನಾಟಿಯಾದ ಗದ್ದೆಯಲ್ಲಿ ಪೈರು ಕಪ್ಪು ಹುಟ್ಟುವಾಗ ಒಂದು ಸುತ್ತು ಗೊಬ್ಬರವನ್ನು ಹಾಕಲಾಗುತ್ತದೆ. ಸಾವಯವವಾದರೆ ಬೂದಿಯನ್ನು ಇಲ್ಲದಿದ್ದರೆ ಯೂರಿಯಾದಂತಹ ರಾಸಾಯನಿಕ ಗೊಬ್ಬರವನ್ನು ಸಿಂಪಡಿಸುತ್ತಾರೆ. ಪೈರು ಬೆಳೆದು ತೆನೆ ಬಂದು ಭತ್ತದಲ್ಲಿ ಹಾಲು ತುಂಬಿ ಅಕ್ಕಿಯಾಗಿ ಬೆಳೆಯುತ್ತ ಪೈರು ಹಳದಿ ಬಣ್ಣಕ್ಕೆ ತಿರುಗುತ್ತದೆ.

ಸಸಿ ನಾಟಿಯಲ್ಲಿ ಸಾಮಾನ್ಯವಾಗಿ ಅಡಿಕೆ, ಮಾವು, ಗೇರು, ಪೇರಳೆ, ಚಕೋತ ,

ಸಪೋಟ, ಜಂಬುನೇರಳೆ, ನೆಲ್ಲಿಕಾಯಿ, ತುಳಸಿ, ಇತ್ಯಾದಿಗಳನ್ನು ಒಂದೊಂದೇ ಸಸಿಗಳಾಗಿ ನಾಟಿ ಮಾಡುತ್ತಾರೆ. ಪಾಲಿಥೀನ್ ಚೀಲಗಳಲ್ಲಿ ಹಾಕಿಯೂ ನಾಟಿ ನಡೆಯುತ್ತದೆ. ತರಕಾರಿಗಳನ್ನು ಸಾಲಿನಲ್ಲಿ ಬಿತ್ತಿ ಹೆಚ್ಚು ಸಸಿಗಳು ಮೊಳೆತರೆ ಅವುಗಳನ್ನು ವಿರಳವಾಗಿ ನೆಡುತ್ತಾರೆ.

ತೊಂಡೆಕಾಯಿ, ಕರಿಮೆಣಸು, ವೀಳ್ಯದೆಲೆ, ಗೆಣಸು , ಮಲ್ಲಿಗೆ, ಜಾಜಿ ಇತ್ಯಾದಿಗಳನ್ನು ಬಳ್ಳಿಯಾಗಿ ನಾಟಿ ಮಾಡುತ್ತಾರೆ. ಪುಷ್ಪೋದ್ಯಮದ ವಾಣಿಜ್ಯ ಬೆಳೆಯಾಗಿರುವ ಮಲ್ಲಿಗೆ, ಜಾಜಿ ಬಳ್ಳಿಯನ್ನು ನಾಟಿ ಮಾಡುವಲ್ಲಿಯೂ ಜಾಣತನವಿದೆ. ಹೂವಿನ ಗಿಡಗಳನ್ನು ಹೆಚ್ಚಾಗಿ ಗೆಲ್ಲು ನಾಟಿ ಮಾಡುತ್ತಾರೆ. ಕನಕಾಂಬರ, ದಾಸವಾಳ, ಗುಲಾಬಿ, ಚೆಂಡುಹೂ, ಇರುವಂತಿಗೆ, ನಂದಿಬಟ್ಟಲು, ಸೇವಂತಿಗೆ , ಚೆಂಡು ಹೂ ಇತ್ಯಾದಿಗಳ ಗೆಲ್ಲು ನಾಟಿ ಮಾಡುವ ಕ್ರಮವಿದೆ.

ಗೆಡ್ಡೆ ನಾಟಿಯಲ್ಲಿ ಹೆಚ್ಚಾಗಿ ಸಾಮ್ರಾಣಿ, ಸುವರ್ಣ ಗೆಡ್ಡೆ, ಮರಗೆಣಸು, ಶುಂಠಿ, ಮುಖ್ಯ ಬೆಳೆಗಳು. ಬಾಳೆ ಗಿಡವನ್ನು ಕಂದು ನಾಟಿ ಮಾಡಿದರೆ, ಕಬ್ಬನ್ನು ಕಾಂಡ ನಾಟಿ ಮಾಡುತ್ತಾರೆ. ಅನಾನಾಸು ಮತ್ತು ಏಲಕ್ಕಿಯ ಕಂದುಗಳನ್ನು ನಾಟಿ ಮಾಡಲಾಗುತ್ತದೆ. ಇತ್ತೀಚೆಗೆ ಬೇರೆ ಸ್ವಾದ, ಬಣ್ಣ, ರುಚಿ, ಗಾತ್ರಕ್ಕಾಗಿ ಮಾವು, ಪೇರಲ, ಸೀಬೆ, ಚಕೋತಗಳ ಅಲ್ಲದೆ ವಿವಿಧ ಹೂಗಳ ಕಸಿ ನಾಟಿಯೂ ನಡೆಯುತ್ತದೆ.

ಔಷದೀಯ ಗಿಡಗಳಲ್ಲಿ ಲೋಳೆಸರ, ಪಂಚಪತ್ರೆ, ಒಂದೆಲಗ, ಕರಿಬೇವು, ಕಹಿಬೇವಿನ ಗಿಡ, ಅಮೃತ ಬಳ್ಳಿಗಳನ್ನು ಕಂದು , ಗೆಲ್ಲು ಬಳ್ಳಿಗಳಾಗಿ ನಾಟಿ ಮಾಡುತ್ತಾರೆ.

2. ಬೀಜ ಸಂಸ್ಕರಣೆ , ಬಿತ್ತನೆ ಬೀಜದ ತಯಾರಿ

ಯಾವುದೇ ಬೆಳೆಯನ್ನು ಸೊಗಸಾಗಿ ಬೆಳೆಯಬೇಕಾದರೆ ಬಿತ್ತನೆ ಬೀಜಗಳನ್ನು ಸಂಗ್ರಹಿಸುವುದು ಅತಿ ಅವಶ್ಯ. ಕೃಷಿಯು ಯಶಸ್ಸಾಗಿ ಒಳ್ಳೆಯ ಫಸಲನ್ನು ಪಡೆಯ ಬೇಕಾದರೆ ಬಿತ್ತಿದ್ದು ಮೊಳಕೆಯೊಡೆಯಬೇಕು. ಮೊಳಕೆಯ ಚಿಗುರು ಬಲಿತು ಒಂದು ಎರಡಾಗಿ ಹಲವು ಸಾವಿರವಾಗುವ ಮರ್ಮ ನಮ್ಮ ಹೆಣ್ಣು ಮಕ್ಕಳಿಗೆ ತಿಳಿದಿತ್ತು. ಪ್ರಕೃತಿಯ ನಿತ್ಯ ಸತ್ಯವೂ ಆಗಿರುವ ಈ ಸಂಗತಿಯನ್ನು ಅರಿತು ಅರ್ಥೈಸಿಕೊಂಡದ್ದು ಬೆಳೆ ಬೆಳೆಯುವ ಮೊದಲು ಮೆಟ್ಟಿಲು. ಬೆಳೆದದ್ದರಲ್ಲಿ ಯಾವುದನ್ನು ಬೀಜವಾಗಿ ಆಯ್ಕೆ ಮಾಡಿಕೊಳ್ಳಬೇಕು ಹೇಗೆ ಆಯ್ಕೆಯಾದದ್ದನ್ನು ಸಂಗ್ರಹಿಸುವುದು ಹೇಗೆ, ಸಂರಕ್ಷಣೆಯನ್ನು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕು ಎನ್ನುವ ಚಿಂತನೆಯೂ ಮುಖ್ಯವಾಗಿತ್ತು. ಹೀಗೆ ಸಂರಕ್ಷಿಸಿಕೊಂಡಿದ್ದನ್ನು ಬಿತ್ತನೆಗೆ ಮೊದಲು ಹೇಗೆ ಉಪಚಾರ ಮಾಡಬೇಕು ಎನ್ನುವುದೂ ಮುಖ್ಯವಾದ ಸಂಗತಿಯಾಗಿತ್ತು. ಬೀಜ ಸಂಸ್ಕರಣೆಯಿಂದ ತೊಡಗಿ ಬಿತ್ತನೆ ಬೀಜ ಪೂರ್ವದ ತಯಾರಿಯಲ್ಲಿಯೂ ಹೆಣ್ಣು ಮಕ್ಕಳು ಪ್ರಮುಖ ಪಾತ್ರ ವಹಿಸುತ್ತಾರೆ. ಆದರೆ ಇದು ಎಲ್ಲೂ ದಾಖಲಾಗಿಲ್ಲ ಎನ್ನುವುದೂ ಅಷ್ಟೇ ಸತ್ಯ. 'ಬಿತ್ತುವಾಕಿಗೇ ಗೊತ್ತು ಬೀಜದ ಗುಟ್ಟು' ಎನ್ನುವಂತೆ ಬಿತ್ತುವವಳು ಮತ್ತು ಬೀಜದ ಮರ್ಮ ಅರಿತವಳು ಹೆಣ್ಣೇ ಆಗಿದ್ದಾಳೆ.

ಬಿತ್ತನೆ ಬೀಜದ ಆಯ್ಕೆಯಲ್ಲಿ ಅದು ಮೊದಲ ಫಸಲೋ ಯಾವ ತಳಿ ಮತ್ತು ಬೆಳೆಯಾಗಿರಬೇಕು ಎನ್ನುವ ನಿರ್ಧಾರವೂ ಪ್ರಮುಖವಾದುದು. ಬೀಜವನ್ನು ಮಾರುಕಟ್ಟೆಯಿಂದ

ಅವರೆಂದೂ ಕೊಂಡು ತಂದವರಲ್ಲ. ಸ್ಥಳೀಯವಾಗಿ ಬೆಳೆಯುವ ಪಾರಂಪರಿಕ ತಳಿಗಳು, ನಾಟಿ ಬೀಜಗಳು ಮುಖ್ಯ. ಬೀಜವನ್ನು ಯಾವ ಹಂತದಲ್ಲಿ ಆಯ್ದುಕೊಳ್ಳಬೇಕು? ಬಲಿತು ದಕ್ಕಿದ ಫಸಲು ಹೇಗಿರಬೇಕು ಎನ್ನುವುದೂ ಮುಖ್ಯ. ಧಾನ್ಯಗಳ ಆಯ್ಕೆಯಲ್ಲಿ ಸರಿಯಾಗಿ ಬೆಳೆದ ಬಲಿತ ಧನಿಯಾಗಿರುವ ಸೊಗಸಾಗಿ ಬೆಳೆದ, ಸರಿಯಾಗಿ ಒಣಗಿದ , ರೋಗವಿಲ್ಲದ, ಕ್ರಿಮಿ ಕೀಟಗಳು ಆವರಿಸಿಕೊಳ್ಳದ ಧಾನ್ಯದ ತೆನೆ, ಕೋಡು, ಗೆಡ್ಡೆ, ಕೋಲು, ಬೇರುಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಉತ್ತಮ ಗುಣಮಟ್ಟದ ಒಳ್ಳೆಯ ರುಚಿಯ ಧಾನ್ಯಗಳು ಬಹು ಮುಖ್ಯವಾಗುತ್ತದೆ. ಬೀಜಗಳ ಸಂಗ್ರಹದಲ್ಲೂ ಒಂದೇ ಸ್ವರೂಪ, ರೂಪ ಬಣ್ಣ ಗಾತ್ರಗಳೂ ಅವಶ್ಯವೆನಿಸುತ್ತದೆ. ಸರಿಯಾದ ಮೊಳಕೆ ಮತ್ತು ಫಸಲನ್ನು ನಿರೀಕ್ಷಿಸುವ ಸಂದರ್ಭದಲ್ಲಿ ಒಕ್ಕಣೆ ಮಾಡಿದ ಬಳಿಕ ಕಣಜದ ರಾಶಿಯ ಮಧ್ಯ ಭಾಗದಿಂದ ಸಂಗ್ರಹಿಸಿ ಇಡುವುದೂ ಇದೆ. ಸಾಮಾನ್ಯವಾಗಿ ಭತ್ತದ ಬೀಜ ಸಂಗ್ರಹಣೆ ಕರಾವಳಿಯಲ್ಲಿ ಬಹಳ ವಿಭಿನ್ನ. ಗದ್ದೆಯಲ್ಲೇ ತೆನೆಗಳನ್ನೇ ಸಂಗ್ರಹಿಸುವುದು ಬಲು ಕಡಿಮೆ. ಪೈರನ್ನು ಅಂಗಳಕ್ಕೆ ಹೊತ್ತು ತಂದು ಪಡಿಮಂಚಕ್ಕೆ ಬಡಿಯುತ್ತಾರೆ. ಭಾರವಾದ ಭತ್ತವು ಪಡಿಮಂಚದ ಕೆಳಗೆಯೇ ಬೀಳುತ್ತದೆ. ಒಂದಿಷ್ಟು ಜಳ್ಳು ಜಳ್ಳಾದ ಭತ್ತ ದೂರಕ್ಕೆ ಹಾರಿ ಬೀಳುತ್ತದೆ. ಕೇಂದ್ರ ಭಾಗದ ಭತ್ತವನ್ನೇ ತೆಗೆದು ಸಂಗ್ರಹಿಸುತ್ತಾರೆ. ಹಾಗೆ ಸಂಗ್ರಹಿಸಲು ಮರೆತರೆ ಭತ್ತವನ್ನು ಕಣಜ ಹಾಕಲು ಪಡಿಮಂಚದಿಂದ ತೂರುವಾಗ ಅದು ಕೇಂದ್ರ ಭಾಗದಲ್ಲಿ ಬಿದ್ದರೆ ಅದು 'ದನಿ' ಭತ್ತವಾಗಿರುತ್ತದೆ. ಅವುಗಳನ್ನು ಮತ್ತೆ ಒಣಗಿಸಿ ಸಂಗ್ರಹಿಸಲಾಗುತ್ತದೆ.

ತರಕಾರಿಗಳಲ್ಲಿ ಸಾಮಾನ್ಯವಾಗಿ ಮೊದಲು ಹೂ ಬಿಟ್ಟು ಕಾಯಿಯಾಗಿ ಬೆಳೆದದ್ದನ್ನೇ ಬೀಜವಾಗಿ ಬಳಸುತ್ತಾರೆ. ಬೇರು ಕೊಂಬೆಗಳಾಗುವಾಗಲೂ ಬಲಿತ ಕೊಂಬೆ ಬೇರುಗಳೇ ಬೀಜವಾಗಿ ಸಂಗ್ರಹ ಯೋಗ್ಯವಾಗುತ್ತದೆ. ಗೆಡ್ಡೆಗಳನ್ನು ಬೀಜವಾಗಿ ಸಂಗ್ರಹಿಸುವಾಗ ದೊಡ್ಡ ದೊಡ್ಡ ಗೆಡ್ಡೆಗಳ ಸಣ್ಣ ಸಣ್ಣ ಕಣ್ಣುಗಳೇ ಸಂಗ್ರಹ ಯೋಗ್ಯವಾಗಿದೆ. ಕೋಡುಗಳನ್ನು ಸಂಗ್ರಹಿಸುವಾಗಲೂ ಮೊದಲ ಫಸಲಿಗೆ ಆದ್ಯತೆ ಇದೆ.

ಬಿತ್ತನೆ ಬೀಜದ ಆಯ್ಕೆಯ ನಂತರ ಸಂಗ್ರಹಣೆಗೆ ಕರಾವಳಿಯಲ್ಲಿ ಧಾನ್ಯಗಳಾದ ಭತ್ತ, ಉದ್ದು, ಹುರುಳಿ, ಹೆಸರುಗಳನ್ನು 'ಮುಡಿ' ಗಳನ್ನಾಗಿ ಕಟ್ಟುತ್ತಾರೆ. ಕೆಲವು ಧಾನ್ಯಗಳಿಗೆ ಸಣ್ಣ ಮುಡಿಗಳನ್ನು ಕಟ್ಟಿ ಅದನ್ನು 'ಕುರುಂಟು' ಎಂದು ಕರೆಯುತ್ತಾರೆ. ಬೀಜದ ಮುಡಿಯ ಭತ್ತವಾದರೆ ಒಂದು ಮುಡಿಗೆ ನಾಲ್ಕು ಕಳಸೆ ಭತ್ತ, ಕಳಸೆ ಎಂದರೆ ಹದಿನಾಲ್ಕು ಸೇರು. ಕುರುಂಟು ಅವರವರ ಅಳತೆಗೆ ತಕ್ಕಂತೆ ಮೂರು ಸೇರು, ನಾಲ್ಕು ಸೇರು, ಭತ್ತಗಳೂ ಧಾನ್ಯಗಳೂ ಆಗಿರುತ್ತದೆ. ಭತ್ತವಾದರೆ ನಾಲ್ಕು ಕಳಸೆ ಎಂಬ ಅಳತೆಯಿದೆ. ಅಕ್ಕಿಯ ಮುಡಿಯಾದರೆ ಮೂರು ಕಳಸೆ ಅಂದರೆ 42 ಸೇರು ಅಕ್ಕಿ ಎಂದು ಲೆಕ್ಕ ಹಾಕುತ್ತಾರೆ. ಇದಲ್ಲದೆ ತರಕಾರಿ ಬೀಜಗಳನ್ನು ಸೋರೆ ಬುರುಡೆಯಲ್ಲಿ ತುಂಬಿಸಿ ಅಡುಗೆ ಮನೆಯ ಒಲೆಯ ಮೇಲೆ ಇಡುತ್ತಾರೆ. ಆಯಾಯ ಧಾನ್ಯಗಳನ್ನು ತರಕಾರಿಗಳ, ಧಾನ್ಯಗಳ ಕೋಡುಗಳನ್ನೇ ಬಲಿಯಲು ಬಿಟ್ಟು ಬೀಜ ಸಂಗ್ರಹಣೆ ಮಾಡುವುದಿದೆ. ತೊಂಡೆಕಾಯಿಯ ಬಳ್ಳಿಯನ್ನು ಬಲಿತದ್ದನ್ನು ಒಣಗಿಸಿ ಸೆಗಣಿಯಲ್ಲಿ ಸುತ್ತಾಡಿಸಿ ಮತ್ತೆ ಒಣಗಿಸಿ ಸಂಗ್ರಹಿಸಿಡುತ್ತಾರೆ. ಬಸಳೆಯಂತಹ ಬಳ್ಳಿಗಳನ್ನು ಚಪ್ಪರ ಕಳಚುವಾಗ ಇನ್ನೊಂದು ಚಪ್ಪರಕ್ಕೆ ನೆಟ್ಟು, ಬೆಳೆಸುತ್ತಾರೆ. ತರಕಾರಿ ಬೆಳೆಗಳಾದ ಬದನೆ, ಹಾಗಲಕಾಯಿ, ಪಡುವಲಕಾಯಿಗಳನ್ನು ಮೊದಲ ಫಸಲನ್ನೇ ಬೀಜಕ್ಕಾಗಿ ಆಯ್ಕೆ ಮಾಡಿ ಒಣಗಿಸಿ ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ. ಗೆಡ್ಡೆ, ಗೆಣಸುಗಳಲ್ಲಿ

ಮುಖ್ಯವಾಗಿ ಸುವರ್ಣ ಗೆಡ್ಡೆ, ಸಿಹಿ ಗೆಣಸು, ಶುಂಠಿ, ಸಾಮ್ರಾಣಿಗಳ ಆರೋಗ್ಯವಂತ ಕಣ್ಣುಗಳನ್ನೇ ಸಂಗ್ರಹಿಸಿ ಬಿತ್ತನೆಗೆ ಆಯ್ಕೆ ಮಾಡಿಕೊಡುತ್ತಾರೆ.

ತರಕಾರಿ ಮತ್ತು ಸೊಪ್ಪಿನ ಬೆಳೆಗಳ ಬೀಜ ಸಂರಕ್ಷಣೆಯಲ್ಲಿ ಮಹಿಳೆಯರ ಪರಿಣಿತಿ ವಿಶೇಷವಾಗಿದೆ. ಮೊದಲ ಸಲದ ಬೆಳೆಯಿಂದಲೇ ಬೀಜಗಳನ್ನು ಆರಿಸಿಕೊಳ್ಳುತ್ತಾರೆ. ಬೆಂಡೆಕಾಯಿ, ಹೀರೆಕಾಯಿ, ಸೋರೆಕಾಯಿ, ಕುಂಬಳಕಾಯಿ, ಅಲಸಂಡೆ ಸಿಹಿಗುಂಬಳ, ಸೌತೆಕಾಯಿ, ಮುಳ್ಳು ಸೌತೆ, ಬೂದುಗುಂಬಳ ಇತ್ಯಾದಿ ತರಕಾರಿಗಳಲ್ಲಿ ಮೊದಲಿಗೆ ಬಂದ ಫಸಲನ್ನು ಬೀಜಕ್ಕಾಗಿ ಆಯ್ಕೆ ಮಾಡಿಕೊಂಡು, ಹುಳು ಬೀಳದ ಕಾಯಿಗಳನ್ನು ಮಾಗಿದ ಬಳಿಕವೇ ಕೊಯ್ದು ಸಂಗ್ರಹಿಸುತ್ತಾರೆ. ಸೌತೆ, ಮುಳ್ಳು ಸೌತೆ, ಕುಂಬಳ, ಬೂದುಗುಂಬಳದ ಬೀಜಗಳನ್ನು ತೆಗೆದು ಬಿಸಿಲಿಗೆ ಹಾಕಿ ಒಣಗಿಸಿ ಒಣಗಿದ ಸೋರೆ ಬುರುಡೆ, ಇಲ್ಲವೇ ಮಣ್ಣಿನ ಚಿಕ್ಕ ಮಡಕೆಗಳಲ್ಲಿ ಗಾಳಿಯಾಡದಂತೆ ಗಟ್ಟಿಯಾಗಿ ಭದ್ರಪಡಿಸಿ ಅಡಿಗೆ ಮನೆಯಲ್ಲಿ ಹೊಗೆ ಹೋಗುವ ಸ್ಥಳದಲ್ಲಿ ಹೆಚ್ಚಾಗಿ ಹಲಗೆಯ ಮೇಲೆ ತೆಗೆದಿರಿಸಿ ಸಂರಕ್ಷಿಸುತ್ತಾರೆ.

ಹೂವಿನ ಬೆಳೆಗಳಲ್ಲಿ ಮಲ್ಲಿಗೆ ಹೂವಿನ ವೈವಿಧ್ಯಕ್ಕೆ ಅದರ ಗೆಲ್ಲುಗಳನ್ನು ಬಳಸುತ್ತಾರೆ. ಇರುವಂತಿಗೆ, ಜಾಜಿ, ದುಂಡು ಮಲ್ಲಿಗೆ, ಸೇವಂತಿಗೆ , ಗುಲಾಬಿ, ಅಬ್ಬಮಲ್ಲಿಗೆ ಈ ಹೂವುಗಳ ಗೆಲ್ಲುಗಳನ್ನು ಆಯ್ಕೆ ಮಾಡಿಕೊಂಡು ನೆಡುತ್ತಾರೆ. ಹೆಚ್ಚಾಗಿ ಮಳೆಗಾಲ ಇಲ್ಲವೇ ಮಳೆ ನಿಲ್ಲುವ ಕಾಲಕ್ಕೆ ಈ ರೀತಿಯ ಹೂಗಳ ನಾಟಿ ನಿರಂತರವಾಗಿ ಸಾಗುತ್ತದೆ. ಇದಲ್ಲದೆ ದಾಸವಾಳ, ನಂದಿಬಟ್ಟಲು, ಪಚ್ಚೆಕೊರಳು, ಪಾರಿಜಾತ ರತ್ನಗಂಧಿ, ಈ ಹೂಗಳನ್ನು ಯಥೇಚ್ಚವಾಗಿ ಬೆಳೆಯುತ್ತಾರೆ. ಇವುಗಳ ಗೆಲ್ಲುಗಳನ್ನು ಕತ್ತರಿಸಿ ನಾಟಿ ಮಾಡಲಾಗುತ್ತದೆ.

ಚೆಂಡು ಹೂವನ್ನು ಒಣಗಿಸಿ ಬೀಜಕ್ಕಾಗಿ ಸಂಗ್ರಹ ಮಾಡಲಾಗುತ್ತದೆ. ಹೀಗೆ ಸಂಗ್ರಹಿಸಿದ ಬೀಜವನ್ನು ಮಳೆ ಹನಿ ಬಿದ್ದಾಗ, ಮಣ್ಣನ್ನು ತಂಪಾಗಿಸಿ ಬಿತ್ತನೆ ಮಡಲಾಗುತ್ತದೆ. ಹಣ್ಣಿನ ಬೆಳೆಗಳಲ್ಲಿ ಮಾವು, ಹಲಸು, ಪಪಾಯಿ, ಸಪೋಟ, ಸೀಬೆ, ಸೀತಾ ಫಲ, ರಾಮಫಲ, ಚಕ್ಕೋತ ಇತ್ಯಾದಿ ಬೆಳೆಗಳನ್ನು ಬೀಜದಿಂದ ಅಭಿವೃದ್ಧಿಗೊಳಿಸಿಕೊಳ್ಳುತ್ತಾರೆ. ಉತ್ತಮ ತಳಿಯ ಹಣ್ಣುಗಳನ್ನು ಗುರುತಿಸಿ ಅವುಗಳ ಬೀಜಗಳನ್ನೇ ಸಂಸ್ಕರಿಸಿಕೊಳ್ಳುತ್ತಾರೆ. ಹಲಸು, ಮಾವು, ಪಪ್ಪಾಯಿ, ಗಿಡಗಳನ್ನು ಬೀಜ ಸಂಗ್ರಹಮಾಡಲು ಸಂಪೂರ್ಣ ಮಾಗಿರುವ ಮಾಗಿ ಹಣ್ಣಿನ ಬಣ್ಣಕ್ಕೆ ಬಂದ ಮೇಲೆ ಕೊಯ್ದು ಬಿಸಿಲಿಗೆ ಒಣಗಿಸಿ ಸಂಗ್ರಹಿಸುತ್ತಾರೆ. ಇಲಿ, ಜಿರಳೆಗಳ ಕಾಟದಿಂದ ರಕ್ಷಿಸಿಕೊಳ್ಳಲು ಒಣ ಬೂದಿಯನ್ನು ಸಿಂಪಡಿಸಿ ಮತ್ತು ನೆಕ್ಕಿ ಸೊಪ್ಪನ್ನು ಜತೆಗೆ ಇರಿಸಿ ಸಂಗ್ರಹಿಸಿ ಇಡುತ್ತಾರೆ.

3. ಬಿತ್ತನೆ ಮತ್ತು ನಾಟಿ :– ಕೃಷಿಯಲ್ಲಿ ಬೀಜಗಳ ಬಿತ್ತನೆ ಮತ್ತು ನಾಟಿಯ ಶ್ರಮವನ್ನು ಹೆಣ್ಣು ಮಕ್ಕಳು ನಾಜೂಕಾಗಿ ನಿರ್ವಹಿಸುತ್ತಾರೆ. ಹೆಣ್ಣು ಮತ್ತು ಗಂಡು ಜತೆ ಸೇರಿ ನಿರ್ವಹಿಸುವ ಈ ಕಾಯಕದಲ್ಲಿ ಬಿತ್ತನೆ ಬೀಜಗಳ ಬೀಜೋಪಚಾರವೂ ಬಹು ಮುಖ್ಯ. ಬಿತ್ತನೆ ಬೀಜವನ್ನು ಬಿತ್ತನೆಯ ಪೂರ್ವದಲ್ಲಿ ಸೆಣಬಿನ ನಾರಿನ ಗೋಣಿ ಚೀಲದಲ್ಲಿ ತುಂಬಿಸಿ ಗಾಳಿ ಹೋಗದಂತೆ ಕಟ್ಟಿ ನೀರಿನಲ್ಲಿ ಒಂದು ರಾತ್ರಿ , ಒಂದು ಹಗಲು ಮುಳುಗಿಸಿ ಇಡುತ್ತಾರೆ. ಹಿಂದಿನ ದಿನ ಮುಳುಗಿಸಿಟ್ಟ ಸಮಯಕ್ಕೆ ಮರುದಿನ ಬೆಳಗ್ಗೆ ನೀರಿನಿಂದ ಎಳೆದು ಬದುವಲ್ಲಿ ಇಡುತ್ತಾರೆ. ನೀರು ಬಸಿದು ಹೋಗುವಂತೆ ಒಂದು ಕಲ್ಲನ್ನು ಅದರ

ಮೇಲೆ ಇಡಲಾಗುತ್ತದೆ. ಹಾಗೆ ನೀರಿನಿಂದ ಮೇಲೆಳೆದ ನೀರೆಲ್ಲ ಬಸಿದು ಹೋದ ಗೋಣಿ ಚೀಲದಿಂದ ಭತ್ತವನ್ನು ಸೆಗಣಿ ಸಾರಿಸಿದ ಮಣ್ಣಿನ ನೆಲಕ್ಕೆ ಸುರಿಯುತ್ತಾರೆ. ಆ ಬೀಜಗಳಿಗೆ ಕಲಸಿದ ಸೆಗಣಿ ನೀರನ್ನು ಸಿಂಪಡಿಸಿ ಸರಿಯಾಗಿ ಬೆರಸಿ ಆ ಭತ್ತದ ರಾಶಿಯ ಮೇಲೆ ಮತ್ತೆ ಗೋಣಿ ಚೀಲವನ್ನು ಹಾಕಿ ಮುಚ್ಚಿಟ್ಟು, ಮೇಲೆ ಭಾರವಾದ ಕಲ್ಲೊಂದನ್ನು ಎತ್ತಿ ಇಟ್ಟಿರುತ್ತಾರೆ. ಹಾಗೆ ಭಾರ ಇರಿಸಿದ ಸಮಯಕ್ಕೆ ಮರುದಿನ ತೆಗೆದು ಮೊಳಕೆಯೊಡೆದ ಭತ್ತವನ್ನು 'ಕಟ್ಟಕುರ್ವೆಗೆ' ಅಳತೆಯಷ್ಟೆ ಬಿತ್ತನೆ ಮಾಡಲಾಗುತ್ತದೆ. ನೀರಿರುವ ಗದ್ದೆಯಲ್ಲಿ ನೇಜಿಗೆ ಬಿತ್ತುವಾಗ ಸ್ವಲ್ಪ ಮಂದವಾಗಿ ಬಿತ್ತಿದರೆ, ಪೈರಿನ ಬಿತ್ತನೆಯಾದರೆ ಸ್ವಲ್ಪ ತೆಳುವಾಗಿ ಬಿತ್ತನೆ ಮಾಡಲಾಗುತ್ತದೆ. ಬಿತ್ತುವ ಕಾರ್ಯ ಗಂಡಸಿನದಾದರೂ ಅದರ ಪೂರ್ವ ತಯಾರಿಯಲ್ಲಿ ಹೆಚ್ಚು ಪಾಲು ಹೆಣ್ಣಿನ ಶ್ರಮ ಇದ್ದೇ ಇರುತ್ತದೆ. ಬೀಜೋಪಚಾರ ಮಾಡುವಾಗ ಎಲ್ಲಾ ತಳಿಗಳ ಭತ್ತದ ಬೀಜೋಪಚಾರಕ್ಕೂ ಒಂದೇ ರೀತಿಯ ಆರೈಕೆ ಮಾಡಲಾಗುತ್ತದೆ. ಆದರೆ ಸುಗ್ಗಿಯ ತಳಿಯನ್ನು ಎಣೆಲ್ ಬೆಳೆಗೆ ಬಿತ್ತಿದರೆ ಎಣೆಲು ಬೆಳೆಯ ತಳಿಯನ್ನು ಕೊಳಕೆಗೆ ಬಿತ್ತಿದರೆ ಫಸಲು ಬರಲು ಸಾಧ್ಯವಿಲ್ಲ. ಈ ಎಚ್ಚರ ಮತ್ತು ಸೂಕ್ಷ್ಮ ಅತಿ ಅಗತ್ಯ. ಭತ್ತದ ಬಿತ್ತನೆಯಲ್ಲಿ ಅನುಸರಿಸುವ ಈ ಕ್ರಮವನ್ನು ಎಲ್ಲಾ ಬೆಳೆಗಳ ಬಿತ್ತನೆಗೂ ಅನ್ವಯಿಸುವುದಿಲ್ಲ.

ಧಾನ್ಯದ ಬೆಳೆಗಳ ಬಿತ್ತನೆ ಬೀಜಗಳನ್ನು ನೀರಿನಲ್ಲಿ ಮುಳುಗಿಸಿ ಇಡುವ ಪ್ರಮೇಯವಿಲ್ಲ. ಧಾನ್ಯವನ್ನು ಕಟ್ಟಿಟ್ಟು ಕುರುಂಟುವಿನಿಂದ ಉದುರಿಸಿ ಹಾಗೆಯೇ ಬಿತ್ತಲಾಗುತ್ತದೆ. ಧಾನ್ಯ ಬಿತ್ತುವುದು ಸುಗ್ಗಿಯ ಬೆಳೆಗಾದುದರಿಂದ ಕೊಯಿಲು ನಡೆಸುವ ಎರಡು ದಿನ ಮೊದಲು ಬಿತ್ತಲಾಗುತ್ತದೆ. ಹಾಗೆ ಬಿತ್ತುವಾಗಲೂ ಗದ್ದೆಯಲ್ಲಿ ಪೈರಿನ ಬುಡದಲ್ಲಿ ನೀರಿರಬಾರದು. ನೀರೆಲ್ಲ ಬಸಿದು ಹೋಗುವಂತೆ ಮಾಡಿ ಕಟಾವಿನ ಪೂರ್ವದಲ್ಲಿ ಮಾಡಿದರೆ ಬಿತ್ತನೆ ಪೈರು ಕಟಾವಿನ ಒಂದು ವಾರದ ನಂತರ ಮೊಳಕೆಯೊಡೆಯುತ್ತದೆ. ನೀರಿದ್ದಾಗ ಹೆಚ್ಚು ಬೇಗ ಬಿತ್ತಿದರೆ ಧಾನ್ಯ ಕೊಳೆತು ಹೋಗುತ್ತದೆ.

ಕಬ್ಬು , ಮಾವು, ಗೇರುವಿನಂತಹ ವಾರ್ಷಿಕ ಬೆಳೆಗಳನ್ನು ನಾಟಿ ಮಾಡುವಾಗಲೂ ಎಚ್ಚರ ವಹಿಸುತ್ತಾರೆ. ಸೌತೆ, ಮುಳ್ಳು ಸೌತೆ, ಕುಂಬಳ ಕಾಯಿಯಂತಹ ತರಕಾರಿಗಳಿಗೆ ಸಾಲು ಬಿತ್ತನೆ ಮಾಡುತ್ತಾರೆ. ತೋರು ಬೆರಳ ತುದಿಯಿಂದ ನಾಜೂಕಾಗಿ ಬಿತ್ತನೆ ಮಾಡುವ ಕಾರ್ಯ ಬಹು ಮುಖ್ಯವಾಗುತ್ತದೆ. ಒಂದೊಂದೇ ಬೀಜವನ್ನು ಮಣ್ಣಿನಾಳದಲ್ಲಿ ಊರುವಾಗ ಅದರ ತುದಿ ಮೇಲೆ ಬರುವಂತೆ ಎಚ್ಚರ ವಹಿಸಲಾಗುತ್ತದೆ. ಹಾಗೆ ನಾಜೂಕನ್ನು , ಸೂಕ್ಷ್ಮ ಕಲೆಗಾರಿಕೆಯ ಶ್ರಮಕ್ಕೆ ಹೆಚ್ಚು ಆಧ್ಯತೆ ನೀಡಲಾಗುತ್ತದೆ. ಹೆಚ್ಚಾಗಿ ಧಾನ್ಯವನ್ನು ಅಗತ್ಯವಿದ್ದರೆ ಮಾತ್ರ ಬಳಸುತ್ತಾರೆ. ಬಳ್ಳಿಯಾಗಿ ಹಬ್ಬುವ ಗಿಡವಾಗಿ ಬೆಳೆಯುವ ತರಕಾರಿಗಳನ್ನು ಆಯಾಯ ಬೆಳೆಗಳಿಗೆ ಅನುಕೂಲವಾಗುವಷ್ಟು ಅಂತರದಲ್ಲಿ ಸಾಲುಗಳನ್ನು ತೆಗೆದು ಬೀಜದಿಂದ ಬೀಜಕ್ಕೆ ಸುಮಾರು ಒಂದೂವರೆ ಅಡಿಗಳಷ್ಟು ದೂರವಿಟ್ಟುಕೊಂಡು ಚಿಕ್ಕ ಗುಣಿಗಳನ್ನು ಮಾಡಿ 3–4 ಬೀಜಗಳನ್ನು ಊರಿ ತೆಳುವಾಗಿ ಮಣ್ಣು ಮುಚ್ಚಿ ನಿಧಾನವಾಗಿ ನೀರು ಹಾಯಿಸುತ್ತಾರೆ. ಒಂದೆರಡು ವಾರಗಳಲ್ಲಿ ಪ್ರತಿ ಗುಣಿಯಲ್ಲಿ ಒಂದೆರಡು ಸಸಿಗಳನ್ನು ಉಳಿಸಿಕೊಂಡು ಮಿಕ್ಕಿದ್ದನ್ನು ಕಿತ್ತು ಹಾಕುತ್ತಾರೆ. ಇತ್ತೀಚೆಗೆ ಪಾಲಿಥಿನ ಸಿಮೆಂಟಿನ ಚೀಲಗಳಲ್ಲಿಯೇ ಮಣ್ಣು, ಕೊಟ್ಟಿಗೆ ಗೊಬ್ಬರದ ಮಿಶ್ರಣ ತುಂಬಿ ಅದರಲ್ಲಿ ಒಂದೊಂದೇ ಬೀಜಗಳನ್ನು ಬಿತ್ತಿ ನೆರಳಿನಲ್ಲಿಟ್ಟು ಪೊರೆಯುವುದು ಸಾಮಾನ್ಯವಾಗಿದೆ. ಬೆಳೆಗಳಿಗನುಗುಣವಾಗಿ ಪಾಲಿಥೀನ್ ಚೀಲಗಳ ಗಾತ್ರ ಇರುತ್ತದೆ. ಬೆಳೆಗಳಿಗನುಸಾರವಾಗಿ ಅದರಲ್ಲಿ ಮರಳು

ತೆಂಗಿನ ನಾರಿನ ಪುಡಿ ಇತ್ಯಾದಿಗಳನ್ನು ಬಳಕೆ ಮಾಡುತ್ತಾರೆ.

ನಾಟಿ :- ಯಾವುದೇ ಬೆಳೆಗಳ ಬೇಸಾಯಕ್ಕೆ ಬೇಕಾದ ಸಸಿಗಳನ್ನು ಅಥವಾ ಸಸ್ಯ ಭಾಗಗಳನ್ನು ಮುಖ್ಯ ಬೆಳೆ ಕ್ಷೇತ್ರದಲ್ಲಿ ನೆಡುವ ಚಟುವಟಿಕೆಯೇ ನಾಟಿ. ಇದರಲ್ಲಿ ಸಸಿನಾಟಿ, ಬಳ್ಳಿನಾಟಿ, ಗೆಲ್ಲುನಾಟಿ, ಕಾಂಡ ನಾಟಿ, ಕುಂದು ನಾಟಿ, ಕಸಿ ಗಿಡಗಳ ನಾಟಿ ಇವೇ ಮೊದಲಾದ ಕ್ರಮಗಳಿವೆ. ಕ್ರಮ ಯಾವುದೇ ಇರಲಿ ನಾಟಿ ಕಾರ್ಯದಲ್ಲಿ ಜವಾಬ್ದಾರಿಯುತ ನೆಲೆಯಲ್ಲಿ ದುಡಿಯುವವಳು ಹೆಣ್ಣು. ಬೇಸಾಯದಲ್ಲಿ ನಾಟಿಯ ಜಾಣ್ಮೆ, ಕೌಶಲ್ಯ ಅಳತೆಯ ಮಾನಗಳು ಸ್ವಭಾವ ಸಹಜವೇನೋ ಎಂಬಂತೆ ದುಡಿಯುತ್ತಾರೆ. ಬಿಸಿಲು- ಮಳೆ ಗಾಳಿಗಳೆನ್ನದೇ ಹೊಲ-ತೋಟಗಳಲ್ಲಿ ಸೊಂಟ ಬಾಗಿಸಿ, ಮೈ ಬಗ್ಗಿಸಿ, ಕುಕ್ಕುರು ಗಾಲಲ್ಲಿ ಕುಳಿತು ತಮ್ಮ ಎರಡೂ ಕೈಗಳನ್ನು ಬಳಸಿಕೊಂಡು ಶ್ರಮವಹಿಸಿ ದುಡಿಯುತ್ತಾರೆ. ಬೆಳೆ ಬೆಳೆಯಬೇಕು ಎಂಬ ಏಕೈಕ ಧೋರಣೆಯಿಂದ ಈ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸುತ್ತಾರೆ. ಭತ್ತದ ಬೆಳೆಯ ಸಸಿಗಳಾದ ನೇಜಿ ನಾಟಿಗೆ ಹೆಣ್ಣು ಮಕ್ಕಳೇ ಅವಶ್ಯ. ಭತ್ತವನ್ನು ಬಿತ್ತಿ ಮೂವತ್ತು ದಿನಗಳ ಒಳಗೆ ನಾಟಿ ಮಾಡಿದರೆ ಬರುವ ಫಸಲು ಸೊಗಸಾಗಿ ಲಭಿಸುತ್ತದೆ.

ಕರಾವಳಿಯಲ್ಲಿ ಎರಡು ರೀತಿಯ ಭತ್ತದ ನೇಜಿಯನ್ನು ಹಾಕುತ್ತಾರೆ. 1. ಪೊಡಿ ನೇಜಿ 2. ನೀರ್ ನೇಜಿ

ಪೊಡಿ ನೇಜಿ :- ಕೃಷಿ ಚಟುವಟಿಕೆ ಆರಂಭವಾಗುವ ಪಗ್ಗುವಿನಲ್ಲಿ ಹದಿನೆಂಟು ಹೋಗುವ ದಿನ ಭೂಮಿಗೆ 'ಪುಂಡಿ ಬಿತ್ತ್' ಹಾಕಿ ಕೆಲಸದ ಶುಭಾರಂಭ ಮಾಡುತ್ತಾರೆ. ಪತ್ತನಾಜೆಯ ದಿನ ಮಳೆ ಸುರಿದು ಭೂಮಿಯಲ್ಲಿ ನೀರಾಗುತ್ತದೆ. ಈ ನೀರಾಗುವ ಮುನ್ನವೇ ಹುಡಿ ಮಣ್ಣಿಗೆ ಉತ್ತು ಮಳೆಯ ಪೂರ್ವ ಸೂಚನೆ ಗಮನಿಸಿ ಬಿತ್ತನೆ ಮಾಡುತ್ತಾರೆ. ಪಗ್ಗುವಿನಲ್ಲಿ ಹದಿನೆಂಟು ಹೋಗುವ ದಿನ ಕಳೆದ ಮೇಲೆ ಬಿತ್ತಿದ ಬೀಜ ಮೊದಲ ಮಳೆಗೆ ಸಸಿಯಾಗುತ್ತದೆ. ಸಸಿಯಾದ ಈ ನೇಜಿಗೆ ಮೂವತ್ತು ದಿನ ಕಳೆದ ತಕ್ಷಣ ನೇಜಿ ತೆಗೆದು ನಾಟಿಯಾಗಬೇಕು. ಬಿತ್ತಿದ ನೇಜಿಯನ್ನು ಸಸಿ ಮಡಿಯಲ್ಲಿ ಹಾಗೇ ಬಿಟ್ಟರೆ ಅದು ಗಂಟಾಗುತ್ತದೆ. ಹೀಗೆ ಗಂಟಾದ ನೇಜಿ ನೆಟ್ಟರೂ ಏನೂ ಒಳ್ಳೆಯ ಫಸಲು ಬರುವುದಿಲ್ಲ.

ಈ ಪೊಡಿ ನೇಜಿಯನ್ನು ತೆಗೆಯುವುದು ಬಹಳ ಕಷ್ಟ. ಕೇವಲ ಒಂದೇ ಕೈಯಿಂದ ತೆಗೆಯಲಾಗುವುದಿಲ್ಲ. ಬುಡ ತುಂಡಾಗದಂತೆ ಎರಡೂ ಕೈಗಳನ್ನು ಬಳಸುವ ಕೌಶಲ್ಯ ತಿಳಿದಿರಬೇಕು. ಎಡಗೈಯಲ್ಲಿ ಬುಡವನ್ನು ಹಿಡಿದು ಬಲಗೈಯಿಂದ ಅದರ ತುದಿಯನ್ನು ಹಿಡಿದು ನಾಜೂಕಿನಿಂದೆಳೆಯಬೇಕು. ಹೀಗೆ ಎಳೆಯುವಾಗ ನೇಜಿಯೊಂದಿಗೆ ಮಣ್ಣು ಬರುತ್ತದೆ. ಅದನ್ನು ನೀರಲ್ಲಿ ತೊಳೆಯಬೇಕು. ತುದಿಯ ಪೈರು ಹರಿತವಾಗಿರುವುದರಿಂದ ಅಂಗೈಯ್ಯಲ್ಲಿ ಹಿಡಿದಾಗ ಕತ್ತಿಯಿಂದ ಕತ್ತರಿಸಿದಂತಾಗುತ್ತದೆ. ಹರಿತವಾದ ಕೋಳಿ ಬಾಳನ್ನು ಎಳೆದರೆ ಎಷ್ಟು ಸೀಳು ಗಾಯವಾಗುತ್ತದೋ ಹಾಗೆ ಸೀಳಿಕೊಳ್ಳುತ್ತದೆ. ಬೆರಳುಗಳಿಗೆ ಗಾಯವಾದಾಗ ಬಟ್ಟೆ ಸುತ್ತಿಕೊಂಡು ಉರಿಯುವ ನೋವಿನಿಂದ ರಕ್ಷಣೆ ಮಾಡಿಕೊಂಡು ನೇಜಿಯನ್ನು ಕಷ್ಟಪಟ್ಟಾದರೂ ತೆಗೆಯುತ್ತಾರೆ. ಈ ರೀತಿಯ ನೇಜಿಯನ್ನು ಸಾಮಾನ್ಯ ಬೈಲು ಗದ್ದೆಗಳಲ್ಲಿ ನಾಟಿ ಮಾಡುತ್ತಾರೆ. ಪೈರು ಅದರ ದಂಟು ಗಟ್ಟಿಯಾಗಿರುತ್ತದೆ. ನೀರಿಗೆ ಅಡ್ಡ ಬಿದ್ದರೂ ಕೊಳೆತು ಹೋಗುವುದಿಲ್ಲ. ಅಲ್ಲದೆ ಹೆಚ್ಚಾಗಿ ನೇರವಾಗಿಯೇ ನಿಲ್ಲುತ್ತದೆ.

ಇದರಿಂದ ಸಿಗುವ ಇಳುವರಿಯ ಫಸಲು ಕೂಡಾ ಹೆಚ್ಚು. ತೆನೆ ಎಳೆದು ಬರುತ್ತದೆ ಎಂಬ ವಿಶ್ವಾಸ ರೈತಾಪಿ ವರ್ಗದು. ಇದು ಎಣೆಲು ಬೆಳೆಗೆ ಮಾತ್ರ ಬಳಕೆಯಾಗುತ್ತದೆ. ಎಲ್ಲಾ ರೀತಿಯ ಗದ್ದೆಗಳ ನಾಟಿಗೂ ಇದು ಅವಶ್ಯ.

ನೀರು ನೇಜಿ :– ಎಣೆಲು ಸುಗ್ಗಿ ಕೊಳಕೆ ಬೆಳೆಗಳಲ್ಲಿ ನೀರ್ ನೇಜಿ ಬಳಕೆ ಸಾಮಾನ್ಯವಾಗಿದೆ. ಹೆಚ್ಚು ಬಳಕೆಯಾಗುವುದು ಬೈಲು ಮಜಲು ಗದ್ದೆಗಳಲ್ಲಿ ನೀರಿಗೆ ಗದ್ದೆಯನ್ನು ಉತ್ತು ನೇಜಿ ಬಿತ್ತನೆ ಮಾಡಲಾಗುತ್ತದೆ. ಮೂವತ್ತು ದಿನದ ಒಳಗೆ ತೆಗೆದು ಇದನ್ನು ನಾಟಿ ಮಾಡಬೇಕು. ದಿನ ಕಳೆದು ನಾಟಿಯಾದರೆ ಫಸಲು ಬರುವುದಿಲ್ಲ. ಮತ್ತು ಗದ್ದೆಯಲ್ಲಿ ನೀರು ಯಾವತ್ತು ಬತ್ತಬಾರದು. ನೀರು ನೇಜಿಯ ಬೆಳೆಗೆ ನೀರು ಹೆಚ್ಚು. ಸಾಮಾನ್ಯವಾಗಿ ಬೈಲು ಗದ್ದೆಯ ಮೂಲೆಗಳಲ್ಲಿ ನೀರು ನೇಜಿ ಹಾಕಿ ಆಮೇಲೆ ಅದೇ ಗದ್ದೆಯೊಂದಿಗೆ ಉತ್ತು ನಾಟಿ ಮಾಡಿ ಉಳಿದ ನೇಜಿಯನ್ನು ಇನ್ನುಳಿದ ಗದ್ದೆಗಳಲ್ಲಿ ನಾಟಿ ಮಾಡುತ್ತಾರೆ.

ಈ ನೇಜಿಯನ್ನು ನಿರ್ವಹಣೆ ಮಾಡುವ ಕ್ರಮವೂ ಸೊಗಸಾಗಿದೆ. ತೆಗೆದ ನೇಜಿಯು ಕೈಮುಷ್ಠಿಯಲ್ಲಿ ಎರಡು–ಎರಡುವರೆ ಮುಷ್ಠಿ ಆದಾಗ ನೇಜಿಯಿಂದಲೇ ಸೂಡಿ ಕಟ್ಟುತ್ತಾರೆ. ಹೂವಿನ ಗುಚ್ಚದಂತೆ ಅರಳಿ ನಿಲ್ಲುವ ಈ ನೇಜಿಯ ಹಿಂಡನ್ನು 'ಸೂಡಿ' ಎನ್ನುತ್ತಾರೆ. ಹೀಗೆ ಸೂಡಿ ಕಟ್ಟುವ ಕ್ರಮವೂ ಕೌಶಲ್ಯ ಮತ್ತು ಜಾಣ್ಮೆಯನ್ನು ನಿರೂಪಿಸುವಂತಹುದು. ಈಗ ಪೊಡಿ, ನೇಜಿ ನೀರ್ ನೇಜಿಗಳಿಗಿಂತ ಮನೆಯಂಗಳದಲ್ಲಿ ಹಾಕುವ ಚಾಪೆ ನೇಜಿ ಬಳಕೆಯಾಗುತ್ತದೆ. ಯಂತ್ರಗಳಿಂದ ನಡೆಸುವ ನಾಟಿಗೆ ಚಾಪೆ ನೇಜಿಯೇ ಸೂಕ್ತ. ನೇಜಿಯ ಕೆಲಸ ಬೆಳಗ್ಗಿನಿಂದ ಸಂಜೆವರೆಗೆ ಬೆನ್ನು ಬಾಗಿಸಿ ಮಾಡುವ ಕೆಲಸವಿದು. ಸೂಡಿ ಕಟ್ಟುವಾಗ ಮಾತ್ರ ಬೆನ್ನ ನೇರವಾಗಿಸಿ ನಿಲ್ಲುತ್ತಾರೆ. ಹೀಗೆ ತೆಗೆಯುವ ನೇಜಿಯನ್ನು ಸೂಡಿಗಳ ಲೆಕ್ಕದಲ್ಲಿ 'ಸಲಯಿ' ಎನ್ನುತ್ತಾರೆ. ಒಂದು ನೂರು ಸೂಡಿಯಾದರೆ ಒಂಜಿ ಸಲಯಿ, ರಡ್ಡ್ ಸಲಯಿ ಎಂದು ಲೆಕ್ಕ ಹಾಕುತ್ತಾರೆ. ಸಾಮಾನ್ಯವಾಗಿ ಒಂದು ಹೆಣ್ಣಾಳು ದಿನದಲ್ಲಿ ಅರ್ಧ ಸಲಯಿ(ಐವತ್ತು ಸೂಡಿ) ಯಷ್ಟಾದರೂ ನೇಜಿ ತೆಗೆಯಬೇಕು. ನೀರು ನೇಜಿಯಲ್ಲಿ ಇದು ಸುಲಭ ಸಾಧ್ಯ. ಪೊಡಿ ನೇಜಿಯಲ್ಲಿ ನೇಜಿ ತೆಗೆಯುವ ಕೆಲಸ ಸುಲಭದಲ್ಲಿ ಸಾಗುವುದಿಲ್ಲ.

ನೇಜಿಯನ್ನು ನಾಟಿ ಮಾಡುವಾಗಲೂ ಅದಕ್ಕೊಂದು ಕ್ರಮವಿದೆ. ನೇಜಿ ನೆಡುವಾಗ ಕಟ್ಟಿದ ಸೂಡಿಯನ್ನು ಬಿಚ್ಚಿ ಅರ್ಧ ಮಾಡಲಾಗುತ್ತದೆ. ಅರ್ಧ ಬಿಚ್ಚಿದ ನೇಜಿಯನ್ನು 'ಅರಿ' ಎನ್ನುತ್ತಾರೆ. ಹೀಗೆ ಬಿಚ್ಚಿದ ಅರಿಯಿಂದ ಮೂರು ಇಲ್ಲವೆ ನಾಲ್ಕು ದಂಟು ಅಥವಾ ಬಲಿಷ್ಠವಾಗಿರುವ ಒಂದು ಎರಡು ದಂಟನ್ನು ಹಿಡಿದು ನಾಟಿ ಮಾಡುತ್ತಾರೆ. ಹೀಗೆ ಹಿಡಿಯುವ ದಂಟುಗಳನ್ನು 'ಪತ್ತು' ಎನ್ನುತ್ತಾರೆ. ನಾಟಿ ಮಾಡುವ ಸೂಕ್ಷ್ಮತೆಯನ್ನು ಗಮನಿಸಬಹುದು. ಎಡಗೈಯ್ಯಲ್ಲಿ ಹಿಡಿದ ನೇಜಿಯ 'ಅರಿ'ಯನ್ನು ಹೆಬ್ಬೆರಳ ಮತ್ತು ತೋರುಬೆರಳಿನಿಂದ ಮುಂದಕ್ಕೆ ಸರಿಸುತ್ತಾರೆ. ಅದನ್ನು ಬಲಗೈಯಿಂದ ತೆಗೆದು ತೋರು ಬೆರಳು ಮತ್ತು ಹೆಬ್ಬೆರಳಿನ ಸಹಾಯದಿಂದ ಗದ್ದೆಯಲ್ಲಿ ಊರುತ್ತಾರೆ. ಹೀಗೆ ಕಣ್ಣು ಕಣ್ಣಿಗೆ 'ಪತ್ತ್' ವನ್ನು ನಾಟಿ ಮಾಡುವುದು ಒಂದು ಜಾಣ್ಮೆಯೇ ಸರಿ. ದೇಹ ಬಾಗಿದಾಗ ಕೈಯ ಅಳತೆಗೆ ನಿಲುಕುವಷ್ಟು ಅಗಲಕ್ಕೆ ನಾಟಿಯ 'ನಿರೆ' ಹಿಡಿದು ಮುಂದಕ್ಕೆ ಸಾಗಲಾಗುತ್ತದೆ. ಬಲಗೈಯ್ಯಲ್ಲಿ ನಾಟಿ ಮಾಡುತ್ತಾ ಎಡಗೈಯ ಬೆರಳುಗಳಿಂದ ಸರಿಸಿಕೊಳ್ಳುತ್ತ ನೆಟ್ಟಂತೆ ಕಾಲನ್ನು ಹಿಂದಿಡುತ್ತಾ ಸಾಗಬೇಕು. ಹೀಗೆ ನಡೆಯುವಾಗ ಮುಂದಿನ ನಾಟಿಯನ್ನು ಗಮನಿಸಬೇಕು. ನೇಜಿಯನ್ನು ಗದ್ದೆಯ ಕೆಸರು ಮಣ್ಣಿನಲ್ಲೂ ಊರುವ ನಾಟಿಯಲ್ಲೂ

ಎರಡು ವಿಧವಿದೆ. ಹೆಬ್ಬೆರಳಿನಿಂದ ಊರಿ ನಾಟಿ ಮಾಡುವುದು ಒಂದು ಕ್ರಮವಾದರೆ, ತೋರು ಬೆರಳು ಮತ್ತು ಮಧ್ಯದ ಬೆರಳನ್ನು ಊರಿ ನಾಟಿ ಮಾಡುವುದು ಇನ್ನೊಂದು ಕ್ರಮ. ಮರಳು ತುಂಬಿದ ನದಿ ಸಾಲಿನ ಪಟ್ಲ ಗದ್ದೆಗಳಲ್ಲಿ ಹೆಬ್ಬೆರಳು ಊರಿ ನಾಟಿ ಮಾಡಲಾಗುತ್ತದೆ. ಉಳಿದಂತೆ ಅಂಟು ಮಣ್ಣಿರುವ ಗದ್ದೆಗಳಲ್ಲಿ ತೋರು ಬೆರಳು ಮತ್ತು ಮಧ್ಯದ ಬೆರಳನ್ನು ಊರಿ ನಾಟಿ ಮಾಡಲಾಗುತ್ತದೆ. ಹೀಗೆ ನಾಟಿ ಮಾಡುತ್ತಾ ಕಾಲನ್ನು ಹಿಂದಕ್ಕಿಡುತ್ತಾ ನಾಟಿಯ ಕಾರ್ಯ ಮುಂದುವರಿಯುತ್ತದೆ. ನೇಜಿ ತೆಗೆಯುವಾಗ ಇಲ್ಲವೆ ನಾಟಿ ಮಾಡುವಾಗ ಎಲ್ಲರೂ ಒಂದೇ ಅಳತೆಯಲ್ಲಿ ನಾಟಿ ಮಾಡುತ್ತಾ ಸಾಗುತ್ತಿರುತ್ತಾರೆ. ಯಾರಾದರೊಬ್ಬರು ಹಿಂದುಳಿದರೆ ಅವರನ್ನು 'ಗುರಿ' ಯಲ್ಲಿ ಬಿದ್ದವರು ಎನ್ನುತ್ತಾರೆ. ತೀರಾ ಮುಂದೆ ಸಾಗಿದರೆ 'ನಿರ್ಸಾನಿ' ಹಾರಿಸಿದಳು ಎನ್ನುತ್ತಾರೆ. ದುಡಿಮೆಯಲ್ಲೂ ಸಮತೂಕ ಕಂಡುಕೊಳ್ಳುವುದು ತೀರಾ ಅವಶ್ಯ. ಕಣ್ಣಳತೆ ಮತ್ತು ಕೈಯಳತೆಯ ಲೆಕ್ಕಚಾರದಲ್ಲಿ ಸಾಗುವ ನಾಟಿಯ ಕಾರ್ಯಕ್ಕೂ ಒಂದು ಲಯವಿದೆ. ಹಾಗಾಗಿ ಅವರು ಹಾಡುವ ಕಬಿತಕ್ಕೂ ಕೆಲಸಕ್ಕೂ ಪರಸ್ಪರ ಸಂಬಂಧವಿದೆ. ನೇಜಿ ತೆಗೆಯುವಾಗ ಹಾಡುವ ಸಂಧಿ ಹೆಚ್ಚಿನ ಶ್ರಮವನ್ನು ಬಯಸುವುದರೊಂದಿಗೆ ಕೆಲಸವೂ ಶ್ರಮದಾಯಕವಾದುದು. ಶ್ರಮವನ್ನು ಮರೆಯಲು ಹಾಡುವ ಕಥನ ಹೆಚ್ಚು ವಿಸ್ತೃತವಾಗುತ್ತ ಹೋಗುತ್ತದೆ. ನಾಟಿಯಾದ ಮೇಲೆ ನೀರು ನೇಜಿಯ ಬುಡದಲ್ಲಿ ನೀರು ಬತ್ತಬಾರದು. ನಾಟಿ ಮುಳುಗಲೂ ಬಾರದು. ಮುಳುಗಿದರೆ ಕೊಳೆಯುತ್ತದೆ. ನೀರು ಬತ್ತಿದರೆ ಸಾಯುತ್ತದೆ. ನಾಟಿ ಮಾಡುವಾಗಲೂ ನೇಜಿಯ ಬುಡವನ್ನು ಮುರಿದು ನಾಟಿ ಮಾಡಿದರೆ ಏನೂ ಪ್ರಯೋಜನವಿಲ್ಲ. ಆ ನೇಜಿ ಜೀವ ಹಿಡಿಯುವುದಿಲ್ಲ. ಕಣ್ಣಳತೆಯ ಲೆಕ್ಕಾಚಾರ, ಕೈಯಳತೆಯ ಸೂಕ್ಷ್ಮ ಬೇಕು. ನೇಜಿ ಊರಿ ಬಿಡುವ ಚಾಕ ಚಕ್ಯತೆ ಇವೆಲ್ಲವೂ ಬಹಳ ಮುಖ್ಯವಾಗುತ್ತದೆ.

4.ನೀರಾವರಿ :- ನೀರು ಇದ್ದರೆ ಬೆಳೆ , ಬೆಳೆ ಇರಬೇಕಾದರೆ ನೀರು ಎಂಬಂತೆ ಅವೆರಡೂ ಪರ್ಯಾಯ ಪದಗಳಾಗಿ ಬಳಕೆಯಾಗಿವೆ. ಕೃಷಿಕರ ಚಿತ್ರದ ಕಲ್ಪನೆ ಮಾಡಿಕೊಂಡರೆ ಆಕಾಶಕ್ಕೆ ಮುಖ ಮಾಡಿ ನಿಂತು ಕೈ ಮಾಡಿ ಬಾನಿನ ಮೋಡಗಳನ್ನು ಊಹಿಸಿ ಭೂಮಿಯ ಬಿತ್ತನೆ ಉಳುಮೆಯನ್ನು ನಿರ್ಧರಿಸುವ ಜ್ಞಾನ ನಮ್ಮ ರೈಪಾಪಿ ವರ್ಗದ್ದು. ಸುಡುವ ಬಿಸಿಲು, ಬೀಸುವ ಗಾಳಿ ಬರಬಹುದಾದ ಮಳೆಯ ನಿರೀಕ್ಷೆಯೊಂದಿಗೆ ನೀರಾವರಿಯ ಅವಶ್ಯಕತೆಯು ಬೆಳೆಯುವ ಫಲವತ್ತಾದ ಬೆಳೆಗಳಿಗೆ ಅತ್ಯಗತ್ಯ ಎಂಬ ಸತ್ಯವನ್ನು ಸಾರಿ ಹೇಳುತ್ತಿತ್ತು. ಲೋಕವೆಲ್ಲವೂ ನೀರಾಗಿದ್ದು, ಭೂಮಿ ಹುಟ್ಟಿ ಜೀವಜಾಲದ ಸೃಷ್ಟಿಯ ಕತೆಯನ್ನು ಹೇಳುವಂತೆ ಜೀವಜಾಲದ ಉಳಿವಿಗೆ ನೀರಿನ ಅನಿವಾರ್ಯತೆ ಮತ್ತು ಅಗತ್ಯತೆಯನ್ನು ಒತ್ತು ಕೊಟ್ಟು ನಿರೂಪಿಸುತ್ತದೆ. ಹರಿಯುವುದು ನೀರಿನ ಗುಣ. ಈ ಹರಿಯುವಿಕೆಯಿಂದಲೇ ಭೂಮಿಯ ಒಡಲ ತುಂಬ ಹಸಿರನ್ನು ಅದು ಬೆಳೆಸುತ್ತಿದೆ. ಓಡುವ ನೀರನ್ನು ಹರಿವಂತೆ ಮಾಡಿ ಹರಿವ ನೀರನ್ನು ನಿಲ್ಲುವಂತೆ ಮಾಡಿ, ನಿಂತ ನೀರನ್ನು ಕಂತುವಂತೆ ಮಾಡಿ, ಕಂತಿದ ನೀರು ಅಂತರ್ಜಲವಾಗಿ ಒಳಹರಿವಿನ ನೀರಾಗಿ ಪರಿವರ್ತಿಸುತ್ತ ನೀರು ಮುಂದಿನ ಕಾಲಕ್ಕೂ ಉಳಿಯುವ, ಒಸರುವಂತೆ ಮಾಡುವ ಜ್ಞಾನ ಕೃಷಿಕರಿಗಿದೆ. ಯಾವ ಅಕ್ಷರ ಜ್ಞಾನವಿಲ್ಲದಿದ್ದರೂ ಲೋಕಜ್ಞಾನದ ತಿಳುವಳಿಕೆಯಿಂದ ನಮ್ಮ ಹಿರಿಯರು ನಿರಂತರವಾಗಿ ಈ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದಾರೆ. 'ಕೆರೆಯಂ ಕಟ್ಟಿಸು ಬಾವಿಯಂ ತೋಡಿಸು' ಎಂದು ಪ್ರಾಜ್ಞರು ನುಡಿದಿರುವುದು ಇದನ್ನೇ ಆಗಿದೆ.

ನೀರಿನ ಶಕ್ತಿ , ಸಾಮರ್ಥ್ಯಗಳ ಅರಿವಿದ್ದ ಅವರೆಲ್ಲ ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ತಮ್ಮ ಅನುಭವಗಳಿಂದಲೇ ತಿಳಿದುಕೊಂಡರು. ನೀರೊಡ್ಡುವ , ನೀರು ಹಾಯಿಸುವ, ಚಿಮುಕಿಸುವ ಎಲ್ಲಾ ಪ್ರಕ್ರಿಯೆಗಳಿಂದಲೂ ನೆಲವನ್ನು ತಂಪಾಗಿಸಿ ತಾಪಮಾನವನ್ನು ಕಾಯುವುದರೊಂದಿಗೆ ಬೆಳೆದ ಬೆಳೆಗಳಲ್ಲಿ ಫಸಲನ್ನೂ ಏಕಕಾಲಕ್ಕೆ ಪಡೆದರು. ಕೃಷಿ ಜಗತ್ತು ನಿಂತಿರುವುದೇ ನೀರಾವರಿಯ ಒಳ ಮರ್ಮದಿಂದ, ಕೃಷಿ ಸಂಸ್ಕೃತಿಯಲ್ಲಿ ನೀರಾವರಿಯು ಬಹಳ ಮುಖ್ಯ. ಬೆಳೆಗಳಿಗೆ ಯಾವ ರೀತಿಯ ನೀರುಣಿಸುವಿಕೆ ಅಗತ್ಯ ಎನ್ನುವ ಜ್ಞಾನ ಸರಿಯಾಗಿ ತಿಳಿಯದೆ ಇದ್ದರೆ ಯೋಗ್ಯ ಫಸಲನ್ನು ಪಡೆಯಲು ಸಾಧ್ಯವಿಲ್ಲ. ನೀರಿನ ನಿರಂತರತೆ ಮತ್ತು ಅದರ ಅವಶ್ಯಕತೆಯನ್ನು ಮನಗಾಣುವುದು ಒಂದು ಜ್ಞಾನಕೋಶ. ಈ ಅರಿವು ಕೃಷಿ ಸಂಸ್ಕೃತಿಯ ರೂವಾರಿಗಳಾದ ಸ್ತ್ರೀಯರಿಗಿದೆ. ಮನೆಯ ಅಡುಗೆಯ ಅವಶ್ಯಕತೆಗಳಿಗಾಗಿ ಬೇಕಾಗುವ ತರಕಾರಿಗಳನ್ನು ಅವರು ತಮ್ಮ ಹಿತ್ತಲು, ಕೈ ತೋಟಗಳಲ್ಲಿ ಬೆಳೆಯುತ್ತಾರೆ. ಅಡುಗೆ ಕೋಣೆಯ ಒಳಗಡೆ ಬಳಸಿ ಚೆಲ್ಲುವ ನೀರನ್ನು ವ್ಯರ್ಥವಾಗದಂತೆ ಬಳಸುವ ಜಾಣ್ಮೆ ಅವರದು. ಗುಡ್ಡ ಕಾಡಿನ ಬದುಗಳಲ್ಲಿ ಇರುವ ಮನೆಗಳಲ್ಲಿ ಹಿತ್ತಲ ಬಾಗಿಲಿಗೇ ಹರಿದು ಬರುವ ನೀರನ್ನು ಮನೆಯ ಕೆಲಸಗಳಿಗಾಗಿ ಬಳಸಿಕೊಂಡು, ಅದರ ಬುಡದಲ್ಲಿಯೇ ಒಂದೆರಡು ಗಿಡ ನೆಟ್ಟು ಫಸಲು ಪಡೆಯುವ ಸಮಯೋಚಿತ ಜಾಣ್ಮೆ ಮತ್ತು ಶ್ರಮ ಉಳಿತಾಯದ ಅರಿವು ಅವರಿಗಿತ್ತು. ಕುಟುಂಬದ ಅಗತ್ಯಗಳಿಗೆ ತಕ್ಕಂತೆ ಪ್ರತಿಗಳಿಗೆಯೂ ಯೋಚಿಸಿ ನಿರ್ವಹಿಸುವ ಕಾರ್ಯ ವಿಧಾನ ಇವರದಾಗಿದೆ.

ಬೆಳೆಯನ್ನು ಬೆಳೆಸಬೇಕಾದ ನೀರಾವರಿ ಕೃಷಿ ವಿಧಾನದಲ್ಲಿ ಎರಡು ವಿಧಗಳನ್ನು ಗುರುತಿಸಬಹುದು.

1. ಸಾಂಪ್ರದಾಯಿಕ ನೀರಾವರಿ.
2. ಆಧುನಿಕ ನೀರಾವರಿ ಪದ್ಧತಿ

ಸಾಂಪ್ರದಾಯಿಕ ನೀರಾವರಿ :- ಸಾಂಪ್ರದಾಯಿಕ ನೀರಾವರಿಯು ಮನುಷ್ಯ ಶ್ರಮವನ್ನು ಬಯಸುವ ಪರಂಪರೆಯಿಂದ ಮುಂದುವರಿದು ಬಂದ ಜ್ಞಾನದ ಕೋಶ. ಗುಡ್ಡ ಅಗೆದು ಬಯಲನ್ನಾಗಿ ಮಾಡಿದ ತೋಟ ಗದ್ದೆಗಳಾಗಿ ನಿರ್ಮಾಣ ಮಾಡುವಾಗ ಕೃಷಿಕರು ನೀರಾವರಿ ವ್ಯವಸ್ಥೆಯ ಬಗ್ಗೆ ಗಮನ ಹರಿಸುತ್ತಿದ್ದರು. ನೀರಿನ ಇರವು-ಹರಿವು ಕುರಿತಾಗಿ ಇದ್ದ ಸಾಂಪ್ರದಾಯಿಕ ಜ್ಞಾನದ ಅರಿವು ಮಹಿಳೆಯರ ಅರಿವಿನ ವಿಸ್ತಾರವನ್ನು ಹೆಚ್ಚಿಸಿತ್ತು. ಸಾಂಪ್ರದಾಯಿಕ ನೀರಾವರಿಯಲ್ಲಿ ಮತ್ತೆ ಎರಡು ವಿಧಗಳನ್ನು ಗುರುತಿಸಬಹುದು.

1. ಮಳೆಯಾಧಾರಿತ ನೀರಾವರಿ ವ್ಯವಸ್ಥೆ
2. ನೀರಿನ ಅಶ್ರಯವನ್ನು ಹೊಂದಿ ನಡೆಸುವ ನೀರಾವರಿ ವ್ಯವಸ್ಥೆ

ಮಳೆಯಾಧಾರಿತ ನೀರಾವರಿ ವ್ಯವಸ್ಥೆ :- ಮಳೆಯ ನೀರಿನ ಹರವನ್ನು ನೀರು ಸಂಗ್ರಹಗೊಂಡ ಮೂಲವನ್ನು ಗುರುತಿಸಿ ಕೃಷಿಗೆ ಬಳಸಿಕೊಳ್ಳುವುದಕ್ಕೂ ಒಂದು ಪೂರ್ವಯೋಜನೆ ಬೇಕಾಗುತ್ತದೆ. ಸಾಮಾನ್ಯ ನೀರು ನಿಲ್ಲುವ ಬೈಲು, ಪಟ್ಲ ಗದ್ದೆಗಳಿಗಿಂತ ಗುಡ್ಡ-ಪಡ್ಪುಗಳನ್ನು ಅಗೆದು ಮಾಡಿದ ಬೆಟ್ಟು ಗದ್ದೆಗಳಿಗೆ ಈ ರೀತಿಯ ನೀರಾವರಿಯ ವ್ಯವಸ್ಥೆ ಇರುತ್ತದೆ. ಹರಿವ ನೀರಿಗಿಂತ ಆಕಾಶದಿಂದ ಸುರಿವ ಮಳೆಯನ್ನೇ ಅಧರಿಸಿ ಬೆಳೆವ ಗದ್ದೆಗಳನ್ನು ಬಾನ 'ಬೆಟ್ಟು'ಗಳೆಂದೇ ಗುರುತಿಸುತ್ತಾರೆ. ಇಲ್ಲಿ ಮಳೆ ಬಂದರೆ ಮಾತ್ರ ಬೆಳೆ.

ಮಳೆಯ ಲೆಕ್ಕಾಚಾರವನ್ನು ಗಮನಿಸಿಯೇ ಈ ಗದ್ದೆಗಳಿಗೆ ನಾಟಿಯೋ ಬಿತ್ತನೆಯೋ ಮಾಡುತ್ತಾರೆ. ಬಿತ್ತನೆ ಸ್ವಲ್ಪ ಸೂಕ್ಷ್ಮ ಎಚ್ಚರವನ್ನು ಬಯಸುವುದರಿಂದ ನಾಟಿ ಮಾಡುವುದೇ ಹೆಚ್ಚು . ಮಳೆ ಬರುವಾಗಲೂ ಒಮ್ಮೆ ಉಳುಮೆ ಮಾಡಿ ಗದ್ದೆಯಲ್ಲಿ ನೀರು ನಿಲ್ಲಿಸಿ ನಾಟಿಯಾದರೆ ನೆಟ್ಟ ನಾಟಿ ಜೀವ ಹಿಡಿಯುವವರೆಗೆ ಗದ್ದೆಯಲ್ಲಿರುವ ನೀರು ಸಾಕೆನಿಸಿದರೂ, ವಾರಕ್ಕೆ ಒಂದೆರಡು ಮಳೆ ಬಂದರೂ ಇದಕ್ಕೆ ಸಾಕಾಗುತ್ತದೆ. ಅಲ್ಲದೆ ನೀರು ಕಡಿಮೆ ಬಯಸುವ ತಳಿಗಳನ್ನೇ ಇಲ್ಲಿ ನಾಟಿ ಮಾಡಲಾಗುತ್ತದೆ. ಹಾಗಾಗಿ ಸುರಿವ ನೀರನ್ನು ಆಧರಿಸಿಯೇ ಈ ಬೆಳೆ ಬೆಳೆಯುತ್ತದೆ.

ತುದಿಗುಡ್ಡಗಳಲ್ಲಿರುವ ಗದ್ದೆಗಳಿಗಿಂತ ಭಿನ್ನವಾಗಿ ಗುಡ್ಡದ ಬದಿಗಳಲ್ಲಿ ಹರಿದು ಬರುವ ನೀರಿನ ಆಸರೆಯ ಬೆಟ್ಟು ಗದ್ದೆಗಳಿಗಿರುತ್ತದೆ. ಈ ಗದ್ದೆಗಳ ವಿನ್ಯಾಸವಾದರೂ ಒಂದು ಗದ್ದೆಯ ನೀರು ಇನ್ನೊಂದು ಗದ್ದೆಗೆ ಹರಿದು ಬರುವಂತೆ ಮೇಲಿನಿಂದ ಕೆಳಗೆ ನೀರು ಹರಿಯುತ್ತಾ ಇರುತ್ತದೆ. ಮೇಲಿನ ಗದ್ದೆಯಲ್ಲಿ ನೀರು ತುಂಬಿದಾಗ ಆ ಗದ್ದೆಗೆ ಅವಶ್ಯವಿರುವಷ್ಟು ನೀರಿಗೆ 'ಕಡಿಕಟ್ಟಿ' ಕೆಳಗದ್ದೆಗೆ ಹಾಯಿಸುತ್ತಾರೆ.ಇದನ್ನು 'ಮೇಲ್‌ಕಡಿ' ಕಟ್ಟುವುದು ಎನ್ನುತ್ತಾರೆ. ಇರುವ ಹರಿವ ನೀರನ್ನೇ ಹಿತವಾಗಿ ಮಿತವಾಗಿ ಬಳಸಿಕೊಳ್ಳುವ ಪರಿಯಿದು. ಗುಡ್ಡದಿಂದ ಹರಿದು ಬರುವ ನೀರೆಲ್ಲವನ್ನು ಗದ್ದೆಗೆ ಹಾಯಿಸುವ ಕ್ರಮವಿಲ್ಲ. ಹಾಗೆ ಹಾಯಿಸಿದರೆ ಬೆಳೆಯೂ ಉಳಿಯುವುದಿಲ್ಲ. ಗದ್ದೆಯೂ ನಾಶವಾಗುತ್ತದೆ. ಬದಲಿಗೆ ಎಷ್ಟು ಅವಶ್ಯವಿದೆಯೋ ಅಷ್ಟು ನೀರನ್ನು ಹಾಯಿಸಿ ಬೆಳೆಯನ್ನು ಬೆಳೆಯಲು ಪ್ರಯತ್ನಿಸುತ್ತಾರೆ.

ಗುಡ್ಡದ ಬದಿಯಲ್ಲಿರುವ ಗದ್ದೆಗಳಿಗೆ ದೂರದ ನೀರ ಸೆಲೆಗಳಿಂದ ಎಲ್ಲೆಲ್ಲೋ ಓಡುವ ನೀರನ್ನು ಕಾಲುವೆಗಳ ಮೂಲಕ ಗದ್ದೆಗಳಿಗೆ ಹಾಯಿಸಲಾಗುತ್ತದೆ. ಎರಡು ಮೈಲು ಮೂರು ಮೈಲು ದೂರಕ್ಕೂ ಕಾಲುವೆಗಳನ್ನು ಕಟ್ಟಿ ನೀರನ್ನು ಹಾಯಿಸುತ್ತಾರೆ. ಕಾಲುವೆಯ ನಿರ್ಮಾಣಕ್ಕೆ ಹೆಗಲಾಗಿ ಹೆಣ್ಣು ಮಕ್ಕಳು ಕಾರ್ಯನಿರ್ವಹಿಸುತ್ತಾರೆ. ಎಂಟು ಹತ್ತು ಜನರು ಮುಂಜಾನೆ ತೆರಳಿ ಸಂಜೆ ಮರಳುವಾಗ ಅವರ ಜತೆಗೇನೇ ನೀರು ಹರಿದು ಬರುತ್ತದೆ. ನೀರ ಮೂಲದಿಂದ ನಿರಂತರವಾಗಿ ಹರಿಯುವ ನೀರನ್ನು ಒಂದು ಗದ್ದೆಯಿಂದ ಇನ್ನೊಂದು ಗದ್ದೆಗೆ ಹರಿಸುತ್ತ ನೀರಿನ ಉಳಿತಾಯವೂ ಆಗುತ್ತದೆ. ಗದ್ದೆಯಲ್ಲಿ ನಿಂತ ನೀರನ್ನು ಒಂದರಿಂದ ಇನ್ನೊಂದಕ್ಕೆ ಹಾಯಿಸುವುದರಿಂದ ಗದ್ದೆ ಒಣಗುವುದೂ ಇಲ್ಲ. ಬೆಳೆಯೂ ಚೆನ್ನಾಗಿ ಬರುತ್ತದೆ. ಗದ್ದೆ ಎಲ್ಲಿ, ಗದ್ದೆಯ ಬದುವೆಲ್ಲಿ ಅದರ ಕಡಿಯೆಲ್ಲಿ ಎಂದು ತಿಳಿಯದಿದ್ದರೆ ಬೆಳೆ ಕೈಗೆ ಸಿಗುವುದಾದರೂ ಹೇಗೆ?

ದಿನ ನಿತ್ಯ ಹೀಗೆ ಹರಿದು ಬರುತ್ತಿರುವ ನೀರನ್ನು ಒಂದು ಗದ್ದೆಯಿಂದ ಇನ್ನೊಂದು ಗದ್ದೆಗೆ ಹಾಯಿಸಲು ಕಡಿ ಕಟ್ಟಿ ನೀರಿನ ಹರಿವ ದಿಕ್ಕು ಬದಲಾಯಿಸುತ್ತ ನೀರುಣಿಸಲಾಗುತ್ತದೆ. ಬೆಳಿಗ್ಗೆ ಮತ್ತು ಸಂಜೆ ಗದ್ದೆಯ ಬದುಗಳಿಗೆ ತೆರಳಿ ಗದ್ದೆಗೆ ನೀರು ಹರಿದು ಬರುವ ಗದ್ದೆಯ ಹುಣಿಯ 'ಕಡಿ' ಗಟ್ಟಿಯಾಗಿದೆಯೋ ಬಿಚ್ಚಲ್ಪಟ್ಟಿದೆಯೋ ಗದ್ದೆಯಲ್ಲಿ ನೀರಿದೆಯೋ ಇಂಗಿ ಹೋಗಿದೆಯೋ ಎಂಬ ಮೇಲ್ವಿಚಾರಣೆಯ ಅವಶ್ಯಕತೆಯಿದೆ. ಗದ್ದೆ ನಾಟಿಯಾದ ಮೇಲೆ ಗದ್ದೆ ಬದುವಿಗೆ ತೆರಳದೆ ಕಟಾವಿಗೆ ಕತ್ತಿ ಹಿಡಿದು ತೆರಳುವವರು ಯೋಗ್ಯ ಕೃಷಿಕರಲ್ಲ. ತಾನು ಬೆಳೆದ ಪೈರನ್ನು ತನ್ನ ಕರುಳ ಕುಡಿಗಳಂತೆ ಅನುಪಾನ ಮಾಡಿದಾಗ ಮಾತ್ರ ಸರಿಯಾದ ಪ್ರತಿಫಲ ಸಿಗುತ್ತದೆ. ಕೃಷಿಗೆ ತಾಳ್ಮೆ, ಶ್ರಮ, ಶ್ರದ್ಧೆಯೂ ಅವಶ್ಯಕ. ಬೆಳೆ ಬೆಳೆಯುತ್ತಿದ್ದಂತೆ ಗದ್ದೆಯ ಹುಣಿಯಲ್ಲಿ ನೋಡುವಾಗ ಸಿಗುವ ಸುಖ ಮತ್ತು ತೃಪ್ತಿ ರೈತರಿಗೆ ಬೇರೆಲ್ಲೂ ಸಿಗದು.

ನೀರಿನ ಆಶ್ರಯವನ್ನು ಹೊಂದಿ ನಡೆಸುವ ನೀರಾವರಿ ವ್ಯವಸ್ಥೆ :- ಪರಂಪರೆಯ ನೀರಾವರಿಯ ಕೆಲಸ ಬಹಳ ಶ್ರಮವನ್ನು ಬಯಸುತ್ತಿತ್ತು. ಆಳವಾದ ಬಾವಿ ಕೆರೆಗಳಿಂದ ನೀರನ್ನು ಮೇಲೆತ್ತಿ ಮಾನವ ಶ್ರಮದಿಂದಲೇ ಬಳಸಲಾಗುತ್ತಿತ್ತು. ಇದಕ್ಕೆ ದಂಬೆ, ಪನೆ, ಸಂಬೊಳಿಗೆಯಂತಹ ನೀರಾವರಿ ಸಾಧನಗಳನ್ನು ಬಳಸುತ್ತಿದ್ದರು. ಪಾರಂಪರಿಕ ಕೃಷಿಯಲ್ಲಿ ಎಷ್ಟು ಮುಡಿ ಗದ್ದೆಗೆ ಎಷ್ಟು ನೀರು ಹಾಯಿಸಬೇಕು ಎಂಬ ತಿಳುವಳಿಕೆಯೂ ಮುಖ್ಯವಾಗಿತ್ತು. ಸಮನಾಂತರ ಎತ್ತರದಲ್ಲಿರುವ ಮಜಲು, ಬಾಕಿಮಾರು, ಗದ್ದೆಗಳಿಗೆ ಅಲ್ಲೇ ಹತ್ತಿರದಲ್ಲಿರುವ ಕೆರೆಯಿಂದ 'ಒಡ್ಡ ನೀರು' (ಹರಿಯುವ ನೀರು) ಇದ್ದರೆ ಅದನ್ನು ಹಾಯಿಸುತ್ತಿದ್ದರು. ನೀರು ಹಾಗೆ ಹರಿದು ಹೋದಾಗ ಕೆರೆಯಲ್ಲಿ ನಿಂತ ನೀರನ್ನು 'ಕೊಂತ್' ಇಲ್ಲವೆ 'ದಂಬೆ' ಮೂಲಕ ಹಾಯಿಸುತ್ತಿದ್ದರು. ನೀರು ಸೇದುವವರು ಮೊಣಕಾಲ ನೀರಲ್ಲಿ ನಿಂತು ಅವರ ಮುಂಭಾಗದಲ್ಲಿ ಮೂರು ಕಾಲಿನ ಕಂಬವನ್ನು ಹಾಕಿ ಮಧ್ಯ ಭಾಗದ ಕೊಂಡಿಗೆ ದಂಬೆ ಅಥವಾ ಕೊಂತನ್ನು ಸಿಕ್ಕಿಸುತ್ತಿದ್ದರು. ಹಗುರವಾದ ಈಚಲು ಮರದಿಂದ ಮಾಡಿದ ಈ ಕೊಂತಿನ ಹಿಡಿಯಲ್ಲಿ ಬಲಗೈಯನ್ನು ಮುಂದೆ ಎಡಗೈಯನ್ನು ಹಿಂದೆ ಹಿಡಿದು, ಹಿಂದಕ್ಕೆ ಎಳೆದು ನೀರಿನಲ್ಲಿ ಮುಳುಗಿಸಿ ಆ ನೀರನ್ನು ಎತ್ತಿ ಮುಂದಿನ ಕಾಲುವೆಯಲ್ಲಿ ಹಾಯಿಸಿ ಬಿಡುತ್ತಿದ್ದರು. ಹೀಗೆ ಒಂದೆರಡು ಗಂಟೆ ನೀರು ಹಾಯಿಸಿದರೆ ಎರಡು ಕಳಸೆ ಗದ್ದೆಗೆ ನೀರಾಗುತ್ತಿತ್ತು. ಮುಂಜಾನೆ ಮತ್ತು ಮುಸ್ಸಂಜೆ ನಡೆಸುತ್ತಿದ್ದ ಈ ಕೆಲಸ ದಿನದ ಕೆಲಸಕ್ಕೆ ಹೆಚ್ಚುವರಿಯಾಗಿ ಇರುತ್ತಿತ್ತು. ಅಭ್ಯಾಸವಿಲ್ಲದವರಿಗೆ ಕೈಗಳ ಅಂಗೈಯಲ್ಲಿ ಬೊಕ್ಕೆ ಬಂದರೆ ಕಾಲುಗಳು ಚಳಿಗೆ ಮರಗಟ್ಟಿ ಹೋಗುತ್ತಿತ್ತು. ಹಾಗಿದ್ದೂ ಆ ಕೆಲಸಗಳಿಗೆ ಮಾನ್ಯತೆ ಇರಲಿಲ್ಲ. ಸೊಂಟ, ಬೆನ್ನು ಮತ್ತು ಕೈ ಕಾಲುಗಳ ಹೆಚ್ಚಿನ ಶ್ರಮವನ್ನು ಬಯಸುವ ಈ ಕಾಯಕ ಮಾಡುವವರು ಹೆಣ್ಣು ಮಕ್ಕಳೇ ಆಗಿದ್ದಾರೆ.

ಆಳವಾದ ಬಾವಿಗಳಿಂದ ದೊಡ್ಡ ಪ್ರಮಾಣದಲ್ಲಿ ನೀರನ್ನು ಮೇಲೆತ್ತುವ ಸಾಧನವೇ ಪನೆ. ಕೆಳಗಿನ ನೀರನ್ನು ಮೇಲಕ್ಕೆ ಎತ್ತುವ ಈ ತಂತ್ರಜ್ಞಾನ ತುಳುವರ ಲೋಕದೃಷ್ಟಿಗೊಂದು ಪ್ರಮುಖ ನೆಲೆಯಾಗಿದೆ. ನೀರು ತುಂಬಿರುವ ಆಳದ ಬಾವಿಗಳ ಮೇಲೆ ಎರಡು ಬೃಹತ್ ಗಾತ್ರದ 'ದಡೆ ಮರ' ಹಾಕುತ್ತಾರೆ. ಅದಕ್ಕೆ ಆಧಾರವಾಗಿ ಮೂರು ಕಾಲಿನ ಕಂಬವನ್ನು ನಿಲ್ಲಿಸಿ ಮಧ್ಯದ ಕೊಂಡಿಗೆ 'ಮರಯಿ' ಸಿಕ್ಕಿಸುತ್ತಿದ್ದರು. 'ಮರಯಿ' ಎಂದರೆ ತಾಳೆ ಮರದ ಕಾಂಡದಿಂದ ಮಾಡಿದ ವೃತ್ತಾಕಾರದ ಸಾಧನ. ಮರಯಿ ಸಿಕ್ಕಿಸಿದ ಕೊಕ್ಕೆಗೆ ಆಧಾರವಾಗಿ ಉದ್ದವಾದ ಗಟ್ಟಿಯಾದ ಮರದ ದಿಂಡಿನ ಇನ್ನೊಂದು ತುದಿಗೆ ಅಡ್ಡಕೋಲಿನಲ್ಲಿ ಬಿಗಿದು ಕಟ್ಟಿದ 'ಕಡೆಬಲ್ಲ್' ಇರುತ್ತಿತ್ತು.

'ಕಡೆಬಲ್ಲು' ಎಂದರೆ ಬೈಹುಲ್ಲಿಂದ ತಯಾರಿಸಿದ ಎರಡು ಕೈಯ ಮುಷ್ಟಿಯಲ್ಲಿ ಹಿಡಿಯಬಹುದಾದ ಹುರಿಹಗ್ಗ, ಅದರ ತುದಿಗೆ ಒಂದು ದೊಡ್ಡ ಗಂಟು ಹಾಕಿರುತ್ತಾರೆ. ಈ ಪೂರ್ತಿ ವಿನ್ಯಾಸಕ್ಕೆ ಒಟ್ಟಾಗಿ 'ಪನೆ' ಎಂದು ಕರೆಯುತ್ತಾರೆ. ಈ ಪನೆಯಿಂದ ನೀರೆತ್ತಬೇಕಾದರೆ ಬಹಳ ಜಾಣ್ಮೆ ಮತ್ತು ಎಚ್ಚರಿಕೆ ಅತ್ಯವಶ್ಯಕ. ಗಂಡು ಮತ್ತು ಹೆಣ್ಣು ಜತೆಗೂಡಿದ ದುಡಿಮೆಯಿಂದ ಇದು ಸಾಧ್ಯವಾಗುತ್ತಿತ್ತು. ಪನೆಯಿಂದ ನೀರನ್ನು ಮೇಲಕ್ಕೆ ಎತ್ತಬೇಕಾದರೆ ದೊಡ್ಡದಾದ ಮರಯಿ ಬಾವಿಯ ಆಳಕ್ಕೆ ಇಳಿಯಬೇಕು. ದಡೆಮರದ ಮೇಲೆ ನಿಂತು ಅಳ್ತನದ ಗಂಡಸರು ಕಾಲಗಲಿಸಿ ನಿಂತು ವೃತ್ತಾಕಾರದ ಮರಯಿಯನ್ನು ನೀರಿನಲ್ಲಿ ಮುಳುಗಿಸುತ್ತಾರೆ, ನೀರಲ್ಲಿ ಮುಳುಗಿಸಿದ ಮರಯಿಗೆ ಸಮಾಂತರವಾಗಿ ಕಟ್ಟಿದ ಕೋಲಿನ ತುದಿಯ ಕಡೆಬಲ್ಲಿನ ಗಂಟು ಹಿಡಿದ ಹೆಣ್ಣು ಮಕ್ಕಳಿಬ್ಬರು ಗಂಡು 'ಅಬೇಸ್' ಅಂದಾಗ ಬಾವಿಯ ದಂಡೆಯಿಂದ ಆಚೆಗಿರುವ ಕೆಳಗಿನ ಹೊಂಡಕ್ಕೆ ಹಿಂದಕ್ಕೆ ಹಾರಬೇಕು. ಆಗ ಮರಯಿಯಲ್ಲಿದ್ದ ನೀರು

ಒಂದೇ ನೆಗೆತಕ್ಕೆ ಮೇಲೆ ಬರುತ್ತದೆ. ಬಂದ ನೀರನ್ನು ಸಂಬಾಳಿಸಿ ಜೋಡಿಸಿದ ಕಾಲುವೆಗೆ ನೀರನ್ನು ಹಾಯಿಸಬೇಕು. ಈ ಕಾರ್ಯದಲ್ಲಿ ಒಬ್ಬರು ಎಚ್ಚರ ತಪ್ಪಿದರೂ ಮೂವರ ಪ್ರಾಣಕ್ಕೂ ಸಂಚಕಾರವಿದೆ. ಕಾಲಿಯಾದ ಮರಯಿಯನ್ನು ಬಾವಿಯೊಳಗೆ ಮತ್ತೆ ಇಳಿಸಬೇಕಾದರೆ ಹಿಂದೆ ಹಾರಿದ ಇಬ್ಬರು ಹೆಣ್ಣು ಮಕ್ಕಳು ನಿಧಾನವಾಗಿ ಹನ್ನೊಂದು, ಹದಿಮೂರು ಮೆಟ್ಟಿಲುಗಳನ್ನು ಏರಬೇಕು. ಸಾಮಾನ್ಯ ಈ ಮೆಟ್ಟಿಲುಗಳು ಬೆಸ ಸಂಖ್ಯೆಯಲ್ಲಿರುತ್ತದೆ. ನೀರಿಲ್ಲದಾಗ ನಿಧಾನಕ್ಕೆ ನಡೆದು ನೀರು ತುಂಬಿದಾಗ ಒಮ್ಮೆಲೆ ಹಿಮ್ಮುಖವಾಗಿ ಹಾರುವುದಕ್ಕೂ ಧೈರ್ಯ ಮತ್ತು ಚಾಣಾಕ್ಷತೆ ಬೇಕು. ಹೀಗೆ ಹಿಮ್ಮುಖವಾಗಿ ಹಾರುವಾಗಲೂ ಒಂದು ಜಾಣ್ಮೆಯ ಲೆಕ್ಕಾಚಾರವಿದೆ. ಒಂದು ಮರಯಿ ನೀರಿಗೆ ಒಂದು ಕಲ್ಲು ಎಂದು ಆಯ್ದ ಕಲ್ಲುಗಳನ್ನು ಒಂದು ಬದಿಯಿಂದ ಹೆಕ್ಕಿ ಇನ್ನೊಂದು ಬದಿಗೆ ಹಾಕಿ ಲೆಕ್ಕ ಮಾಡುತ್ತಾರೆ. ಒಮ್ಮೆ ನೀರೆತ್ತುವಾಗ ನೂರಿನ್ನೂರು ಮರಯಿ ನೀರೆತ್ತುವುದು ವಾಡಿಕೆಯಾಗಿದೆ. ನೂರು ಮರಯಿ ನೀರು ಎತ್ತಿ ನೂರು ಕಲ್ಲು ಆದರೆ ಅದನ್ನು ಒಂದು 'ಗುರಿ' ಎಂದು ಲೆಕ್ಕವಿಡುತ್ತಾರೆ. ಒಂದು ಮುಡಿ ಬೀಜ ಬಿತ್ತುವ ವಿಸ್ತಾರವಾದ ಗದ್ದೆಗೆ ಎರಡು ಗುರಿ ಇಲ್ಲವೆ ಮೂರು ಗುರಿ ನೀರು ಬೇಕು. ಹೊಟ್ಟೆ ತುಂಬಾ ಉಂಡು ಪನೆಯ ನೀರೆಳೆಯಲಾಗದು. ಉಣ್ಣುವ ಕಾಲವೂ ಅದಲ್ಲ. ಖಾಲಿ ಮರಯಿ ಹಿಡಿದು ಕೆಳಕ್ಕೆ ಇಳಿಸುವಾಗ ಮುಂದಕ್ಕೆ ಸಹಜವಾಗಿ ನಿಧಾನವಾಗಿ ನಡೆದು ಬರುವುದು ತ್ರಾಸದಾಯಕ. ಮೇಲೆ ಹತ್ತಲು ಸಹನೆ ಬೇಕು. ತುಂಬಿದ ಮರಯಿ ನೀರನ್ನು ಶಕ್ತಿ ಹಾಕಿ ಹಿಂದಕ್ಕೆ ಹಾರಲು ಧೈರ್ಯದೊಂದಿಗೆ ಎದೆಗಾರಿಕೆಯೂ ಬೇಕು. ಕೆಲವೊಮ್ಮೆ ಕಡೆಬಲ್ಲಿನ ಹಗ್ಗ ತುಂಡಾಗಿ ಕೆಳಕ್ಕೆ ಬಿದ್ದು ಸೊಂಟ ಮುರಿದುಕೊಂಡವರೂ ಇದ್ದಾರೆ. ದಡೆ ಮರದಲ್ಲಿ ನೀರೆತ್ತಲು ಕಾಲಗಲಿಸಿ ನಿಂತಾಗ ಮರಯಿ ಸೀಳಿ ತೊಡೆ ಸಂದಿಗೆ ಚುಚ್ಚಲ್ಪಟ್ಟು ಪ್ರಾಣ ಕಳಕೊಂಡ ಗಂಡು ಮಕ್ಕಳು ಇದ್ದಾರೆ. ಮುಂಜಾನೆ ಮತ್ತು ಮುಸ್ಸಂಜೆಗಳಲ್ಲಿ ದಿನನಿತ್ಯದ ದುಡಿಮೆಗೆ ಹೆಚ್ಚುವರಿಯಾಗಿ ಸಾಗುವ ಈ ನೀರಾವರಿ ಕಾಯಕ ತಾಳ್ಮೆ, ಶ್ರಮ, ಮತ್ತು ಬದ್ಧತೆಯನ್ನು ಬಯಸುತ್ತದೆ.

ಪರಂಪರೆಯ ಕೃಷಿಯಲ್ಲಿ ಹಿಂದೆ ಹೊಟ್ಟೆಗಿಲ್ಲದ ಕಾಲವಾದರೂ ದುಡಿಮೆಗೆ ಯಾವ ಕೊರತೆಯೂ ಇರಲಿಲ್ಲ. ಎರಡು ಗುರಿ ಮೂರು ಗುರಿ ನೀರು ಎತ್ತಿ ಮತ್ತೆ ಗಂಡಿಗೆ ಹೆಗಲೆಣೆಯಾಗಿ ದುಡಿಯಬೇಕು. ಮುಂಜಾನೆ ಮತ್ತು ಮುಸ್ಸಂಜೆ ಒಂದೊಂದು ದಿನ ಒಂದೊಂದು ಗದ್ದೆಗೆ ನೀರು ಹಾಯಿಸುತ್ತ ಎರಡು ಗುರಿ ಮೂರು ಗುರಿಗಳೆಂದರೆ ಇನ್ನೂರು -ಮುನ್ನೂರು ಮರಯಿ ನೀರೆತ್ತಬೇಕಾಗಿತ್ತು.

ಸಂಬೊಳಿಗೆಯಲ್ಲಿ ನಡೆಸುವ ನೀರಾವರಿ ವ್ಯವಸ್ಥೆ ನದಿ ಬದಿಯ ಕುದುರುಗಳಲ್ಲಿ ಹೆಚ್ಚು. ಇಲ್ಲೂ ದಡೆಮರಕ್ಕೆ ಅಡ್ಡವಾಗಿ ಕಟ್ಟಿದ ಕೋಲಿನ ಎರಡೂ ಬದಿಗೆ ಕಬ್ಬಿಣ ಇಲ್ಲವೆ ಅಲ್ಯುಮಿನಿಯಂ ದೊಡ್ಡ ಡಬ್ಬಿಯನ್ನು ಕಟ್ಟಲಾಗುತ್ತದೆ. ಅಡ್ಡವಾದ ಕೋಲಿನ ತುದಿಯನ್ನು ಒಂದು ತುದಿಯಲ್ಲಿ ಎತ್ತಿದಾಗ ಒಂದು ಡಬ್ಬ ನೀರು ಮೇಲೆ ಬರುತ್ತದೆ. ಮಧ್ಯದ ದಂಡೆಯಲ್ಲಿ ನಿಧಾನವಾಗಿ ನಡೆಯುತ್ತಲೇ ಚಾಣಾಕ್ಷತನದಿಂದ ನೀರು ಮೇಲಕ್ಕೆ ಎತ್ತಲಾಗುತ್ತದೆ. ಇನ್ನೊಂದು ಬದಿ ಮುಳುಗುತ್ತದೆ. ಇನ್ನೊಂದು ಬದಿಯಲ್ಲಿ ಎತ್ತಿದಾಗ ನೀರಿನ ಡಬ್ಬ ಮೇಲಕ್ಕೆ ಬರುತ್ತದೆ. ಇದು ಹೆಚ್ಚಿನ ಕಡೆಗಳಲ್ಲಿ ಪ್ರಚಲಿತವಿಲ್ಲದಿದ್ದರೂ ಕಿರು ನೀರಾವರಿಗಾಗಿ ಬಳಕೆಯಾಗುತ್ತದೆ.

ಭತ್ತದ ಬೆಳೆ ಅತಿ ಹೆಚ್ಚಿನ ನೀರಿನ ಅಗತ್ಯವನ್ನು ಬಯಸುವುದರಿಂದ ಬೆಳೆಯ ನಿರ್ವಹಣೆಯಲ್ಲಿ ಹೆಚ್ಚಿನ ಎಚ್ಚರ ಅಗತ್ಯವಾಗಿದೆ. ಈ ನೀರಾವರಿಯನ್ನು ಗಮನದಲ್ಲಿರಿಸಿ

ತುಳುವಿನಲ್ಲಿ ಒಂದು ಪ್ರಸಿದ್ಧ ಗಾದೆ ಇದೆ. " ಎಣೆಲು ಸೂಳೆ, ಸುಗ್ಗಿ ಮದಿಮಳ್, ಕೊಳಕೆ ಪೆದ್ಮದಿ" (ಎಣೆಲು ಸೂಳೆ, ಸುಗ್ಗಿ ಮದಿಮಾಳ್, ಕೊಳಕೆ ಬಾಣಂತಿ) ಹೆಣ್ಣಿಗೆ ಬೆಳೆಯನ್ನು ಹೋಲಿಸುವುದರ ಉದ್ದೇಶ ಅದನ್ನು ನಿರ್ವಹಿಸುವ ನೀರಿನ ನಿರ್ವಹಣೆಯೂ ಆಗಿದೆ. ಮಳೆಯಾಧಾರಿತ ಬೆಳೆ, ಎಣೆಲು, ಹೆಚ್ಚಿನ ಗಮನ ಹರಿಸುವ ನೀರಾವರಿ ಸುಗ್ಗಿಯ ಬೆಳೆಗಾದರೆ, ಸುಡು ಬಿಸಿಲಿಗೆ ಅತಿ ಎಚ್ಚರಿಕೆಯಿಂದ ಬೆಳೆವ ಬೆಳೆ ಕೊಳಕೆಯಾಗಿದೆ. ಗದ್ದೆಯಲ್ಲಿ ನೀರು ನಿಂತಾಗ ಒಳ್ಳೆಯ ಫಸಲು ಬರುತ್ತದೆ ಎಂದು ನೀರಿನ ಮಹತ್ವವನ್ನು ಸಾರುವ ಇನ್ನೊಂದು ಗಾದೆಯಿದೆ. " ಅಡಿ ನೀರ್‌ದ ಕೈ ಎಡ್ಡೆ ಪೊಡಿ ನೇಜಿದ ಬೈ ಎಡ್ಡೆ" (ಅಡಿ ನೀರಿನ ಪೈರು ಒಳ್ಳೆಯದು, ಪೊಡಿ ನೇಜಿಯ ಬೈ ಹುಲ್ಲು ಒಳ್ಳೆಯದು) ಪೈರು ಮತ್ತು ಬೈ ಹುಲ್ಲು ಎನ್ನುವ ಮೂಲಕ ನೀರಿನಿಂದ ಬೆಳೆಯುವ ಬೆಳೆಯ ಉಲ್ಲೇಖ ಬರುತ್ತದೆ. 'ತಾರಿ ಕಂಡೊಗು ಮೂಜಿ ಬುಳೆ' (ತಗ್ಗಿದ ಗದ್ದೆಗೆ ಮೂರು ಬೆಳೆ) ತಗ್ಗುವುದು ಎಂದರೆ ನೀರು ಇರುವ ಹದವಾದ ಗದ್ದೆ. ನೀರಿನ ತತ್ವವನ್ನು ಮಹತ್ವವನ್ನು ಸಾರುವ ಈ ಗಾದೆ ಮಾತುಗಳಿಂದ ಕರಾವಳಿಗರ ನೀರಿನ ಜ್ಞಾನ ಮತ್ತು ಕೃಷಿಯ ಮಹತ್ವವೂ ತಿಳಿಯುತ್ತದೆ.

ಧಾನ್ಯದ ಬೆಳೆಗಳಿಗೆ ಭತ್ತಕ್ಕೆ ಬಳಸುವಷ್ಟು ನೀರಿನ ಅಗತ್ಯ ಇಲ್ಲ. ಪರ್ಯಾಯ ಬೆಳೆ, ಪೂರಕ ಬೆಳೆ ಉಪಬೆಳೆಗಳಾಗಿ ಉದ್ದು, ಹೆಸರು, ಹುರುಳಿ, ಎಳ್ಳು ಮುಂತಾದ ಧಾನ್ಯಗಳನ್ನು ಕರಾವಳಿಯಲ್ಲಿ ಬೆಳೆಯುತ್ತಾರೆ. ಧಾನ್ಯಕ್ಕೆ ನೀರನ್ನು ಹಾಯಿಸುವ ಕ್ರಮವಿಲ್ಲ. ಹಿಂಗಾರಿನಲ್ಲಿ ಬರುವ ಮಳೆ ಮತ್ತು ಇಬ್ಬನಿಯ ನೀರಿನ ಒರತೆಯಿಂದಲೇ ಧಾನ್ಯದ ಬೆಳೆಗಳು ಸೊಗಸಾಗಿ ಬೆಳೆಯುತ್ತವೆ.

ತರಕಾರಿ ಬೆಳೆಗಳಾದ ಸೌತೆ, ಕುಂಬಳ, ಮುಳ್ಳು ಸೌತೆ, ಕರಬೂಜ, ಸೋರೆ, ಬಸಳೆ, ಹರಿವೆ, ತೊಂಡೆ, ಬೆಂಡೆ, ಅಲಸಂಡೆ, ಹಾಗಲ, ಪಡುವಲ ಮಳೆಗಾಲದಲ್ಲಿ ಅಂಗಳದಲ್ಲಿ ಕುಮೇರಿನಲ್ಲಿ ಬೆಳೆದರೆ ನೀರಿನ ಅವಶ್ಯಕತೆಯಿಲ್ಲ. ಸುಗ್ಗಿಯ ಬೆಳೆಯಾಗಿ ಬೆಳೆವ ತರಕಾರಿಗಳಿಗೆ ಮುಂಜಾನೆ ಎರಡು ದಿನಕ್ಕೊಂದಾವರ್ತಿ ನೀರು ಹಾಯಿಸುವ ಕ್ರಮವಿದೆ. ಬಸಳೆ, ಹರಿವೆ ಚಪ್ಪರಗಳಿಗೆ ಬೆಳಿಗ್ಗೆ ಎದ್ದು ಅದರ ಎಲೆ ಮೇಲೆ ಬಿದ್ದ ಇಬ್ಬನಿ ಹಾರಿಸುವುದು ಬಹಳ ಮುಖ್ಯ. ದಿನಾಲೂ ಗಿಡದ ಚಪ್ಪರಕ್ಕೂ ಮತ್ತು ಬುಡಕ್ಕೂ ನೀರು ಹಾಯಿಸಲೇಬೇಕು. ಹಿತ್ತಲಿನಲ್ಲಿರುವ ಈ ಚಪ್ಪರಗಳು ಅಡುಗೆ ಮನೆಯ ನೀರನ್ನು ಬಳಸುವಂತಹುದು ಆಗಿದೆ. ನೀರಿನ ಮರುಬಳಕೆಯ ಜಾಣ್ಮೆ ಹೆಣ್ಣು ಮಕ್ಕಳಿಗೆ ಬಹಳ ಸೊಗಸಾಗಿ ತಿಳಿದಿತ್ತು. ಹಿತ್ತಲಿನ ಬಾಳೆಗಿಡ, ಕರಿಬೇವು, ಅಡುಗೆಯ ಕೆಲವು ಅಗತ್ಯಗಳು ಈ ಮೂಲಕವೇ ಬಳಕೆಯಾಗುತ್ತಿತ್ತು.

ಕರಾವಳಿಯಲ್ಲಿ ತೋಟದ ಬೆಳೆಗಳಾಗಿರುವ ಕಂಗು ಮತ್ತು ತೆಂಗುವಿಗೆ ನೀರನ್ನು ತೋಡಿನ ಮೂಲಕ ಹಾಯಿಸಲಾಗುತ್ತದೆ. ಹೀಗೆ ಹಾಯಿಸುವಾಗ ಗಿಡದ ಬುಡಕ್ಕೆ ಅಡಿಕೆಯ ಹೊಂಬಾಳೆಯ ಮೂಲಕ ಅಲ್ಲಲ್ಲಿ ನಿಂತು ನೀರನ್ನು ಹಾಯಿಸಲಾಗುತ್ತದೆ. ಎಲೆ ಬಳ್ಳಿ, ಕರಿಮೆಣಸು, ವೆನಿಲ್ಲಾ ಮುಂತಾದ ಬೆಳೆಗಳು ಉಪ ಬೆಳೆಗಳಾಗಿ ಬೆಳೆಯುವುದರಿಂದ ತೆಂಗು- ಕಂಗಿನ ತೋಟದ ನೀರಾವರಿಯಲ್ಲಿಯೇ ಫಸಲನ್ನು ಪಡೆಯಲು ಸಾಧ್ಯವಾಗುತ್ತದೆ.

ವಾರ್ಷಿಕ ಬೆಳೆಗಳು ಬಹುವಾರ್ಷಿಕ ಬೆಳೆಗಳು ನೀರಾವರಿಯಲ್ಲಿ ಆಯಾಯ ಬೆಳೆಗಳಿಗೆ ಅನುಗುಣವಾಗಿ ದಿನ ಬಿಟ್ಟು ದಿನ ಮತ್ತು ವಾರಕ್ಕೊಮ್ಮೆ ನೀರಾವರಿಯನ್ನು ಬಯಸುತ್ತದೆ.

ನದಿ ಬದಿಯ , ಕೆರೆ ದಂಡೆಯಲ್ಲಿಯ ತೆಂಗಿನ ವಾರ್ಷಿಕ ಬೆಳೆಗೆ ನೀರಾವರಿಯ ಅವಶ್ಯಕತೆಯಿಲ್ಲ. ಸಹಜ ಕೃಷಿಯಾಗಿ ಬೆಳೆ ಬೆಳೆಯುತ್ತಾರೆ.

ಆಧುನಿಕ ನೀರಾವರಿ ಪದ್ಧತಿ :– ಯಂತ್ರಗಳನ್ನು ಬಳಸಿ ಮಾಡುವ ನೀರಾವರಿ ಆಧುನಿಕ ನೀರಾವರಿ ಪದ್ಧತಿ. ಮಾನವ ಶ್ರಮವನ್ನು ಕಡಿಮೆಗೊಳಿಸಿ ದೊಡ್ಡ ಮೊತ್ತದ ಹಣವನ್ನು ಬಳಸಿ ಕಡಿಮೆ ಸಮಯದಲ್ಲಿ ಹೆಚ್ಚು ವಿಸ್ತಾರವಾದ ಪ್ರದೇಶಗಳಿಗೆ ನೀರಾವರಿ ಮಾಡಲಾಗುತ್ತದೆ. ಒಂದು ಕಾಲಕ್ಕೆ ಒಡ್ಡನ್ನು ಕಟ್ಟಿ ನೀರು ನಿಲ್ಲಿಸಿ ಹಾಯಿಸಲಾಗುತ್ತಿತ್ತು. ಈಗ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆಗಳಿಂದ ನೀರನ್ನು ಹಾಯಿಸಲಾಗುತ್ತದೆ. ಕಿಂಡಿ ಅಣೆಕಟ್ಟುಗಳು, ಪಂಪ್ ಸೆಟ್ಟುಗಳು, ಬೋರ್‌ವೆಲ್‌ಗಳು, ತುಂತುರು ಹನಿ ನೀರಾವರಿ ಪದ್ಧತಿಗಳೆಲ್ಲ ಚಾಲ್ತಿಗೆ ಬಂದಿವೆ. ಇಂದು ಇದನ್ನು ನಿರ್ವಹಣೆ ಮಾಡುವ ಹೊಣೆಯನ್ನು ಹೆಚ್ಚಾಗಿ ಪುರುಷರೇ ನಿರ್ವಹಿಸುತ್ತಾರೆ. ಕಡಿಮೆ ಶ್ರಮ ಮತ್ತು ಸಮಯದ ಬಳಕೆಯಿಂದ ಹೆಣ್ಣು ಈ ನೀರಾವರಿ ವ್ಯವಸ್ಥೆಯಲ್ಲಿ ದಾಖಲಾಗಿಲ್ಲ. ದೊಡ್ಡ ಮೊತ್ತದ ಬಂಡವಾಳ ಬಯಸುವ ಅಧುನಿಕ ನೀರಾವರಿ ಪದ್ಧತಿ ಹೆಣ್ಣಿನ ಅದೀನದಲ್ಲಿಲ್ಲ ಎನ್ನುವುದು ಸತ್ಯ.

5.ಕಳೆ ನಿರ್ವಹಣೆ :– ಬೆಳೆಯೊಂದನ್ನು ಬೆಳೆಯುವಾಗ ಅದರ ಮಧ್ಯೆ ಪ್ರಾಕೃತಿಕವಾಗಿ ಇನ್ನಿತರ ಸಸ್ಯಗಳು ಬೆಳೆಯುತ್ತವೆ. ಇವು ಬೆಳೆಯೊಡನೆ ಸ್ಪರ್ಧಿಸಿ ಇಳುವರಿಯನ್ನು ಕಡಿಮೆ ಮಾಡುತ್ತದೆ. ಕೃಷಿಗೆ ಕಂಟಕವೆಂದು ಗುರುತಿಸುವ ಸಸ್ಯಗಳೇ ಕಳೆಗಳು. ಕಳೆಗಳು ಪ್ರಾದೇಶಿಕವಾಗಿ ಪ್ರತಿಯೊಂದು ಭೂಮಿಯಲ್ಲೂ ಅಲ್ಲಿನ ಹವಾಮಾನ, ನೀರು, ಮಣ್ಣು, ಲಭಿಸುವ ಗೊಬ್ಬರ ಹಾಗೂ ಬೆಳೆಯುವ ಬೆಳೆಗಳಿಗೆ ಭಿನ್ನವಾಗುತ್ತ ಹೋಗುತ್ತದೆ. ಈ ಕಳೆಯನ್ನು ಆಗಿಂದಾಗ್ಗೆ ತೆಗೆಯುತ್ತಲೇ ಇರಬೇಕಾಗುತ್ತದೆ. ಇದನ್ನು 'ಕಳೆ ನಿರ್ವಹಣೆ' ಎನ್ನುತ್ತಾರೆ. ಬೀಜ ಇರುವ ಕಳೆಗಳು ಮತ್ತೆ ಹರಡಿಕೊಳ್ಳುತ್ತವೆ ಎಂದು ಅವುಗಳನ್ನು ಸುಡುತ್ತಾರೆ. ಕಳೆ ನಿರ್ವಹಣೆಯ ಅವಶ್ಯಕತೆ ಏಕೆಂದರೆ ಫಸಲಿಗೆ ಕಂಟಕವಾಗಿರುವುದರ ಜತೆಗೆ, ಕ್ರಿಮಿ ಕೀಟಗಳಿಗೆ ಆಶ್ರಯವನ್ನು ನೀಡುತ್ತವೆ. ಹಾಗಾಗಿ ಕಳೆ ನಿರ್ವಹಣೆ ಅತಿ ಅವಶ್ಯ.

ಯಾವುದೇ ಬೆಳೆಯ ಬಿತ್ತನೆ ಮುಗಿದ ಮೇಲೆ ಕೆಲವು ದಿನಗಳಲ್ಲಿ ಕಳೆಗಳು ಕಾಣಿಸಿಕೊಳ್ಳುತ್ತವೆ. ಬೆಳೆಗಳಿಗೆ ಹಾಕುವ ಗೊಬ್ಬರವನ್ನು ಈ ಕಳೆ ಗಿಡಗಳು ಹೀರಿಕೊಳ್ಳುತ್ತವೆ. ಇಳುವರಿ ಕಡಿಮೆಯಾಗುವುದರಿಂದ ಕಳೆಯನ್ನು ನಿರ್ವಹಣೆ ಮಾಡುವ ಕೆಲಸ ಕೃಷಿಯಲ್ಲಿ ಬಹಳ ಮುಖ್ಯ. ಇದರ ಸಂಪೂರ್ಣ ನಿರ್ವಹಣೆ ಮಹಿಳೆಯರದು. ಬೆನ್ನು ಬಾಗಿಸಿ, ಮೊಣಕಾಲಿಗೆ ಕೈ ಊರಿ ಗದ್ದೆ ತೋಟಗಳಲ್ಲಿ ಕಳೆ ಕೀಳುವ , ತುದಿಗಾಲಲ್ಲಿ ಗಂಟೆಗಟ್ಟಲೆ ಕುಳಿತು ಉಪಕರಣಗಳಿಂದ ಕಳೆ ಕೀಳುವ ಕಾಯಕ ಸಹನೆ ತಾಳ್ಮೆಯನ್ನು ಬಯಸುತ್ತದೆ ಕಳೆ ನಿರ್ವಹಣೆ. ಕೃಷಿಯಲ್ಲಿ ಉಳುಮೆ ನಾಟಿಯಂತಹ ಮಹತ್ವದ ಕೆಲಸವಲ್ಲ ಎಂದು ಬಿಂಬಿತವಾಗಿದ್ದು ಅದಕ್ಕೆ ಪಡೆಯುವ ಕೂಲಿಯೂ ಕಡಿಮೆ ಇರುತ್ತದೆ. ಕಳೆ ನಿರ್ವಹಣೆ ಶ್ರಮದಾಯಕ ದುಡಿಮೆಯಲ್ಲ, ಬಿಡುವಿನ ನಿರಾಳ ದುಡಿಮೆ, ಯಾವುದೇ ತುರ್ತು ಅಗತ್ಯವಿಲ್ಲದ ಮಳೆಗಾಲದ ದುಡಿಮೆ ಎನ್ನುವ ಚಿಂತನೆ ಇದೆ. ಹಾಗಾಗಿ ಬಿತ್ತಿದ ಬೆಳೆ ಬರಬೇಕಾದರೆ ಮನೆಯ ಇಲ್ಲವೆ ಕೂಲಿ ಹೆಣ್ಣು ಮಕ್ಕಳಾದರೂ ಕಳೆ ಕಿಳಲು ಶ್ರದ್ಧೆಯನ್ನು ತಾಳ್ಮೆ ಸಹನೆಯನ್ನು ಬಯಸುತ್ತದೆ. ಕಳೆ ನಿರ್ವಹಣೆ ಸೊಗಸಾಗಿ ನಿರ್ವಹಿಸುವವಳು ಹೆಣ್ಣೇ ಆಗಿದ್ದಾಳೆ.

ಗದ್ದೆಯನ್ನು ಉಳುಮೆ ಮಾಡಿ ನೀರು ತಿಳಿಯಾದ ಮೇಲೆ ತೇಲುತ್ತಿರುವ ಕಳೆಗಳನ್ನು ಕೈಯಲ್ಲಿ ತೆಗೆದು ಗದ್ದೆಯ ಹುಣಿಗೆ ಹಾಕಲಾಗುತ್ತದೆ. ಕೆಲವು ಕಡೆಗಳಲ್ಲಿ ನಾಟಿ ಜೀವಂತವಾಗಿ ಬೇರೂರಿದ ಮೇಲೆ ಕಳೆಗಳು ತುಂಬ ಇದ್ದರೆ ಕಳೆನಿರ್ವಹಣೆಯ ಜವಾಬ್ದಾರಿ ಹೆಣ್ಣು ಮಕ್ಕಳದೆ. ಕೈಗೆ ಮುಖಕ್ಕೆ ಚುಚ್ಚಲ್ಪಡುವ ಪೈರನ್ನು ಸರಿಸುತ್ತಾ ಬುಡದಲ್ಲಿರುವ ಕಳೆಯನ್ನು ಕೀಳುತ್ತಾರೆ. ಒಂದು ಮುಷ್ಟಿಯಾದ ಮೇಲೆ ಗದ್ದೆಯ ಬದುವಿನಲ್ಲಿ ನೀರಿದ್ದರೆ ಅದಕ್ಕೆ ತೆಗೆದು ಎಸೆಯುತ್ತಾರೆ. ಇಲ್ಲವಾದರೆ ಇದನ್ನು ಗದ್ದೆಯ ಹುಣಿಗೆ ತಂದು ರಾಶಿ ಹಾಕುತ್ತಾರೆ. ಮತ್ತು ಕೆಲವರು ಪೈರಿನ ಬುಡಕ್ಕೆ ಹೂತು ಅದರ ಮೇಲೆ ಕಾಲನ್ನಿರಿಸಿ ಆಳಕ್ಕೆ ತಳ್ಳುತ್ತಾರೆ. ಕಳೆ ನಿರ್ವಹಣೆಯ ಕೆಲಸ ಅತಿ ಸುಲಭವೆಂದು ಮಾನ್ಯತೆ ಪಡೆದಿದ್ದರೂ ಕೆಲಸದ ನಿರ್ವಹಣೆಗೆ ತಾಳ್ಮೆಯೊಂದಿಗೆ ಶ್ರಮವನ್ನು ಬಯಸುತ್ತದೆ.

ಎಣೆಲು ಬೆಳೆಯಲ್ಲಿ ಭತ್ತದ ಬೆಳೆಗೆ ಕಳೆ ನಿರ್ವಹಣೆ ಸಾಮಾನ್ಯ ಭತ್ತದ ಗದ್ದೆಗಳಲ್ಲಿ ಜುಲೈ–ಅಗಸ್ಟ್ ತಿಂಗಳಲ್ಲಿ ಕಳೆ ನಿರ್ವಹಣೆ ಕಾರ್ಯವನ್ನು ನಡೆಸುತ್ತಾರೆ. ಈ ಅವಧಿಯಲ್ಲಿ ನಾಟಿಯಾಗಿ ಪೈರು ಒಂದಿಷ್ಟು ಬಲಿತು ಹರಿತವಾಗುತ್ತದೆ. ಸುರಿಯುವ ಸೋನೆ ಮಳೆಗೆ ಬೆನ್ನು ಬಾಗಿಸಿ ಎಡಗೈಯನ್ನು ಎಡ ಮೊಣಕಾಲಿಗೆ ಊರಿ ಮುಖಕ್ಕೆ ಚುಚ್ಚುವ ಬೆಳೆಯ ಪೈರುಗಳ ಮಧ್ಯೆ ಎಚ್ಚರಿಕೆಯಿಂದ ಕೆಸರು ನೀರಿರುವ ಗದ್ದೆಗಳಲ್ಲಿ ಕಳೆ ಕೀಳುವುದು ಸುಲಭವಾದ ಕೆಲಸವಲ್ಲ. ಅಲ್ಲದೆ ಕೆಲವು ಕಳೆಗಳು ಹರಿತವಾದವುಗಳೂ ತುರಿಕೆ ಉಂಟು ಮಾಡುವಂತಹವೂ ಆಗಿರುತ್ತವೆ. ಈ ಕಳೆ ಗಿಡಗಳನ್ನು ಕೀಳುವುದರಿಂದ ಕೈಯ ಚರ್ಮ ಸೀಳುತ್ತದೆ. ಅಂಗೈಗಳು ಕಪ್ಪುಗಟ್ಟುತ್ತವೆ. ಕಳೆಯ ಒಗರು ಕೈಗೆ ಅಂಟಿಕೊಳ್ಳುವುದರಿಂದ ತಿನ್ನುವ ಊಟ ತಿಂಡಿಗಳು ರುಚಿಸುವುದಿಲ್ಲ.

ಕಳೆ ನಿರ್ವಹಣೆಯಲ್ಲಿ ಅವು ಬೆಳೆಯುವ ಪ್ರದೇಶಗಳಿಂದಲೂ ಭಿನ್ನವಾಗುತ್ತದೆ. ಗದ್ದೆ, ಗದ್ದೆಯ ಬದು, ತೋಟ, ನೀರಿನ ದಂಡೆ, ಹಿತ್ತಲು ಹೀಗೆ ಭೌಗೋಳಿಕವಾಗಿಯೂ ವಿಭಿನ್ನವಾಗಿರುತ್ತದೆ. ಅಲ್ಲದೆ ಕೆಲವು ಕಳೆಗಳು ಅಲ್ಪಾವಧಿಯವುಗಳಲ್ಲ. ಬಹಳ ಬೇಗ ನಶಿಸಿ ಹೋಗುವುದಿಲ್ಲ. ವಾರ್ಷಿಕ ಬಹುವಾರ್ಷಿಕ ಕಳೆಗಳು ಇದ್ದು ಅವುಗಳ ನಿಯಂತ್ರಣ ಕೃಷಿ ಚಟುವಟಿಕೆಗೆ ಅಗತ್ಯ. ಒಂದು ಬೆಳೆಗೆ ಕನಿಷ್ಠ ಒಂದು–ಎರಡು ಬಾರಿಯಾದರೂ ಕಳೆ ಕೀಳುವ ಕೆಲಸ ಮಾಡುತ್ತಾರೆ. ಈ ಕೆಲಸಕ್ಕೆ ಕೂಲಿ ಕಡಿಮೆಯಾದರೂ, ಅವರ ದುಡಿಮೆ ಅನಿವಾರ್ಯವಾಗಿದೆ. ಅವರ ದುಡಿಮೆಗೆ ಮಾನ್ಯತೆ ಇಲ್ಲದಿದ್ದರೂ ಈ ಕೆಲಸವನ್ನು ಜತನದಿಂದ ಮಹಿಳೆಯರು ನಿರ್ವಹಿಸುತ್ತಾರೆ. ಕಳೆಯ ಮರುಬಳಕೆಯ ಜ್ಞಾನವೂ ಮಹಿಳೆಯರಿಗೆ ಅದ್ಭುತವಾಗಿದೆ. ತ್ಯಾಜ್ಯವನ್ನು ಯೋಗ್ಯವನ್ನಾಗಿ ಮಾಡುವ ಹಿರಿಮೆ ಇವರಿಗೆ ಸಲ್ಲುತ್ತದೆ. ಹಾಗಾಗಿ ಕಳೆಯೆಂದರೆ ಕಿತ್ತು ಎಸೆಯುವುದಲ್ಲ ಎನ್ನುವ ಜ್ಞಾನ ಅರಿತವರು ಮಹಿಳೆಯರು.

ಕಳೆಗಳು ನೇರವಾಗಿ ಮತ್ತು ಪರೋಕ್ಷವಾಗಿ ಬಳಕೆಯಾಗುವುದರಿಂದ ಕಳೆಯೆಂದರೆ ಬೇಡವಾದ ಸಸ್ಯ ಎಂಬ ಅರ್ಥ ವಿವರಣೆಯನ್ನು ನಿರಾಕರಿಸುತ್ತದೆ. 'ಬಿತ್ತುವಾಕೆಗೇ ಗೊತ್ತು ಬೀಜದ ಗುಟ್ಟು' ಎನ್ನುವಂತೆ ಬೆಳೆ ಬೆಳೆಯುವಾಕೆಗೇ ಯಾವುದು ಬೆಳೆ ಕಳೆ ಎಂಬ ಅರಿವಿನೊಂದಿಗೆ ಬೆಳೆಗೆ ಪೂರಕವೇ– ಮಾರಕವೇ ಎನ್ನುವ ತಿಳುವಳಿಕೆ ಇವರಿಗಿತ್ತು. ಕೆಲವು ಕಳೆಗಳು ಕೊಳೆತು, ಗೊಬ್ಬರವಾಗಿ ಸುಟ್ಟು ಬೂದಿಯಾದರೆ, ಮತ್ತೆ ಕೆಲವು ದನಗಳಿಗೆ ಮೇವಾಗುತ್ತಿತ್ತು. ಜನರೂ ಆಹಾರವಾಗಿ ಆರೋಗ್ಯದ ಅಂಶವಾಗಿ ಬಳಸುತ್ತಾರೆ. ಮತ್ತೆ

ಕೆಲವು ಜನರು ಹಾಗೂ ಪ್ರಾಣಿ ಪಕ್ಷಿಗಾಗಿ ಔಷಧಿಯಾಗಿಯೂ ಬಳಕೆಯಾಗುತ್ತದೆ. ಪರೋಕ್ಷವಾಗಿ ಗೊಬ್ಬರವಾಗಿ, ಮಣ್ಣಿನ ಸವಕಳಿ ತಡೆಯಲು , ಜೀವ ವೈವಿಧ್ಯ ಉಳಿಸಲು ಬಳಕೆಯಾಗುತ್ತದೆ.

ಕರಾವಳಿಯಲ್ಲಿರುವ ಪ್ರಮುಖ ಕಳೆಗಳೆಂದರೆ, ಕಂರ್ಡೆ, ಕುರ್ಮಿಲ್, ಪೊನ್ನೊಲು ಮುದೆಲ್ ದಾಂತಿ ಬೂರ್, ನಲ್ಯ, ಕುಣಲೆ, ಒಂದೆಲಗ (ತಿಮರೆ), ಗರ್ಗ, ಗರಿಕೆ, ಕಜೆ, ನೀರಕಸ (ನೀರ ಅಟ), ನಾಯಿ ತುಳಸಿ, ಇಟ್ಟೆವು, ನಾಚಿಕೆಮುಳ್ಳು, ಅಜ್ಜನ ಸಾಮಾನ್ (ಬೊಂಡೊಲು), ತಜಂಕ್, ತೇವು, ನೈಸ್‌ರಂಗ್, ಅಂತರಗಂಗೆ, ಸನ್ಯಾಸಿ ದಂಟ್, ಕುನಲೆ, ತುಂಬೆ, ನೆಕ್ಕಿ, ಕಮ್ಯುನಿಸ್ಟ್, ಹೀಗೆ ಪಟ್ಟಿ ಬೆಳೆಸುತ್ತಾ ಹೋಗಬಹುದು. ಪ್ರಾದೇಶಿಕವಾಗಿ ಕಳೆ ಗಿಡಗಳ ಹೆಸರುಗಳೂ ಒಂದೂರಿಂದ ಇನ್ನೊಂದೂರಿಗೆ ಭಿನ್ನವಾಗಿ ಗುರುತಿಸಿಕೊಳ್ಳುತ್ತದೆ. ಜೀವ ವೈವಿಧ್ಯದೊಂದಿಗೆ ಭಾಷಿಕವಾಗಿ ಒಂದಷ್ಟು ಸಸ್ಯಗಳ ಹೆಸರೂ ಮುಖ್ಯವೆನಿಸುತ್ತವೆ.

ಕಳೆಯನ್ನು ಗುರುತಿಸುವುದು ಮರುಬಳಕೆಗೆ ನಿರ್ವಹಣೆ ಮಾಡುವುದು ಮಹಿಳೆಯರ ಒಂದು ಜ್ಞಾನವೇ ಆಗಿದೆ. ತಮ್ಮ ಹಿಂದಿನ ತಲೆ ಮಾರುಗಳಿಂದ ಪಾರಂಪರಿಕವಾಗಿ ಬಂದ ಅವರ ಜ್ಞಾನದ ಅರಿವು ಎಲ್ಲೂ ದಾಖಲುಗೊಂಡಿದ್ದೇ ಇಲ್ಲ. ಪ್ರಕೃತಿಯ ನಿಗೂಢತೆಯ ರಹಸ್ಯವನ್ನು ಸರಳವಾಗಿ ತಮ್ಮ ಒಡಲೊಳಗೆ ಹುದುಗಿಸಿಕೊಂಡು ತಮ್ಮ ದುಡಿಮೆ ಜ್ಞಾನದ ಅರಿವಿನ ಮಾನ್ಯತೆಗಾಗಿ ಹೋರಾಡಿದವರೂ ಅಲ್ಲ. ಅವರ ಕೆಲಸದ ಜ್ಞಾನ ಮತ್ತು ತಜ್ಞತೆಗಳು ಹಿಂದಿನಿಂದಲೂ ಅವಗಣೆನೆಗೆ ಒಳಗಾಗಿವೆ. ವಾರ್ಷಿಕ ಮತ್ತು ಬಹುವಾರ್ಷಿಕ ಬೆಳೆಗಳೆರಡರಲ್ಲಿಯೂ ಕಳೆ ನಿರ್ವಹಣೆ ಅತಿ ಅವಶ್ಯ. ಸಾವಯವ ಕೃಷಿಯ 'ಮಾರಿಕೂಗು' ಕೇಳಿಸುತ್ತಿರುವ ಈ ಹೊತ್ತಲ್ಲಿ ಕಳೆಯನ್ನೇ ಉತ್ತಮ ಕಾಂಪೋಸ್ಟ್ ಆಗಿ ಬಳಸಿದ ಹಿರಿಮೆ ಹೆಣ್ಣು ಮಕ್ಕಳದು. ಭೂಮಿಯ ಸಾರಾಗುಣವನ್ನು ಕಾಪಾಡಿಕೊಂಡು ಜೀವ ವೈವಿಧ್ಯ ಉಳಿಸಿ ಬೆಳೆಸಲೂ ಇವು ಸಹಕಾರಿ.

6.ಗೊಬ್ಬರ : ಗೊಬ್ಬರ ಸಸ್ಯಗಳ ಬೆಳವಣಿಗೆಯಲ್ಲೂ ಬಹಳ ಮುಖ್ಯ. ಯಾವ ರೀತಿಯ ಯಾವ ಬೆಳೆಗೆ ಎಷ್ಟು ಗೊಬ್ಬರ ಹಾಕಬೇಕು? ಯಾವಾಗ ಹಾಕಬೇಕು? ಹೇಗೆ ಹಾಕಬೇಕು? ಎನ್ನುವ ತಿಳುವಳಿಕೆ ಬೆಳೆ ಬೆಳೆವ ರೈತನಿಗೆ ಅತಿ ಅವಶ್ಯ. ಹಿಂದಿನ ಕಾಲದಲ್ಲಿ ಗೊಬ್ಬರವನ್ನು ಕಾಸು ಕೊಟ್ಟು ಕೊಂಡು ತಂದುದಿಲ್ಲ. ಮನೆಯ ಸಾಗುವಳಿಗೆ ಅವಶ್ಯವಿರುವಷ್ಟು ಗೊಬ್ಬರಗಳು ಮನೆಯಲ್ಲಿಯೇ ಉತ್ಪಾದನೆಯಾಗುತ್ತಿತ್ತು. ಅದು ಭೂಮಿಯಲ್ಲಿ ಕರಗದೆ ಇರುವಂತಹುದೂ ಅಲ್ಲ. ಜೀವನಾಶಕವೂ ಅಲ್ಲ. ಸಾಮಾನ್ಯವಾಗಿ ಕರಾವಳಿಯಲ್ಲಿ ಪ್ರಮುಖ ಗೊಬ್ಬರಗಳೆಂದರೆ ಹಟ್ಟಿಗೊಬ್ಬರ, ಬೂದಿ, ಸುಡು ಮಣ್ಣು, ಗೊಬ್ಬರದ ಗುಂಡಿಗೆ ಎಸೆಯುವ ಕಸವೂ ರಸವಾಗುತ್ತಿತ್ತು. ಸುಟ್ಟರೆ ಬೂದಿಯಾಗಿ ಗೊಬ್ಬರವಲ್ಲದೆ, ಕೀಟನಾಶಕವೂ ಆಗುತ್ತಿತ್ತು. ಬಯಲು ಶೌಚ ಸಾಮಾನ್ಯವಿದ್ದ ಕಾಲದಲ್ಲಿ ಮನುಷ್ಯ ದೇಹದ ಮಲ ಮೂತ್ರಗಳೂ ಗೊಬ್ಬರವಾಗುತ್ತಿತ್ತು.

ಕರಾವಳಿಯಲ್ಲಿ ಗದ್ದೆ ಸಾಗುವಳಿಯ ಮನೆಯಲ್ಲಿನ ವ್ಯಕ್ತಿಯ ಅಂತಸ್ತನ್ನು ಮನೆ ಮುಂದಿನ ಹಟ್ಟಿಯಿಂದ ಗುರುತಿಸಲಾಗುತ್ತಿತ್ತು. ಹಟ್ಟಿಯಲ್ಲಿರುವ ದನ-ಕರು- ಕೋಣ ಎತ್ತುಗಳೊಂದಿಗೆ ಹಟ್ಟಿಯ ನಿರ್ವಹಣೆಯೂ ಬಹಳ ಮುಖ್ಯ. ಸಾಂಪ್ರದಾಯಿಕ ಕೃಷಿಯಲ್ಲಿ ಹಟ್ಟಿಯ ಸಾಕು ಪ್ರಾಣಿಗಳ ಕಾಲಡಿಗೆ (ಕಿದಡಿಕ್) ಹಾಕಲು ಬೇಕಾದ ತರಗೆಲೆಯ ರಾಶಿಯನ್ನು ಸಂಗ್ರಹಿಸುವವರು ಹೆಣ್ಣು ಮಕ್ಕಳು. ಕಾಡು ಮತ್ತು ಗುಡ್ಡಗಳಿಗೆ ಸುಡುವ ಬೇಸಿಗೆಯಲ್ಲಿ

ತೆರಳಿ ಬಿದ್ದ ತರಗೆಲೆಗಳನ್ನು ಗುಡಿಸಿ ತರುವ ಕೆಲಸವನ್ನು ಮಹಿಳೆಯರು ಮಾಡುತ್ತಾರೆ. ಬೆನ್ನು ಬಾಗಿಸಿ ಪೊದರಿನ ರೆಂಬೆಗಳಿಂದ ಕಟ್ಟಿದ ಒರಟಾದ ಹಿಡಿಸೂಡಿಯಲ್ಲಿ ತರಗೆಲೆ ಗುಡಿಸುವುದು ಸುಲಭದ ಕೆಲಸವಲ್ಲ. ಅಲ್ಲಲ್ಲಿ ಬೆಳೆದ ಪೊದೆ. ಕುರುಚಲು ಗಿಡ ಬಂಡೆಕಲ್ಲುಗಳ ಮಧ್ಯೆ, ಬೇಸಿಗೆಯಲ್ಲಿ ನೀರು ಹರಿಯದ ಆಳವಾದ ಕಣಿವೆ, ಕಾಲುವೆಗಳಿಗೂ ಇಳಿದು ಗೇರು, ಮಾವು, ಆಲದ ಮರ, ನೇರಳೆ ಮರಗಳಲ್ಲದೆ ಕಾಡುಮರಗಳ ತರಗೆಲೆಯನ್ನು ರಾಶಿ ಮಾಡಿ 'ಕುರ್ಕಿಲ್'ಗಳಲ್ಲಿ ತುಂಬಿ ದೂರದಿಂದ ತಂದು ಹಟ್ಟಿಯ ಹಿಂಬದಿ ರಾಶಿ ಹಾಕುತ್ತಾರೆ. ದಿನವೂ ಮಾಡುವ ಹಟ್ಟಿಯ ಕೆಲಸದೊಂದಿಗೆ ಮಳೆಗಾಲಕ್ಕೆ ಸಂಗ್ರಹಿಸಿಟ್ಟ ಈ ತರಗೆಲೆಯನ್ನು ಹಟ್ಟಿಗೆ ಪಸರಿಸುತ್ತಾರೆ. ಈ ತರಗೆಲೆಯ ರಾಶಿಗೆ ಎಣೆಲು, ಸುಗ್ಗಿ ಬೆಳೆಯ ಭತ್ತದ ಪೈರಿನ ಒಡ್ಡನ್ನು ಬೆರೆಸಲಾಗುತ್ತದೆ. ಈ ಒಡ್ಡನ್ನು ನೀರಿಲ್ಲದ ಮಜಲು ಬೆಟ್ಟು ಗದ್ದೆಗಳಿಂದ ಸಂಗ್ರಹಿಸಲಾಗುತ್ತದೆ. ಗದ್ದೆಯಲ್ಲಿ ಬಗ್ಗಿ ಇಲ್ಲವೇ ಕುಕ್ಕರುಗಾಲಲ್ಲಿ ಕುಳಿತು ಎರಡೂ ಕೈಗಳಿಂದ ಭತ್ತದ ಒಡ್ಡನ್ನು ಕೀಳುವ ಕೆಲಸವನ್ನು ಮಹಿಳೆಯರೇ ಮಾಡುತ್ತಾರೆ. ಸಾಮಾನ್ಯವಾಗಿ ಮುಂಜಾನೆ ಮತ್ತು ಮುಸ್ಸಂಜೆಯಲ್ಲಿ ನಿತ್ಯದ ಕೆಲಸವಾಗುವ ಮೊದಲು ಮತ್ತು ನಂತರದಲ್ಲಿ ಮಾಡುವ ಕೆಲಸವಿದು. ಇದನ್ನು ತರಗೆಲೆಯೊಂದಿಗೆ ಬೆರೆಸಿ ರಾಶಿ ಹಾಕಲಾಗುತ್ತದೆ. ಇದನ್ನು ಹಟ್ಟಿಗೆ ಪಸರಿಸಿ ಗೊಬ್ಬರವನ್ನಾಗಿ ಮಾಡಲಾಗುತ್ತದೆ.

ಗದ್ದೆ ಸಾಗುವಳಿಯ ಕೆಲಸ ಮುಗಿದ ಮೇಲೆ ಮಳೆಗಾಲದಲ್ಲಿ ಚಿಗುರಿದ ಮರ, ಗಿಡ , ಪೊದೆಗಳ ಸೊಪ್ಪನ್ನು ಕಾಡು- ಗುಡ್ಡಗಳಿಂದ ಸಂಗ್ರಹಿಸುತ್ತಾರೆ. ಎತ್ತರದ ಮರಗಳಾದರೆ ಕೊಂಬೆ ಏರಿ ಪುರುಷರು ಕಡಿದ ಗೆಲ್ಲುಗಳಿಂದ ಸೊಪ್ಪನ್ನು ಮಾತ್ರ ತೆಗೆದು ಮಹಿಳೆಯರು ಹೊತ್ತು ತಂದು ಹಟ್ಟಿಯ ಹಿಂಬದಿಗೆ ಹಾಕುತ್ತಾರೆ. ತಂದ ಸೊಪ್ಪುಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಸೊಪ್ಪನ್ನು ಕತ್ತರಿಸಿ 'ಕಿದಡಿಕ್' ಆಗಿ ಹಾಕುತ್ತಾರೆ. ಸೆಗಣಿ ಗಂಜಳ ಎಲ್ಲ ಸೇರಿ ಸೊಪ್ಪಿನ ಗೊಬ್ಬರವಾಗುತ್ತದೆ. ಹದಿನೈದು ದಿನ ಇಪ್ಪತ್ತು ದಿನಗಳಿಗೊಮ್ಮೆ ಈ ಗೊಬ್ಬರವನ್ನು ತೆಗೆದು ಹೊರ ಹಾಕಲಾಗುತ್ತದೆ.

ಹಟ್ಟಿಯಲ್ಲಿರುವ ಸಾಕು ಪ್ರಾಣಿಗಳು ಸೆಗಣಿ ಗಂಜಳದಲ್ಲಿ ಹೊರಳಾಡದಂತೆ ಅವುಗಳ ಕಾಲುಗಳ ಕೆಳಗೆ ಕಲ್ಲು ಹಾಸಿನ ನೆಲದ ಮೇಲೆ ತರಗೆಲೆ, ಹಸಿರು ಸೊಪ್ಪು, ಒಡ್ಡು (ಪೈರಿನ ಬುಡ) ಕಜೆ (ಒಂದು ಜಾತಿಯ ಹುಲ್ಲು, ಕಳೆ) ಗಳನ್ನು ಕಾಲಮಾನಕ್ಕಗುಣವಾಗಿ ಹರಡುತ್ತಿದ್ದರು. ಹದಿನೈದು ದಿನಕ್ಕಿಂತ ಹೆಚ್ಚಿನ ಮೂವತ್ತು ದಿನಗಳಿಗೊಮ್ಮೆ ಹಟ್ಟಿಯಿಂದ ಗೊಬ್ಬರವನ್ನು ತೆಗೆದು ಹೊರಗೆ ರಾಶಿ ಹಾಕಲಾಗುತ್ತಿತ್ತು. ಗೊಬ್ಬರ ತೆಗೆಯುವ ಕಾರ್ಯ ಗಂಡಸರು, ಹೆಂಗಸರಿಬ್ಬರದೂ ಹೌದು. ಗೊಬ್ಬರದ ಬುಟ್ಟಿಗೆ ಗೊಬ್ಬರವನ್ನು ಗೋರುವವರು (ತುಂಬುವವರು) ಗಂಡಸರಾದರೆ ತಲೆಯ ಮೇಲೆ ಹೊತ್ತು ನಡೆಯುವವರು ಹೆಣ್ಣು ಮಕ್ಕಳು. ಸೆಗಣಿ ಗಂಜಳದ ನೀರು ತಲೆ ಕಣ್ಣು ಕಿವಿ ಮೂಗುಗಳಲ್ಲಿ ಇಳಿಯುತ್ತಿರುವಾಗ ಅದನ್ನು ಹೊತ್ತು ಹೊರಹಾಕುವುದೇ ತ್ರಾಸದಾಯಕ. ಮನೆ ಗಂಡಸರಿಗೆ ಬಿಡುವಿಲ್ಲದಿದ್ದರೆ ಹೆಣ್ಣು ಮಕ್ಕಳೇ ಗೊಬ್ಬರ ಗೋರುವ ಹೊರುವ ಎರಡೂ ಕೆಲಸಗಳೊಂದಿಗೆ ಈ ಕಾರ್ಯ ನಿರ್ವಹಿಸುತ್ತಾರೆ. ಹೀಗೆ ಹಟ್ಟಿ ಹಿಂಬದಿಯಲ್ಲಿ ರಾಶಿ ಹಾಕಿದ ಗೊಬ್ಬರವನ್ನು ಆಯಾಯ ಬೆಳೆಗಳಿಗೆ ಅನುಗುಣವಾಗಿ ಗದ್ದೆಗೆ ಹೊತ್ತು ಹಾಕಲಾಗುತ್ತದೆ. ಸಾಮಾನ್ಯವಾಗಿ ಎಣೆಲು ಬೆಳೆಗೆ ಹುಡಿ ಗೊಬ್ಬರ, ಒಣಗಿದ ಗದ್ದೆಗಳಿಗೆ ಹಾಕುತ್ತಾರೆ. ಸುಗ್ಗಿಯ ಬೆಳೆಗೆ ಗದ್ದೆಯ ಬದುವಲ್ಲಿ ರಾಶಿ ಹಾಕಿ ನಂತರ ಪಸರಿಸುವುದೂ ಇದೆ. ಇಲ್ಲದಿದ್ದರೆ ಉತ್ತು ಆದ ಮೇಲೆ

ಗೊಬ್ಬರ ಹಾಕುವ ಗದ್ದೆ ಪೂರ್ತಿ ಪಸರಿಸಿ ಹಾಕಲಾಗುತ್ತದೆ. ಧಾನ್ಯದ ಬೆಳೆಗಳಿಗೆ ಪ್ರತ್ಯೇಕ ಹಟ್ಟಿಗೊಬ್ಬರ ಹಾಕುವ ಕ್ರಮವಿಲ್ಲ. ಭತ್ತದ ಬೆಳೆಗಳಿಗೆ ಹಾಕಿದ್ದೇ ಸಾಕಾಗುತ್ತದೆ. ಕೊಳಕೆ ಬೆಳೆಗೆ ಗದ್ದೆಯನ್ನು ಹದವಾದ ನೀರಿಗೆ ಉತ್ತು ಆದ ಮೇಲೆ ಹಟ್ಟಿ ಗೊಬ್ಬರ ಹಾಕಲಾಗುತ್ತದೆ.

ಗದ್ದೆಗಳಿಗೆ ಅಲ್ಲಲ್ಲಿ ಬುಟ್ಟಿಯಲ್ಲಿ ರಾಶಿ ಹಾಕಿದ ಗೊಬ್ಬರವನ್ನು ಬಗ್ಗಿ ಗದ್ದೆಯುದ್ದಕ್ಕೂ ಹೆಣ್ಣು ಮಕ್ಕಳು ಪಸರಿಸಬೇಕು. ಗಂಡಸರು ಉಳುಮೆ ಆರಂಭಿಸುವಾಗ ಕೆಸರು ಮಣ್ಣಿಗೆ ಹಾಕಿದ ಗೊಬ್ಬರ ಹರಡಿ ಎರಡು ಸಾಲು ಉಳುಮೆಯಾಗಿ ಬಿತ್ತನೆ, ನಾಟಿ ಮಾಡಲಾಗುತ್ತದೆ. ಮುಂದಕ್ಕೆ ಬಾಗಿ ಎರಡು ಕೈಯಿಂದಲೂ ಗೊಬ್ಬರವನ್ನು ಹರಡುವ ಕಾಯಕ ನೋಟಕ್ಕೆ ಸರಳವೆನಿಸಿದರೂ ಸುಲಭವಾದುದಲ್ಲ. ಸಾಮಾನ್ಯವಾಗಿ ಕೃಷಿ ಕಾರ್ಯದಲ್ಲಿ ಬಗ್ಗುವ , ಬಾಗುವ, ಹರಡುವ, ಬೀಸಿ ಪಸರಿಸುವ ಈ ಕಾಯಕಗಳೆಲ್ಲವೂ ಹೆಂಗಸರೇ ಮಾಡುತ್ತಾರೆ. ಗೊಬ್ಬರ ಮುಟ್ಟಬಾರದು ಎಂಬ ನಿಷೇಧ ಇಲ್ಲಿ ಬಳಕೆಯಲ್ಲಿಲ್ಲ. ಉಳಿದ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಗೊಬ್ಬರ ಹಾಕಬಾರದು ಎಂಬ ನಂಬಿಕೆಯಿದೆ. ಹೆಣ್ಣು-ಗಂಡು ಎನ್ನುವ ವ್ಯತ್ಯಾಸವಿಲ್ಲದೆ ಮುಟ್ಟಾಲೆ ಇಟ್ಟ ನೆತ್ತಿಯ ಮೇಲೆ ಗೊಬ್ಬರದ ಬುಟ್ಟಿಯನ್ನು ಹೊರಿಸುತ್ತಾರೆ. ಗೊಬ್ಬರ ಹೊತ್ತರೆ ಶರೀರದ ಬೆಳವಣಿಗೆ ಕುಂಠಿತವಾಗುತ್ತದೆ ಎಂಬ ನಂಬಿಕೆ ಇದ್ದರೂ ಈ ಕಾರ್ಯ ಸಾಗುತ್ತದೆ.

ಬೂದಿ :- ಅಡುಗೆ ಮನೆ ಒಲೆಯ ಮತ್ತು 'ಬರಕಲ'ದಲ್ಲಿರುವ ಅಕ್ಕಚ್ಚಿನ ಒಲೆಯ ಬೂದಿಯನ್ನು ಮನೆ ಮುಂದಿನ ಗದ್ದೆಯಲ್ಲಿ ರಾಶಿ ಹಾಕಿ ತಣ್ಣಗಾಗಿಸುತ್ತಾರೆ. ಕೆಂಡ ಆರಿದ ಬೂದಿಯನ್ನು ಗೊಬ್ಬರವಾಗಿಯೂ ಕೀಟನಾಶಕವಾಗಿಯೂ ಬಳಸುತ್ತಿದ್ದರು. ಉರುವಲಿಗಾಗಿ ಉಪಯೋಗಿಸುವ ಕಟ್ಟಿಗೆ, ಸೆಗಣಿ, ಬೆರಣಿ ಮನೆ ಹಿತ್ತಲಿನ ಕಸಕಡ್ಡಿಗಳು ಸುಟ್ಟು ಬೂದಿಯಾಗುತ್ತದೆ. ಮನೆಯೊಳಗಿನ ಅಡಿಗೆ ಒಲೆಯ ಬೂದಿ, ಹಟ್ಟಿಯ ಬರಕಲದಲ್ಲಿರುವ ಅಕ್ಕಚ್ಚಿನೊಲೆಯ ಬೂದಿ. ಅಂಗಳದಲ್ಲಿ ಭತ್ತ ಬೇಯಿಸಲು ಸುಟ್ಟ ತರಗೆಲೆ, ಮುಳ್ಳು, ಕಟ್ಟಿಗೆ ಎಲ್ಲವೂ ಬೂದಿಯಾಗಿ ಮರು ಬಳಕೆಯಾಗುತ್ತದೆ. ಗದ್ದೆಯ ಬಿತ್ತನೆ ನಾಟಿಗಿಂತ ಪೂರ್ವದಲ್ಲಿ ಹರವಿದ ಗದ್ದೆಗೆ ಗೊಬ್ಬರದೊಂದಿಗೆ ಬೂದಿಯನ್ನು ಬಳಸಿ ಹದಗೊಳಿಸುತ್ತಾರೆ. ಬೂದಿಯನ್ನು ಒಲೆಯಿಂದ ತೆಗೆದು ಅದಕ್ಕಾಗಿಯೇ ರಚಿಸಿದ ಕಳದಲ್ಲಿ ರಾಶಿ ಹಾಕುತ್ತಾರೆ. ಈ ಬೂದಿಯ ರಾಶಿಗೆ ಮನೆ ಗಂಡಸರು ಮೂತ್ರ ವಿಸರ್ಜಿಸುತ್ತಾರೆ. ಇಂತಹ ಬೂದಿಯನ್ನು ನಾಟಿಯಾದ ಮೇಲೆ ಪೈರಿಗೆ ಕ್ರಿಮಿ ಕೀಟಗಳು ಬಿದ್ದರೆ ಮುಂಜಾನೆ ಮುಸ್ಸಂಜೆಯಲ್ಲಿ ಗದ್ದೆಗೆ ಎರಚುತ್ತಾರೆ. ಬೆಂಕಿ ರೋಗ ಬಂದಾಗ ಮಧ್ಯಾಹ್ನದ ಸುಡು ಬಿಸಿಲಿಗೆ ಎರಚುವುದೂ ಇದೆ. ತರಕಾರಿ ಬೆಳೆಗೆ, ಧಾನ್ಯದ ಬೆಳೆಗೆ, ಹರಿವೆ ಸೊಪ್ಪಿಗೆ ಹುಳ ಬಿದ್ದಾಗಲೂ ಬೂದಿ ಕೀಟನಾಶಕವಾಗಿ ಬಳಕೆಯಾಗುತ್ತದೆ. ಸಾಮಾನ್ಯವಾಗಿ ಭತ್ತದ ಗದ್ದೆಗಳಲ್ಲಿ ಕಳೆ ನಿರ್ವಹಣೆಯ ಕಾರ್ಯವೂ ಜಾಣ್ಮೆಯದು. ಕೇವಲ ನಾಟಿಯಾದ ಒಂದೆರಡು ವಾರ ಕಳೆದ ಮೇಲೆ ಸಾಮೂಹಿಕವಾಗಿ ಗದ್ದೆಗಿಳಿದು ಕಳೆ ನಿರ್ವಹಣೆ ಮಾಡುತ್ತಾರೆ.

ಸುಡುಮಣ್ಣು (ತೂಟಾನ್):- ಕರಾವಳಿಯಲ್ಲಿ ಅತಿ ವಿಶಿಷ್ಟವಾಗಿ ತಯಾರಿಸುವ ಗೊಬ್ಬರವೇ ಸುಡುಮಣ್ಣು. ಮಜಲು, ಬೆಟ್ಟು ಬೈಲು ಗದ್ದೆಗಳಿಗೂ ಕೂಡಾ ಬೇಸಿಗೆಯ ಕಾಲದಲ್ಲಿ ಗದ್ದೆಯ ಬದುವಿನ ಕೊರಚಲು ಗಿಡ, ಮುಳ್ಳು, ಮರದ ಪುಟ್ಟ ಗೆಲ್ಲುಗಳನ್ನು ಕಡಿದು ಒಣ ಹಾಕುತ್ತಾರೆ. ಸಂಜೆಯ ಹೊತ್ತಿಗೆ ಕತ್ತರಿಸುವ ಈ ಕೆಲಸಕ್ಕೆ ಕರೆ ಬರಿ ಕಡ್ಪುನು (ಕರಮೆಲಿ

ಕಡ್ಪುನು) ಎನ್ನುತ್ತಾರೆ. ಹೀಗೆ ಕತ್ತರಿಸಿ ಹಾಕಿ ಹರಡಿ ಒಣಗಿದ ರಾಶಿಯನ್ನು ಅಲ್ಲಲ್ಲಿ ರಾಶಿ ಹಾಕಲಾಗುತ್ತದೆ. ಗದ್ದೆ ಹುಣಿಯಲ್ಲಿ ಮರಗಳಿದ್ದರೆ ಅದರಿಂದ ಉದುರಿದ ತರಗೆಲೆಗೆ ಈ ವೃತ್ತಾಕಾರವಾಗಿ ರಾಶಿ ಹಾಕಿ ಬೆಂಕಿ ಹಚ್ಚಲಾಗುತ್ತದೆ. ಬೆಂಕಿ ಉರಿಯುತ್ತಿದ್ದಂತೆ ರಾಶಿಯ ಬದಿಯ ಗದ್ದೆಯ ಮಣ್ಣನ್ನು ಹಾರೆಯಿಂದ ತೆಳುವಾಗಿ ಸವರಿ ಮಧ್ಯಕ್ಕೆ ಎಸೆಯಲಾಗುತ್ತದೆ. ಬೆಂಕಿ ಅತಿ ಜೋರಾಗಿ ಏಳದೆ ಸುತ್ತಲಿನ ಮಣ್ಣನ್ನು ಎಸೆಯುತ್ತ ಹದವಾಗಿ ಸುಡುವಂತೆ ನೋಡಿಕೊಳ್ಳಲಾಗುತ್ತದೆ. ಹೀಗೆ 'ಕರೆಮೆಲಿ' ಯನ್ನು ರಾಶಿ ಹಾಕುವ ಕೆಲಸ ಹೆಣ್ಣು ಮಕ್ಕಳದಾದರೆ ಬೆಂಕಿ ಕೊಡುವ ಕೆಲಸ ಗಂಡಸರದು. ಹೀಗೆ ಕೊಡುವ ಬೆಂಕಿಗೆ ಮಣ್ಣು ಪೂರ್ತಿ ಸುಟ್ಟು ಕೆಂಪಗಾದರೆ ಪ್ರಯೋಜನವಿಲ್ಲ. ಅದು ಹದವಾಗಿ ಕಪ್ಪಾಗಿ ಸುಡುವಂತೆ ನೋಡಿಕೊಳ್ಳಬೇಕು. ಬೇಸಿಗೆಯ ದಿನಗಳಲ್ಲಿ ಮಾಡುವ ಈ ಕಾರ್ಯಕ್ಕೆ ಬೆಂಕಿ ಹಚ್ಚುವ ಕಾರ್ಯ ಮುಸ್ಸಂಜೆ ನಡೆಯುತ್ತದೆ. ಬೆಂಕಿ ಹರಡದಂತೆ ಕಿಡಿ ಹಾರದಂತೆ ಎಚ್ಚರವಹಿಸ ಬೇಕಾದ ಅವಶ್ಯಕತೆಯೂ ಇದೆ. ಹೀಗೆ ಸುಡಲ್ಪಟ್ಟ ಕರೆಬದಿ ಸುಟ್ಟಾಗ 'ತೂಟಾನ' ಎಂದು ಕರೆಯುತ್ತಾರೆ. ಮರುದಿನ ಮುಂಜಾನೆ ಬಂದು ಅದನ್ನು ಬಿಡಿಸಿ ಸುಡದೆ ಇರುವ ಕಸಗಳನ್ನು ಮತ್ತೆ ಪಕ್ಕಕ್ಕೆ ರಾಶಿ ಹಾಕಬೇಕು. ಸುಟ್ಟು ಹೋಗಿದ್ದರೆ ಸುಡು ಮಣ್ಣನ್ನು ಹದವಾಗಿ ಬಿಡಿಸಿ ಬೆಂಕಿ ಆರುವಂತೆ ನೋಡಬೇಕು. ಹೀಗೆ ಸುಟ್ಟ ಮಣ್ಣು ಬಹಳ ಫಲವತ್ತಾಗಿರುತ್ತದೆ. ಇದಲ್ಲದೆ ನದಿ ಬದಿಯ ಮೆಕ್ಕಲು, ಒಣಗಿದ ಕೆರೆಗಳ ಆಳದ ಕೆಸರು ಮಣ್ಣುಗಳನ್ನು ಬುಟ್ಟಿಯಿಂದ ಹೊತ್ತು ಹಾಕಿ ಗದ್ದೆಗಳಿಗೆ ಗೊಬ್ಬರವಾಗಿ ಬಳಸುತ್ತಾರೆ. ಇದು ಅವರ ಅವಶ್ಯಕತೆ ಹಾಗೂ ಸಾಮರ್ಥ್ಯಗಳಿಗೆ ಅನುಗುಣವಾಗಿರುತ್ತದೆ. ಗೊಬ್ಬರವನ್ನು ಎಷ್ಟು ಚೆನ್ನಾಗಿ ಬಳಸುತ್ತೇವೆಯೋ ಅಷ್ಟು ಒಳ್ಳೆಯ ಫಸಲು ಸಿಗುತ್ತದೆ. ಹಾಗೆಂದು ಮಣ್ಣಿನ ಸಾರಕ್ಕಿಂತ ಹೆಚ್ಚಿನ ಗೊಬ್ಬರ ಬಳಸಿದರೆ ಪೈರು ಬಲಿಷ್ಠವಾಗಿ ಬೆಳೆಯುತ್ತದಲ್ಲದೆ ಅದರಲ್ಲಿ ಸರಿಯಾದ ತೆನೆ ಬರದೆ ಪೈರು ಮಗುಚಿಕೊಂಡು ಕೊಳೆಯುತ್ತದೆ. ಹಿತ ಮಿತವಾಗಿ ಯೋಗ್ಯ ಕಾಲಕ್ಕೆ ಗೊಬ್ಬರ ಬಳಸುವುದೂ ಕೃಷಿಯ ಜಾಣ್ಮೆಯಾಗಿದೆ. ಸಾಂಪ್ರದಾಯಿಕ ಕೃಷಿಯಲ್ಲಿ ಕ್ರಿಮಿಕೀಟಗಳ ನಿರ್ವಹಣೆಗೆ ರಾಸಾಯನಿಕಗಳ ಬಳಕೆ ಇರಲಿಲ್ಲ. ಸಮೀಪದಲ್ಲಿ ಸಿಗುವ ಸಸ್ಯಗಳನ್ನೇ ರೋಗ ನಿವಾರಣೆಗಾಗಿ ಬಳಸುತ್ತಿದ್ದರು. ಅಟಿ ಅಮವಾಸ್ಯೆಯಂದು ನೆಡುವ ಕಾಸರಕನ ಗೆಲ್ಲು ಇದನ್ನೇ ನಿರ್ದೇಶಿಸುತ್ತದೆ. ಮೈಗೆ ತುಂಬಾ ತುರಿಕೆಯನ್ನು ಉಂಟು ಮಡುವ ನೈಸ್‌ರಂಗನ್ನು ಗೊಬ್ಬರದ ಗುಂಡಿಗಳಲ್ಲಿ ಹಾಕಿ ಕೊಳೆಯಿಸಿಯೂ ಕೀಟನಾಶಕವಾಗಿ ಬಳಸುತ್ತಿದ್ದರು. ಡಿ.ಡಿ.ಟಿ ಮಾರುಕಟ್ಟೆಗೆ ಬಂದ ಮೇಲೆ ಅದನ್ನು ಯಥೇಚ್ಚವಾಗಿ ಬಳಸುತ್ತಿದ್ದರು. ಅದು ಅಪಾಯಕಾರಿಯೆಂದು ತಿಳಿದ ಮೇಲೆ ಬಳಕೆ ಕಡಿಮೆಯಾಯಿತು. ಮೈಲುತುತ್ತು, ರಂಜಕ, ಪೊಟಾಶಿಯಂ, ಪರಮಾಂಗನೇಟ್‌ಗಳು ಕ್ರಿಮಿನಾಶಕವಾಗಿ ಬಳಸುತ್ತಿದ್ದರೂ ಇಂದು ಅವುಗಳ ಬಳಕೆಯೂ ಕಡಿಮೆಯಾಗಿದೆ. ಸಾವಯವ ಕೃಷಿಯಲ್ಲಿ ಹಟ್ಟಿಗೊಬ್ಬರ ಬೂದಿಯನ್ನಲ್ಲದೆ ಬೇರೇನನ್ನು ಬಳಸುವುದಿಲ್ಲ. ಇಂದು ಸಾಮಾನ್ಯ ರೈತರು ಪೈರು ಶೀಘ್ರ ಬೆಳೆಯಲು ಯೂರಿಯಾ ಮತ್ತು ಸ್ವಲ್ಪ ಸುಫಲವನ್ನು ಬಳಸುತ್ತಾರೆ. ಎಣೆಲು ಮತ್ತು ಸುಗ್ಗಿ ಕೊಳಕೆಯಲ್ಲೂ ಇದನ್ನು ಉಪಯೋಗಿಸುತ್ತಾರೆ.

7.ರೋಗ ನಿರ್ವಹಣೆ :–ಕ್ರಿಮಿ ಕೀಟಗಳ ಬಗೆಗಿನ ತಿಳುವಳಿಕೆ ಮತ್ತು ನಿರ್ವಹಣೆ ಕೃಷಿಯ ಚಟುವಟಿಕೆಯಲ್ಲಿ ಬಹಳ ಮುಖ್ಯ. ತಾವು ಬೆಳೆಯುವ ಬೆಳೆಗೆ ಯಾವ ಕಾಲದಲ್ಲಿ ಹಾಗೂ

ಬೆಳೆಯ ಯಾವ ಹಂತದಲ್ಲಿ ಎಂತಹ ತೊಂದರೆಗಳು ಉಂಟಾಗುತ್ತದೆ ಎಂದು ಅವರು ತಿಳಿದಿರಬೇಕು. ನೀರು ಮತ್ತು ಗೊಬ್ಬರ ಪೂರೈಕೆಯ ವ್ಯತ್ಯಯದಿಂದ ಕ್ರಿಮಿ ಕೀಟಗಳ ಬೆಳವಣಿಗೆ ಉಂಟಾಗಿ ಬೆಳೆಯ ಇಳುವರಿಯ ಮೇಲೆ ಉಂಟಾಗುವ ದುಷ್ಪರಿಣಾಮಗಳು ಅಧಿಕ. ಮಹಿಳೆಯರು ಈ ಕುರಿತಾದ ಪಾರಂಪರಿಕ ಜ್ಞಾನವನ್ನು ಹೊಂದಿದ್ದಾರೆ.

ನಾಟಿ ತಳಿಗಳಿಗೆ ಬರುವ ರೋಗಗಳ ಸಂಖ್ಯೆ ನಿಯಮಿತವಿದ್ದು, ಅದಕ್ಕೆ ಪರಿಹಾರವು ಕಾಲ ಬುಡದಲ್ಲೇ ಇತ್ತು. ಸೆಗಣಿ ಗಂಜಳವನ್ನೇ ಕೀಟನಾಶಕವಾಗಿ ಸಾಂಪ್ರದಾಯಿಕ ಕೃಷಿಯಲ್ಲಿ ಬಳಸಲಾಗುತ್ತಿತ್ತು. ಬಿತ್ತುವಾಕಿಗೆ ತಿಳಿದಿದ್ದ ಬೀಜದ ಸತ್ಯಗಳು ಇಂದು ಮಾರುಕಟ್ಟೆಯಲ್ಲಿ ದೊರೆಯುವ ಬೀಜಗಳ ಸಂದರ್ಭದಲ್ಲಿ ತಿಳಿಯದಾಗಿದೆ. ಮನೆಯ ಒಳಗೆ ಮಹಿಳೆಯರೇ ಮಾಡುತ್ತಿದ್ದ ಬೀಜ ಸಂಸ್ಕರಣೆ ಸಂಗ್ರಹಣೆಗಳು ಮಾಯವಾಗಿ, ಬೀಜವು ಯಾವಾಗ ಮಾರುಕಟ್ಟೆಗೆ ಪ್ರವೇಶ ಪಡೆದು ಪರಾವಲಂಬನೆಯನ್ನು ಪಡೆಯಿತೋ ಅಂದಿನಿಂದ ರೈತರ ಸಮಸ್ಯೆಗಳ ಸ್ವರೂಪಗಳು ಬದಲಾಗುತ್ತ ಹೋದವು. ಪರಿಣಾಮ ಬೆಳೆಯ ನಿರೀಕ್ಷೆಯಲ್ಲಿ ಮಾಡಿಕೊಂಡ ಸಾಲಗಳು ಹೆಚ್ಚಾಗಿ, ರೋಗಗಳಿಂದ ಫಸಲು ಲಭಿಸದೆ ಹೋದಾಗ ರೈತರ ಆತ್ಮಹತ್ಯೆಯಂತಹ ಗಂಭೀರ ಸ್ವರೂಪದ ಸಮಸ್ಯೆಗಳು ಹುಟ್ಟಿಕೊಂಡಿವೆ. ಬೀಜವು ಕಳಪೆಯಾಗಿ ಬಳಸಿದ ಗೊಬ್ಬರ ನಕಲಿಯಾಗಿ ಕೀಟನಾಶಕವಾಗಿ ಬಳಸಿದ್ದ ರಾಸಾಯನಿಕವೂ ಅಸಲಿಯಾಗದೆ ಹೋದಾಗ ರೋಗ ನಿಯಂತ್ರಣವಿಲ್ಲದೆ ಇಳುವರಿ ಕಷ್ಟ ಸಾಧ್ಯ. ರೈತರು ದಿವಾಳಿಯಾಗಲು ಇನ್ನೇನು ತಾನೆ ಬೇಕು ? ಮಣ್ಣನ್ನೇ ನಂಬಿ ಮಣ್ಣು ಹಿಸುಕಿ ಹೊನ್ನು ಹುಡುಕಿದ ರೈತರಿಗೆ ದಕ್ಕಿದ್ದು ಬರೀ ಜಳ್ಳು ಮತ್ತು ಕಲ್ಲು ಮಾತ್ರ. ಕೃಷಿಯ ಹದವರಿತ ಮಹಿಳೆಯರು ಕೃಷಿ ಚಟುವಟಿಕೆಯ ಕೇಂದ್ರ ಬಿಂದುವಾಗಿದ್ದವರು ಕಾಲಾಂತರದಲ್ಲಿ ಅವರು ಮನೆಯ ಕೃಷಿ ಕೆಲಸಗಳಿಂದ ಹೊರಗುಳಿದಾಗ ಎಲ್ಲ ರೀತಿಯ ಸಮಸ್ಯೆಗಳು ಹುಟ್ಟಿಕೊಂಡವು.

ಬೆಳೆಗಳಿಗೆ ಬರುವ ಕ್ರಿಮಿ ಕೀಟಗಳು ತಮ್ಮ ವಂಶಾಭಿವೃದ್ಧಿಯನ್ನು ಮಾಡುವುದು ಬೆಳೆಗಳಲ್ಲಿರುವ ಕಳೆಗಳಲ್ಲಿ. ಕಳೆಯ ನಿರ್ವಹಣೆ ಸರಿಯಾಗಿ ನಡೆದರೆ ಕೀಟಗಳ ಬಾಧೆ ಸಾಧ್ಯವಾದಷ್ಟು ಕಡಿಮೆಯಾಗುತ್ತದೆ. ನೀರು–ಗೊಬ್ಬರಗಳನ್ನು ಸರಿಯಾಗಿ ಹಿತ–ಮಿತವಾಗಿ ಬಳಸಿದರೆ ರೋಗಗಳೊಂದಿಗೆ ಕ್ರಿಮಿ ಕೀಟಗಳನ್ನು ನಿಗ್ರಹಿಸಬಹುದೆನ್ನುವುದು ಅನುಭವಿ ಕೃಷಿ ಮಹಿಳೆಯರ ಅಭಿಪ್ರಾಯ. ರೋಗ ಮತ್ತು ಕ್ರಿಮಿ ಕೀಟಗಳ ಮೂಲ ಬೆಳೆಯ ಬೆಳವಣಿಗೆಯ ಹಂತದ ಮೂಲ ತತ್ವದಲ್ಲೇ ಇದೆ ಎನ್ನುವುದು ರೈತಾಪಿ ಮಹಿಳೆಯರ ನಿಲುವು. ಯಾವುದೇ ಬೆಳೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಎಷ್ಟು ಅಕ್ಕರೆಯಿಂದ ಕಾಣುತ್ತೇವೋ ಅಷ್ಟರಮಟ್ಟಿಗೆ ಬೆಳೆಗೆ ಬರುವ ಪೀಡೆಗಳು ಕಡಿಮೆಯಾಗುತ್ತದೆ ಎನ್ನುವುದು ಅವರ ಅಂಬೋಣ.

ಪಾರಂಪರಿಕವಾಗಿ ಬೆಳೆಗಳಿಗೆ ಬರುತ್ತಿದ್ದ ರೋಗಗಳ ಸಂಖ್ಯೆ ಈಗ ಹೆಚ್ಚಾಗಿದೆ. ತಾವು ಬೆಳೆಸಿದ ಬೆಳೆಯನ್ನು ರೋಗದಿಂದ ಹೇಗೆ ರಕ್ಷಿಸಬೇಕೆಂಬುದಕ್ಕೆ ಪ್ರಾಕೃತಿಕವಾಗಿಯೇ ಅವರು ಪರಿಹಾರವನ್ನು ಪರ್ಯಾಯ ಬೆಳೆ ಮಿಶ್ರ ಬೆಳೆಯನ್ನು ಬೆಳೆಯುತ್ತಿದ್ದರು. ಕಳೆ ಗಿಡವನ್ನು ಕೀಟನಾಶಕಗಳಾಗಿ ಬಳಸುತ್ತಿದ್ದರು. ಇದರಿಂದ ಮಣ್ಣಿನ ಸಾರದೊಂದಿಗೆ ರೋಗಗಳ ನಿರ್ವಹಣೆಯೂ ಇದರಿಂದ ಸಾಧ್ಯವಾಗುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಬೆಳೆ ರೋಗಗ್ರಸ್ತವಾಗದೆ ಇರಬೇಕಾದರೆ ಬೀಜಗಳ ಸಂರಕ್ಷಣೆ, ನಿರ್ವಹಣೆ ಸರಿಯಾಗಿ ನಡೆಯಬೇಕು. ಹೆಣ್ಣು ಮಕ್ಕಳು ಬಿತ್ತನೆ ಬೀಜದ ಸಂರಕ್ಷಣೆಗಾಗಿ ಸೆಗಣಿ, ಕಹಿಬೇವು, ನೆಕ್ಕಿಸೊಪ್ಪು, ಬೂದಿಗಳನ್ನು ಬಳಸಿ ಅಡಿಗೆ ಮನೆಯ ಕುತ್ತಟ್ಟಗಳಲ್ಲಿ ಸಂಗ್ರಹಿಸಿ ಶೇಖರಿಸಿಡುತ್ತಿದ್ದರು. ಇಂದಿನ ಕಾಂಕ್ರೀಟ್

ಕಾಡಿನ ಮನೆಗಳಲ್ಲಿ ಹೊಗೆಯೇ ಇಲ್ಲದೆ ಬಿತ್ತನೆ ಬೀಜಗಳು ಕಣ್ಮರೆಯಾಗಿವೆ. ಕೆಲವು ಅಮೂಲ್ಯ ತಳಿಗಳು ನಾಪತ್ತೆಯಾಗಿವೆ. ರೋಗಗಳನ್ನು , ನೀರಿನ ವ್ಯತ್ಯಯಗಳನ್ನು ಸಹಿಸಿಕೊಂಡು ಬೆಳೆಯುವ ತಳಿಗಳು ಇಂದು ಕಾಣೆಯಾಗಿವೆ. ಕೃಷಿಯ ಯಾವುದೇ ಸಂಕಟಗಳಿಗೆ ಪ್ರಾಕೃತಿಕವಾಗಿಯೂ ಪರಿಹಾರ ಕಂಡುಕೊಳ್ಳುತ್ತಿದ್ದ ಅವರ ಜ್ಞಾನದ ಸೆಲೆಗಳು ವಿನಾಶದ ಅಂಚಿನಂಚಿಗೆ ಬಂದು ನಿಂತಿವೆ.

ಕರಾವಳಿಯ ಪ್ರಮುಖ ಬೆಳೆಯಾದ ಭತ್ತದ ಗದ್ದೆಗಳಲ್ಲಿ ಸಸಿ ಹಾಕಿದ ಹತ್ತು ಹದಿನೈದು ದಿನಗಳಾದ ಮೇಲೆ ಸಸಿ ಮಡಿಯಲ್ಲಿ ಹೆಚ್ಚು ನೀರು ನಿಲ್ಲುವುದರಿಂದ ಸಸಿಯು ಕೊಳೆಯುತ್ತದೆ. ಬಿಸಿಲು ಹೆಚ್ಚಾದರೆ ಸುಡುತ್ತದೆ. ಮತ್ತು ಸಸಿಯು ಕೆಂಪಾಗಿ ಕರಗಿ ಹೋಗುತ್ತದೆ. ನಾಟಿ ಮಾಡಿದ ಮೂವತ್ತು ದಿನಗಳ ನಂತರ ಗರಿ ಸುತ್ತಲು ಹುಳು ಕಾಣಿಸಿಕೊಳ್ಳುತ್ತದೆ. ನಾಟಿ ಮಾಡಿದ ಐವತ್ತು ದಿನದ ನಂತರ ಕುತ್ತಿಗೆ ರೋಗ, ಬೂದಿ ರೋಗಗಳು ಕಾಣಿಸಿಕೊಳ್ಳುತ್ತವೆ. ಅಂದರೆ ಈ ರೋಗಗಳು ಭತ್ತದ ತೆನೆಯಲ್ಲಿ ಹಾಲು ತುಂಬುವ ಅವಧಿಯಲ್ಲಿ ಕಾಣಿಸಿಕೊಳ್ಳುವ ರೋಗಗಳು ಇವಲ್ಲದೆ ಬೊಂಬುಚ್ಚಿ ಎಂಬ ಕೀಟವು ಭತ್ತದ ತೆನೆಯ ಹಾಲನ್ನು ಹೀರುತ್ತದೆ. ಇದರಿಂದ ಕಾಳುಗಳೆಲ್ಲ ಜೊಳ್ಳಾಗಿ ಗದ್ದೆಗೆ ಗದ್ದೆಯೇ ನಾಶವಾಗುತ್ತದೆ. ಇಂಥ ವೇಳೆಯಲ್ಲಿ ಇಂಗನ್ನು ನೀರಲ್ಲಿ ಕಲಿಸಿ ಚಿಮುಕಿಸಿ ಕೀಟವನ್ನು ನಿಗ್ರಹಕ್ಕೆ ತರುತ್ತಾರೆ. ಹದಿನೈದು ದಿನಗಳಿಗೊಮ್ಮೆ ಗಂಜಳವನ್ನು ಸಹ ಚಿಮುಕಿಸಬಹುದು. ರೋಗವನ್ನು ಗುರುತಿಸುವ ಅದಕ್ಕೆ ಪರಿಹಾರ ಹೇಳುವ ವಿಚಾರವೂ ಇಲ್ಲಿತ್ತು.

ಧಾನ್ಯಗಳಾದ ಉದ್ದು, ಹುರುಳಿ, ಹೆಸರು, ಎಳ್ಳು, ಮೊದಲಾದ ಧಾನ್ಯಗಳಿಗೆ ಹೇನು, ನೊಣ, ಕೀಟಗಳ ಭಾಧೆಯಲ್ಲದೆ ಧಾನ್ಯಗಳಿಗೆ ನಂಜುರೋಗ ಬರುತ್ತದೆ. ಇವುಗಳಿಗೆ ನಿವಾರಣೆಗಾಗಿ ಬೆಳೆಯನ್ನು ಬಿತ್ತುವಾಗಲೇ ಧಾನ್ಯಗಳನ್ನು ಬೂದಿಯಲ್ಲಿ ಬೆರಸಿ ಸೆಗಣಿ ನೀರು ಸಿಂಪಡಿಸಿ ಬಿತ್ತಲಾಗುತ್ತದೆ. ಹಾಗಿದ್ದು ಕೆಲವೊಮ್ಮೆ ರಾಸಾಯನಿಕಗಳನ್ನು ಬಳಸುತ್ತಾರೆ.

ವಾರ್ಷಿಕ ಮತ್ತು ಬಹುವಾರ್ಷಿಕ ಬೆಳೆಗಳಾದ ತೆಂಗು, ಅಡಿಕೆ, ಕೊಕ್ಕೋ, ಬಾಳೆಗಳನ್ನು ಆಯಾ ಕಾಲಮಾನದ ನೆಲೆಯಲ್ಲಿ ಬಂದ ರೋಗಗಳಿಗೆ ಅನುಗುಣವಾಗಿ ಕ್ರಿಮಿ ಕೀಟ ನಾಶಕಗಳನ್ನು ಬಳಸುತ್ತಾರೆ. ಸಾಮಾನ್ಯವಾಗಿ ವಾರ್ಷಿಕ ಬೆಳೆಗಳಿಗೆ ಬರುವ ರೋಗಗಳಿಗೆ ಬಳಸುವ ರೋಗ ನಿರೋಧಕಗಳು ಪ್ರಾದೇಶಿಕವಾಗಿಯೂ ಮಹತ್ವದ್ದಾಗಿರುತ್ತಿದ್ದವು. ಪರ್ಯಾಯ ಬೆಳೆ, ಉಪಬೆಳೆಗಳಾಗಿ ಬೆಳೆಯುವುದರಿಂದ ರೋಗ ಮತ್ತು ಕ್ರಿಮಿಕೀಟಗಳ ನಿರ್ವಹಣೆ ಸಾಧ್ಯವಾಗುತ್ತಿತ್ತು. ಇದರಿಂದ ಒಳ್ಳೆಯ ಫಸಲೂ ಲಭಿಸುತ್ತಿತ್ತು. ಪ್ರಾಕೃತಿಕವಾಗಿ ಈ ಎಲ್ಲ ಸಾಧ್ಯತೆಗಳನ್ನು ಮಾಡುವುದು ಅವರಿಗೆ ಸಾಧ್ಯವಾಗುತ್ತಿತ್ತು.

8.ಕಟಾವು :– ಭತ್ತದ ಬೆಳೆ ನಾಟಿಯಾದ ಮೇಲೆ ತೆನೆಯಲ್ಲಿ ಹಾಲು ತುಂಬಿ ತೆನೆ ಬಲಿಯುವವರೆಗೂ ಗದ್ದೆಯಲ್ಲಿ ಪೈರಿನ ಬುಡದಲ್ಲಿ ನೀರಿರುವಂತೆ ನೋಡಿಕೊಳ್ಳಲಾಗುತ್ತದೆ. ಪೈರು ಕಟಾವಿನ ಒಂದು ವಾರ ಮೊದಲು ಗದ್ದೆಯ ನೀರನ್ನು ಹೊರ ಹರಿವಿಗೆ ಅವಕಾಶವಾಗುವಂತೆ ಮಾಡಿಕೊಳ್ಳಲಾಗುತ್ತದೆ. ಸುಗ್ಗಿಯ ಧಾನ್ಯ ಬಿತ್ತನೆಗಂತೂ ಇದನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಭತ್ತದ ಕೃಷಿಯೇ ಎಂದಾದರೆ ಗದ್ದೆಯ ತಳ ಒಣಗದಿದ್ದರೆ ಪೈರು ಬಲಿಯುವತ್ತ ಗಮನಕೊಟ್ಟು ಪೈರಿನ ದಳಗಳು ಹಳದಿ ಬಣ್ಣಕ್ಕೆ ತಿರುಗಿದಂತೆ ಕಟಾವು ಆರಂಭವಾಗುತ್ತದೆ. ಪೈರು ಕೊಯಿಲಿನ ಸಮಯವನ್ನು ತೆನೆಯ ಭತ್ತ ಬಲಿಯುವುದನ್ನು

ನೋಡಿ ನಿರ್ಧರಿಸಲಾಗುತ್ತದೆ. ಪಗ್ಗು ಬೇಷದಲ್ಲಿ ಆರಂಭದ ನಾಟಿಯಾಗಿದ್ದರೆ ಕನ್ಯಾ ತಿಂಗಳಿಗೆ ಕೊಯಿಲಿಗೆ ಲಭಿಸುತ್ತದೆ.

ಇಡೀ ವಾರ್ಷಿಕ ಆವರ್ತನದಲ್ಲಿ ಕನ್ಯಾ, ಬೊಂತೆಲ್ ತಿಂಗಳು ತುಂಬಾ ಒತ್ತಡದ ಕೃಷಿ ಕಾರ್ಯದ ಸಮಯ. ಒಂದೆಡೆ ಕಟಾವು , ಒಕ್ಕಣೆಯ ಕೆಲಸ. ಇನ್ನೊಂದೆಡೆ ಸುಗ್ಗಿಯ ನಾಟಿ ಕಾರ್ಯ. ಎಣೆಲು ಬೆಳೆಯಲ್ಲಿ ಬೊಟ್ಟು ಮಜಲು, ಬೈಲು ಎಂದು ಎಲ್ಲಾ ಗದ್ದೆಗಳು ಸಾಗುವಳಿ ಆರಂಭವಾಗಿರುವುದರಿಂದ ಕೊಯಿಲು ಬಿರುಸಾಗಿ ಸಾಗುತ್ತದೆ. ಸರಿಯಾಗಿ ಕೃಷಿ ಕೂಲಿ ಕಾರ್ಮಿಕರು ಸಿಗದೇ ಇದ್ದರೆ ಬೆಳೆದ ಬೆಳೆಯೂ ಗದ್ದೆಯಲ್ಲೇ ಬಿದ್ದು ನಾಶವಾಗುತ್ತದೆ. ಎಲ್ಲವೂ ಸರಿಯಾಗಿ ಕಾಲಮಾನಕ್ಕೆ ಅನುಗುಣವಾಗಿ ಮಳೆಯಾದರೆ ಬೆಳೆಯೂ ಸರಿಯಾಗಿ ಬರುತ್ತದೆ. ಕನ್ಯಾ ತಿಂಗಳಲ್ಲಿ ಕೊಯಿಲು ಕೆಲಸ ನಡೆಯುವವಾಗ ಮಳೆ ಬಂದರೆ ಕಟಾವಿನ ಕಾರ್ಯ ಕಷ್ಟವಾಗುತ್ತದೆ. ಮಳೆಗಾಲ ಕಳೆದು ಬರುವ ಹಿಂಗಾರು ಮಳೆಗೆ ಒಂದೆಡೆ ಕೊಯಿಲಿನ ಕೆಲಸ ಇನ್ನೊಂದೆಡೆ ನಾಟಿಯ ಕೆಲಸವೂ ಇರುತ್ತದೆ. ಬೆಳೆದು ನಿಂತ ಗದ್ದೆ ಪೈರಿನಲ್ಲಿ ಬೈಲುಗದ್ದೆಯಾದರೆ ನೀರಲ್ಲಿ ನಿಂತು ಕೊಯಿಲು ಮಾಡಬೇಕು. ಬೆಟ್ಟು ಮಜಲು ಗದ್ದೆಗಳು ಒಣಗಿರುತ್ತದೆ. ಪೈರು ಕಟಾವಿಗೆ ಹರಿತವಾದ ವಿಶಿಷ್ಟವಾದ ಹಲ್ಲುಗಳಿರುವ ಕತ್ತಿಯಿದೆ. ಇದನ್ನು 'ಪರ್ಕತ್ತಿ' ಎನ್ನುತ್ತಾರೆ. ಇದರಿಂದ ಸ್ವಲ್ಪ ಬುಡವನ್ನು ಬಿಟ್ಟು ಪೈರನ್ನು ಕಟಾವು ಮಾಡಲಾಗುತ್ತದೆ. ಎಡಗೈಯಲ್ಲಿ ಹಿಡಿ ಹಿಡಿಯಾಗಿ ಪೈರನ್ನು ಹಿಡಿದು ಬಲಗೈಯಲ್ಲಿ ಕತ್ತರಿಸುತ್ತ ಮುಂದಕ್ಕೆ ಸಾಗುತ್ತಾರೆ. ಎರಡು ಮುಷ್ಠಿ ಪೈರು ಆದಾಗ ಒಂದು 'ಪತ್ತು' ಪೈರನ್ನು ತೆಗೆದು 'ಸೂಡಿ' ಕಟ್ಟಲಾಗುತ್ತದೆ. ಸೂಡಿ ಕಟ್ಟುವ ಶೈಲಿಯೂ ಆಕರ್ಷಕವಾದುದು. ಹೀಗೆ ಕಟ್ಟಿದ ಸೂಡಿಯನ್ನು ಹೂ ಅರಳಿಸಿದಂತೆ ಅರಳಿಸಿ ಇಡಲಾಗುತ್ತದೆ. ಕೊಯಿಲಾದ ಗದ್ದೆಯಲ್ಲಿ ಸೂಡಿಗಳನ್ನು ಹಾಗೆ ಬಿಡಿಸಿ ಇಡುವುದೇ ಒಂದು ಸೊಬಗು. ಹಾಗೆ ಬಿಡಿಸಿ ಇಡುವುದರಿಂದ ಪೈರು ಕೊಯಿಲಾಗಿ ಸರಿಯಾಗಿ ಒಣಗುತ್ತದೆ. ಸೂಡಿಗಳನ್ನು ಕತ್ತರಿಸಿದ ಪೈರಿನ ಬುಡ (ಒಡ್ಡು) ದಲ್ಲಿ ಇಡುವುದರಿಂದ ಬೈ ಹುಲ್ಲು ಭತ್ತ ಚೆನ್ನಾಗಿ ಒಣಗುತ್ತದೆ. ಕೊಯಿಲಾದ ಮೇಲೆ ಒಂದು ದಿನ ಒಣಗಲು ಬಿಟ್ಟು ಮರುದಿನ ಅದನ್ನು ಕಟ್ಟಿ ಕಟ್ಟಿ ಹೊರೆಯಾಗಿಸಿ ಮನೆಯಂಗಳಕ್ಕೆ ಹೊತ್ತು ತರುತ್ತಾರೆ. ಹೀಗೆ ಪೈರು ಕಟ್ಟ ಕಟ್ಟುವ ಕೆಲಸವೂ ಜಾಣ್ಮೆಯದು. ಸಾಮಾನ್ಯವಾಗಿ ಯುವಕರು ಯುವತಿಯರೆನ್ನದೆ ಹೊರೆ ಹೊರಲು ಸಾಧ್ಯವಿರುವವರೆಲ್ಲರು ಈ ಕೆಲಸವನ್ನು ಮಾಡುತ್ತಾರೆ.

ಧಾನ್ಯಗಳನ್ನು ಕಟಾವು ಮಾಡಲು ಸಾಮಾನ್ಯ ಮುಂಜಾನೆ ಮುಸ್ಸಂಜೆ ಒಣಗಿದ ಧಾನ್ಯದ ಗದ್ದೆಗಳಲ್ಲಿ ಕುಕ್ಕರುಗಾಲಲ್ಲಿ ಕುಳಿತು ಎರಡು ಕೈಗಳಿಂದಲೂ ಧಾನ್ಯದ ಗಿಡಗಳನ್ನು ಕೀಳುತ್ತಾರೆ. ಹಾಗೆ ಕೀಳುವಾಗ ಕೈ ತುಂಬಾ ಒರಟಾಗುತ್ತದೆ. ಕೈಯ್ಯಲ್ಲಿ ರಕ್ತವೂ ಬರುತ್ತದೆ. ಬೊಗಸೆ ತುಂಬ ಧಾನ್ಯದ ಸಸಿಗಳಾದ ಮೇಲೆ ಅದನ್ನು ಗದ್ದೆಯಲ್ಲಿ ಅಲ್ಲಲ್ಲಿ ರಾಶಿ ಮಾಡುತ್ತಾರೆ.

ಮಲ್ಲಿಗೆ ಕೃಷಿಯಲ್ಲಿ ಮಲ್ಲಿಗೆ ಕೊಯ್ಯುವುದು ಬಹಳ ತಾಳ್ಮೆ ಮತ್ತು ಶ್ರದ್ಧೆಯನ್ನು ಬಯಸುತ್ತದೆ. ಒಂದೊಂದೇ ಹೂವನ್ನು ಗೊಂಚಲಿನಲ್ಲಿರುವ ಉಳಿದ ಮೊಗ್ಗುಗಳಿಗೆ ನೋವಾಗದಂತೆ ಕೀಳುವುದು ಬಹಳ ಮುಖ್ಯ. ಕಣ್ಣಲ್ಲಿ ಕಣ್ಣಿಟ್ಟು ಮುಂಜಾನೆಯಲ್ಲಿ ಸೂಕ್ಷ್ಮಗ್ರಹಿಕೆಯಿಂದ , ಹೂ ಕೊಯ್ಯಬೇಕಾಗುತ್ತದೆ. ಹೂವನ್ನು ಕೊಯ್ಯದೆ ಗಿಡದಲ್ಲಿ ಹಾಗೆ ಬಿಟ್ಟರೆ ಗಿಡಕ್ಕೆ ಹುಳ ಬೀಳುತ್ತದೆ. ಹಿಂದಿನ ದಿನ ನಾಳಿನ ಮೊಗ್ಗುಗಳನ್ನು ಕೊಯ್ದು

ಉಳಿದರೂ, ಮರುದಿನ ಬೆಳಗಾತ ಮತ್ತೆ ಅರಳಿದ ಹೂಗಳನ್ನು ಕೊಯ್ಯುತ್ತಾರೆ. ಹೂ ಕೊಯ್ಯುವ ಮತ್ತು ಕಟ್ಟುವ ಜಾಣ್ಮೆ ಹೆಣ್ಣು ಮಕ್ಕಳದೇ ಆಗಿದೆ.

ಒಂದೊಂದನ್ನೆ ಆಯ್ದು ಕೊಯ್ಯುವುದು ಬಿಡಿಸುವುದು, ತೆನೆ ಅಥವಾ ಗೊನೆ ಕಟಾವು, ಬುಡ ಕಟಾವು, ನೆಲದ ಅಡಿಯಿಂದ ತೆಗೆಯುವ ಬೆಳೆಗಳು ಹೀಗೆ ಬೇರೆ ಬೇರೆ ಸ್ವರೂಪದಲ್ಲಿ ಕಟಾವು ನಡೆದರೂ ಹೆಚ್ಚಾಗಿ ಕಟಾವನ್ನು ಕ್ರಿಯಾಶೀಲಗೊಳಿಸುವವರು ಹೆಣ್ಣು ಮಕ್ಕಳೇ ಆಗಿದ್ದಾರೆ.

ತೆಂಗಿನಕಾಯಿ ಮತ್ತು ಅಡಿಕೆಯನ್ನು ಗೊನೆಗಳಲ್ಲಿ ಮರದಿಂದ ಕೀಳುವವರು ಪುರುಷರಾದರೂ ಕೆಳಗೆ ಬಿದ್ದ ಕಾಯಿಯನ್ನು ಒಂದೊಂದಾಗಿ ಹುಡುಕಿ ಆಯ್ದುಕೊಳ್ಳುವವರು ಹೆಣ್ಣು ಮಕ್ಕಳು. ಆರಿಸಿ ಕಳುಹಿಸುವ ಈ ಕಾಯಕ ಮಹತ್ವದ್ದು,. ಬೆನ್ನು ಬಾಗಿಸಿ ಹುಡುಕಿ ಕತ್ತು ಮೇಲೆತ್ತಿ ಆಯ್ದುಕೊಳ್ಳುವ ಈ ಕೆಲಸ ನಿರಂತರವಾಗಿ ನಡೆಯುತ್ತದೆ.

9.ಒಕ್ಕಣೆ :– ಬೈಲು ಗದ್ದೆಗಳಲ್ಲಿ ನೀರಿರುವುದರಿಂದ ಪೈರಿನ ಕಟ್ಟವನ್ನು ಇಡಲು ತೆಂಗಿನ ಸೋಗೆಯೋ, ತಾಳೆ ಮರದ ಎಲೆಯೋ, ಕೆಳಕ್ಕೆ ಹಾಕುತ್ತಾರೆ. ಅದರ ಮೇಲೆ ಹುರಿ ಹಗ್ಗ ಇಲ್ಲವೇ ಬೈ ಹುಲ್ಲಿನ ಹಗ್ಗವನ್ನು ಒಂದು ಹೊರೆಯಷ್ಟಾಗುವಷ್ಟು ಕಟ್ಟಲು ಸಾಧ್ಯವಾಗುವುದನ್ನು ಹಾಕುತ್ತಾರೆ. ಅಲ್ಲಲ್ಲಿರುವ ಪೈರಿನ ಸೂಡಿಗಳನ್ನು ಬಗ್ಗಿ ಒಂದು ಕೈಯಲ್ಲಿ ಮೂರು ಸೂಡಿಗಳನ್ನು ಹಿಡಿಯುತ್ತಾರೆ. ಬಿಡಿಸಿಟ್ಟ ಪೈರಿನ ಸೂಡಿಯ ಒಂದು ಬದಿಯಲ್ಲಿ ನಾಲ್ಕು ಸೂಡಿ ಹಿಡಿದಿದ್ದು ಪೈರಿನ ಕಟ್ಟದ ಬುಡಕ್ಕೆ ಕಟ್ಟ ಭದ್ರವಾಗಲು 'ಮದ್ಮಲ್' ಮಡಚುತ್ತಾರೆ. ಹೀಗೆ ಮದ್ಮಲ್ ಮಡಚಿದ ಮೇಲೆ ಪೈರನ್ನು ಸೂಡಿಯಾಗಿ ಇಡುತ್ತಾರೆ. ಒಂದು ಬದಿಗೆ ಎಂಟರಿಂದ ಹತ್ತು ಸೂಡಿ ಬಂದು ಮಧ್ಯ ಭಾಗಕ್ಕೆ ತೆನೆ ಬರುವಂತೆ ಜೋಡಿಸುತ್ತಾರೆ. ಬಿಗಿಯುವ ಹಗ್ಗ ತೆನೆಗೆ ಬಿಗಿದು ಭತ್ತ ಬೀಳದಂತೆ ಎಚ್ಚರವಹಿಸಲಾಗುತ್ತದೆ. ಪೈರಿನ ಕಟ್ಟಗಳನ್ನು ಅಂಗಳದಲ್ಲಿ ಒಂದು ಕ್ರಮ ಪ್ರಕಾರ ಜೋಡಿಸುತ್ತಾರೆ. ಎರಡು ಕಟ್ಟದ ಮಧ್ಯಭಾಗಕ್ಕೆ ಮೂರನೇ ಕಟ್ಟ ಬೀಳುವಂತೆ ಗಮನಿಸಲಾಗುತ್ತದೆ. ಹೀಗೆ ಹಾಕುವ ಪೈರಿನ ಸೂಡಿಗಳನ್ನು 'ಪೇಜಿ' ಎನ್ನುತ್ತಾರೆ. ಸಾಮಾನ್ಯವಾಗಿ ಅಂಗಳದಲ್ಲಿ ತಲೆಯ ಮೇಲಿನ ಹೊರೆಯನ್ನು ಹೊತ್ತು ಹಾಕಲು ಸಾಧ್ಯವಾಗುವಷ್ಟು ಎತ್ತರಕ್ಕೆ ಜೋಡಿಸಲಾಗುತ್ತದೆ. ಮಧ್ಯದಲ್ಲಿ ಪಡಿಮಂಚವನ್ನು ಇಡುವಷ್ಟು ಜಾಗವಿದ್ದರೆ ಒಳಿತು ಎನ್ನುತ್ತಾರೆ. ಮಳೆ ಬರುವ ಲಕ್ಷಣವಿದ್ದರೆ ಪೇಜಿಯನ್ನು ಚೆನ್ನಾಗಿ ಜೋಡಿಸಲಾಗುತ್ತದೆ. ಅದನ್ನು 'ಬೇಪುವುದು' ಎನ್ನುತ್ತಾರೆ. ಪೇಜಿ ಹಾಕಿದ್ದನ್ನು ಮಧ್ಯದ ಪಡಿಮಂಚಕ್ಕೆ ಇಟ್ಟು ಬಡಿಯುವ ಕಾಯಕ ಆ ದಿನ ಇಲ್ಲದಿದ್ದರೆ ಮರು ದಿನವೂ ನಡೆಯುತ್ತದೆ. ಪಡಿ ಮಂಚಕ್ಕೆ ಬಡಿಯುವ ಕಾಯಕವನ್ನು ಸಾಮಾನ್ಯವಾಗಿ ಹೆಣ್ಣು ಮಕ್ಕಳು ಮಾಡುತ್ತಾರೆ. ಹಾಗೆ ಪೈರಿನ ಎರಡು ಸೂಡಿಗಳನ್ನು ಕೈಯಲ್ಲಿ ಹಿಡಿದು ಹಿಂಬದಿಯಿಂದ ಹಿಂದಕ್ಕೆ ಒಯ್ದು ಪಡಿಮಂಚಕ್ಕೆ ಬಡಿಯುತ್ತಾರೆ. ಎರಡು ಪೈರಿನ ಸೂಡಿಗಳನ್ನು ಕೈಯಲ್ಲಿ ಹಿಡಿದು ಹಿಂದಕ್ಕೆ ಬೀಸಿ ಬಲವಾಗಿ ಹೊಡೆದಾಗ ಪೈರಿನ ಭತ್ತದ ಪಡಿ ಮಂಚಕ್ಕೆ ಬಡಿದು ಭತ್ತ ಕೆಳಗೆ ಬೀಳುತ್ತದೆ. ಹೀಗೆ ತೆನೆಯಲ್ಲಿರುವ ಭತ್ತ ಬಿಡಿ ಬಿಡಿಯಾಗಿ ರಾಶಿ ಬೀಳುತ್ತದೆ. ಹೀಗೆ ಪೈರು ಬಡಿಯುವಾಗ ನಾಲ್ಕು ಕಾಲು ಮುಚ್ಚಿ ಭತ್ತ ತುಂಬಿದರೆ ಅದಕ್ಕೆ ಒಂದು ವಿಶೇಷ ಆಚರಣೆ ಇದೆ. ಒಂದು ಕಾಯಿಯನ್ನು ಪಡಿಮಂಚಕ್ಕೆ ಬಡಿದು ದೀಪ ಹಚ್ಚಿ ಆರತಿ ಬೆಳಗುತ್ತಾರೆ. ಹೀಗೆ ಮಾಡುವ 'ವಿಧಿ' ಗೆ 'ಪೊಲಿ ಲೆಪ್ಪುನ' ಎನ್ನುತ್ತಾರೆ. ಪೈರು ಬಡಿಯುವಾಗ ಭತ್ತ ಕಣ್ಣಿಗೆ ಚುಚ್ಚದಂತೆ ತಲೆ ತುಂಬಾ ಆವರಿಸುವಂತೆ ಬಟ್ಟೆ ಸುತ್ತಲಾಗುತ್ತದೆ.

ಬೈ ಹುಲ್ಲನ್ನು ಎಲ್ಲ ಪ್ರದೇಶಗಳಂತೆ ಇಲ್ಲಿ ರಾಶಿ ಹಾಕುವುದಿಲ್ಲ. ಇದನ್ನು ಬೈಹುಲ್ಲು ಬೇಯುವುದು ಎನ್ನುತ್ತಾರೆ. ಸೂಡಿ ಕಟ್ಟಿದ ಬೈಹುಲ್ಲನ್ನು ಜೋಡಿಸಿ ಬೇಪಿದಾಗ ರಥದಂತೆ ಕಾಣುತ್ತದೆ. ಬೈ ಹುಲ್ಲಿನ ರಾಶಿಯನ್ನು ಹೀಗೆ ಜೋಡಿಸುವುದೂ ಒಂದು ಕಲೆ, ಚೌಕಾಕಾರದಲ್ಲಿ ಇಲ್ಲವೇ ವೃತ್ತಾಕಾರವಾಗಿ ಸೊಂಟಕ್ಕಿಂತ ಮೇಲೆ ಬುಡವನ್ನು ಒಂದೇ ಸಮತಲಕ್ಕೆ ಜೋಡಿಸಿ ತುದಿಯನ್ನು ಮದ್ಯ ಭಾಗಕ್ಕೆ ಬರುವಂತೆ ಜೋಡಿಸುತ್ತಾರೆ. ಹೀಗೆ ಒಂದೇ ಸಮನಾಂತರಕ್ಕೆ ಹೊಂದಿಸುತ್ತಾರೆ. ಇದನ್ನು ರಾಶಿ ಹಾಕುವ ಜೋಡಿಸುವ ಕೆಲಸ ಹೆಣ್ಣು ಮಕ್ಕಳು ಮಾಡುತ್ತಾರೆ. ಬೈ ಹುಲ್ಲಿನ ಮುಟ್ಟೆಯ ಮಧ್ಯ ಭಾಗದಲ್ಲಿ ನಿಂತು ಹೊಂದಿಸುವ ಕೆಲಸ ಕಲಾತ್ಮಕವಾಗಿ ಸಾಗುತ್ತದೆ. ಮೇಲೆ ಸಾಗಿದಂತೆಲ್ಲ ರಥದಂತೆ ಜೋಡಿಸುವುದೂ ಮಳೆ ನೀರು ಒಳಗೆ ಬೀಳದಂತೆ ಹೊಂದಿಸುವುದೂ ಜಾಣ್ಮೆಯ ಕೆಲಸ. ಬೈ ಹುಲ್ಲಿನ ರಾಶಿ ಒಣಗಿದ್ದು, ಮಳೆಗಾಲದಲ್ಲಿ ಪಶುಗಳಿಗೆ ಒಳ್ಳೆಯ ಆಹಾರವಾಗುತ್ತದೆ. ಬೈಹುಲ್ಲಿಗೆ ನೀರು ಬಿದ್ದು ಒದ್ದೆಯಾದರೆ ಅದು ಯಾವುದಕ್ಕೂ ಪ್ರಯೋಜನವಿಲ್ಲ. ಅದು ಹಟ್ಟಿಗೆ ಹಾಕಲು ಸಾಧ್ಯವಿಲ್ಲ.

ಇದಲ್ಲದೆ ಬೈ ಹುಲ್ಲಿನ ಸೂಡಿ ಬಿಚ್ಚಿ 'ಅರೆಬೈ' ಯನ್ನಾಗಿ ಮಾಡಿ ಬಡಿದು ರಾಶಿ ಮಾಡಲಾಗುತ್ತದೆ. ಸೂಡಿ ಬೈಯನ್ನು ಚೆನ್ನಾಗಿ ರಾಶಿ ಮಾಡಿದ ಮೇಲೆ ಮಳೆಗಾಲಕ್ಕಿಂತ ಪೂರ್ವದಲ್ಲಿ ಬೈ ಹುಲ್ಲನ್ನು ಹದಗೊಳಿಸುವ ಬಡಿಯುವ ಕಾಯಕವೂ ಹೆಣ್ಣು ಮಕ್ಕಳು ಮಾಡುತ್ತಾರೆ. 'ಮುಟ್ಟೆ' ಮಾಡಿದ ಬೈ ಹುಲ್ಲನ್ನು ಬಿಡಿಸಿ ಸಾಲಾಗಿ ಸೂಡಿಗಳನ್ನು ಅಂಗಳದಲ್ಲಿ ಜೋಡಿಸುತ್ತಾರೆ. ಎದುರು ಬದುರಾಗಿ ನಿಂತು ಬೈಹುಲ್ಲು ಬಡಿಯುವ ಕೋಲು ಬೈತಡ್'ನಿಂದ ಬಡಿದು ಅದರಲ್ಲಿರುವ ಭತ್ತವನ್ನು ಕೆಳಕ್ಕೆ ಬೀಳುವಂತೆ ಮಾಡುತ್ತಾ. ಹಿಂದೆ ಹಿಂದೆ ಸಾಗುತ್ತಾ ಹೋಗುತ್ತಾರೆ. ಹೀಗೆ ಬಡಿಯುವುದರಿಂದ ಬೈ ಹುಲ್ಲಿನಲ್ಲಿ ಇದ್ದ ಭತ್ತ ಕೆಳಕ್ಕೆ ಬೀಳುತ್ತದೆ. ಸಾಮಾನ್ಯವಾಗಿ ಸೂಡಿ ಬೈಹುಲ್ಲನು ಬಡಿಯುವಾಗ ಸೂಡಿ ಕಟ್ಟಿದ ಪೈರಿನ ತೆನೆಯಲ್ಲಿನ ಭತ್ತ ಉದುರುವಂತೆ ಒಂದು ಪೆಟ್ಟು ಆ ತುದಿಗೆ ಇನ್ನೊಂದು ಪೆಟ್ಟು ಈ ತುದಿಗೆ ಬೀಳುವಂತೆ ಎರಡೆರಡು ಬಾರಿ ಚಾಣಾಕ್ಷತೆಯಿಂದ ಹೊಡೆಯುತ್ತಾರೆ. ಈ ಕೆಲಸಕ್ಕೆ ಇಬ್ಬರು ಇಲ್ಲವೇ ನಾಲ್ಕು ಜನರು ಬೇಕು. ಆ ಕೆಲಸದಲ್ಲೂ ಒಂದು ಲಯವಿದೆ. ಬೈಹುಲ್ಲು ಹೊಡೆದಾದ ಮೇಲೆ ಸೂಡಿಗಳನ್ನು ಸರಿಯಾಗಿ ಭತ್ತ ಉದುರುವಂತೆ ಉದುರಿಸಿ ಮತ್ತೆ ಚೆನ್ನಾಗಿ ಜೋಡಿಸುತ್ತಾರೆ. ಉದುರಿದ ಭತ್ತವನ್ನು ಗುಡಿಸಿ ರಾಶಿ ಮಾಡಿಯೂ ಊಟಕ್ಕಾಗಿ ಬಳಸಲಾಗುತ್ತದೆ. ಇದನ್ನು 'ಬೈತರಿ' ಎನ್ನುತ್ತಾರೆ.

ಬೈ ಹುಲ್ಲನ್ನು ಬಡಿದಾಗ ಒಂದು ಸಾಲಿನಲ್ಲಿ ಒಂದು ಸೂಡಿಯ ಪಕ್ಕ ಒಂದನ್ನು ಸಾಲಾಗಿ ಜೋಡಿಸುತ್ತಾರೆ. ಒಮ್ಮೆ ಬೈ ಹುಲ್ಲನ್ನು ಬಡಿದ ಮೇಲೆ ಅದನ್ನು ಮಗುಚಿ ಹಾಕಿ ಮತ್ತೆ ಇನ್ನೊಮ್ಮೆ ಬಡಿದು ಮತ್ತೆ ಮೊದಲಿನಂತೆ ಜೋಡಿಸುತ್ತಾರೆ. ಹೀಗೆ ಬೈಹುಲ್ಲು ಬಡಿಯುವುದರಿಂದ ಪಡಿ ಮಂಚಕ್ಕೆ ಬಡಿಯುವಾಗ ಉಳಿದ ಭತ್ತವಲ್ಲದೆ ಸೂಡಿಗೆ ಕಟ್ಟುವಾಗ ಉಳಿದ ತೆನೆಯಲ್ಲಿರುವ ಭತ್ತವೂ ಕೆಳಕ್ಕೆ ಬೀಳುತ್ತದೆ. ಹಿಂದೆ ರೈತಾಪಿ ವರ್ಗಕ್ಕೆ ಮಳೆಗಾಲದಲ್ಲಿ ಊಟಕ್ಕೆ ಇದೇ ಅಕ್ಕಿಯನ್ನು ಉಪಯೋಗಿಸುತ್ತಿದ್ದರು. ಇದನ್ನು ಬೈತರಿ ಎನ್ನುತ್ತಾರೆ. ಈ ಅಕ್ಕಿ ಒಂದು ರೀತಿಯ ವಾಸನೆ ಮತ್ತು ಒಂದಿಷ್ಟು ಕಹಿಯಾಗಿಯೂ ಇರುತ್ತದೆ. ಶ್ರೀಮಂತರು ದನ-ಕರುಗಳಿಗೆ ಗಂಜಿಗೆ ಬಳಸಿದರೆ ಬಡವರು ಊಟಕ್ಕೆ ಬಳಸುತ್ತಿದ್ದರು. ಭೂಮಿಯ ಒಡೆಯನಿಗೆ ಗೇಣಿ ಕೊಟ್ಟು ಉಳಿಯುವ ಧಾನ್ಯದ ಪ್ರಮಾಣ ಅತಿ ಕಡಿಮೆ ಇರುತ್ತಿದ್ದುದರಿಂದ ಹಸಿವು ನೀಗಿಸಲು ಅನ್ನ ಸಿಗುವುದೇ ಕಷ್ಟವಾಗಿತ್ತು.

ಬೈ ಹುಲ್ಲು ಮತ್ತು ಭತ್ತ ಗದ್ದೆ ಸಾಗುವಳಿಯ ಪ್ರಮುಖ ಉತ್ಪನ್ನಗಳಾಗಿದ್ದು ಹೀಗೆ

ಬಡಿದು ಸ್ವಚ್ಚಗೊಳಿಸಿದ ಬೈ ಹುಲ್ಲನ್ನು ಬೇರೆ ಬೇರೆ ಸ್ವರೂಪದಲ್ಲಿ ಬಳಸುತ್ತಿದ್ದರು. ಸೂಡಿ ಕಟ್ಟಿದ ಬೈ ಹುಲ್ಲು ಒಂದು ವಿಧವಾದರೆ ಸೂಡಿ ಬಿಚ್ಚಿದ ಬೈ ಹುಲ್ಲನ್ನು 'ಅರೆಬೈ' ಎನ್ನುತ್ತಾರೆ. ಈ ಸೂಡಿ ಬೈಯನ್ನು ಕೇವಲ ಸಾಕು ಪ್ರಾಣಿಗಳಿಗೆ ಮೇವಾಗಿ ಮಾತ್ರವಲ್ಲ ಮನೆಯ ಛಾವಣಿಯನ್ನು ಭದ್ರವಾಗಲು ಉಂಡ್ಯವಾಗಿ ಬಳಸುತ್ತಾರೆ. 'ಉಂಡ್ಯ' ಕಟ್ಟುವುದಕ್ಕೂ ಒಂದು ಪಾರಂಪರಿಕ ಜ್ಞಾನ ಇತ್ತು. ಸೂಡಿ ಬೈಹುಲ್ಲನ್ನು ಬೈ ತಡ್‌ನಿಂದ ಹೊಡೆದು ಸ್ವಚ್ಚಗೊಳಿಸಿದ ಮೇಲೆ ಆ ಸೂಡಿಯಲ್ಲಿರುವ ಸಣ್ಣ ಸಣ್ಣ ಬೈಹುಲ್ಲನ್ನು ಕೊಡವಿ ದಪ್ಪವಾಗಿರುವ ಪೈರಿನ ದಂಡನ್ನು ಎರಡು ಮುಷ್ಠಿಯಾಗಿ ಒಟ್ಟುಗೂಡಿಸಿ ತುದಿಯಲ್ಲಿ ಗಟ್ಟಿಯಾಗಿ ಬಿಚ್ಚಿ ಹೋಗದಂತಹ ಗಟ್ಟಿಯಾದ ಒಂದು ಗಂಟು ಹಾಕುತ್ತಾರೆ. ಇದನ್ನು ಮನೆಯ ಮಾಡಿಗೆ ಜೋಡಿಸಿ ಹೆಣೆಗೆ ಹೆಣೆಯುವುದರಿಂದ ಮಳೆ ನೀರು ಒಳಗೆ ಬರುವುದಿಲ್ಲ. ಗುತ್ತಿನ ಮನೆಗಳಿಗೆ, ಉಳ್ಳವರ ಮನೆಗಳಿಗೆ ಸಾವಿರ ಸಾವಿರ ಸಂಖ್ಯೆಯ ಉಂಡ್ಯಗಳನ್ನು ಕಟ್ಟಿ ಹೊದೆಸುತ್ತಾರೆ. ಹೀಗೆ ಹೊದೆಸಿದ ಉಂಡ್ಯ ಎರಡು ವರ್ಷಗಳ ಬಾಳಿಕೆ ಬರುತ್ತದೆ. ಬಡವರ ಮನೆಗಳಿಗೆ ವಿಶಾಲವಾಗಿ ಹರಡಿದ ಪದವುಗಳಲ್ಲಿ ಬೆಳೆವ ಮುಳಿಹುಲ್ಲನ್ನು ಕತ್ತರಿಸಿ ಸೂಡಿಕಟ್ಟಿ ಸಂಗ್ರಹಿಸಿ ಹೊದೆಸುತ್ತಾರೆ. ಈ ಎರಡೂ ಹುಲ್ಲುಗಳು ಮನುಷ್ಯ ಮತ್ತು ಪ್ರಾಣಿಯ ವಾಸಕ್ಕೆ ಬೆಚ್ಚಗೆ ಮತ್ತು ಭದ್ರತೆಯನ್ನು ನೀಡುತ್ತದೆ. ಮಳೆಗಾಲದಲ್ಲಿ ಬೆಚ್ಚಗಾಗಿಯೂ ಬೇಸಿಗೆಯಲ್ಲಿ ತಂಪಾಗಿಯೂ ಇರುತ್ತದೆ. ಕೃಷಿಯ ಅನ್ವೇಷಣೆಯೊಂದಿಗೆ ಮನುಷ್ಯನ ಅವಾಸಸ್ಥಾನದ ರಕ್ಷಣೆಯನ್ನು ಬಳಸಿಕೊಂಡ ಹಿರಿಮೆ ಕೃಷಿಕರದು. ಉಂಡ್ಯವನ್ನು ಹೆಣೆಯುವವರು ಹೆಣ್ಣು ಮಕ್ಕಳೇ ಆಗಿದ್ದಾರೆ. ಈ ಕಲಿಕೆ ಮತ್ತು ಜಾಣ್ಮೆ ಹೆಣ್ಣು ಮಕ್ಕಳ ಅನ್ವೇಷಣೆ ಮತ್ತು ವೈಶಿಷ್ಟ್ಯ. ಮನೆಯ ಮಾಡಿಗೆ ಹೊದೆಸಿದ ಉಂಡ್ಯವನ್ನು ಎರಡು ವರ್ಷಗಳಾದ ಮೇಲೆ ತೂಟಾನ್‌ಗೆ ಹಾಕಿ ಸುಡುತ್ತಾರೆ. ಹೀಗೆ ಬಳಸಿ ಕೆಳಕ್ಕೆ ಎಸೆಯುವ ಉಂಡ್ಯವನ್ನು "ಕರುಮುಲಿ" ಕರು 'ಉಂಡ್ಯ' ಎನ್ನುತ್ತಾರೆ. ಸುಡುವ ಕರು ಮುಲಿ ಗದ್ದೆ ತುಂಬಾ ಉಪಯುಕ್ತವಾದ ಕೀಟನಾಶಕ ಮತ್ತು ಗೊಬ್ಬರವಾಗುತ್ತದೆ. ಬಳಸಿ ಎಸೆಯುವ ಇಲ್ಲವೇ ಬಳಸದೇ ಇರುವ ತ್ಯಾಜ್ಯಗಳು ಒಂದಲ್ಲ ಒಂದು ವಿಧದಲ್ಲಿ ಮರು ಬಳಕೆಯಾಗುತ್ತದೆ.

10. ಧಾನ್ಯ ಸಂಗ್ರಹಣೆ –ಸಂಸ್ಕರಣೆ

ಭತ್ತವನ್ನು ಕರಾವಳಿಯಲ್ಲಿ ಸಂಗ್ರಹಿಸುವ, ಸಂರಕ್ಷಿಸುವ ಕಾಯಕವೂ ಅತಿ ವಿಶಿಷ್ಟವಾದುದು. ಈ ಕೆಲಸದಲ್ಲಿ ಹೆಚ್ಚಿನ ಪಾಲು ಪಡೆಯುವವರು ಹೆಣ್ಣು ಮಕ್ಕಳೇ ಆಗಿದ್ದಾರೆ. ಎಲ್ಲ ಪ್ರದೇಶಗಳಂತೆ ಇಲ್ಲಿಯೂ ಭತ್ತವನ್ನು ಹಾರಿಸುವ, ತೂರಿಸುವ ಕಾಯಕ ನಡೆಯುತ್ತದೆ. ಅದಾದ ಮೇಲೆ ಕಟ್ಟಿದ ಮುಡಿ ಹಾಕುವ 'ತುಪ್ಪೆ' ಯ ರಚನೆ ಮತ್ತು ವಿನ್ಯಾಸ ಕೌಶಲ್ಯ ಕರಾವಳಿಗೊಂದು ಸಾಂಸ್ಕೃತಿಕ ಅನನ್ಯತೆಯನ್ನು ನೀಡಿದೆ. ಮಾನವ ಶ್ರಮದೊಂದಿಗೆ ಅಲ್ಲಿರುವ ಕಲಾತ್ಮಕತೆಯೂ ಬಹು ವಿಭಿನ್ನ. ಸಾಮಾನ್ಯವಾಗಿ ಎಣೆಲು ಬೆಳೆಯ ಬೆಳೆ ಬಹು ವಿಸ್ತಾರವಾಗಿದ್ದು ಈ ಭತ್ತವನ್ನು ಸುಗ್ಗಿಯ ನಾಟಿಯಾದ ಮೇಲೆ ತುಪ್ಪೆ ಹಾಕುತ್ತಾರೆ. ರಾಶಿ ಹಾಕಿದ ಭತ್ತವನ್ನು ಪಡಿ ಮಂಚಕ್ಕೆ ಹಾಕಿ ಅಗಲವಾದ ಬಟ್ಟಲಿನಿಂದ ದೂರಕ್ಕೆ ಹಾರಿಸುತ್ತಾರೆ. ಇದರಿಂದ ಕಾಳು , ಕಡ್ಡಿ, ಕಸ, ಜಳ್ಳು ಬೇರ್ಪಡುತ್ತದೆ. ಧನಿಯಾದ ಭತ್ತ ಮಧ್ಯ ಭಾಗದಲ್ಲಿ ಜಳ್ಳಾದ ಭತ್ತ ಹಗುರವಾಗಿ ಹತ್ತಿರದಲ್ಲಿ ಬೀಳುತ್ತದೆ. ಮುಂಜಾನೆ ಎದ್ದು ಮನೆಯೊಳಗಿನ ಭತ್ತವನ್ನು ಹೆಡಗೆಯಲ್ಲಿ ಪಡಿಮಂಚಕ್ಕೆ ಹಾಕಿ ಹಾರಿಸಲಾಗುತ್ತದೆ. ವೃತ್ತಾಕಾರವಾಗಿ ರಾಶಿ ಹಾಕಿದ

ಭತ್ತವನ್ನು ಮಧ್ಯಾಹ್ನದ ಬಿಸಿಲಿಗೆ ಸರಿಯಾಗಿ ಒಣಗಿಸಬೇಕು. ಹೀಗೆ ಒಂದು ದಿನ ಒಣಗಿದ ಭತ್ತವನ್ನು ರಾಶಿ ಹಾಕಿ ತುಪ್ಪೆ ಹಾಕಲಾಗುತ್ತದೆ.

ತುಪ್ಪೆ : ತುಪ್ಪೆ ಹಾಕುವ ಕ್ರಮದಲ್ಲಿಯೂ ಎರಡು ವಿಧವಿದೆ. ಒಂದು 'ಕಚ್ಚೆ ತುಪ್ಪೆ'ಯಾದರೆ ಇನ್ನೊಂದು ಸಿರಿ ತುಪ್ಪೆ. ಕಚ್ಚೆ ತುಪ್ಪೆಯ ರಚನೆಗೆ ಕೊತ್ತಲಿಗೆ ಸೀಮೆಕೋಲುಗಳನ್ನು ಸುತ್ತುತ್ತಾರೆ. ಸಿರಿ ತುಪ್ಪೆಯಲ್ಲಿ ಬರಿಯ ಪೆರ್ಮರ್ರಿಯನ್ನೇ ಸುತ್ತಿ ತುಪ್ಪೆಯನ್ನು ರಚಿಸುತ್ತಾರೆ. ತುಪ್ಪೆಯ ರಚನೆಗೆ ಬೇಕಾದ ಬೈ ಹುಲ್ಲಿನ ಹಗ್ಗ, ಒಣಗಿದ ಬೈಹುಲ್ಲು ಅರೆಬೈ ಹುಲ್ಲುಗಳನ್ನು ಸಂಗ್ರಹಿಸುತ್ತಾರೆ. ಬೈ ಹುಲ್ಲಿನ ಹುರಿ ಹಗ್ಗವನ್ನು ತಯಾರಿಸಲು ಸೂಡಿ ಬೈಹುಲ್ಲನ್ನು ನೀರಲ್ಲಿ ಒಂದರ್ಧ ಗಂಟೆ ನೆನೆಯಲು ಹಾಕುತ್ತಾರೆ. ಒಬ್ಬರು ಹಗ್ಗವನ್ನು ಎಸಳು ಎಸಳಾಗಿ ಬಿಡುತ್ತಾ ಹಗ್ಗ ಹೊಸೆಯುತ್ತಾರೆ. ಮುಂದೆ ನಿಂತವರು ಒಂದು ಕೋಲಿಗೆ ಬೈಹುಲ್ಲನ್ನು ಸುರುಳಿ ಸುತ್ತಿ ಕೋಲನ್ನು ಎಡಗೈಯಿಂದ ಬಲಗೈಗೆ ಬದಲಾಯಿಸುತ್ತ ತಿರುಗಿಸುತ್ತ ಹೋಗುತ್ತಾರೆ. ಹೀಗೆ ತಿರುಗಿಸುವವರು ಹಿಂದೆ ಹಿಂದೆ ಹೋದಂತೆ ಹಗ್ಗ ಉದ್ದವಾಗುತ್ತ ಸಾಗುತ್ತದೆ. ಹೀಗೆ ಬೈಹುಲ್ಲಿನ ಹಗ್ಗ ಎಷ್ಟು ಉದ್ದ ಮತ್ತು ದಪ್ಪ ಬೇಕು ಎಂಬುದಕ್ಕೆ ಅನುಗುಣವಾಗಿ ಬೈಹುಲ್ಲಿನ ಗಾತ್ರವನ್ನು ಹೆಚ್ಚಿಸುತ್ತ ಹೋಗುತ್ತಾರೆ. ತುಪ್ಪೆಯ ರಚನೆಗೆ ಸ್ವಲ್ಪ ಸಪೂರ ಹೆಬ್ಬೆರಳು ಗಾತ್ರದ ಮತ್ತು ಮೊಣಕೈ ಗಾತ್ರದ ಹಗ್ಗವನ್ನು ರಚಿಸುತ್ತಾರೆ. ಇದನ್ನು 'ಬೈತ್ತ ಬಲ್ಲ್', 'ಮೊರಜ' ಎನ್ನುತ್ತಾರೆ. ತುಪ್ಪೆಗೆ ಕಟ್ಟುವ ಪೆರ್ಮರ್ರಿಯನ್ನು ಸೂಡಿ ಸೂಡಿ ಬೈಹುಲ್ಲನ್ನು ಜತೆ ಜತೆಯಾಗಿ ಸೇರಿಸಿ ಬೆಸೆಯುತ್ತಾ ಹೋಗುತ್ತಾರೆ. ಒಣಗಿದ ಬೈಹುಲ್ಲಿನಲ್ಲಿ ಮೂರು ಸೂಡಿ ಬೈಹುಲ್ಲುಗಳನ್ನು ಸೇರಿಸಿ ಕಟ್ಟುವ ಈ ಪೆರ್ಮರ್ರಿಗೆ ಭತ್ತವನ್ನು ರಾಶಿ ಹಾಕಿ ಕಟ್ಟುವ ತುಪ್ಪೆಗೆ ಭದ್ರತೆಯನ್ನು ಒದಗಿಸುತ್ತದೆ. ತುಪ್ಪೆಯನ್ನು ರಚಿಸುವಾಗ ಅಂಗಳದಲ್ಲಿ ಸಮತಟ್ಟಾದ ನೆಲಕ್ಕೆ ಸೆಗಣಿಯನ್ನು ಸಾರುತ್ತಾರೆ. ಕೆಲವರು ತುಪ್ಪೆ ಹಾಕುವ ಸ್ಥಳವನ್ನು ಎತ್ತರದ ಕಟ್ಟೆಯಾಗಿಸುತ್ತಾರೆ. ಅದರ ಮೇಲೆ ಸೆಗಣಿಯನ್ನು ಸಾರಿಸುವುದಲ್ಲದೆ ಒಣಗಿದ ನೀರಿನ ಅಂಶ ಇಲ್ಲದಂತೆ ಮಾಡಿಸುತ್ತಾರೆ. ತಳಕ್ಕೆ ತೆಳುವಾಗಿ ಒಣ ಬೂದಿಯನ್ನು ಸವರಲಾಗುತ್ತದೆ. ಮೇಲೆ ಸೂಡಿ ಬಿಚ್ಚಿದ ಅರೆಬೈಯನ್ನು ತೆಳುವಾಗಿ ಬಿಡಿಸಿ ಅದರ ಮೇಲೆ ಭತ್ತವನ್ನು ಸುರಿಯಲಾಗುತ್ತದೆ. ಭತ್ತ ಸುರಿದಂತೆಲ್ಲ ಪೆರ್ಮರ್ರಿಯನ್ನು ಸುತ್ತುತ್ತಾ ಅದಕ್ಕೆ ಆಧಾರವಾಗಿ ಹುರಿ ಹಗ್ಗವನ್ನು ಬೈಹುಲ್ಲಿನ ಹಗ್ಗದ ಮೊರಜವನ್ನು ಸುತ್ತುತ್ತಾ ಹೋಗುತ್ತಾರೆ. ಎಷ್ಟು ಮುಡಿ ಭತ್ತ ಹಾಕಬೇಕು ಎನ್ನುವ ನಿರ್ಧಾರದಿಂದ ಅಡಿಪಾಯವನ್ನು ರಚಿಸುತ್ತಾರೆ. ಮುಂದಕ್ಕೆ ಮೇಲಿನ ಭಾಗವನ್ನು ನಿರ್ಮಾಣ ಮಾಡುವಾಗ ಇಟ್ಟ ಪೆರ್ಮರ್ರಿಯ ಲೆಕ್ಕಚಾರದಂತೆ, ಬೆಸ ಸಂಖ್ಯೆಯಲ್ಲಿ ತುದಿಯನ್ನು ಕಟ್ಟಲಾಗುತ್ತದೆ. ಭತ್ತ ತುಂಬಿಯಾದ ಮೇಲೆ ಮತ್ತೆ ಬೈಹುಲ್ಲನ್ನು ಸೂಡಿಯ ಬುಡ ಕೆಳಗೆ ತುದಿ ಮೇಲೆ ಬರುವಂತೆ ಇಟ್ಟು ಜೋಡಿಸಿ ತುದಿಯನ್ನು ಒಂದು ಮುಷ್ಠಿಯಾಗಿಸಿ ಕಟ್ಟುತ್ತಾರೆ. ಹೀಗೆ ಬೈಹುಲ್ಲಿನಿಂದ ಪೂರ್ತಿ ಮುಚ್ಚಿ ಹುರಿ ಹಗ್ಗದಿಂದ ಬಿಗಿದು ಭದ್ರವಾಗಿ ಕಟ್ಟಿದಾಗ ತುಪ್ಪೆ ಹೂ ಅರಳಿದಂತೆ ಗೋಚರವಾಗುತ್ತದೆ. ಮನೆಯ ಮುಂದೆ ಜೋಡು ತುಪ್ಪೆ ಇಲ್ಲವೆ ತುಪ್ಪೆ ಹಾಕುವುದು ಆ ಮನೆ-ಮನೆತನದ ಘನತೆ, ಗೌರವಗಳನ್ನು ಹೆಚ್ಚಿಸುತ್ತದೆ. ಅದರಿಂದಲೇ ಅವರು ಕೃಷಿ ಮಾಡುವ ಭೂಮಿಯ ವಿಸ್ತಾರವನ್ನು ತಿಳಿಯಲು ಸಾಧ್ಯವಾಗುತ್ತಿತ್ತು. ಪ್ರತಿಷ್ಠೆ ಗೌರವಗಳಿಗೆ ಕಾರಣವಾಗುತ್ತಿದ್ದ ತುಪ್ಪೆ ಸಂಪತ್ತಿನ ಸಂಕೇತವೂ ಆಗಿತ್ತು. ತುಪ್ಪೆ ಹಾಕುವ ಅನನ್ಯತೆ ತುಳುನಾಡಿನ ವೈಶಿಷ್ಟ್ಯವೂ ಹೌದು. ಹಾಕಿದ ತುಪ್ಪೆಯನ್ನು ಸುಗ್ಗಿಯ ಬೆಳೆಯ ಫಸಲು ಬಂದು ಕೊಯಿಲು ಆದ

ಮೇಲೆ ಆ ಭತ್ತವನ್ನು ಅಕ್ಕಿ ಮಾಡುವಾಗಲೇ ಅಕ್ಕಿಯನ್ನು ತಯಾರಿಸುತ್ತಾರೆ.

ಭತ್ತವನ್ನು ಅಕ್ಕಿಯನ್ನಾಗಿ ಮಾಡುವ ವಿಶಿಷ್ಟ ಕಾಯಕವೂ ಕರಾವಳಿಯಲ್ಲಿ ವಿಭಿನ್ನವಾದುದು. ಸಾಮಾನ್ಯವಾಗಿ ತುಳುವರು ಮೂರು ರೀತಿಯಲ್ಲಿ ಅಕ್ಕಿ ಮಾಡುತ್ತಾರೆ. ಬೆಳ್ತಿಗೆ, ಅರೆ ಬೆಳ್ತಿಗೆ ಮತ್ತು ಕುಚ್ಚಲಕ್ಕಿ. ಸಾಮಾನ್ಯವಾಗಿ 'ಅಬೆ' ಭತ್ತದಲ್ಲಿ ಬೆಳ್ತಿಗೆಯನ್ನು ಮಾಡುತ್ತಾರೆ. ಇದಕ್ಕೆ ಭತ್ತವನ್ನು ಸರಿಯಾಗಿ ಒಣಗಿಸಿ ಅಕ್ಕಿ ಕಡಿಯಾಗದಂತೆ ಮಾಡಿ ಅಕ್ಕಿ ತಯಾರಿಸುತ್ತಾರೆ. ಹಿಂದೆ ಕಲ್ಲಿನ ಮರಯಿ (ಒಂದು ಗೇಣದ ಗುಂಡಿ) ಗೆ ಹಾಕಿ ಒನಕೆಯಿಂದ ಕುಟ್ಟುತ್ತಿದ್ದರು. ಮೂರು ನಾಲ್ಕು ಸುತ್ತಿನಲ್ಲಿ ಭತ್ತದ ಸಿಪ್ಪೆ ಕಳೆದು ಉಮ್ಮಿ, ತೌಡುಗಳು ಬೇರೆಯಾಗಿ ಬೇಕಾದಷ್ಟು ಒಳ್ಳೆ ಬೆಳ್ತಿಗೆ ಅಕ್ಕಿ ಲಭ್ಯವಾಗುತ್ತಿತ್ತು. ಕಾಲಾಂತರದಲ್ಲಿ ಭತ್ತದ ಮಿಲ್ಲಿಗೆ ಹಲ್ಲರ್‌ಗೆ ಹಾಕುತ್ತಿದ್ದರು. ಅಕ್ಕಿ ಕಡಿಯಾಗದಂತೆ ಸಾರಣೆಯಲ್ಲಿ ಬೇಕಾಗುವಷ್ಟು ಅಬೆ ಮಾಡಿ ಬೆಳ್ತಿಗೆ ಅಕ್ಕಿ ಮಾಡುತ್ತಾರೆ. ದೇವಕಾರ್ಯಕ್ಕೆ ವಿಶೇಷ ಖಾದ್ಯಕ್ಕೆ ಇದು ಬಳಕೆಯಾಗುತ್ತದೆ. ಕುಚ್ಚಿಲಕ್ಕಿ ಮಾಡುವುದಕ್ಕೆ ಒಂದು ವಿಶಿಷ್ಟವಾದ ಕ್ರಮ ಕರಾವಳಿಯಲ್ಲಿದೆ. ಭತ್ತವನ್ನು ನೆನೆಸಿ, ಬೇಯಿಸಿ, ಹರವಿ, ಒಣಗಿಸಿ, ಕುಟ್ಟಿ ಮುತ್ತಿನಂಥ ಕುಚ್ಚಲಕ್ಕಿ ತಯಾರಿಸುತ್ತಾರೆ.

ತುಳುವರ ಅತಿ ವಿಶಿಷ್ಟವಾದ ಅಕ್ಕಿ ಅರೆ ಬೆಳ್ತಿಗೆ ಮತ್ತು ಕುಚ್ಚಲಕ್ಕಿ. ಸಾಮಾನ್ಯವಾಗಿ ಅಡುಗೆಯಲ್ಲಿ ತಿಂಡಿ ತಿನಿಸುಗಳಾದ ಕರಾವಳಿಯ ಸ್ಪೆಷಲ್ ಇಡ್ಲಿ–ದೋಸೆಗಳಿಗೆ ಅರೆ ಬೆಳ್ತಿಗೆಯನ್ನು ಬಳಸುತ್ತಾರೆ. ಇದು ಪೂರ್ತಿ ಹಸಿ ಭತ್ತದ ಅಕ್ಕಿಯೂ ಅಲ್ಲ ಬೆಂದ ಭತ್ತದ ಅಕ್ಕಿಯೂ ಆಗಿರುವುದಿಲ್ಲ. ಕರಾವಳಿಯಲ್ಲಿ ಕುಚ್ಚಲಕ್ಕಿ ತಯಾರಿಸಲು ಭತ್ತವನ್ನು ಬೇಯಿಸುತ್ತಾರೆ. ಭತ್ತವನ್ನು ಬೇಯಿಸಲು ಮೊದಲ ದಿನ ಭತ್ತವನ್ನು ನೆನೆಹಾಕುತ್ತಾರೆ. ಹಳ್ಳಿಗಳಲ್ಲಿ ಅಂಗಳದ ಮೂಲೆಯಲ್ಲಿ ಮಣ್ಣಿನಾಳದಲ್ಲಿ ಹೂತು ಹಾಕಿದ ಕಪ್ಪರ್ (ಮಣ್ಣಿನ ದೊಡ್ಡ ಹಂಡೆ) ಗಳಲ್ಲಿ ಭತ್ತವನ್ನು ಮುಳುಗುವಷ್ಟು ನೀರು ಹಾಕಿ ನೆನಸುತ್ತಾರೆ.ಒಂದು ದಿನ ನೆನೆದ ಭತ್ತವನ್ನು ಭತ್ತ ಬೇಯಿಸುವ ಹಿಂದಿನ ದಿನ ಸಂಜೆ ಕುರ್ವೆಯಿಂದ ನೀರಿನಿಂದ ಎತ್ತಿ ಹಂಡೆಗೆ ತುಂಬಿಸಬೇಕು. ಭತ್ತವನ್ನು ಬೇಯಿಸಲು ತಾಮ್ರದ ಹಂಡೆಯನ್ನು ಬಳಸುತ್ತಾರೆ. ನೀರಿನಿಂದ ಭತ್ತವನ್ನು ನೀರು ಬಸಿದು ಹೋಗುವಂತೆ ಮೇಲೆತ್ತಿ ಹಂಡೆಗೆ ತುಂಬಿಸುತ್ತಾರೆ. ಹಂಡೆಯ ಕೊರಳಿನವರೆಗೆ ಭತ್ತ ತುಂಬಿಸಿ ಭತ್ತ ಬೇಯಲು ಎರಡು ಕೊಡಪಾನ ನೀರು ಹಂಡೆಯೊಳಗೆ ಸುರಿಯಬೇಕು. ಹಂಡೆಗೆ ಮುಚ್ಚಳವಾಗಿ ಮಣ್ಣಿನ ಬಿಸಲೆಯೊಂದನ್ನು ಕವಚಿ ಹಾಕಬೇಕು.

ಮರುದಿನ ಬೆಳಿಗ್ಗೆ ಮುಂಜಾನೆ 4–30 ಕ್ಕೆ ಎದ್ದು ಅಂಗಳದ ಬದಿಯಲ್ಲಿರುವ ಒಲೆಗೆ ಉರಿ ಹಚ್ಚಿ ಬೆಂಕಿ ಮಾಡಬೇಕು. ಮನೆಯೊಳಗಿನ ಒಲೆಗಿಂತ ಗಾತ್ರ ಮತ್ತು ಎತ್ತರದಲ್ಲಿ ದೊಡ್ಡದಾಗಿರುವ ಒಲೆಗೆ ಕಟ್ಟಿಗೆಯಿಂದ ಬೆಂಕಿ ಮಾಡುವುದು ಕಡಿಮೆ. ತರಗೆಲೆ, ಮುಳ್ಳುಗಿಡ, ಕಸಕಡ್ಡಿಗಳು ಗುಡ್ಡದಿಂದ ಕಡಿದು ತಂದು ಒಣಗಿದ ಕರ್ಮರ್ ನಂತಹ ಸೊಪ್ಪು ಸೌದೆ ಮತ್ತು ಭತ್ತದ ಹೊಟ್ಟಿನ ಉಮಿಯನ್ನು ಎಸೆದು ಬೆಂಕಿ ಮಾಡುತ್ತಾರೆ. ಮಾಡುವ ಬೆಂಕಿಯು ಒಂದೇ ರೀತಿ ನಾಲ್ಕು ದಿಕ್ಕಿಗೂ ಹರಡಿ ಬೆಂಕಿ ಏಳಬೇಕು. ಹೀಗೆ ಒಂದು ಅರ್ಧ ಮುಕ್ಕಾಲು ಗಂಟೆ, ಬೆಂಕಿ ನಿರಂತರವಾಗಿ ಉರಿದರೆ ಮೊದಲ ಹಬೆ ಹಂಡೆಯ ಮುಚ್ಚಳದಿಂದ ಏಳುತ್ತದೆ. ಹಾಗೆ ಎದ್ದ ತಕ್ಷಣ ಬೆಂಕಿ ಆರಿಸುತ್ತಾರೆ. ಹತು–ಇಪ್ಪತ್ತು ನಿಮಿಷ ಬಿಟ್ಟು ಹಂಡೆಯ ಭತ್ತವನ್ನು ಗದ್ದವಿನಲ್ಲಿ ತೆಗೆದು ಮುಡಯಿಗೆ ಹಾಕುತ್ತಾರೆ. ಬಿಸಿ ಬಿಸಿ ಭತ್ತವನ್ನು ಹೆಡಿಗೆಯಿಂದ ಅಂಗಳದ ಒಂದು ಮೂಲೆಯಲ್ಲಿ ಬಾರ ಗುರಿಯಲ್ಲಿ ರಾಶಿ ಹಾಕಲಾಗುತ್ತದೆ. ಬೆಳಿಗ್ಗೆ ಹಂಡೆಯಿಂದ ತೆಗೆದು ರಾಶಿ ಹಾಕಿದ ಭತ್ತವನ್ನು ಸಂಜೆ ಮೂರರ ಸುಮಾರಿಗೆ ಗೆರಸೆಯಲ್ಲಿ

ತೆಗೆದು ಅಂಗಳದಲ್ಲಿ ವೃತ್ತಾಕಾರವಾಗಿ ಇಲ್ಲವೇ ಚೌಕಾಕಾರವಾಗಿ ತೆಳುವಾಗಿ ಪಸರಿಸುತ್ತಾರೆ ಹೀಗೆ ಪಸರಿಸಿದ ಭತ್ತಕ್ಕೆ ಸಂಜೆಯ ನೆರಳು ರಾತ್ರಿಯ ಇಬ್ಬನಿ ಬಿದ್ದರೆ ತುಂಬಾ ಒಳ್ಳೆಯದು ಎಂಬುದು ಬಲ್ಲವರ ತಿಳುವಳಿಕೆ. ಮರುದಿನ ಮುಂಜಾನೆಯ ಎಳೆ ಬಿಸಿಲು ಮತ್ತು ಮಧ್ಯಾಹ್ನದ ಸುಡು ಬಿಸಿಲಿಗೆ ಭತ್ತ ಹದವಾಗಿ ಒಣಗುವಂತೆ ಗಮನಿಸುತ್ತಾರೆ. ಒಣಗಿದ ಭತ್ತವನ್ನು ಇಡಿಸೂಡಿಯಲ್ಲಿ ಗುಡಿಸಿ ಕೈಪುಲ್‌ನಲ್ಲಿ ಎಳೆದು ರಾಶಿ ಹಾಕುತ್ತಾರೆ. ಹೆಚ್ಚು ಒಣಗಿದರೆ ಭತ್ತ ಅಕ್ಕಿಯಾಗುವಾಗ ಪೂರ್ತಿ ಧೂಳಾಗುತ್ತದೆ, ಕಡಿಮೆ ಒಣಗಿ ಪಸೆ ಇದ್ದರೆ ಭತ್ತ ಹಲ್ಲರಲ್ಲಿ ಇಳಿಯುವುದಿಲ್ಲ. ಹದವಾಗಿ ಸರಿಯಾಗಿ ಒಣಗಿದರೆ ಮಾತ್ರ ಅಕ್ಕಿ ಮುತ್ತಿನಂತೆ ಆಗುತ್ತದೆ. ಹೀಗೆ ಒಣಗಿಸಿದ ಭತ್ತ ಅಂದೇ ಮಿಲ್ಲಿಗೆ ಹಾಕಬಹುದು. ಇಲ್ಲದಿದ್ದರೆ ರಾಶಿ ಹಾಕಿ ಮತ್ತೆಯೂ ಕೊಂಡೊಯ್ಯಬಹುದು.

ಕುಚ್ಚಲಕ್ಕಿಯನ್ನು ತಯಾರಿಸುವಾಗಲೂ ಭತ್ತವನ್ನು ನೆನೆಸಿ ಹಂಡೆಗೆ ತುಂಬಿಸುವ ಕ್ರಮದಲ್ಲಿ ವ್ಯತ್ಯಾಸವಿಲ್ಲ. ಆದರೆ ಭತ್ತವನ್ನು ಬೇಯಿಸುವ ಸಮಯ ಸ್ವಲ್ಪ ಹೆಚ್ಚು. ಸರಿಯಾಗಿ ಸಿಕೆ ಬಂದ ಭತ್ತಕ್ಕೆ ನಾಲ್ಕು ಸಣ್ಣ ಪೊದರಿನ ಗಿಡಗಳನ್ನು ಸರಿಯಾಗಿ ಒಲೆಯೊಳಗೆ ಇರಿಸಿ ಉರಿಸಬೇಕು. ಅದಕ್ಕೆ ಅನುಗುಣವಾಗಿ ಭತ್ತದ ಉಮಿಯನ್ನು ಸ್ವಲ್ಪ ಸ್ವಲ್ಪವೇ ಎರಚುತ್ತಾ ಬೆಂಕಿ ಹದವಾಗಿ ಉರಿಯುವಂತೆ ನೋಡಿಕೊಳ್ಳಬೇಕು. ಭತ್ತ ಬೇಯಿಸಲು ಬೇಕಾಗುವ ಉರುವಲು, ತರಗೆಲೆ, ಮುಳ್ಳು, ಪೊದರು ಗಿಡಗಳ ಕಟ್ಟಿಗೆಯನ್ನು ಗುಡ್ಡದಿಂದ ಕಡಿದು ತಂದು ಹಟ್ಟಿಯ ಹಿಂದೆ ರಾಶಿ ಹಾಕಿ ಒಣಗಿಸಬೇಕು. ಮುಳ್ಳು ಅಡರನ್ನು ಕಡಿಯುವುದು ಮತ್ತು ಹೊರೆಯನ್ನು ಹೊರಲೂ ಎಲ್ಲರಿಂದಲೂ ಅಗುವುದಿಲ್ಲ. ಸಾಮಾನ್ಯವಾಗಿ ಸೊಪ್ಪಿನ ಹೊರೆಯನ್ನು ಒಂದೇ ಹಗ್ಗದಲ್ಲಿ ಕಟ್ಟುತ್ತಾರೆ. ಅಡರು ಮತ್ತು ಮುಳ್ಳಿನ ಹೊರೆಯನ್ನು ಹೊರಲು ಎಲ್ಲರಿಂದಲೂ ಆಗುವುದಿಲ್ಲ. ಸಾಮಾನ್ಯವಾಗಿ ಸೊಪ್ಪಿನ ಹೊರೆಯನ್ನು ಒಂದೇ ಹಗ್ಗದಲ್ಲಿ ಕಟ್ಟುತ್ತಾರೆ. ಅಡರು ಮತ್ತು ಮುಳ್ಳಿನ ಹೊರೆಯನ್ನು ಕಟ್ಟಲು ಎರಡು 'ಮಣಿಪುವಿನ' (ಹುರಿಹಗ್ಗ) ಬಳಸುತ್ತಾರೆ. ಬುಡ ಸಪೂರವಾಗಿ ತುದಿ ಅಗಲವಾಗಿ ಅರಳಿ ನಿಲ್ಲುವುದರಿಂದ ತುದಿಯನ್ನೂ ಬುಡವನ್ನು ಎರಡು ಹಗ್ಗದಿಂದ ಬಿಗಿಯಾಗಿ ಕಟ್ಟುತ್ತಾರೆ ಹೊರೆ ಹೊರುವವರು ಎರಡು ಹಗ್ಗಗಳ ಮಧ್ಯೆಗೆ ತಲೆಕೊಟ್ಟು ಹೊರೆಯನ್ನು ಹೊರುತ್ತಾರೆ. ಗುಡ್ಡದಿಂದ ಹೊರೆ ಹೊತ್ತು ಬರುವಾಗ ಮರಗಿಡಗಳಿಂದ ಬಿಡಿಸಿಕೊಂಡು ಬರುವುದೂ ಇದರಿಂದ ಸುಲಭವಾಗುತ್ತದೆ.

ಭತ್ತ ಬೇಯಿಸಲು ಬಳಸುವ ಈ ರೀತಿಯ ಉರುವಲಿನಿಂದ ಕಾಡು ನಾಶವಾಗುವುದಿಲ್ಲ. ಬಹಳ ಬೇಗನೆ ಬೆಳೆಯುತ್ತದೆ. ಕುರುಚಲು ಮುಳ್ಳು, ಪೊದೆಗಳು, ಗಿಡ ಗಂಟಿಗಳು, ಎತ್ತರವಾಗಿ ಬೆಳೆಯುವ ಗಿಡ ಮರಗಳ ಸುತ್ತ ಬೆಳೆದಿರುವುದರಿಂದ ಒಂದೆಡೆ ಕಾಡು ಗುಡ್ಡಗಳಲ್ಲಿ ಓಡಾಡಲು ಅನುಕೂಲವಾಗುತ್ತದೆ. ಕರ್ಮರ್ ಗಿಡಗಳು ಗೇರು ಮಾವಿನ ಮರದ ಹಾಡಿಗಳ ಬುಡದ ಕುರುಚಲು ಗಿಡಗಳು ಕತ್ತರಿಸಲ್ಪಟ್ಟು ದಟ್ಟವಾಗಿ ಸಸ್ಯರಾಶಿ ಹುಲುಸಾಗಿ ಬೆಳೆಯುತ್ತದೆ. ಒಂದೆಡೆ ಉರುವಲಿನ ಲಭ್ಯತೆ ಇನ್ನೊಂದೆಡೆ ಕಾಡು ಗುಡ್ಡಗಳಿಗೆ ಮನುಷ್ಯ ಹೊಕ್ಕು ಓಡಾಡಲು ಸಾಧ್ಯವಾಗುತ್ತಿತ್ತು. ತರಗೆಲೆಗಳು ಮರದ ಬುಡದಲ್ಲಿ ಬಿದ್ದು ವ್ಯರ್ಥವಾಗಿ ಹೋಗುವುದಕ್ಕಿಂತ ಉರುವಲಾಗಿ ಉಪಯೋಗವಾಗುತ್ತದೆ.

ಭತ್ತ ಸರಿಯಾಗಿ ಬೆಂದುದನ್ನು ಸ್ವಲ್ಪ ತಣ್ಣಗಾದ ಮೇಲೆ ಒಂದೆರಡು ಗಂಟೆ ಬಿಟ್ಟು ಗದ್ದುವಿನಲ್ಲಿ ತೋಡಿ ಅರೆ ಬೆಳ್ತಿಗೆ ಅಕ್ಕಿ ಒಣಗಿಸಿದಂತೆಯೇ ಒಣಹಾಕುತ್ತಾರೆ. ಸಂಜೆಯ ಹೊತ್ತಿಗೆ ಮರುದಿನ ಬೆಳಿಗ್ಗೆ ಎರಡು ಸಾರಿ ಗಿಡ್ಡವಾದ ಇಡಿಸೂಡಿಯಿಂದ ವೃತ್ತಾಕಾರವಾಗಿ

ಮೇಲಿನ ಭತ್ತ ಕೆಳಗೆ, ಕೆಳಗಿನ ಭತ್ತ ಮೇಲೆ ಬರುವಂತೆ ಇಡಿಸೂಡಿ ಕೊಡುತ್ತಾರೆ. ಇದನ್ನು 'ಮೈಪು ಕೊಡುವುದು" ಎನ್ನುತ್ತಾರೆ. ಬಿಸಿಲು ನೆರಳುಗಳನ್ನು ಗಂಟೆ ನೋಡದೆಯೇ ಭತ್ತ ಹದವಾಗಿ ಒಣಗಿರುವುದನ್ನು ನೋಡಿಕೊಂಡು ನಾಲ್ಕು ದಿಕ್ಕಿನಿಂದಲೂ ಒಮ್ಮೆಲೆ ಗುಡಿಸಿ ಮನೆಯೊಳಗೆ ರಾಶಿ ಹಾಕುತ್ತಾರೆ ಸಾಧ್ಯವಿದ್ದವರು ಒಣಗಿದ ಭತ್ತವನ್ನು ಆಗಲೆ ಮಿಲ್ಲಿಗೆ ಕೊಂಡೊಯ್ದು ಅಕ್ಕಿ ಮಾಡಿಸುತ್ತಾರೆ. ಇಲ್ಲವಾದರೆ ಒಂದು ವಾರ ಹದಿನೈದು ದಿನಗಳ ಒಳಗಾಗಿ ಮಿಲ್ಲಿಗೆ ಕೊಂಡೊಯ್ದು ಅಕ್ಕಿ ಮಾಡಿಸುತ್ತಾರೆ. ಒಂದು ಮುಡಿ ಅಕ್ಕಿ ಭತ್ತ ಅಕ್ಕಿ ಮಾಡಿದುದಕ್ಕೆ ಇಷ್ಟು ಸೇರು ಅಕ್ಕಿ ನೀಡಬೇಕು ಮಿಲ್‌ನ ಯಜಮಾನರಿಗೆ ಎಂಬ ಲೆಕ್ಕವಿರುತ್ತದೆ. ಭತ್ತವನ್ನು ಹೊತ್ತೊಯ್ದು ಮರಳಿ ಬರುವಾಗ ಅಕ್ಕಿ, ತೌಡು, ಉಮಿಗಳನ್ನು ಬೇರೆ ಬೇರೆಯೇ ಸಂಗ್ರಹಿಸಿ ತರುತ್ತಾರೆ. ಅಕ್ಕಿ ಮನುಷ್ಯನಿಗೆ ಆಹಾರವಾಗಿ, ತೌಡು ದನ-ಕೋಣಗಳ ಅಕ್ಕಚ್ಚು ಸಿದ್ಧಪಡಿಸುವಾಗ ಅದನ್ನು ಹಾಕಿ ಕುದಿಸುತ್ತಾರೆ. ಹಟ್ಟಿ ಸಮೀಪದ ಬರಕಲದಲ್ಲಿ ತೌಡು, ಉಮಿಗಳನ್ನು ಮುಡಿಕಟ್ಟಿ ಮೂಟೆಕಟ್ಟಿ ಸೇರಿಸಿದರೆ ಅಕ್ಕಿಯನ್ನು ಮುಡಿಕಟ್ಟಿ ಕುತ್ತಟ್ಟದಲ್ಲಿ ಸಂಗ್ರಹಿಸುತ್ತಾರೆ. ಉಮಿಯನ್ನು ಅಕ್ಕಚ್ಚಿನ ಒಲೆಗೆ ಭತ್ತದ ಒಲೆಗೆ ಉರುವಲಾಗಿ ಬಳಸುತ್ತಾರೆ. ತೌಡು ಅಕ್ಕಚ್ಚಿಗೆ ಬಳಸುತ್ತಾರೆ. ಕೃಷಿ ಸಂಸ್ಕೃತಿಯಲ್ಲಿ ಬೆಳೆದ ಫಸಲುಗಳನ್ನು ಸಂಗ್ರಹಿಸುವುದೂ ಒಂದು ಕೌಶಲ್ಯ. ತರಕಾರಿ, ಹಣ್ಣು-ಹಂಪಲು, ಧಾನ್ಯಗಳನ್ನು ಸಂಸ್ಕರಿಸುವುದೂ ಒಂದು ವೈಶಿಷ್ಟ್ಯ. ಪ್ರಾಕೃತಿಕವಾದುದನ್ನೇ ಸಂಗ್ರಹಣೆ, ಸಂಸ್ಕರಣೆಗೆ ಬಳಸುವುದು ಆರೋಗ್ಯಪೂರ್ಣವಾದ ಚಿಂತನೆಯಾಗಿದೆ.

ಅಧ್ಯಾಯ 7

ಕರಾವಳಿಯ ಕೃಷಿ ಸಂಸ್ಕೃತಿಗೂ ಮಹಿಳೆಗೂ ಇರುವ ಸಂಬಂಧ

ಕರಾವಳಿ ಮಾತೃಮೂಲೀಯ ಕುಟುಂಬ ವ್ಯವಸ್ಥೆಯನ್ನು ಹೊಂದಿದೆ. ಇದು ಆದಿಮ ಕುಟುಂಬ ವ್ಯವಸ್ಥೆಯ ಆಯಾಮವಾಗಿದ್ದು, ನೆಲ ಮೂಲಕ್ಕೆ ಹತ್ತಿರವಾದುದು. ಒಂದು ಧಾನ್ಯ ಸಾವಿರ ತೆನೆಗಳ ಮರ್ಮವಾಗಿರುವುದರಿಂದ ಸ್ತ್ರೀ ಮೂಲದ ನೆಲೆ ಇಲ್ಲಿ ಬಹಳ ಮುಖ್ಯ. ಹೆಣ್ಣಿನಿಂದ ಸಂತತಿ ಮುಂದುವರಿಯುತ್ತದೆ ಎಂಬ ಸಂಪ್ರದಾಯವನ್ನು ಅನುಸರಿಸಿಕೊಂಡು ಇಂದಿಗೂ ಬಾಳುತ್ತಿರುವ ಕರಾವಳಿಯಲ್ಲಿ ಹೆಣ್ಣಿಗೆ ಭೂಮಿಯ ಅಧಿಕಾರ ಮನೆಯ ಒಡೆತನಗಳು ಸಿಕ್ಕಿ ಆಕೆ ಬಹಳಷ್ಟು ಸ್ವಾತಂತ್ರ್ಯವನ್ನು ಅನುಭವಿಸಿದವಳು ಆಗಿದ್ದಳು.

ಕೃಷಿಯ ಆರಂಭದ ದಿನಗಳನ್ನು ಗಮನಿಸಿದರೆ ಕೃಷಿಗೆ ಸಂಬಂಧಪಟ್ಟಂತೆ ಮಹಿಳೆಯ ಪಾತ್ರ ಬಹಳ ಮಹತ್ವವಾದದ್ದು. ವ್ಯವಸಾಯಕ್ಕೆ ನಾಂದಿ ಹಾಡಿದವಳೇ ಹೆಣ್ಣು. ಮನುಷ್ಯನ ಅಲೆಮಾರಿತನದ ಬದುಕನ್ನು ಒಂದೆಡೆ ನೆಲೆ ನಿಲ್ಲುವಂತೆ ಮಾಡಿದವಳೇ ಹೆಣ್ಣು. " ಗೆಡ್ಡೆ-ಗೆಣಸು ಸಂಗ್ರಹಣೆಯ ಸಂದರ್ಭದಲ್ಲಿಯೇ ಸ್ತ್ರೀಯರು ಕೃಷಿ ಕೆಲಸದ ಆವಿಷ್ಕಾರ ಮಾಡಿದರು. ಈಗಿನ ದಿನಗಳಲ್ಲಿ ಅವರು ಹೇಗೆ ಈ ಕೃಷಿ ಕಾರ್ಯವನ್ನು ಕಂಡು ಹಿಡಿದರೆನ್ನುವುದು ನಾವು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕಾಡಿನಲ್ಲಿ ಹಣ್ಣುಹಂಪಲು ಇತ್ಯಾದಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಸ್ತ್ರೀಯರು ಕಾಲಾನುಕ್ರಮದಲ್ಲಿ ತಾವು ಅಲ್ಲಲ್ಲಿ ಎಸೆದಿದ್ದ ಬೀಜಗಳು, ಮೊಳಕೆಯೊಡೆದು ಮೊಳಕೆಯಿಂದ ಸಸಿ ಬೆಳೆದುದನ್ನು ಕಂಡರು. ಈ ಜ್ಞಾನವೇ ಕೃಷಿಯ ಆವಿಷ್ಕಾರಕ್ಕೆ ಮೊದಲ ಹೆಜ್ಜೆಯಾಗಿರಬಹುದು." (ದೇವಿಪ್ರಸಾದ ಚಟ್ಟೋಪಾಧ್ಯಾಯ 1992 ಪು.23)

ದ್ರಾವಿಡದ ಮೂಲ ಬೇರಾಗಿರುವ ಹರಪ್ಪ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆ ದೊರೆತಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದರ ಇನ್ನೊಂದು ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃ ದೇವತೆಯೆಂದು ಹೇಳಲಾಗಿದೆ. ಈಕೆಯನ್ನು ಶಾಕಾಂಬರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯ ಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯು ಹರಪ್ಪಾ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದ್ದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಬಾಗಿ ನಿಂತಿದ್ದಾನೆ. ಒಂದು ಮೇಕೆಯು ಭಕ್ತನ ಹಿಂದೆ

ನಿಂತಿದೆ. ಇದರ ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃ ದೇವತೆಯೆಂದು ಭಾವಿಸಲಾಗಿದೆ. (ಉದ್ಧೃತ : ಬೋರಲಿಂಗಯ್ಯ ಹಿ.ಚಿ 2000, ಪು 106)

ಈ ಮೇಲಿನ ವಿವರಗಳು ಕೃಷಿಗೂ ಮಹಿಳೆಗೂ ಇದ್ದ ಸಂಬಂಧವನ್ನು ಸೂಚ್ಯವಾಗಿ ತಿಳಿಸುತ್ತದೆ. ಅಲ್ಲದೆ ಸಸ್ಯಗಳ ಹುಟ್ಟಿಗೆ ಮಹಿಳೆಯೇ ಕಾರಣ ಎನ್ನುವುದನ್ನು , ಸ್ತ್ರೀಯ ಗರ್ಭದಿಂದ ಸಸ್ಯವು ಹುಟ್ಟಿದಂತೆ ಚಿತ್ರಿಸಲಾದ ಈ ಮುದ್ರಿಕೆಯು ಸ್ಪಷ್ಟಪಡಿಸುತ್ತದೆ. ಅಂತೆಯೇ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ಒಂದು ಹೆಣ್ಣು ನಿಂತಿರುವಂತೆ ಮುದ್ರಿಕೆಯೊಳಗೆ ಚಿತ್ರಿಸಿದ ಚಿತ್ರ ಕೂಡಾ ಸಸ್ಯಗಳ ಬೆಳವಣಿಗೆಗೂ ಮಹಿಳೆಗೂ ಯಾವುದೋ ಬಗೆಯ ಸಂಬಂಧವಿದೆ ಎನ್ನುವುದನ್ನು ತಿಳಿಸುತ್ತದೆ. ಏಕೆಂದರೆ ಆದಿಮ ಮನುಷ್ಯ ರಚಿಸುತ್ತಿದ್ದ ಚಿತ್ರಕಲೆ, ಭಿತ್ತಿ ಚಿತ್ರಗಳಲ್ಲಿ ಅವರ ಬದುಕನ್ನು ಹೊರತು ಪಡಿಸಿದ ಸಂಗತಿಗಳೇ ಆಗಿರಲಿಲ್ಲ. ಪರಿಸರದಲ್ಲಿ ಏನನ್ನು ಕಾಣುತ್ತಿದ್ದಾರೋ ಅದನ್ನೇ ಅವರು ತಮ್ಮ ಕಲೆಯಲ್ಲಿ ಅಭಿವ್ಯಕ್ತಿಸುತ್ತಿದ್ದರು. ಹಾಗಾಗಿ ಈ ಮುದ್ರಿಕೆಯೊಳಗೆ ಚಿತ್ರಗಳು ಕೃಷಿಯೊಟ್ಟಿಗೆ ಮಹಿಳೆಗಿದ್ದ ಸಂಬಂಧದ ಬಗೆಗಿನ ಪರಿಕಲ್ಪನೆಯ ಹಿನ್ನೆಲೆಯಲ್ಲಿಯೇ ರೂಪುಗೊಂಡಿರುವ ಸಾಧ್ಯತೆ ಇದೆ. ನಮ್ಮಲ್ಲಿ ಬಹಳ ಪ್ರಾಚೀನವಾಗಿರುವ ಮಾತೃ ಮೂಲ ಕುಟುಂಬ ವ್ಯವಸ್ಥೆಯಲ್ಲಿ ಮೂರು ವಿಧವಿದೆ. ಮಾತೃ ಮೂಲ, ಮಾತೃಪ್ರಧಾನ, ಮಾತೃಸ್ಥಾನೀಯ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಕುಟುಂಬದ ಕೇಂದ್ರ ಸ್ಥಾನದಲ್ಲಿದ್ದಳು.

ಮಾರ್ಗನ್, ಟೇಲರ್ ಹಾಗೂ ಸ್ಪೆನ್ಸರ್‌ರಂತಹ ಮಾನವಶಾಸ್ತ್ರಜ್ಞರು ಸಮಾಜ ವಿಕಾಸದ ಪ್ರಾಚೀನ ಕಾಲದಲ್ಲಿ ಮಾತೃಪ್ರಧಾನ ಕುಟುಂಬ ಅಸ್ತಿತ್ವದಲ್ಲಿತ್ತೆಂದು ಮತ್ತು ಮಾತೃ ಪ್ರಧಾನ ಕುಟುಂಬವೇ ಕುಟುಂಬದ ಮೂಲರೂಪವೆಂದು ಅಭಿಪ್ರಾಯ ಪಡುತ್ತಾರೆ. ಆರಂಭಿಕ ಹಂತದಲ್ಲಿ ಮಾತೃಮೂಲ ವ್ಯವಸ್ಥೆ ಇತ್ತೆಂದು ತಿಳಿದು ಬರುತ್ತದೆ. ಸ್ತ್ರೀಯರ ತಾಯ್ತನಕ್ಕೆ ದೈವದ ಅನುಗ್ರಹವೇ ಕಾರಣವೆಂದೂ ಇಲ್ಲವೆ ಗರ್ಭಧರಿಸಿ ಮಗುವಿಗೆ ಜನ್ಮನೀಡುವುದು ಸ್ತ್ರೀಯಲ್ಲಿರುವ ಅದ್ಭುತ ಶಕ್ತಿಯೆಂದೂ ಭಾವಿಸಿದ್ದರು. ಪುರುಷರಿಗೆ ಆ ಕಾಲದಲ್ಲಿ ಸ್ತ್ರೀಯ ಬಗೆಗೆ ಅಪಾರ ಗೌರವ ಭಾವನೆಗಳು ಇದ್ದವು. ತಾವು ಆರಾಧಿಸುತ್ತಿದ್ದ ದೈವಗಳನ್ನು ಸಹ ಸ್ತ್ರೀಯ ರೂಪದಲ್ಲಿಯೇ ಆರಾಧಿಸುತ್ತಿದ್ದರು.

ಕೃಷಿಯ ಆರಂಭಿಕ ಹಂತದಲ್ಲಿ ಮಾತೃಪ್ರಧಾನ ವ್ಯವಸ್ಥೆ ಇದ್ದುದರಿಂದ ತಾಯಿಯೇ ಮನೆಯ ಒಡತಿಯಾಗುತ್ತಿದ್ದಳು. ಎಲ್ಲ ವಿಷಯದಲ್ಲಿ ಸ್ತ್ರೀಗೆ ಹೆಚ್ಚಿನ ಪ್ರಾಮುಖ್ಯತೆ ಇತ್ತು. ಹುಟ್ಟುವ ಮಕ್ಕಳನ್ನು ಸ್ತ್ರೀ ಮೂಲಕವೇ ಗುರುತಿಸಲಾಗುತ್ತಿತ್ತು. ಪುರುಷ ಬೇಟೆಯಾಡುವ ಕ್ರಿಯೆಯಲ್ಲಿ ತೊಡಗಿದ್ದರಿಂದ ಬೇಟೆಗಾಗಿ ಆತ ಕಾಡುಮೇಡು ಅಲೆಯುವ ಅಲೆಮಾರಿಯಾಗಿದ್ದ. ಕುಟುಂಬದಲ್ಲಿ ಪುರುಷನು ಬಂದು ಹೋಗುವ ಅತಿಥಿಯಾಗಿದ್ದು, ಮಕ್ಕಳ ಲಾಲನೆ ಪಾಲನೆ, ಪೋಷಣೆಯ ಹೊಣೆಗಾರಿಕೆ ಮಹಿಳೆಯ ಮೇಲೆಯೇ ಇರುತ್ತಿತ್ತು. ಆಹಾರ ಸಂಗ್ರಹಿಸುವಲ್ಲಿ ಮತ್ತು ಆಹಾರ ಶೇಖರಿಸುವಲ್ಲಿ ಮಹಿಳೆ ಪಾಲ್ಗೊಳ್ಳುತ್ತಿದ್ದಳು. ಕುಟುಂಬದ ಆಹಾರ ಪೂರೈಕೆಯಲ್ಲಿ ಮಹಿಳೆ ಪ್ರಮುಖ ಪಾತ್ರವಹಿಸುತ್ತಿದ್ದಳು. ಬೇಟೆಯಿಂದ ತಂದ ಮಾಂಸ ತಾತ್ಕಾಲಿಕ ಹಸಿವು ನೀಗಿಸುತ್ತಿತ್ತು. ಮಹಿಳೆಯಿಂದ ಸಂಗ್ರಹಿಸಲ್ಪಟ್ಟ ಆಹಾರ ಪದಾರ್ಥಗಳಾದ ಗೆಡ್ಡೆ ಗೆಣಸುಗಳು ಬಹಳ ಕಾಲದವರೆಗೆ ಇರುತ್ತಿದ್ದರಿಂದ ಅವರ ಹಸಿವು ನೀಗಿಸುವಲ್ಲಿ ಹೆಚ್ಚು ಅನುಕೂಲವಾಗಿದ್ದವು. ಅಂದಿನ ಉತ್ಪಾದನಾ ವಿಧಾನ

ಅತ್ಯಲ್ಪವಾಗಿದ್ದರುತ್ತಿದ್ದರಿಂದ ಅದನ್ನು ಶ್ರಮವಹಿಸಿ ಅಗತ್ಯಾನುಸಾರ ಹಂಚುವ ಕೆಲಸ ಮಹಿಳೆಯದೇ ಆಗಿರುತ್ತದೆ. ಉತ್ಪಾದಿಸಿದೆಲ್ಲವೂ ನೇರವಾಗಿ ಬಳಕೆಯಾಗುತ್ತಿದ್ದುದರಿಂದ ಕೊಡುವ ತೆಗೆದುಕೊಳ್ಳುವ ಪ್ರಶ್ನೆಯೇ ಇರಲಿಲ್ಲ. ಉತ್ಪಾದಿಸಿದ ತನ್ನ ಉತ್ಪಾದನೆಯ ಮೇಲೆ ಮಹಿಳೆಗೆ ಸಂಪೂರ್ಣವಾದ ಹಿಡಿತವಿತ್ತು.

"ಗಂಡಸರು ಬೇಟೆಯಾಡುತ್ತಿದ್ದ ಸಂದರ್ಭದಲ್ಲಿ ಅಂದರೆ ಕೃಷಿ ಆವಿಷ್ಕಾರದ ಆರಂಭದ ದಿನಗಳಲ್ಲಿ ವ್ಯವಸಾಯದ ಕೆಲಸವನ್ನು ಪೂರ್ತಿಯಾಗಿ ಸ್ತ್ರೀಯರೇ ನಿರ್ವಹಿಸಿಕೊಂಡು ಹೋಗುತ್ತಿದ್ದರು. ವ್ಯವಸಾಯ ಕ್ಷೇತ್ರದಲ್ಲಿ ಪುರುಷ ಪ್ರವೇಶವಿದ್ದಿಲ್ಲ. ಆಗ ಕೃಷಿಯನ್ನು ಮಹಿಳೆಯರು ಪುರುಷರ ಸಹಾಯ ಸಹಕಾರಗಳಿಲ್ಲದೆ ಸ್ವತಂತ್ರವಾಗಿ ನಿರ್ವಹಿಸುತ್ತಿದ್ದರೆಂದು ತಿಳಿಯಲಾಗಿದೆ. ಎತ್ತು ಮತ್ತು ನೇಗಿಲುಗಳನ್ನು ಬಳಸಿ ವ್ಯವಸಾಯ ಮಾಡುವ ಸ್ಥಿತಿಯನ್ನು ಮನುಷ್ಯ ಯಾವಾಗ ತಲುಪಿದನೋ ಆಗ ವ್ಯವಸಾಯದ ಕೆಲಸ ಸ್ತ್ರೀಯರ ಪರಿಮಿತಿಯಿಂದ ದೂರವಾಯಿತು. ಅದು ಸ್ತ್ರೀಯರಿಂದ ಪುರುಷರ ಕೈಗೆ ಬಂತು. ವ್ಯವಸಾಯ ಸ್ತ್ರೀಯರಿಂದ ಅವಿಷ್ಕಾರಗೊಂಡಿದ್ದರೂ ಮುಂದೆ ಅದು ಅವರದ್ದೇ ಆಗಿ ಉಳಿಯಲಿಲ್ಲ". (ದೇವಿ ಪ್ರಸಾದ ಚಟ್ಟೋಪಾಧ್ಯಾಯರು 1993, ಪು : 24)

ನೇಗಿಲು ವೇದ ಕಾಲದಿಂದಲೂ ತನ್ನ ಸ್ವರೂಪವನ್ನು ಕಾಯ್ದುಕೊಂಡು ಬಂದಿದೆ. ಆಯಾ ಪ್ರದೇಶದ ಜನರ ಪ್ರತಿಭೆಗೆ ಅನುಗುಣವಾಗಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಹೊಂದಿರುತ್ತ, ನೇಗಿಲಿನ ಗುಳದ ಮುಖ್ಯ ಭಾಗ ಆರ್ಯರ ಕಾಲಕ್ಕೆ ಬಿಲ್ಲೆಯಾಕಾರವಿದ್ದು ಕಾಲಾನು ಕಾಲಕ್ಕೆ ಬದಲಾಗುತ್ತ ಸಾಗಿದೆ. ವೇದ ಪೂರ್ವದ ಕಾಲದಲ್ಲಿ ಕೃಷಿಯಲ್ಲಿ ಸ್ತ್ರೀ ಪ್ರಧಾನ ಪಾತ್ರವಹಿಸಿದ್ದು ಸ್ಪಷ್ಟವಾಗಿದೆ. ಆದಿಮ ಕೃಷಿಯ ಕೆಲವು ಅಂಶಗಳನ್ನು ಕರಾವಳಿಯ ಕೃಷಿ ಬದುಕಿನಲ್ಲೂ ಗುರುತಿಸಬಹುದು. ಕೃಷಿಯ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸುವ ನೆಲೆಯಲ್ಲಿ ಗಂಡಿನ ಸಾಹಚರ್ಯದ ಅವಶ್ಯಕತೆಯಿದೆ. ಇಂದಿಗೆ ಕರಾವಳಿಯಲ್ಲಿರುವ ಕುಮೆರಿ ಕೃಷಿಯ ರೂಪುರೇಷೆಗಳು ಕೃಷಿಯ ಆರಂಭ ಹಂತದ ಚಿಂತನೆಗಳೇ ಆಗಿವೆ.

ಕರಾವಳಿಯ ಮಾತೃ ಮೂಲ ಕುಟುಂಬ ವ್ಯವಸ್ಥೆಯಲ್ಲಿ ಗಂಡನ್ನು ಪ್ರತೀಕ ಮುಂದಾಳುವನ್ನಾಗಿ ಇರಿಸಿಕೊಂಡೇ ಹೆಣ್ಣು ಕೇಂದ್ರ ಸ್ಥಾನದಲ್ಲಿ ನಿಂತು ರಚಿಸಿದ ಕುಟುಂಬ ರಚನೆಯ ವಿನ್ಯಾಸದ ಅಂಶಗಳು ಬಹು ಮುಖ್ಯವಾದವು. ಕೃಷಿ ಜಗತ್ತಿನ ಆದಿಮ ಕೃಷಿಯ ಲಕ್ಷಣಗಳೊಂದಿಗೆ, ಕೃಷಿಯ ವಾರ್ಷಿಕ ಆವರ್ತನದಲ್ಲಿ ಶ್ರಮವಹಿಸಿ ಮೂರು ಬೆಳೆಯನ್ನು ಬೆಳೆಯಲಾಗುತ್ತದೆ. ಇಲ್ಲಿಯ ಭೌಗೋಳಿಕ ಪರಿಸರಕ್ಕೂ , ಬೆಳೆಯುವ ಬೆಳೆಗೂ, ಕುಟುಂಬ ವ್ಯವಸ್ಥೆಯ ಹೆಣ್ಣಿನ ವಂಶದ ಕಲ್ಪನೆಗೂ ಪರಸ್ಪರ ಸಂಬಂಧವಿದೆ. ಮೂರು ಬೆಳೆ ಬೆಳೆಯುವ ಗದ್ದೆ ಮತ್ತು ವಂಶವನ್ನು ಬೆಳೆಸುವ ಹೆಣ್ಣಿನ ಮೂಲ ಕುಟುಂಬದ ಗಾತ್ರದ ಮೂಲಕ ಕಟ್ಟಿಕೊಳ್ಳುವ ಅಂಶವೂ ಇಲ್ಲಿ ಪ್ರಮುಖ.

ಭೂಮಿ ಮತ್ತು ಹೆಣ್ಣಿನ ಸಮೀಕರಣ

ಪ್ರಾಚೀನ ಮಾನವರಿಗೆ ಪ್ರಕೃತಿಯ ಪ್ರಕ್ರಿಯೆಗಳು ರಹಸ್ಯಮಯವೂ ನಿಗೂಢವೂ ಆಗಿ ತೋರುತ್ತಿದ್ದವು. ಹಾಗಾಗಿ ಅವುಗಳ ಬಗೆಗೆ ಅವರಿಗೆ ಭಯ ಬೀತಿ ಬೆರಗು ಅಚ್ಚರಿಯ ಭಾವನೆಗಳಿದ್ದವು. ಜೊತೆಗೆ ಗೌರವದ ಭಾವನೆಯನ್ನು ಹೊಂದಿದ್ದು ಪ್ರಕೃತಿಯನ್ನು ದೈವವಾಗಿ

ಆರಾಧಿಸುತ್ತಿದ್ದರು. ಅದೇ ರೀತಿ ಹೆಣ್ಣಿನ ಋತುಸ್ರಾವ, ಗರ್ಭ ಧರಿಸುವಿಕೆ ಮತ್ತು ಮಗುವಿನ ಜನ್ಮ ನೀಡುವ ಕ್ರಿಯೆಗಳು ಗಂಡಿನಲ್ಲಿ ವಿಸ್ಮಯ ಹುಟ್ಟಿಸಿದ ನಿಗೂಢ ಅಂಶಗಳಾಗಿದ್ದವು. ಹೊಸ ಜೀವಕ್ಕೆ ಜನ್ಮ ನೀಡುವ ಶಕ್ತಿ ಹೆಣ್ಣಿಗೆ ಮಾತ್ರವೇ ಇದ್ದುದು ಎಂದು ಭಾವಿಸಿದ ಅವರಿಗೆ ಸಂತಾನೋತ್ಪತ್ತಿಯಲ್ಲಿ ಗಂಡಿನ ಪಾತ್ರವೂ ಇರುತ್ತದೆ ಎಂದು ತಿಳಿದಿರಲಿಲ್ಲ. ಹಾಗಾಗಿ ಆ ಕಾಲಕ್ಕೆ ಹೆಣ್ಣಿಗೆ ಮಕ್ಕಳನ್ನು ಹೆರುವ ವಿಶೇಷ ಶಕ್ತಿ ಇದೆ ಎಂದು ಭಾವಿಸಿ ಅವಳಿಗೆ ಹೆಚ್ಚಿನ ಗೌರವಾದರಗಳನ್ನು ಕೊಡುತ್ತಿದ್ದರು. ಒಟ್ಟಾರೆ ಪ್ರಾಚೀನ ಮಾನವರಿಗೆ ಹೆಣ್ಣು ಮತ್ತು ಪ್ರಕೃತಿ ಈ ಎರಡೂ ಅಂಶಗಳು ನಿಗೂಢವಾಗಿದ್ದವು. ಆ ಕಾರಣಕ್ಕಾಗಿ ಅವುಗಳ ಬಗೆಗೆ ಏಕಕಾಲಕ್ಕೆ ಭಯ ಮತ್ತು ಭಕ್ತಿಯ ಭಾವಗಳು ಬೆಳೆದಿರಬೇಕೆಂದು ಈಗಾಗಲೇ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

'ಆಹಾರೋತ್ಪಾದನಾ ಸಾಮರ್ಥ್ಯ ಮತ್ತು ಸಂತಾನ ಸೃಷ್ಟಿ ಇವೆರಡೂ ಹೆಣ್ಣಿಗೆ ಇರುವಂಥ ಮಾಂತ್ರಿಕ ಶಕ್ತಿ ಎಂಬುದು ಪ್ರಾಚೀನ ಮಾನವರ ತಿಳುವಳಿಕೆಯಾಗಿತ್ತು. ಹೆಣ್ಣಿನ ಗರ್ಭದಿಂದ ಶಿಶುವೊಂದು ಹೊರ ಬರುವ ರೀತಿಗೂ ಭೂಮಿಯೊಳಗಿಂದ ಸಸ್ಯವೊಂದು ಕಾಣಿಸಿಕೊಳ್ಳುವುದಕ್ಕೂ ಇರುವ ಹೋಲಿಕೆಯನ್ನು ಅವರು ಕಂಡುಕೊಂಡರು. ಬೇಸಾಯದ ಮೂಲಕ ಬದುಕಿನ ಅವಶ್ಯಕತೆಯಾಗಿದ್ದ ಆಹಾರ ಪೂರೈಕೆ ಚೆನ್ನಾಗಿ ಸಾಗುತ್ತಿದ್ದ ಪರಿಸರದಲ್ಲಿ ಫಸಲನ್ನು ನೀಡಬಲ್ಲ ನೆಲದ ಶಕ್ತಿಯೂ ಶಿಶುವಿಗೆ ಜನ್ಮ ನೀಡುವ ಹೆಣ್ಣಿನ ಸೃಷ್ಟಿ ಸಾಮರ್ಥ್ಯವೂ ಒಂದೇ ರೀತಿಯಲ್ಲಿ ಕಂಡವು. ಅಂಥ ಫಲವಂತಿಕೆಯನ್ನು ಆರಾಧಿಸುವ ನಂಬಿಕೆ ಆಚರಣೆಗಳು ಹುಟ್ಟಿಕೊಂಡವು. ಹೀಗೆ ಭೂಮಿಯೂ ತಾಯಿಯೂ ಒಂದೇ ಆಗಿ ಭೂಮಿ– ತಾಯಿಯ (ಅರ್ತ್ ಮದರ್) ಪರಿಕಲ್ಪನೆ ಬೆಳೆಯಿತು." (ಬಿ.ಎನ್ ಸುಮಿತ್ರಾಬಾಯಿ, 2000 ಪು 295)

ವೇದಗಳ ಕಾಲದಲ್ಲಿ ಭೂಮಿಯು ಹೆಣ್ಣಿನ ರೂಪದಲ್ಲಿ ಗೌರವಕ್ಕೆ ಒಳಗಾಗುತ್ತಿದ್ದು, ಪೂಜನೀಯಳಾಗಿದ್ದಳು. "ಋಗ್ವೇದ ಕಾಲೀನ ಕಲ್ಪನೆಯಲ್ಲಿ ಆಕಾಶವೇ ತಂದೆ ಭೂಮಿಯೇ ತಾಯಿ. ಇವರಿಬ್ಬರ ಮುಖಾಮುಖಿ ಸಮಾಗಮದಿಂದ ಭೂಮಿಯು ಗರ್ಭ ಧರಿಸಿ ಬಗೆ ಬಗೆಯ ಸೃಷ್ಟಿ ಜೀವಿಗಳಿಗೆ ಕಾರಣಳಾದಳು" (ಜ್ಯೋತ್ಸ್ನಾ ಕಾಮತ್–1999 ಪು 23) ಎಂಬ ನಂಬಿಕೆ ಜನರಲ್ಲಿರುವುದನ್ನು ಕಾಣುತ್ತೇವೆ. ಭೂಮಿಯೂ ಕೂಡಾ ಒಂದು ಹೆಣ್ಣು, ಅವಳು ಹೆಣ್ಣಿನಂತೆ ಗರ್ಭ ಧರಿಸಿ ಫಲ ನೀಡುತ್ತಾಳೆ ಎಂದು ಆ ಕಾಲಕ್ಕೆ ತಿಳಿಯಲಾಗಿತ್ತು.

ಮಕ್ಕಳನ್ನು ಹೆರುವ ತಾಯಿಯಂತೆಯೇ ಪ್ರಕೃತಿಯೂ ಫಲವಂತಳಾಗಿದ್ದಾಳೆಂದೇ ಪ್ರಕೃತಿಯನ್ನು ದೇವರೆಂದು ಗುರುತಿಸಲಾಗಿದೆ. ಪ್ರಕೃತಿ ಅಥವಾ ಭೂಮಿಯನ್ನು ದೈವವಾಗಿ ಪರಿಭಾವಿಸಿಕೊಂಡು ಹೆಣ್ಣಿನಾಕೃತಿಯಲ್ಲಿ ಪೂಜಿಸಿದ ಬಗ್ಗೆ ಇತಿಹಾಸವೂ ದೊರೆಯುತ್ತದೆ.

"ಇತ್ತೀಚೆಗೆ ನಾಲ್ಕೈದು ದಶಕಗಳಲ್ಲಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಉತ್ಖನನದಿಂದ ಕೆಲವು ಸ್ತ್ರೀ ವಿಗ್ರಹಗಳು ದೊರೆತಿವೆ. ಅವು ಶಿರೋಹೀನವಾಗಿದ್ದು ಕೈಯಲ್ಲಿ ಕಮಲ ಹಿಡಿದಂತಹವುಗಳಾಗಿದ್ದು ಯೋನಿ ಹಾಗೂ ಸ್ತನ ಪ್ರದೇಶವನ್ನು ಸ್ಫುಟವಾಗಿ ತೋರಿಸುವಂತವು ಜೊತೆಗೆ ಸ್ತ್ರೀಯ ಸಂಭೋಗಾವಸ್ಥೆಯ ಭಂಗಿಯನ್ನು ಸೂಚಿಸುವಂತಹವುಗಳಾಗಿದೆ. ಅವುಗಳಲ್ಲಿ ಬಿಜಾಪುರ ಜಿಲ್ಲೆಯ ಮಹಾಕೂಟ, ಬಾದಾಮಿ, ಜಾಲಿಹಾಳ, ಸಿದ್ಧನಕಲ್ಲು, ಬೀಳಗಿ , ನಾಗರಾಳಗಳಲ್ಲಿ ಗುಲ್ಬಾರ್ಗಾದ ಮಣ್ಣೂರು ಸನ್ನತಿಗಳಲ್ಲಿ ಬೆಳಗಾವಿಯ ಮಜತಿಯಲ್ಲಿ

ಶಿವಮೊಗ್ಗದ ಬಳ್ಳಿಗಾವೆಯಲ್ಲಿ ಆಂಧ್ರದ ನಾಗಾರ್ಜುನಕೊಂಡ ಆಲಂಪುರಗಳಲ್ಲಿ , ಮಹಾರಾಷ್ಟ್ರದ ಬೋಕರ್ದನ, ನಾಂದೇಡ, ಮಾಹುರ ಮುಂತಾದ ಸ್ಥಳಗಳಲ್ಲಿ ದೊರೆತ ಸ್ತ್ರೀ ವಿಗ್ರಹಗಳು ವಿದ್ವಾಂಸರ ಕುತೂಹಲವನ್ನು ಕೆರಳಿಸಿದ್ದವು. ಇವು ಬಗೆ ಬಗೆಯ ವಿಶ್ಲೇಷಣೆ, ವಿವೇಚನೆಗಳಿಗೆ ಒಳಗಾಗಿ ಅವುಗಳ ಬಗ್ಗೆ ವಿವಿಧ ಬಗೆಯ ಅಭಿಪ್ರಾಯಗಳು ವ್ಯಕ್ತವಾಗಿವೆ. ನದಿ ಕೊಳ್ಳೆಗಳಲ್ಲಿ ದೊರೆತ ಹೆಣ್ಣಿನ ಮೂರ್ತಿಗಳು, ಬಹಳ ಪ್ರಾಚೀನವಾಗಿದೆ. ವೇದ ಕಾಲದಿಂದ ಪ್ರಚಲಿತವಿದ್ದ ಉತ್ತಾನಪಾದ ಅದಿತಿ (ಭೂಮಿಯ) ಪ್ರತಿರೂಪವನ್ನು ಇವುಗಳಲ್ಲಿ ಕಾಣಬಹುದು ಎಂದು ಕೆಲವರು ಅಭಿಪ್ರಾಯ ಪಟ್ಟರೆ, ಕೆಲವರು ಒಳ್ಳೆ ಮಳೆ ಬೆಳೆ ನಿರೀಕ್ಷೆಯಲ್ಲಿ ಹಿಂದಿನವರು ಕೈಗೊಳ್ಳುತ್ತಿದ್ದ ಭೂಮಿ ಪೂಜೆಯ ಸಂಕೇತದ ವಿಗ್ರಹಗಳು ಎಂದಿರುವರು. ಪ್ರಾದೇಶೀಕ ಜಾನಪದ ದೇವತೆಯ ಕೃಷಿ ರೂಪಗಳು ಇದ್ದು, ಕಮಲದ ಹೂ ಫಲಶಕ್ತಿ ಸೂಚಿಸುತ್ತದೆ ಎಂದು ಕೆಲವರು ಯೋಚಿಸಿದರು." (ಅದೇ ಪು 9–10) ಈ ವಿವರಗಳಿಂದ ಭೂಮಿಯನ್ನು ಹೆಣ್ಣು ದೈವ ಎಂದು ಪೂಜಿಸಲಾಗುತ್ತಿದ್ದರೆಂದು ತಿಳಿದು ಬರುತ್ತದೆ.

" ಆದಿ ಮಾನವ ತಾನು ದಿನವೂ ನೋಡುತ್ತಿದ್ದ ಅನುಭವಿಸುತ್ತಿದ್ದ ಸೃಷ್ಟಿಯ ವ್ಯಾಪಾರಗಳನ್ನು ತನಗೆ ಪರಿಚಿತವಿದ್ದ ವಾತಾವರಣದಲ್ಲಿ ಅರ್ಥೈಸಿಕೊಳ್ಳಲು ಯತ್ನಿಸಿದ. ಕ್ರಮೇಣ ಮಳೆ–ಬೆಳೆ ಸಮೃದ್ಧಿಯನ್ನು ಕೊಡಮಾಡುವ ಅದೃಶ್ಯ ಶಕ್ತಿಯನ್ನು ರೂಪಿಸಲು ಶ್ರಮಪಟ್ಟು ಸಂತತಿ ಬರಲು, ಅದು ಆಹಾರಾದಿಗಳನ್ನು ಪಡೆದು ಬೆಳೆಯಲು ಕಾರಣಳಾದ ಜನನಿಯನ್ನೇ ಬೃಹತ್ ಸೃಷ್ಟಿ ರೂಪದಲ್ಲಿ ಕಂಡ, ಪೂಜಿಸಿದ, ಸಫಲತೆಗಾಗಿ ಅವುಗಳನ್ನು ಪ್ರಾರ್ಥಿಸಿದ, ಸೃಷ್ಟಿ –ಪುಷ್ಟಿ (ಜನನ ಹಾಗೂ ಪೋಷಣೆ) ಗೆ ಹೆಣ್ಣೇ ಕಾರಣ ; ಅದರಂತೆ ಕಾಳು, ಹಣ್ಣು ಬೆಳೆಗೆ ಕಾರಣವಾದ ಭೂಮಿಯೂ ಹೆಣ್ಣು ದೇವತೆಯೇ ಎಂಬ ಕಲ್ಪನೆ ಅವನಲ್ಲಿ ಸ್ಥಿರವಾಗಿ ಬೇರು ಬಿಟ್ಟ ಯುಗದಲ್ಲಿ ಈ ವಿಗ್ರಹಗಳ ಮೂಲವನ್ನು ಹುಡುಕಬಹುದು. ಚರಿತ್ರೆ ಹಾಗೂ ಉತ್ಖನನಗಳ ದೃಷ್ಟಿಯಿಂದ ಪ್ರಾಗೈತಿಹಾಸ ಕಾಲದಿಂದಲೂ ಇಂಥ ವಿಗ್ರಹಗಳು ಕಂಡು ಬರುತ್ತದೆ. ನಮ್ಮಲ್ಲಿ ಮೂರು ಸಹಸ್ರ ವರ್ಷಗಳಿಂದಲೂ ಸೃಷ್ಟಿಗೆ ಕಾರಣಳಾದ ಭೂಮಾತೆಯ ಪೂಜೆ ಬಳಕೆಯಲ್ಲಿರುವುದನ್ನು ಗುರುತಿಸಬಹುದು. ಯೋನಿ, ಸ್ತನಗಳಿಗೆ ಪ್ರಾಧಾನ್ಯ ಕೊಟ್ಟ ಈ ವಿಗ್ರಹಗಳು ಸಫಲತೆ, ಸಮೃದ್ಧಿಗಳ ಆರಾಧ್ಯ ದೇವತೆಯ ರೂಪಗಳಾಗಿವೆ". (ಅದೇ ಪು 11) ಹೀಗೆ ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಹೆಣ್ಣು ಮತ್ತು ದೈವವೆಂದು ಭಾವಿಸಿ ಪೂಜಿಸಲಾಗಿದೆ. ಈಗಲೂ ಭೂಮಿಯ ಬಗೆಗೆ ಜನರಲ್ಲಿ ಈ ಬಗೆಯ ಮನೋಭಾವವಿದ್ದು, ಈಗಲೂ ಭೂಮಿಯು ಪೂಜಿಸಲ್ಪಡುವುದನ್ನು ನಾವು ಗುರುತಿಸಬಹುದು.

ಭೂಮಿ ಮತ್ತು ಹೆಣ್ಣನ್ನು ಸಮೀಕರಿಸಿ ನೋಡಲಾಗುವ ಕ್ರಮದಲ್ಲಿ ಅಥವಾ ಭೂಮಿ–ಹೆಣ್ಣಿನ ಸಮೀಕರಣದಲ್ಲಿ ಈ ಕೆಳಗಿನ ಎರಡು ಬಗೆಗಳನ್ನು ಗುರುತಿಸಬಹುದು.

1. ಭೂಮಿಯನ್ನು ಹೆಣ್ಣಾಗಿ ಪರಿಭಾವಿಸುವ ಕ್ರಮ
2. ಹೆಣ್ಣನ್ನು ಭೂಮಿಯಂತೆ ಎಂದು ಭಾವಿಸುವ ಕ್ರಮ

ಭೂಮಿಯನ್ನು ಹೆಣ್ಣಾಗಿ ಪರಿಭಾವಿಸುವ ಕ್ರಮ :– ಭೂಮಿಯನ್ನು ಒಂದು ಹೆಣ್ಣು ಎಂದು ಪರಿಭಾವಿಸಿದ ಮನುಷ್ಯರ ಆಲೋಚನಾ ಕ್ರಮವು ಹಲವು ನಿದರ್ಶನಗಳಿಂದ

ಭೂಮಿಗೆ ಫಲವಂತಿಕೆಯ ಚಿಂತನೆಗಳನ್ನು ನೀಡಿ ಅರ್ಥೈಸಿತು. ನಮ್ಮ ಆಚರಣೆ ನಂಬಿಕೆಗಳಲ್ಲಿ ಪ್ರಾಚೀನ ಶಾಸನದಲ್ಲಿ ಜನಪದ ಸಾಹಿತ್ಯದಲ್ಲಿ, ಪುರಾಣಗಳಲ್ಲಿ ಈ ರೀತಿಯ ವಿವರಣೆಗಳು ಇರುವುದನ್ನು ಗಮನಿಸಬಹುದು

ಶಾಸನದ ಉಲ್ಲೇಖ :– ಬಾರಕೂರಿನ ಸಮೀಪ ಲಭ್ಯವಾಗಿರುವ ಶಾಸನದ ಮುದ್ರೆಯಲ್ಲಿ ಜಿಂಕೆಯ ಚಿತ್ರ ಮತ್ತು ಜಿಂಕೆಯ ಕೊಂಬಿನಿಂದ ಚಿಗುರಿದ ಭತ್ತದ ತೆನೆ ಮತ್ತು ಸಮೀಪದಲ್ಲಿ ಪವಡಿಸುವ ಹೆಣ್ಣಿನ ಚಿತ್ರದ ಮುದ್ರಿಕೆ ಮುಖ್ಯವಾದುದು. ಇಂದಿನಂತೆಯೇ ಪ್ರಾಚೀನ ಕರ್ನಾಟಕದಲ್ಲಿಯೂ ವ್ಯವಸಾಯವೇ ಅತಿ ಪ್ರಮುಖವಾದ ಜೀವನೋಪಾಯವಾಗಿತ್ತು. ತನ್ನ ಗರ್ಭದಿಂದ ಹೊರಟ ಧಾನ್ಯಾದಿಗಳಿಂದ ಜನರನ್ನು ಸಾಕುವ ಭೂಮಿಯನ್ನು ತಾಯಿಯೆಂದು ಬೆಳೆಗಳನ್ನು ಬೆಳೆಯುವ ರೈತರನ್ನು ಭೂದೇವಿಯ ಮಕ್ಕಳೆಂದು ಶಾಸನವೊಂದು ಕರೆದಿದೆ. ಎಂದು ಶಾಸನದ ಉಲ್ಲೇಖವು ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ ಸಂಪುಟ ಒಂದರಲ್ಲಿ ಚಿದಾನಂದ ಮೂರ್ತಿಯವರು ಉಲ್ಲೇಖಿಸುತ್ತಾರೆ. ಭೂಮಿಯನ್ನು ಹೆಣ್ಣಿನ ರೂಪದಲ್ಲಿ ಕಂಡ ಬಗೆಗೆ ಒಂದು ನಿರ್ದಿಷ್ಟ ದಾಖಲೆಯು ದೊರೆತಂತಾಗುತ್ತದೆ.

ಪುರಾಣದ ಉಲ್ಲೇಖ :– ಪುರಾಣಗಳಲ್ಲೂ ಸಹ ಭೂಮಿಯನ್ನು ಹೆಣ್ಣು ಎಂದು ಪರಿಭಾವಿಸಿರುವುದಕ್ಕೆ ನಿದರ್ಶನಗಳಿವೆ.

ಪುರಾಣ: 1 :– ಭೂದೇವಿ ಮಹಾ ವಿಷ್ಣುವಿನ ಹೆಂಡತಿ, ವರಾಹ ಅವತಾರ ದಲ್ಲಿ ಹಿರಣ್ಯಾಕ್ಷ ಭೂಮಿಯನ್ನು ಎತ್ತಿಕೊಂಡು ಹೋಗಿ ನೀರಿನಲ್ಲಿ ಮುಳುಗಿದನು. ಮಹಾವಿಷ್ಣು ವರಾಹ ರೂಪವನ್ನು ತಾಳಿ, ನೀರಿಗಿಳಿದು ದಾಡೆಯ ಮೇಲೆ ಹೊತ್ತು ಭೂಮಿಯನ್ನು ಮೇಲೆ ತಂದನು. ಹೀಗೆ ಮೇಲೆ ಬಂದ ಭೂಮಿಯು ನೀರಿನ ಮೇಲೆ ಕಮಲದ ಹೂವಿನಂತೆ ತೇಲುತ್ತಿರುವುದನ್ನು ಕಂಡು ಭೂದೇವಿ ಸಂತೋಷಗೊಂಡು ಸುಂದರವಾದ ರೂಪದಿಂದ ಅಲ್ಲಿ ನಿಂತಳು. ಸೂರ್ಯನ ಕಾಂತಿಯುಳ್ಳ ಭೂದೇವಿಯನ್ನು ಕಂಡು ಮಹಾವಿಷ್ಣು ಅವಳಲ್ಲಿ ಅನುರಕ್ತನಾಗಿ ದೇವ ವರ್ಷದವರೆಗೂ ಅವಳೊಡನೆ ಸಂಭೋಗ ಮಾಡಿದನು. ಆ ವೇಳೆಯಲ್ಲಿಯೇ ಭೂದೇವಿ ಮಹಾವಿಷ್ಣುವಿನ ಹೆಂಡತಿಯಾಗುವುದು ಇವರಿಬ್ಬರ ಸಂಬಂಧದಿಂದಾಗಿ ಮಂಗಲ ಎಂಬ ಮಗನೊಬ್ಬ ಹುಟ್ಟಿದನು.

ಹಿರಣ್ಯಾಕ್ಷ ಎಂಬ ಅಸುರನಿಂದ ಭೂದೇವಿಗೆ ನರಕಾಸುರ ಹುಟ್ಟಿದನು. ಹಿರಣ್ಯಕನೇ ಹಂದಿಯ ರೂಪದಲ್ಲಿ ಭೂದೇವಿಯನ್ನು ತನ್ನ ದಾಡೆಯ ಮೇಲಿಟ್ಟುಕೊಂಡು ಪಾತಾಳಕ್ಕೆ ಹೋದನು. ಹೀಗೆ ಭೂಮಿಯು ಅವನ ಸ್ಪರ್ಶವನ್ನು ಪಡೆದ ಮೇಲೆ ಗರ್ಭಿಣಿಯಾದಳು. ನರಕಾಸುರ ಈ ರೀತಿಯ ಸ್ಪರ್ಶದಿಂದ ಹುಟ್ಟಿದನೆಂದು ಭಾಗವತದ ದಶಮಿ ಸ್ಕಂದದಲ್ಲಿ ಹೇಳಿರುವುದನ್ನು ಕಾಣಬಹುದು. (ಸಂಗ್ರಹ ; ಹರಿಲಾಲ್ ಪವಾರ, 1999, ಪು 43)

ಭೂಮಿಗೂ ಹೆಣ್ಣಿನಂತೆ ಫಲ ನೀಡುವ, ಸೃಷ್ಟಿಸುವ ಶಕ್ತಿ ಇರುವುದು ತಿಳಿದು ಬರುತ್ತದೆ. ಅಲ್ಲದೆ ಪುರಾಣದಲ್ಲಿ ಭೂಮಿ ಕುರಿತು ಹೇಳಿದ ಸಂಭೋಗದ ಕ್ರಿಯೆ, ಗರ್ಭ ಧರಿಸುವ ಕ್ರಿಯೆ, ಜನ್ಮ ನೀಡುವ ಕ್ರಿಯೆಗಳ ಬಗೆಗೆ ಹೇಳಿರುವ ಸಂಗತಿಗಳ ಹೆಣ್ಣಿನ ಜೈವಿಕ

ಕ್ರಿಯೆಗಳೊಂದಿಗೆ ಸಾಮ್ಯತೆ ಪಡೆದಿವೆ. ಒಟ್ಟಿನಲ್ಲಿ ಭೂಮಿಯೂ ಒಂದು ಹೆಣ್ಣಿನಂತೆ ಎಂದು ಭಾವಿಸಿಕೊಂಡಿರುವುದು ಪುರಾಣದ ಕಥೆಯಿಂದ ತಿಳಿದು ಬರುತ್ತದೆ. ಭೂಮಿಯ ಉತ್ಪಾದನಾ ಕ್ರಿಯೆಗೂ ಹೆಣ್ಣಿನ ಜೈವಿಕ ಕ್ರಿಯೆಗಳಿಗೂ ಹೋಲಿಕೆ ಇರುವ ಕಾರಣಕ್ಕಾಗಿಯೇ ಭೂಮಿ ಮತ್ತು ಹೆಣ್ಣನ್ನು ಸಮೀಕರಿಸಿ ನೋಡುವ ಆಲೋಚನೆ ಬೆಳೆದು ಬಂದಿದೆ.

ಕೊರಗರ ಸೃಷ್ಟಿ ಪುರಾಣ :–ಆದಿಯಲ್ಲಿ ಈ ಪ್ರಪಂಚದಲ್ಲಿ ಭೂಮಿ ಎನ್ನುವುದೇ ಇರಲಿಲ್ಲ. ಎಲ್ಲವೂ ನೀರಿನಿಂದ ತುಂಬಿ ಹೋಗಿತ್ತು. ಆ ನೀರಿನಲ್ಲಿ ಗಂಡು ಮತ್ತು ಹೆಣ್ಣು ಎರಡು ಜೀವಿಗಳು ಹುಟ್ಟಿದವು. ಈ ಅಣ್ಣ–ತಂಗಿ ಜೀವಿಗಳು ನೀರಿನಲ್ಲಿರುವಾಗ ನಾರಾಯಣ ದೇವರು ಮಾಯೆಯಿಂದ ಒಂದು ಡೋಲನ್ನು ಡೋಲಿನ ಕಳಸೆ (ಡೋಲುದ ಕರ) ಸೃಷ್ಟಿಸಿ ನೀರಿನಲ್ಲಿ ತೇಲಿ ಬಿಡುತ್ತಾರೆ. ಅಣ್ಣ–ತಂಗಿ ಅದರೊಳಗೆ ಕುಳಿತು ರಕ್ಷಣೆ ಪಡೆಯುತ್ತಾರೆ. ನಾರಾಯಣ ದೇವರು ಬಂದು ನಿಮಗೆ ಏನಾದರೂ ಬೇಕೆ ಎಂದು ಕೇಳಿದರಂತೆ, ಆಗ ಅವರು ನಮಗೇನೂ ಬೇಡವೆಂದು ಹೇಳಿದ್ದರಿಂದ ಮರಳಿ ಹೋದರು. ಜೀವ ತಡೆಯಲಾಗದೆ ನಾರಾಯಣ ದೇವರು ಪುನಃ ಬಂದು ಕೇಳಿದಾಗಲೂ ಅವರಿಂದ ಅದೇ ಉತ್ತರ ದೊರೆಯಿತು. ಮೂರನೇ ಬಾರಿ ಬಂದಾಗ ನಿಮಗೆ ಪ್ರಪಂಚ ಅನ್ನುವುದು ಬೇಡವೇ ? ಪ್ರಪಂಚದಲ್ಲಿ ಇತರ ಜೀವಿಗಳೂ ಇರಬೇಕು ಎಂಬ ಬಯಕೆ ನಿಮಗಿಲ್ಲವೇ? ನಿಮಗೆ ಈ ನೀರಿನಲ್ಲಿ ಡೋಲಿನ ಇಷ್ಟೇ ಸ್ಥಳದಲ್ಲಿ ಇರಲು ಬೇಸರವಾಗುವುದಿಲ್ಲವೇ? ಹೀಗೆ ಪ್ರಶ್ನೆಗಳನ್ನು ಕೇಳಿ ಪರಸ್ಪರ ಒಬ್ಬರಿಗೊಬ್ಬರಲ್ಲಿ ಆಸೆ ಹುಟ್ಟಿಸಿದರು. ಆಗ ಅಣ್ಣ ತಂಗಿಯರಿಬ್ಬರೂ ಕೂಡಿದರು. ಆಗ ಭೂಮಿ ಹುಟ್ಟಿತು. ಅವರ ಆಸೆಗೆ ತಕ್ಕಂತೆ ಎಲ್ಲವೂ ನಿರ್ಮಾಣವಾಯಿತು.

ಅಣ್ಣ ತಂಗಿಯರ ಸಂತಾನ ಬೆಳೆಯುತ್ತಾ ಹೋಯಿತು, ಸಂತಾನ ಬೆಳೆದಂತೆ ಮನೆ ತುಂಬಿ ಹೋಯಿತು. ಹೊಟ್ಟೆಯ ಪಾಡಿಗಾಗಿ ಅವರ ಮಕ್ಕಳೆಲ್ಲ ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಿದರು. ಇದೇ ವೃತ್ತಿಗಳೇ ಮುಂದೆ ಜಾತಿಗಳಾದವು ಅದರಲ್ಲಿ ಬ್ರಾಹ್ಮಣ, ಶೆಟ್ಟಿ. ಬಿಲ್ಲವ, ಮೊಯ್ಲಿ ಇವರೆಲ್ಲರೂ ಇದ್ದರು. ಅಕ್ಕನ ಸಂತಾನದ ಮಕ್ಕಳು ಇವರು ಬೆಳೆದು ಶ್ರೀಮಂತರಾದರು. ಆದರೆ ತಂಗಿಯ ಸಂತಾನದವರು ಹಾಗೆ ಆಗಲಿಲ್ಲ. ಏಕೆಂದರೆ ತಂಗಿ ಅಣ್ಣನನ್ನು ವರಿಸಿದ್ದರಿಂದ ಅವರಿಗೆ ಶಾಪವಿತ್ತು. ಆ ಕಾರಣಕ್ಕಾಗಿ ಅವರಿಗೆ ಬೆಳೆಯಲಾಗಲಿಲ್ಲ, ತಂಗಿ ಈ ಶಾಪದಿಂದ ಮುಕ್ತಿಯನ್ನು ಪಡೆಯಬೇಕಾದರೆ ಆಕೆ ತನ್ನ ಎಲ್ಲಾ ಮಕ್ಕಳ ಮನೆಯಲ್ಲಿ ಎಂಜಲು ಅನ್ನವನ್ನು ತಿನ್ನಬೇಕು ಎಂದು ನಾರಾಯಣ ದೇವರು ಹೇಳಿದಂತೆ ಆ ಕಾರಣಕ್ಕಾಗಿ ತಂಗಿಯ ಸಂತಾನದವರು ಎಂಜಲು ಅನ್ನವನ್ನು ತಿನ್ನುತ್ತಾರೆ. (ಪುರುಷೋತ್ತಮ ಬಿಳಿಮಲೆ , 1992, 27)

ಭೂಮಿಯ ಉಗಮದ ಕತೆಯೊಂದಿಗೆ ಹೆಣ್ಣಿಗೂ ಭೂಮಿಯಲ್ಲಿ ಸೃಷ್ಟಿ ಪ್ರಕ್ರಿಯೆಗಳು ನಡೆಯುವ ಬಗೆಗಿರುವ ಐತಿಹ್ಯವೂ ಆಗಿ ರೂಪಾಂತರ ಹೊಂದಿದ ಆದಿಮ ಜಗತ್ತಿನ ಲೋಕದೃಷ್ಟಿಯ ರಹಸ್ಯಗಳನ್ನು ನಮ್ಮ ಮುಂದಿಡುತ್ತವೆ. ಹೆಣ್ಣಿಲ್ಲದೆ ಲೋಕದ ಪರಿಕಲ್ಪನೆಯೇ ಇಲ್ಲಿ ಇಲ್ಲ. ಗಂಡು ಹೆಣ್ಣು ಪರಸ್ಪರ ಕೂಡಿದ್ದರಿಂದ ದೇಹದ ಹಸಿವು ಮತ್ತು ಹೊಟ್ಟೆಯ ಹಸಿವಿನ ವಿಸ್ತೃತ ರೂಪವನ್ನು ನಮ್ಮ ಮುಂದಿಡುತ್ತದೆ. ತುಳುನಾಡಿನ ಲೋಕ ಸೃಷ್ಟಿಯ ಬಗೆಗಿನ ವಿಚಾರಗಳು ಬಹಳ ತಾತ್ವಿಕವಾದ ಚಿಂತನೆಯೊಂದನ್ನು ನಮ್ಮ ಮುಂದಿಡುತ್ತಿದ್ದು ಇವಲ್ಲದೆ ಬೆರ್ಮೆರೆ ಸಂಧಿ, ಕೇಂಜವ ಹಕ್ಕಿಗಳ ಸಂದಿ, ದೇಯಿ ಬೈದ್ಯೆದಿ ಸಂಧಿ, ಪಂಜುರ್ಲಿ ಪಾಡ್ದನಗಳು ಲೋಕ ಸೃಷ್ಟಿಯ ಕತೆಯ ನಿರೂಪಣೆಗಳನ್ನು ಹೇಳುತ್ತದೆ. ಆರಾಧನಾ

ಪರಂಪರೆಯಲ್ಲಿ ಪಾಡ್ದನಗಳನ್ನು ಹೇಳುವಾಗಲೂ ಲೋಕದಲ್ಲಿ ನೆಲ-ನೀರು-ಸೃಷ್ಟಿಯ ವಿಚಾರಗಳನ್ನು ಮುಂದಿಡುತ್ತಾರೆ. ಪಂಜುರ್ಲಿ ಪಾಡ್ದನ, ಕುಪ್ಪೆ ಪಂಜುರ್ಲಿ , ಕೋಡ್ದಬ್ಬು-ತನ್ನಿಮಾನಿಗ ಪಾಡ್ದನಗಳಲ್ಲಿಯೂ ಈ ಅಂಶವನ್ನು ಗುರುತಿಸಬಹುದು. ಸಂಧಿ- ಪಾಡ್ದನಗಳ ಪಠ್ಯ ಮತ್ತು ವಿಶ್ಲೇಷಣೆಯನ್ನು ನಡೆಸುತ್ತಾ ಹೋದರೆ ಇನ್ನೊಂದಷ್ಟು ವಿಸ್ತೃತತೆಯನ್ನು ಪಡೆದುಕೊಳ್ಳುವುದರಿಂದ ಮೊಟಕುಗೊಳಿಸುವುದು ಅನಿವಾರ್ಯವಾಗಿರುತ್ತದೆ. ಇಲ್ಲೆಲ್ಲಾ ಹೆಣ್ಣು ಸೃಷ್ಟಿಯ ಮೂಲವಾಗಿ ಭೂಮಿಯನ್ನು ಆ ಹಿನ್ನೆಲೆಯಲ್ಲಿ ಅರ್ಥೈಸಿಕೊಂಡ ವಿವರಣೆಗಳನ್ನು ಗಮನಿಸಬಹುದು.

ಪಂಜುರ್ಲಿ ಪಾಡ್ದನದಲ್ಲಿ ಶಿವ-ಪಾರ್ವತಿಯರು ಕಳುಹಿಸಿರುವ ಹಂದಿ ಭೂಮಿಯನ್ನು ದಾಡೆಯಿಂದ ಸೀಳುವುದು ಮತ್ತು ಅಣ್ಣ ತಂಗಿಯಾಗಿದ್ದವರು ದಂಪತಿಗಳಾದುದರಿಂದ ಶಿವಗಣಗಳಾಗಿ ಪಂಜುರ್ಲಿ ಭೂತಗಳಾಗಿ ಸಹ್ಯಾದ್ರಿಯ ಬೆಟ್ಟಗಳ ಸಾಲಿನಿಂದ ಕರಾವಳಿಯ ಕಡಲ ತಡಿಯವರೆಗೆ ನಡೆಸುವ ಪ್ರಯಾಣ ಇವೆಲ್ಲವೂ ಹೆಣ್ಣಿನ ಸೃಷ್ಟಿ ತತ್ವದ ಅಸ್ಮಿತೆಯ ಮೂಲ ನೆಲೆಯನ್ನು ಹೇಳುತ್ತದೆ. ಹೆಣ್ಣಿಲ್ಲದೆ ಜೀವ ಸೃಷ್ಟಿ ಅಸಾಧ್ಯ ಎಂಬ ತಾರ್ಕಿಕ ನಿಲುವಿನೊಂದಿಗೆ ಜೀವ ಜಾಲ ಹರಡುತ್ತಲೇ ಬೆಳೆದು ಬಂದ ಪರಿಯೂ ಅನನ್ಯವಾದುದು. ಕೇಂಜವ ಹಕ್ಕಿಗಳ ಸಂಧಿಯಲ್ಲಿ ಹಕ್ಕಿಯ ಮೊಟ್ಟೆ ಜೀವ ಜಾಲಕ್ಕೆ ಮೂಲವಾದುದು, ಸಿರಿ ಪಾಡ್ದನದಲ್ಲಿ ಬೆರ್ಮರಿಂದ ಅಜ್ಜರಿಗೆ ಸಿಗುವ ಪ್ರಸಾದದಲ್ಲಿ ಹೆಣ್ಣು ಮಗುವೇ ಹುಟ್ಟುವುದು, ಹೊನ್ನಿನ ಬಣ್ಣದ ಹಿಂಗಾರದ ಹಾಳೆ ಹೊನ್ನಿನ ಬಣ್ಣದ ಮಗುವನ್ನು ಪಡೆಯಲು ಕಾರಣವಾಗುತ್ತದೆ. ಅಲ್ಲಿಂದ ಅಜ್ಜೆರ್ ಬೆರ್ಮೆರ್ ಮಾಲವರಿಗೆ ತನ್ನ ವಂಶ ಮತ್ತು ಭೂಮಿಗೆ ಒಂದು ಒಡೆತನದ ಪ್ರಾಪ್ತಿ ಸಿದ್ಧಿಯಾಗುತ್ತದೆ.

ಆಚರಣೆಗಳು :- ಕರಾವಳಿಯಲ್ಲಿ ಇಂದಿಗೂ ಆಚರಣೆಯಲ್ಲಿರುವ ಕೆಡ್ಡಸದ ಆಚರಣೆ ಭೂಮಿಯನ್ನು ಹೆಣ್ಣಾಗಿ ಪರಿಭಾವಿಸುತ್ತದೆ. ಮೂರು ದಿನದ ಆಚರಣೆಯಾಗಿರುವ ಈ ಹಬ್ಬದಲ್ಲಿ ಭೂಮಿತಾಯಿ ಮುಟ್ಟಾಗಿದ್ದಾಳೆ ಎಂಬ ನಂಬಿಕೆ ಇಂದಿಗೂ ಇದೆ. ಈ ಮೂರು ದಿನಗಳಲ್ಲಿ ಕೃಷಿ ಕಾರ್ಯಗಳಿಗೆ ವಿರಾಮವನ್ನು ಭೂಮಿಗೆ ಸೂತಕದ ಮೈಲಿಗೆಯನ್ನು ಆರೋಪಿಸಲಾಗುತ್ತದೆ. ಕರಾವಳಿಯಾದ್ಯಂತ ಪ್ರಾದೇಶಿಕವಾಗಿ ನಡೆಸುವ ಆಚರಣೆಗಳಲ್ಲಿ ಭಿನ್ನತೆಗಳನ್ನು ಗಮನಿಸಿದರೂ ಮೂಲದ ಆಶಯ ಒಂದೇ ಆಗಿದೆ.

ಕೆಡ್ಡಸ: ಪುಂತೆಲ್ ತಿಂಗಳಲ್ಲಿ ಬರುವ ಮೂರು ದಿನದ ಆಚರಣೆ ಕೆಡ್ಡಸದಲ್ಲಿದೆ. ಕೊಡಿ ಕೆಡ್ಡಸ, ನಡು ಕೆಡ್ಡಸ, ಕಡೆ ಕೆಡ್ಡಸ. ಕೊನೆಯ ದಿನ ಪುಂಡದ ಹಕ್ಕಿಯ ಬೇಟೆಯೂ ನಡೆಯುತ್ತದೆ. "ಕುಡು ಅರಿ"' ಕೆಡ್ಡಸದ ವಿಶೇಷ ಖಾದ್ಯ. ಇದರೊಂದಿಗೆ ರೊಟ್ಟಿ ಪಾಯಸವನ್ನು ಮಾಡುತ್ತಾರೆ. ಕುಡು ಅರಿಯಲ್ಲಿ ಹುರುಳಿ, ಅಕ್ಕಿ, ಕಡಲೆ, ಹೆಸರು ಉದ್ದು ಐದು ಬಗೆಯ ಧಾನ್ಯವನ್ನು ಮಣ್ಣಿನ ಓಡಿನಲ್ಲಿ ಹುರಿಯುತ್ತಾರೆ. ಹುರಿದಾದ ಮೇಲೆ ಸ್ವಲ್ಪ ಉಪ್ಪು ಕಲಸಿದ ನೀರನ್ನು ಚಿಮುಕಿಸುತ್ತಾರೆ. ಅದರೊಂದಿಗೆ ಒಣಕೊಬ್ಬರಿಯನ್ನು ಸಣ್ಣ ಚೂರುಗಳಾಗಿ ಕತ್ತರಿಸಿ ಹಾಕಿ ಹಂಚುತ್ತಾರೆ. ಇದು ಎಲುಬನ್ನು ಗಟ್ಟಿ ಮಾಡುತ್ತದೆ ಎಂಬ ನಂಬಿಕೆ. ರೊಟ್ಟಿ ಪಾಯಸಕ್ಕೆ ಕುಚ್ಚಲಕ್ಕಿಯ ರೊಟ್ಟಿಯನ್ನು ಮಾಡಿ, ಪದಾರ್ಥದ ಮಸಾಲೆಯನ್ನು ಅರೆದು

ಸ್ವಲ್ಪ ಬೆಲ್ಲ ಹಾಕಿ ರೊಟ್ಟಿಯನ್ನು ತುಂಡು ಮಾಡಿ ಹಾಕುತ್ತಾರೆ. ಇದಲ್ಲದೆ ಭೂಮಿ ತಾಯಿ ಮುಟ್ಟಾಗಿದ್ದಾಳೆ ಎಂದು ಮುಟ್ಟಿನ ಸ್ನಾನದ ಆಚರಣೆ ಇಲ್ಲಿದೆ.

ಮನೆಯಂಗಳದ ಒಂದು ಮೂಲೆಯಲ್ಲಿ ಮನೆಯ ಹೆಣ್ಣು ಮಕ್ಕಳೇ ಸೇರಿ ಸೆಗಣಿ ಸಾರಿಸುತ್ತಾರೆ. ಅಲ್ಲಿ ಒಂದು ಮಣೆ ಇಟ್ಟು ಅದರ ಮೇಲೆ ಪೆರದನೆ ಹೂಗಳನ್ನು ಇಡುತ್ತಾರೆ. ಭೂಮಿಗೆ ಮೊದಲು ನೀರು ಹಾಕಿ ಸೆಗಣಿ ಸಾರಿಸಿ ಮಣೆ ಇಡುತ್ತಾರೆ. ಆ ಮೇಲೆ ಒಂದಿಷ್ಟು ಎಣ್ಣೆ ಹಾಕಿ ಮಣೆಯ ಹತ್ತಿರ ದೂಪ, ದೀಪಗಳನ್ನು ಉರಿಸುತ್ತಾರೆ. ಮಣೆಯ ಮೇಲೆ ಹಾಕಿದ ಕುಂಕುಮವನ್ನು ಹೆಣ್ಣು ಮಕ್ಕಳು ನಮಸ್ಕರಿಸಿ ತಲೆಗೆ ಹಚ್ಚಿಕೊಳ್ಳುತ್ತಾರೆ. ಭೂಮಿಯೂ ಹೆಣ್ಣು ಅವಳು ಋತು ಸ್ನಾನ ಮಾಡುವುದರಿಂದ ಮೂರು ದಿನ ಭೂಮಿಯನ್ನು ಅಗೆಯುವ, ಉಳುವ, ಕಡಿಯುವ ಕೆಲಸಗಳಲ್ಲದೆ, ಯಾವುದೇ ಕೃಷಿಕಾರ್ಯವನ್ನು ಮಾಡುವಂತಿಲ್ಲ. ಭೂಮಿ ಅದುರಬಾರದು, ಭತ್ತವನ್ನು ಕುಟ್ಟುವಂತಿಲ್ಲ. ಕೊನೆಯ ದಿನ ಮುಂಡೆವು ಬಲ್ಲೆಗಳಲ್ಲಿ ಇರುವ ಪುಂಡದ ಹಕ್ಕಿಯನ್ನು ಬೇಟೆಯಾಡುತ್ತಾರೆ. ಕೆಡ್ಡಸದ ಸಂದರ್ಭ ಹೆಣ್ಣು ಮಕ್ಕಳು ಮುಟ್ಟಾದರೆ ಅವರು ಉಂಡ ಎಲೆಯನ್ನು ತೆಂಗಿನ ಮರದ ಕುಬೆಯಲ್ಲಿ ಇಡಬೇಕು ಅವರೂ ತೆಂಗಿನ ಸೋಗೆಯಲ್ಲಿ ವಿರಮಿಸಬೇಕು ಎಂಬ ನಂಬಿಕೆಯಿದೆ. ಭೂಮಿಯ ಫಲವಂತಿಕೆಯನ್ನು ವಿಶಿಷ್ಟವಾಗಿ ಗ್ರಹಿಸಿ ಆಚರಿಸುವ ಈ ಹಬ್ಬ ಕರಾವಳಿಯ ವೈಶಿಷ್ಟ್ಯ. ಈ ಕಾಲಮಾನದಲ್ಲಿ ಅತ್ಯಂತ ಜೋರಾಗಿ ಗಾಳಿಯೂ ಬೀಸಲಾರಂಭಿಸಿದ್ದು ಅದನ್ನು "ಕೆಡ್ಡಸದ ಗಾಳಿ"" ಎನ್ನುತ್ತಾರೆ. ಬೆಳೆ ಸೊಗಸಾಗಿ ಬೆಳೆಯಲು ಪರಾಗಸ್ಪರ್ಶವನ್ನು ತುಂಬುವ ಈ ಗಾಳಿಯೂ ಅವಶ್ಯಕ. ಕೆಡ್ಡಸದ ಆಚರಣೆ ಸ್ತ್ರೀ ಕೇಂದ್ರಿತವಾಗಿದ್ದು ಹೆಣ್ಣಿನ ಪಾರಮ್ಯವನ್ನು ವಿಶ್ಲೇಷಿಸುತ್ತದೆ.

ಸಿರಿ ಪಾಡ್ದನದಲ್ಲಿ ತನ್ನ ಮೌಲ್ಯಕ್ಕೆ ಬೆಂಬಲ ನೀಡಲು ಬರ ಹೇಳುವ ಪ್ರಸಂಗವನ್ನು ಉಲ್ಲೇಖಿಸಬಹುದು. ಹೆಣ್ಣಿನ ನೋವು ಹೆಣ್ಣಿಗೆ ಮಾತ್ರ ಅರ್ಥವಾಗಲು ಸಾಧ್ಯತೆ ಇದೆ. ಹಾಗಾಗಿ ಭೂಮಿ ಹೆಣ್ಣಾಗಿ ಪರಿಭಾವಿಸುವ ನೆಲೆ ಕೇವಲ ಹೆಣ್ಣಿಗೆ ಅರ್ಥಾಂತರಗೊಳ್ಳದೆ ಅರಿಯಲು ಸಾಧ್ಯತೆ ಇದೆ.

ಹೆಣ್ಣನ್ನು ಭೂಮಿಯಂತೆ ಎಂದು ಪರಿಭಾವಿಸುವ ಕ್ರಮ :

ಭೂಮಿ ಹೇಗೆ ಸೃಷ್ಟಿಯ ಗುಣವನ್ನು ಹೊಂದಿದೆಯೋ ಹಾಗೆ ಹೆಣ್ಣು ಸೃಷ್ಟಿಯ ಗುಣವನ್ನು ಹೊಂದಿದ್ದಾಳೆ ಎಂಬ ಜನಪದರ ನಂಬಿಕೆಯೇ ಆಕೆಯನ್ನು ಭೂಮಿಯಾಗಿ ಪರಿವರ್ತಿಸುವ ನಂಬಿಕೆ ವಿಚಾರಗಳು ಚಾಲ್ತಿಯಲ್ಲಿವೆ. ಹೆಣ್ಣಿನ ದೇಹ ರಚನೆಯ ವಿನ್ಯಾಸವನ್ನೇ ಭೂಮಿಯ ಗುಣಗಳೊಂದಿಗೆ ಸಮೀಕರಿಸಲಾಗಿದೆ. ಧಾರಣೆ, ಪೋಷಣೆ, ಮತ್ತು ಸೃಷ್ಟಿಯ ಗುಣಗಳನ್ನು ಆವಿರ್ಭವಿಸಲಾಗಿದೆ. ಹೆಣ್ಣಿನ ಬದುಕಿನ ವಾರ್ಷಿಕ ಆವರ್ತನವನ್ನು ಭೂಮಿಯ ವಾರ್ಷಿಕ ಆವರ್ತನದೊಂದಿಗೆ ಸಮೀಕರಿಸಲಾಗುತ್ತಿದೆ. ಹೆಣ್ಣು ಹುಟ್ಟಿನಿಂದ ಸಾವಿನವರೆಗೆ ಆಚರಣೆಗಳಲ್ಲಿ ಫಲವಂತಿಕೆಯ ಅಂಶಗಳೇ ಸಾಕಷ್ಟಿವೆ. ಆಕೆ ಮೈನೆರೆಯುವಾಗ ನಡೆಸುವ ಆಚರಣೆಯಲ್ಲಿ ಅವಳನ್ನು ಭತ್ತದ ಮುಡಿಗೆ ಜೋಡು ತೆಂಗಿನಕಾಯಿಗಳನ್ನು ಜತೆ ಸೇರಿಸಿ ಅದರ ಮೇಲೆ ಕೂರಿಸಲಾಗುತ್ತದೆ. ಫಲವಂತಿಕೆಯ ಕಾಯಿ ಮತ್ತು ಭತ್ತಗಳಂತೆ ಒಂದು ಎರಡಾಗಿ ಹಲವು ಸಾವಿರಗಳಾಗುವ ಪ್ರಕ್ರಿಯೆ ಹೆಣ್ಣಿನಲ್ಲಿ ಮಾತ್ರ ಸಾಧ್ಯ.

ಹೊಸ ಜೀವಕ್ಕೆ ಜನ್ಮ ಕೊಡುವ ಬಸುರಿಯಾದಾಗಲೂ ಬಹಳ ಸಾಂಕೇತಿಕವಾಗಿ

ಅವಳ ಕೈಗೆ ಹಿಂಗಾರವನ್ನು ನೀಡಿ ಬೆರಳ ತುದಿಯಿಂದ ಸೀಳುವಂತೆ ನಿರ್ದೇಶಿಸಲಾಗುತ್ತದೆ. ಹಾಗೆ ಸೀಳಿದ ಹಿಂಗಾರದ ಹಾಳೆಯಲ್ಲಿ ಕಾಯಿಗಳಿರಬೇಕು ಎಂಬ ನಂಬಿಕೆಯಿದೆ. ಬಸುರಿ ಹೊಟ್ಟೆಯಲ್ಲಿರುವ ಮಗುವೂ ಸಂತಾನ ಯಾತ್ರೆಯನ್ನು ಮುಂದುವರಿಸಲು ಕಾರಣವಾಗುತ್ತದೆ ಎಂಬ ಆಶಯ ಇಲ್ಲಿಯದು.

ವಿವಾಹದ ಸಂದರ್ಭದಲ್ಲಿ ಎರೆಯುವ 'ಧಾರೆ' ಯ ನೀರೂ ಒಂದರ್ಥದಲ್ಲಿ ಜೀವ ಸೃಷ್ಟಿಯನ್ನು ಸಾಂಕೇತಿಕವಾಗಿ ನಿರೂಪಿಸುತ್ತದೆ. ತೆಂಗಿನ ಮರದ ಕಾಯಿಗಳಿರುವ ಹೂವಿನ ಕೊಂಬನ್ನು ಗಿಂಡೆಯಲ್ಲಿಟ್ಟು ಕುಟುಂಬದ ಹಿರಿಯರು, ತಮೆರಿಯಾದ ಮಾವ, ದಂಪತಿಗಳ ದಾಂಪತ್ಯದ ಬದುಕಿಗೆ ಅನುಮತಿ ನೀಡುತ್ತಾರೆ. ಇಲ್ಲಿ ನೀರು ಮತ್ತು ತೆಂಗಿನಕಾಯಿಯ ಹೂವಿನ ಕೊಂಬು ಫಲವಂತಿಕೆಯ ಸಂಕೇತವೇ ಆಗಿದೆ. ಗಂಡಿನ ಹಸ್ತದ ಮೇಲೆ ಹೆಣ್ಣಿನ ಹಸ್ತವನ್ನಿರಿಸಿ 'ಧಾರೆ'ಯೆರೆದ ನೀರು ಚೆಲ್ಲಿ ಹೋಗದಂತೆ ಹರಿವಾಣ ಹಿಡಿದು ಆ ನೀರನ್ನು ಮತ್ತೆ ತೆಂಗಿನ ಮರದ ಬುಡಕ್ಕೆ ಚೆಲ್ಲುವ ಮೂಲಕ ಸೃಷ್ಟಿಯನ್ನು ಪೋಷಿಸಲಾಗುತ್ತದೆ. ಗಂಡು ಮತ್ತು ಹೆಣ್ಣಿನ ಲೈಂಗಿಕತೆಗೆ ನೀಡುವ ಸಮ್ಮತಿ ಮತ್ತು ಕೂಡಿ ಉಂಬ ಕುಟುಂಬವನ್ನು ಕಟ್ಟಿಕೊಳ್ಳುವ ಅಗತ್ಯತೆಯನ್ನು ಸಾರಿ ಹೇಳುತ್ತದೆ. ವಂಶವನ್ನು ಮುಂದುವರಿಸಲು ಸಾಂಕೇತಿಕ ಸಮ್ಮತಿಯೂ ಅವಶ್ಯವಾಗಿರುತ್ತದೆ.

ಮಗು ಹುಟ್ಟಿ ತೊಟ್ಟಿಲು ಕಟ್ಟುವ ಸಂದರ್ಭದಲ್ಲಿ ಒಂದು ವಿಶಿಷ್ಟ ಆಚರಣೆ ಇದೆ. ಗರಿಕೆಯ ಹುಲ್ಲನ್ನು ಸೆಗಣಿ ಮುದ್ದೆಯಲ್ಲಿ ನೆಟ್ಟು ಮಗುವನ್ನು ತೊಟ್ಟಿಲಿಗೆ ಹಾಕಿದ ದಿನ ತೊಟ್ಟಿಲಿಗೆ ಅಂಟಿಸುತ್ತಾರೆ. ಗರಿಕೆಯ ಹುಲ್ಲಿನ ವಿಶಿಷ್ಟ ಗುಣವೇ ಒಂದು ಚಿಕ್ಕ ಹುಲ್ಲಿದ್ದರೂ ವಿಸ್ತಾರವಾಗಿ ಬೆಳೆಯುವುದು. ಆ ಹುಲ್ಲಿಗೆ ಒಂದಿಷ್ಟು ನೀರಿನ ತೇವಾಂಶ ಮತ್ತು ಬೇರು ಬಿಟ್ಟು ಚಿಗುರಲು ಮೇಲ್‌ಸ್ತರದ ಮಣ್ಣು ಇದ್ದರೆ ಸಾಕು. ಎಲ್ಲ ದೇವಕಾರ್ಯಗಳಲ್ಲಿ ಪವಿತ್ರವಾಗಿರುವ ಈ ಹುಲ್ಲು ಶುಭ್ರ ಸ್ವಚ್ಛತೆ ಫಲವಂತಿಕೆಗೂ ಸಂಕೇತವಾಗಿದೆ. ಹೀಗೆ ಬೆಳೆಯುವ ಪ್ರದೇಶದಲ್ಲಿ ನೀರಿನ ತೇವಾಂಶ ಇದ್ದು ಬೆಳೆ ಬೆಳೆಯಲೂ ಕಾರಣವಾಗುತ್ತದೆ. ಬಾಣಂತಿಯಾಗಿರುವಾಗ ಆಕೆಗೆ ನಡೆಸುವ ಬಾಣಂತನದ ಎಲ್ಲ ಆಚರಣೆಗಳು ಮತ್ತೆ ಅವಳ ದೇಹ ತಾಯ್ತನವನ್ನು ಫಲವಂತಿಕೆಯ ನೆಲೆಯಲ್ಲಿ ಮರು ಸೃಷ್ಟಿಗೆ ಹದಗೊಳಿಸುವ ರೀತಿಯಲ್ಲಿ ಜೀವವನ್ನು ಮತ್ತೆ ಬೆಳೆಸಬೇಕಾದ ಎಚ್ಚರದ ರೀತಿಯಲ್ಲಿ ಇದೆ. ತಾಯ್ತನ ಎನ್ನುವುದು ಎಲ್ಲೂ ವೈಭವೀಕರಿಸಲ್ಪಡದೆ ವಾಸ್ತವತೆಯ ನೆಲೆಗಟ್ಟಿನಲ್ಲಿ ಅರ್ಥೈಸಲ್ಪಡುವುದರಿಂದ ಆ ಹಿನ್ನೆಲೆಯಲ್ಲಿಯೇ ಇಲ್ಲಿಯ ಆಚರಣೆಗಳಿವೆ. ಹೆಣ್ಣಿನ ಬದುಕಿನ ಪ್ರತಿಯೊಂದು ಹಂತದಲ್ಲೂ ಅವಳ ಸೃಷ್ಟಿಶೀಲ ಗುಣವನ್ನು ಬೆಂಬಲಿಸುವಂತೆ ಇಲ್ಲಿಯ ಆಚರಣೆಗಳಿವೆ. ತೆಂಗಿನಕಾಯಿ, ಭತ್ತ, ಅಡಿಕೆ, ವೀಳ್ಯ ಇವುಗಳನ್ನು ಅವಳ ಸೃಷ್ಟಿ ತತ್ವಕ್ಕೆ ಅರ್ಥೈಸಲಾಗುತ್ತದೆ. ಕನ್ಯೆಯಾಗಿದ್ದವಳು , ಋತುಮತಿಯಾಗಿ, ವಿವಾಹದ ಸಂದರ್ಭ ಬಯಕೆಯ ಸಂದರ್ಭ , ಅವಳ ಮುಷ್ಟಿಯೊಳಗಿರಿಸುವ ಅಡಿಕೆ ಮತ್ತು ವೀಳ್ಯದಂತೆ ಅವಳು ಫಲವಂತಳಾಗಬೇಕು ಎಂಬ ಆಶಯ ಇಲ್ಲಿಯದು. ಒಂದು ಕಣ್ಣಿನ ಅಡಿಕೆಯಿಂದ ಮೂರು ಕಣ್ಣಿನ ತೆಂಗಿನಕಾಯಿಯವರೆಗೂ ಫಲವಂತಿಕೆಯ ಸಂಕೇತವಾಗಿ ಇದನ್ನು ಬಳಸಲಾಗುತ್ತದೆ.

ಸಾವಿನ ಸಂದರ್ಭದಲ್ಲಿ ನಡೆಸುವ ಆಚರಣೆಗಳಲ್ಲೂ ಶವದ ಕಾಲು ಮತ್ತು ತಲೆಯ ದಿಕ್ಕಿಗೆ ಹಾಕುವ ಅಕ್ಕಿ ಮತ್ತು ಭತ್ತ ಜೀವ ಸೃಷ್ಟಿಗೆ ಪೂರಕವಾದಂತೆ ಜೀವ ಸರಪಳಿಗೆ

ಪೂರಕವಾಗಿ ಜೀವ ಚೈತನ್ಯವನ್ನು ಸೃಷ್ಟಿಸುತ್ತದೆ ಎನ್ನುವುದು ಸುಳ್ಳಲ್ಲ. ಇಡಿಯಾದ ಬಾಳೆಯ ಎಲೆ, ತೆಂಗಿನ ಸೋಗೆಯಲ್ಲಿ ಶವವನ್ನು ಮಲಗಿಸುವ ಮೂಲಕ ಜೀವ ಸೃಷ್ಟಿಯ ಅಖಂಡತೆಯ ತತ್ವವನ್ನು ನಮ್ಮ ಮುಂದಿಡುತ್ತಾರೆ. ಅಲ್ಲದೆ ಸಾವಿನ ನಂತರದಲ್ಲಿ ಇಡುವ ನೀರು ಮತ್ತು ಉತ್ತರಕ್ರಿಯೆಯಲ್ಲಿ ಆಚರಿಸುವ ನೀರು–ನೆರಳು ಸಂದರ್ಭದಲ್ಲಿ ಕಟ್ಟುವ ಬಟ್ಟೆಯ ತ್ರಿಕೋನ ಆಕೃತಿ ಮತ್ತು ಆಕಾಶಕ್ಕೆ ಮುಖ ಮಾಡಿ ನಿಂತ ಗೂಡು ದೀಪಗಳು ಆಕಾಶದ ಕಡೆಗೆ ಮುಖ ಮಾಡಿದ ಜೀವ ಜಾಲದ ಬಗೆಗೆ ನಿರೂಪಿಸುತ್ತದೆ. ಆಕಾಶವನ್ನು ಗಂಡಾಗಿ ಭೂಮಿ ಹೆಣ್ಣಾಗಿ ಪರಿಭಾವಿಸುವ ಸಂದರ್ಭದಲ್ಲಿ ಭೂಮಿಯ ಸತ್ವವನ್ನು ಆ ಹಿನ್ನೆಲೆಯಲ್ಲಿಯೇ ಅರ್ಥೈಸಲಾಗುತ್ತದೆ. ಭೂಮಿ ತತ್ವವನ್ನು ಸಹನಾಶೀಲ ಗುಣವಾಗಿ ಗ್ರಹಿಸುವ ಲೋಕದೃಷ್ಟಿಗೆ ಸೃಷ್ಟಿ ಪ್ರಕ್ರಿಯೆಯೂ ಸೃಜನಶೀಲ ಗುಣವಾಗಿ ಕಾಣಿಸಿಕೊಳ್ಳುತ್ತದೆ.

ವರ್ತಮಾನದಲ್ಲಿ ಹೆಣ್ಣನ್ನು ಭೂಮಿಯನ್ನಾಗಿ ಭೂಮಿಯನ್ನು ಹೆಣ್ಣಾಗಿ ಸಮೀಕರಿಸುವ ಚಿಂತನೆಗಳಿಗಿಂತ ಭಿನ್ನವಾಗಿ ವ್ಯವಹಾರದ ಸೊತ್ತಾಗಿ ಮಾತ್ರ ಪರಿಭಾವಿಸಲಾಗುತ್ತದೆ. ಭೂಮಿ ಗೆರೆ ಕೊರೆದು ಹುಡಿಗೊಳಿಸಿ ಅಳೆದು ಸುರಿದು ಸೃಷ್ಟಿಶೀಲಗುಣವನ್ನೆಲ್ಲ ಒತ್ತಟ್ಟಿಗಿರಿಸಿ ಮಾರಾಟದ ಸರಕಾಗಿ ಲಾಭ–ನಷ್ಟಗಳ ಲೆಕ್ಕಾಚಾರದಲ್ಲಿ ಮಾತ್ರ ನೋಡಲಾಗುತ್ತದೆ. ಹೆಣ್ಣಿನ ಪರಿಭಾಷೆ ಮತ್ತು ಪರಿಕಲ್ಪನೆಯೂ ಈ ಹಿನ್ನೆಲೆಯಲ್ಲಿ ಭಿನ್ನವಾಗಿಲ್ಲ. ಅಭಿವೃದ್ಧಿಯ ಸೂತ್ರದಲ್ಲಿ ಕೇವಲ ಸರಕಾಗಿ ಮಾತ್ರ ಪರಿಭಾವಿಸುತ್ತ ಅವಳ ಸೃಷ್ಟಿಶೀಲ ಗುಣವನ್ನು ನಾಶಗೊಳಿಸಲಾಗುತ್ತಿದೆ. ಸೃಷ್ಟಿ, ಪೋಷಣೆ, ಧಾರಣೆಯ ಗುಣಗಳಿಗಿಂತಲೂ ಹೆಣ್ಣನ್ನು ಲೈಂಗಿಕತೆಯ ಸರಕಾಗಿ ಮಾರುಕಟ್ಟೆಯಲ್ಲಿ ಬಿಕರಿಗೊಳ್ಳುವಂತಹ ನಯ ನಾಜೂಕು ಥಳಕು ಬಳುಕುಗಳೇ ಮಹತ್ವ ಪಡೆದಿವೆ. ಆಧುನಿಕ ಪರಿಭಾಷೆಯಲ್ಲಿ ಹೆಣ್ಣು ಎಲ್ಲಾ ವಸ್ತುಗಳನ್ನು ಮಾರುಕಟ್ಟೆಗೆ ಆಕರ್ಷಿಸುವ ರೂಪದರ್ಶಿತ್ವ ರಾಯಭಾರಿಯಾಗಿ ಪರಿವರ್ತನೆ ಹೊಂದುವಾಗ ಕಣ್ಣು ಮೂಗು ಎದೆಗಳಷ್ಟೇ ಮುಖ್ಯವಾಗುತ್ತಿದೆ. ಹೆಣ್ಣನ್ನು ಅವಳ ಸೃಷ್ಟಿಕ್ರಿಯೆಯನ್ನು ಮುಟ್ಟನ್ನು ಒಂದು ರೇಜಿಗೆಯಾಗಿ, ಫಲವಂತಿಕೆಯ ಸಂಭ್ರಮಕ್ಕಿಂತಲೂ ಸಂಕಟವನ್ನಾಗಿ ಮುನ್ನೆಲೆಗೆ ತರಲಾಗುತ್ತಿದೆ. ಈ ವೈರುಧ್ಯಗಳ ಮಧ್ಯೆ ಹೆಣ್ತನದ ಜಗತ್ತಿನ ಮೂಲ ನೆಲೆಯನ್ನು ಅರಿತುಕೊಳ್ಳುವ ಅವಶ್ಯಕತೆಯಿದೆ.

ಅಧ್ಯಾಯ : 8

ಸಂಸ್ಕೃತಿ ಚಿಂತನೆಯಲ್ಲಿ ವ್ಯಕ್ತವಾಗುವ ಅರ್ಥ ಸಾಧ್ಯತೆಗಳು - ಆರಾಧನಾ ಪರಂಪರೆ ಮತ್ತು ಆಚರಣೆ ವಿಧಿ ನಿಷೇಧಗಳು-ನಂಬಿಕೆಗಳು

ಕೃಷಿ ಸಂಬಂಧಿ ಆಚರಣೆಗಳು:

ಆರಾಧನಾ ಪರಂಪರೆಯು ಸಂಸ್ಕೃತಿ ಚಿಂತನೆಯ ಮುಖ್ಯ ನೆಲೆ ಯಾವುದು ಗಹನ, ನಿಗೂಢ, ವಿಸ್ಮಯ ಎನಿಸಿಕೊಂಡ ಸತ್ಯಗಳನ್ನು ಹಾಗೆಯೇ ನಿರೂಪಿಸುವ ಕ್ರಮವೊಂದಿದೆ. ಅಲ್ಲದೆ ಅದನ್ನು ಅರ್ಥೈಸಿ ಬದುಕಿನ ಒಂದು ಭಾಗವಾಗಿಯೂ ಸ್ವೀಕರಿಸುತ್ತಾರೆ. ಸಮುದಾಯವೊಂದು ಸಾಗಿ ಬಂದ ಸ್ಥಿತಿಯ ಮೈಲುಗಲ್ಲುಗಳ ಪ್ರತೀಕವಾಗಿಯೂ ಆರಾಧನೆ ಚಾಲ್ತಿಯಲ್ಲಿದೆ. ಜೀವನಕ್ರಮದ ರೀತಿಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುತ್ತ ಅವುಗಳನ್ನು ವಿಶಿಷ್ಟವಾಗಿ ವಿಶ್ಲೇಷಿಸುವ ಮನೋಧರ್ಮವೇ ಮುಖ್ಯವೆನಿಸಿಕೊಳ್ಳುತ್ತದೆ. ಚಾರಿತ್ರಿಕ ಸಾಂಸ್ಕೃತಿಕ ನಾಯಕರನ್ನು ಮತ್ತೆ ಮತ್ತೆ ನೆನಪಿಸುವ ಅವರ ತ್ಯಾಗ ಬಲಿದಾನಗಳ ಮಹತ್ವವನ್ನು ಸಮುದಾಯಕ್ಕೆ ನಿರೂಪಿಸಿಕೊಳ್ಳುವ ಅವಶ್ಯಕತೆಯಾಗಿಯೂ ಆರಾಧನಾ ಪರಂಪರೆ ಚಾಲ್ತಿಯಲ್ಲಿದೆ.

ಕರಾವಳಿ ತನ್ನ ಆರಾಧನಾ ಪರಂಪರೆಗಳಿಂದಲೂ ಪ್ರಾಮುಖ್ಯತೆ ವಹಿಸಿದೆ. ಭೂತಾರಾಧನೆ, ಸಿರಿ ಆರಾಧನೆ, ನಾಗಾರಾಧನೆ, ಜಾತ್ರೆಗಳು. ಮಾರಿ ಹಬ್ಬದಂತಹ ಆರಾಧನಾ ಪರಂಪರೆ ಇದ್ದರೂ ಎಲ್ಲವೂ ಪರಿಕಲ್ಪನಾತ್ಮಕ ಚಿಂತನೆಗಳಿಂದ ವಿಭಿನ್ನವಾಗಿದೆ. ಪ್ರತಿಯೊಂದು ಆರಾಧನಾ ಪರಂಪರೆಯೂ ಬಹಳಷ್ಟು ಆಳ ವಿಸ್ತಾರಗಳನ್ನು ಹೊಂದಿದ್ದು ಎಲ್ಲವನ್ನು ಇಲ್ಲಿ ಚರ್ಚಿಸುವುದು ಅಸಾಧ್ಯ. ಆರಾಧನೆಯ ಸ್ವರೂಪ. ವಿಧಿವಿಧಾನ, ವಿಸ್ತೃತಗೊಳ್ಳುತ್ತ ಹೋಗುತ್ತದೆ. ಅಷ್ಟೇ ಅಲ್ಲದೆ ಅಲ್ಲಿ ಬಳಸುವ ಹಾಡು, ವೇಷಭೂಷಣ, ಕುಣಿತ, ಪರಿಕರಗಳು, ಅಲಂಕಾರಗಳು ಒಂದೊಂದು ವಿಭಾಗವೂ ಸಂಶೋಧನಾ ಪ್ರಬಂಧವೊಂದರ ವಿಶಾಲತೆಯನ್ನು ಹೊಂದಿರುವಂತಹುದು. ಹಾಗಾಗಿ ಈ ಯಾವುದರ ಬಗೆಗೂ ಇಲ್ಲಿ ಪ್ರಸ್ತಾಪಿಸುವುದಕ್ಕಿಂತ ಆರಾಧನೆಯ ಅರ್ಥವನ್ನು ಸಮಗ್ರತೆಯ ನೆಲೆಯಲ್ಲಿ ಅರಗಿಸಿಕೊಳ್ಳುವುದು ಬಹಳ ಮುಖ್ಯವೆನಿಸುತ್ತದೆ.

ಭೂತಾರಾಧನೆಯು ಕೃಷಿ ಭೂಮಿಯ ಒಡೆತನದ ಸಾಮಾಜಿಕ ಪರಿಕಲ್ಪನೆಯ ಪರ್ಯಾಯವಾಗಿದೆ. ಕುಟುಂಬದ ಭೂತ, ಊರಿನ ಭೂತ, ಮಾಗಣೆಯ ಭೂತ, ಗುತ್ತಿನ ಭೂತ, ಬೂಡಿನ ಭೂತವೆಂದು ವಿಭಾಗಗಳ ಜತೆಗೆ ನೀಚ ದೈವದಿಂದ ರಾಜನ ದೈವದವರೆಗೆ ವಿಶಾಲವಾದ ಶ್ರೇಣೀಕರಣವಿದೆ. ಈ ಶ್ರೇಣೀಕರಣವೆ ಭೂತದ ಅಧಿಕಾರದ ಮಿತಿ ಮತ್ತು ಗಡಿಗಳನ್ನು ನಿರ್ದೇಶಿಸುತ್ತದೆ. ಕುಟುಂಬದ ಭೂತ ಕುಟುಂಬ ಸದಸ್ಯರನ್ನು ಕಾಲ ದೇಶಗಳ ಗಡಿಯನ್ನು ಮೀರಿ ರಕ್ಷಿಸುತ್ತ ಅಭಯ ಪ್ರಧಾನ ಮಾಡುತ್ತದೆ. ಊರಿನ ಭೂತ ಊರನ್ನು

ಮಾಗಣೆಯ ಭೂತ ಮಾಗಣೆ ಗುತ್ತು ಬೂಡುಗಳನ್ನು ಅನುಕ್ರಮವಾಗಿ ಅವರವರ ಗಡಿ ರೇಖೆಯ ವಿಸ್ತಾರಗಳನ್ನು ಸೃಷ್ಟಿಸಿಕೊಂಡಂತಿದೆ. ಹಾಗಿದ್ದೂ ನ್ಯಾಯ ತೀರ್ಮಾನವನ್ನು ಅಭಯದ ನುಡಿಯನ್ನು ನಂಬಿದ ಭಕ್ತರಿಗೆ ನಿರಂತರ ನೀಡುತ್ತಲೇ ಬಂದಿದೆ. ನಂಬಿದವರಿಗೆ ಇಂಬು ನೀಡುವುದು ಆರಾಧನೆಯ ಮೂಲ ತರ್ಕವೂ ಆಗಿದೆ.

ಭೂತವನ್ನು ನಂಬುವ ಭಕ್ತರು ಮತ್ತು ಭೂತಕ್ಕೆ ಇರುವ ಅಧಿಕಾರದ ಗಡಿಗಳು ಕೌಟುಂಬಿಕ, ಭೌಗೋಳಿಕ ಗಡಿಗಳೂ ಆಗಿವೆ. ವ್ಯಕ್ತಿಯಿಂದ ಆರಂಭಗೊಂಡು ಸಮಷ್ಟಿಯವರೆಗೆ ವಿಸ್ತೃತಗೊಳ್ಳುವ ಅಭಯ ನೀಡುವ ಮತ್ತು ಕಾಯುವ ಅಧಿಕಾರ ಮತ್ತು ವ್ಯಾಪ್ತಿ ಭೂತದ ಶ್ರೇಣೀಕರಣ ವ್ಯವಸ್ಥೆಗೂ ಕಾರಣವಾಗಿರುವುದು ಸತ್ಯ. ಈ ಅಧಿಕಾರ ಭೂಮಿಯ ಒಡೆತನಕ್ಕೆ ಸಂಬಂಧ ಪಟ್ಟದ್ದು ಎಂಬ ಸೂಕ್ಷ್ಮವನ್ನು ಗಮನಿಸಬೇಕು. ಗುತ್ತಿನ ಮನೆಗೆ ಇರುವ ಭೂಮಿಯ ಒಡೆತನದ ವಿಸ್ತಾರವನ್ನು ವಿಸ್ತೃತತೆಯು ನಿರೂಪಿಸುತ್ತದೆ. ಗುತ್ತಿನ ಯಜಮಾನ ಎಷ್ಟು ವಿಸ್ತಾರವಾಗಿ ಭೂಮಿಯ ಒಡೆತನವನ್ನು ಹೊಂದಿದ್ದಾನೆಯೋ ಅದರ ನಿರ್ವಹಣೆಯನ್ನು ಒಡೆಯನ ಪರವಾಗಿ ಭೂತವು ನಿರ್ವಹಿಸುತ್ತದೆ. ತನ್ನ ನಿಯಮಗಳಿಗೆ ಬದ್ಧರಾಗದೆ ಇರುವವರನ್ನು ದಂಡಿಸುವ ದಮನಿಸುವ ಅಧಿಕಾರವೂ ದೈವಕ್ಕಿದೆ. ಹಾಗಾಗಿ ಯಾರ ದೃಷ್ಟಿಗಾದರೂ ಬೀಳಬಹುದು. ಭೂತದ ದೃಷ್ಟಿಗೆ ಬೀಳಬಾರದು ಬಿದ್ದರೆ ಗಂಡಾಂತರ ಖಾತರಿ ಎಂಬ ನಂಬಿಕೆ ಜನರಲ್ಲಿದೆ. ಭೂಮಿಯನ್ನು ಅಧಿಕಾರದ ಪ್ರತಿನಿಧಿತ್ವ ಮತ್ತು ಸಂಪತ್ತಿನ ಪ್ರತಿಮೆಯಾಗಿಯೂ ಪರಿಭಾವಿಸಲಾಗುತ್ತದೆ.

ಬೆಳೆದ ಫಸಲನ್ನು ಕಾಯುವ, ಕಳ್ಳ ಕಾಕರಿಂದ ಬೆಳೆಯನ್ನು ರಕ್ಷಿಸುವ ಕರ್ತವ್ಯವನ್ನು ಭೂತಗಳು ಮಾಡುತ್ತವೆ ಎಂಬ ನಂಬಿಕೆ ಇದೆ. ಗದ್ದೆಗೆ ಪುಂಡು ದನಗಳು ಬಂದು ಬೆಳೆ ನಾಶ ಮಾಡುತ್ತಿದ್ದರೆ ಭೂತ ಕೂಗಿ ಹೇಳುತ್ತದೆ ಎಂಬ ನಂಬಿಕೆ ಇದೆ. ಅಲ್ಲದೆ ಎಚ್ಚರಿಕೆಯ ಮಾತುಗಳನ್ನು ಹೇಳುತ್ತದೆ ಎಂದು ಜನ ನಂಬುತ್ತಾರೆ. ಬೆಳೆಯನ್ನು ಕಾಯುವುದಕ್ಕಾಗಿ ಭೂತದ ಹೆಸರಲ್ಲಿ ಹರಕೆ ಹೇಳುವ ಸಂಪ್ರದಾಯವೂ ಚಾಲ್ತಿಯಲ್ಲಿದೆ. ಹಾಗಾಗಿ ಕಳ್ಳತನ, ಬೆಳೆನಾಶಗಳಿಂದ ಬೆಳೆಯ ರಕ್ಷಣೆಯೊಂದಿಗೆ, ಫಸಲನ್ನು ಕಾಯುವ ಕೆಲಸವೂ ನಡೆಯುತ್ತಿತ್ತು. ಭೂತಾರಾಧನೆಯಲ್ಲಿ ಕ್ರಿಯಾವಿಧಿಯಾಗಿ ಈ ನಂಬಿಕೆ ಬಹಳ ಮುಖ್ಯವಾದುದು.

ಆರಾಧನೆಯ ವಿಧಿ ವಿಧಾನಗಳಲ್ಲಿ ಬಳಸುವ ಪರಿಕರಗಳು ಕೃಷಿ ಮೂಲದವೇ ಆಗಿವೆ. ಭೂತಕ್ಕೆ ಬಡಿಸುವ ಪನಿಯಾರ, ಅಗೆಲು, ಆಹಾರದ ಸ್ವರೂಪವಾದರೆ ಆಚರಣೆಯ ವಿಧಿಯಲ್ಲಿ ಕಟ್ಟಿಕೊಳ್ಳುವ ವೇಷ ಭೂಷಣಗಳು ಕೃಷಿ ಮೂಲದ್ದೇ ಆಗಿದೆ. ಭೂತಗಳ ಅನನ್ಯತೆಯಾಗಿ ಗುರುತಿಸಿಕೊಂಡಿರುವ ತೆಂಗಿನ ತಿರಿಗಳು, ಪನಿಯಾರದ ಮಂಟಪ, ಅಣಿ, ತಲೆಪಟ್ಟಿ, ಗಗ್ಗರ ಕಟ್ಟಲು ಕಾಲಿಗೆ ಧರಿಸುವ ಅಡಿಕೆ ಹಾಳೆ ಎಲ್ಲವೂ ಕೃಷಿ ಮೂಲದ್ದೇ ಆಗಿದೆ. ಈ ಪರಿಕರಗಳ ಮೂಲಕ ಕೃಷಿಯ ಅನನ್ಯತೆಯನ್ನು ಹೇಗೆ ಕಾಯ್ದುಕೊಂಡರು ಎಂಬ ವಿಚಾರವನ್ನು ತಿಳಿಯಬಹುದು. ಭೂಮಿಯ ರಕ್ಷಣೆ ಮತ್ತು ಅಧಿಕಾರದ ಪರಿಕಲ್ಪನೆಗಳೊಂದಿಗೆ , ಮನುಷ್ಯ ಸಂಪತ್ತು ಮತ್ತು ಪ್ರಕೃತಿ ಸಂಪತ್ತಿನ ರಕ್ಷಣೆಯ ಹೊಣೆಯೂ ಭೂತಗಳದ್ದೇ. ಆರಾಧನೆಯ ಮೂಲ ಅಶಯವನ್ನು ಗಮನಿಸಿದರೆ ಭೂಮಿಯ ರಕ್ಷಣೆ ಮಾಡುವ ಜಾಗದ ಭೂತಗಳು ತಮ್ಮ ಅಧಿಕಾರದ ಗಡಿಯನ್ನು ದಾಟಿ ಮುಂದುವರಿಯುವುದಿಲ್ಲ. ಜನರ ಮೌಢ್ಯದ ಪರಮಾವಧಿಯೆಂದು ವಿಶ್ಲೇಷಿಸುವುದಕ್ಕಿಂತ ಅದರ ಅರ್ಥವನ್ನು

ತಿಳಿಯಬೇಕಿದೆ. ಕೃಷಿ ಜಗತ್ತನ್ನು ಉಳಿಸುವ ಭೂತಾರಾಧನೆಯನ್ನು ಸಂಕಷ್ಟದಲ್ಲಿ ಕಷ್ಟ ಪಟ್ಟು ಬೆಳೆದ ಬೆಳೆ ಪೂರಕವಾದ ಪಶುಗಳು ಅನ್ಯರ ಪಾಲಾಗದೆ ದುಡಿದವನಿಗೆ ಅದರ ಪ್ರತಿಫಲ ಸಿಗಬೇಕಾದ ಎಚ್ಚರವನ್ನೇ ಹೇಳುತ್ತದೆ. ಭೂಮಿಯಲ್ಲಿ ಬೆಳೆಯನ್ನು ಬೆಳೆದು ಫಸಲನ್ನು ವ್ಯರ್ಥ ಪೋಲಾಗದಂತೆ ಕಾಯುವ ಎಚ್ಚರದ ಅಗತ್ಯವೂ ಅಲ್ಲಿದೆ.

ನಾಗಾರಾಧನೆ :– ಸಂತಾನ ಪ್ರಾಪ್ತಿಗಾಗಿ ನಡೆಸುವ ಆರಾಧನಾ ಪರಂಪರೆ ಇದು. ನಾಗಾರಾಧನೆಯಲ್ಲಿ ಆಚರಣೆಯ ಅಂಗವಾಗಿ ಬಳಸುವ ಎಲ್ಲ ಫಲ ವಸ್ತುಗಳು ಕರಾವಳಿ ಮೂಲದ ಫಲವಂತಿಕೆಯ ಮೂಲವನ್ನು ಹೊಂದಿದೆ. ಹಿಂಗಾರ, ಅಡಿಕೆ, ಸೀಯಾಳ, ಬೆಳೆಯುವ ಎಲ್ಲ ಫಲವಸ್ತುಗಳು ಈ ಭೂಮಿಯಲ್ಲಿ ಪಡೆದ ಫಸಲೇ ಆಗಿದೆ. ಮನುಷ್ಯ ತನ್ನ ಸಂತತಿಗಾಗಿ ಮಾತ್ರವಲ್ಲ , ಭೂಮಿಯಲ್ಲಿ ಒಳ್ಳೆಯ ಮಳೆ ಬೆಳೆಗಾಗಿ ನಡೆಸುವ ಪ್ರಕೃತಿಯ ಆರಾಧನೆಯೇ ಇದು. ವೃಕ್ಷ, ಕಾಡು, ಮಣ್ಣು, ಜೀವಜಾಲದ ಸುಭಿಕ್ಷೆಗಾಗಿ ನಡೆಸುವ ಆರಾಧನಾ ಪರಂಪರೆಯ ಅಶಯ ಮತ್ತು ಅರ್ಥ ಜೀವಜಾಲದ ಉಳಿವೇ ಆಗಿದೆ.

ಕರಾವಳಿಯ ಕೃಷಿ ಮತ್ತು ಜನರ ಬದುಕು ಪರಸ್ಪರ ಸಂಬಂಧ ಪಟ್ಟ ಸಂಗತಿಗಳು. ಕೃಷಿಯನ್ನು ಬಿಟ್ಟು ಜನರ ಜೀವನ ನಿರ್ವಹಣೆಯ ಕಲ್ಪನೆ ಸಾಧ್ಯವಿಲ್ಲ. ಏನು ಬೆಳೆಯನ್ನು ಬೆಳೆಯುತ್ತಾರೋ ಹಾಗೆಯೇ ಬಾಳಿದ ಕೃಷಿಕರು ಅವರು. ವಾರ್ಷಿಕ ಆವರ್ತನದಲ್ಲಿ ಬೆಳೆಯುವ ಭತ್ತ ಧಾನ್ಯದ ಬೆಳೆಗಳೊಂದಿಗೆ ಜನರ ಬದುಕಿನ ವಾರ್ಷಿಕ ಆವರ್ತನವೂ ಬೆಸೆಯಲ್ಪಟ್ಟಿದೆ. ಕೃಷಿಕರ ಕೃಷಿ ಸಂಬಂಧಿ ಆಚರಣೆಗಳು ಅವರ ಬದುಕಿನ ಬೇರುಗಳಾಗಿ ಭಾಗವಾಗಿ ಜನರ ಲೋಕದೃಷ್ಟಿಯನ್ನು ನಿರೂಪಿಸುವಂತಿದೆ. ಇದು ಅವರ ಜೀವನ ಆವರ್ತನದ ಚಿಂತನೆಗಳನ್ನು ನಿರೂಪಿಸುತ್ತದೆ. ವರ್ಷದಲ್ಲಿ ಬರುವ ಹಬ್ಬಗಳು ಮತ್ತು ಆಚರಣೆಗಳು ಅವರ ಕೃಷಿ ಜಗತ್ತನ್ನು ಅನಾವರಣಗೊಳಿಸುವುದರೊಂದಿಗೆ ಬದುಕಿನ ಚಿಂತನೆಗಳನ್ನು ನಿರೂಪಿಸುತ್ತದೆ. ಅದೆಂದಿಗೂ ಬದುಕನ್ನು ದಾಟಿಹೋಗುವಂತಹುದಲ್ಲ.

ಮನುಷ್ಯ ಬದುಕಿನ ಸೃಜನಶೀಲ ಗುಣವನ್ನು ಅವರು ಅಳವಡಿಸಿಕೊಂಡು ಬಂದಿರುವ ಆಚರಣೆಗಳಲ್ಲಿ ಗುರುತಿಸಬಹುದು. ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಬದುಕು ಮತ್ತು ಕೃಷಿಯಲ್ಲಿ ಭೂಮಿಗೆ ಹಾಕಿದ ಬೀಜದಿಂದ ಆರಂಭಗೊಂಡು ಕೊಯಿಲಿನವರೆಗಿನ ಆಚರಣೆಗಳು ಪರಸ್ಪರ ಸಂಬಂಧ ಪಟ್ಟುದು. ಇನ್ನೊಂದು ನೆಲೆಯಲ್ಲಿ ವಾರ್ಷಿಕ ಆವರ್ತನದಲ್ಲಿ ಪಗ್ಗುವಿನಿಂದ ಸುಗ್ಗಿಯವರೆಗಿನ ಆಚರಣೆಗಳು ಮತ್ತು ಮನುಷ್ಯನ ಜೀವನ ಆವರ್ತನದ ಆಚರಣೆಗಳು ಪರಸ್ಪರ ಸಂಬಂಧ ಪಟ್ಟುದು. ಹಾಗೆಂದು ಈ ವಿಭಾಗ ಕ್ರಮಗಳು ಪರಸ್ಪರ ವಿರುದ್ಧವಾದುದಲ್ಲ. ಒಂದರೊಳಗೊಂದು ಬೆರೆತುಕೊಂಡಿದೆ. ಇದರೊಳಗಿನ ಒಟ್ಟು ಚಿಂತನೆಯ ತಾತ್ವಿಕತೆಯೆಂದರೆ ಭೂಮಿಯ ಸೃಜನಶೀಲ ಗುಣವನ್ನು ಜನಪದರು ತಮ್ಮ ಆಲೋಚನೆಯ ತರ್ಕಗಳ ಸೃಜನಶೀಲ ಗುಣದೊಂದಿಗೆ ಸಮೀಕರಿಸುತ್ತ ಬದುಕು ಕಟ್ಟಿದರು. ಬದುಕಿನ ಭಾಗವೇ ಆಗಿ ಬೆಳೆದ ಈ ಎಲ್ಲ ಚಿಂತನೆಗಳು ಇಂದಿಗೂ ಕರ್ನಾಟಕದ ಕರಾವಳಿಯಲ್ಲಿ ಬಾಳುತ್ತಿರುವ ಮಾತೃಮೂಲ ಕುಟುಂಬ ವಿಚಾರಗಳನ್ನು ನಿರೂಪಿಸುವಂತಿದೆ.

ಪುಂಡಿ ಬಿತ್ತ್ ಪಾಡುನು : ಪಗ್ಗು ತಿಂಗಳಲ್ಲಿ ಹದಿನೆಂಟು ದಿನ ಕಳೆದಾಗ ಪುಂಡಿ ಬಿತ್ತ್ ಹಾಕುವ ಆಚರಣೆಯಿದೆ. ಮಳೆಗಾಲದ ಆರಂಭಕ್ಕೆ ಪೂರ್ವದಲ್ಲಿ ಕೃಷಿಚಟುವಟಿಕೆಯನ್ನು

ಆರಂಭಿಸಲು ಸನ್ನದ್ಧರಾಗುವುದು. ಇದರ ಉದ್ದೇಶ ಮತ್ತು ಸೂಚನೆ ಗದ್ದೆ ಸಾಗುವಳಿಯ ಭತ್ತದ ಬೆಳೆಯನ್ನು ಬೆಳೆಯಲು ಬೀಜ ಸಂರಕ್ಷಣೆಯನ್ನು ಮಾಡಿದ ಭತ್ತದ ಮುಡಿಯಿಂದ ತಳಿಯನ್ನು ರಕ್ಷಿಸಿದ ಬೀಜವನ್ನು ಭೂಮಿಯಲ್ಲಿ ಹಾಕಿ ಬೆಳೆಯನ್ನು ಬೆಳೆಯಲು ಆರಂಭಿಸಲಾಗುತ್ತದೆ. ಎಣೆಲು ಬೆಳೆಯ ಆರಂಭದ ಕೃಷಿ ಚಟುವಟಿಕೆಯನ್ನು ಅವರು ನಡೆಸಲು ಸಾಧ್ಯವಾಗುತ್ತದೆ. ಗದ್ದೆಯನ್ನು ಹುಡಿ ಮಣ್ಣಿಗೆ ಎರಡು ಸಾಲು ಉತ್ತು ಬೀಜ ಬಿತ್ತನೆಯನ್ನು ಮಾಡುತ್ತಾರೆ. ಆ ದಿನ ಮನೆಯಿಂದ ಯಾವ ಧನ ಧಾನ್ಯಗಳನ್ನು ಹೊರಗಿನವರಿಗೆ ನೀಡುವಂತಿಲ್ಲ.

ಕಂಡ ಕೋರುನು : ಎಣೆಲು ಬೆಳೆಯ ಬಿತ್ತನೆ ಮತ್ತು ನಾಟಿಯ ಕೊನೆಯ ದಿನದ ಕೃಷಿ ಚಟುವಟಿಕೆಯನ್ನು ಕಂಡ ಕೋರುನು ಎನ್ನುತ್ತಾರೆ. ಗದ್ದೆ ಸಾಗುವಳಿಯಲ್ಲಿ ಕೃಷಿ ಚಟುವಟಿಕೆಯಲ್ಲಿ ಭಾಗವಹಿಸಿದ ಎಲ್ಲರನ್ನು ಒಟ್ಟು ಸೇರಿಸಿ ಒಂದು ಬೆಳೆಯ ಕೃಷಿಯ ಆವರ್ತನವನ್ನು ಮುಕ್ತಾಯ ಗೊಳಿಸಲಾಗುತ್ತದೆ. ಆ ದಿನ ಭಾಗವಹಿಸಿದ ಕೃಷಿ ಕಾರ್ಮಿಕ ವರ್ಗಕ್ಕೆ ಹೊಟ್ಟೆ ತುಂಬ ಊಟವನ್ನು ಹಾಕಿ ಕೃಷಿ ಕಾರ್ಯವನ್ನು ಸಮಾಪ್ತಗೊಳಿಸುತ್ತಾರೆ. ಸಾಮಾನ್ಯವಾಗಿ ನಲುವತ್ತು ಐವತ್ತು ಜನರು ಸೇರಿ ಒಂದು ದೊಡ್ಡ ಗದ್ದೆಯ ನಾಟಿ ಕಾರ್ಯವನ್ನು ಮಧ್ಯಾಹ್ನಕ್ಕೆ ಮುಗಿಸುತ್ತಾರೆ. ಬೆವರಿಳಿಸಿ ದುಡಿದವರಿಗೆಲ್ಲ ಕೋಳಿ ಮೀನಿನ ಗಮ್ಮತ್ತಿನ ಹೊಟ್ಟೆ ತುಂಬ ಊಟ ಮತ್ತು ಇಡೀ ದಿನದ "ಪಡಿ"(ಸಂಬಳ) ಕೊಡುತ್ತಾರೆ.

ಕಾಪು ಕಟ್ಟುನು : ಗದ್ದೆ ಸಾಗುವಳಿ ಮಾಡಿದ ಗದ್ದೆ ನಾಟಿಯ ಸಂದರ್ಭದಲ್ಲಿ ಬೆಳೆಯನ್ನು ರಕ್ಷಿಸಲು ವಿಸ್ತಾರವಾದ ಗದ್ದೆಗಳಿಗೆ ಕಾಪುವನ್ನು ಕಟ್ಟಲಾಗುತ್ತದೆ. ರೆಂಜಿರ್ ಎಲೆಯನ್ನು ಒಟ್ಟು ಸೇರಿಸಿ ಅದರ ಮಧ್ಯಕ್ಕೆ ಕಾಡು ಗುಡ್ಡಗಳಲ್ಲಿ ಸಿಗುವ ಕಾಟು ಹೂವನ್ನು ಒಟ್ಟಾಗಿ ಇಟ್ಟು ಉದ್ದವಾದ ಬಿದಿರು ಕೋಲಿನ ತುದಿಗೆ ಗುಚ್ಛದಂತೆ ಕಟ್ಟಲಾಗುತ್ತದೆ. ಹೀಗೆ ಕಟ್ಟುವ ಮೂಲಕ ಬೆಳೆಯನ್ನು ಪ್ರಾಣಿ ಪಕ್ಷಿಗಳೊಂದಿಗೆ ಮನುಷ್ಯರ ಕಣ್ಣಿನಿಂದಲೂ ರಕ್ಷಿಸಲಾಗುತ್ತದೆ. ಸಾಮಾನ್ಯವಾಗಿ ಗದ್ದೆನಾಟಿ ಮಾಡಿಯಾದ ಮೇಲೆ ಈ 'ಕಾಪು' ವನ್ನು ಕಟ್ಟಲಾಗುತ್ತದೆ.

ಆಟಿ ಅಮಮಾಸ್ಯೆ :– ಆಟಿ ಅಮವಾಸ್ಯೆಗೆ ಕಹಿ ಮದ್ದು ಕುಡಿಯುವ ಆಚರಣೆ ಇದೆ. ಗದ್ದೆಗಳಿಗೆ ಅಮವಾಸ್ಯೆಯ ಮುನ್ನ ದಿನ ಮುಸ್ಸಂಜೆಯಲ್ಲಿ ಕಾಸರಕನ ಕಣೆಯ ಕನೆಗಳನ್ನು ಮಾಡಿ ಪ್ರತಿಯೊಂದು ವಿಶಾಲವಾದ ಗದ್ದೆಯ ಮಧ್ಯ ಭಾಗಕ್ಕೂ ಇದನ್ನು ಅಮವಾಸ್ಯೆಯ ಹಿಂದಿನ ದಿನ ಮುಸ್ಸಂಜೆಗೆ ಗದ್ದೆಗೆ ಊರುತ್ತಾರೆ. ಪೈರು ಆಗ ತಾನೇ ಕಪ್ಪು ಹುಟ್ಟುತ್ತ ಬಂದಿರುತ್ತದೆ. ಅದಕ್ಕೆ ಗದ್ದೆಯ ಪೈರು ನೋಡುಗರ ಕಣ್ಣ ಕಣೆಯಿಂದ ರಕ್ಷಿಸಿಕೊಳ್ಳುವುದರೊಂದಿಗೆ ಕಾಸರಕ ಸಸ್ಯದಲ್ಲಿರುವ ನಂಜು ಗದ್ದೆಯನ್ನು ಕಾಯುತ್ತದೆ ಎಂಬ ಆಶಯವೂ ಇಲ್ಲಿದೆ. ಅಮವಾಸ್ಯೆಯಂದು ಅನ್ನದೊಂದಿಗೆ ಮೀನಿನ ಪದಾರ್ಥ, ಕೆಸುವಿನ ತೇಟ್ಲ ಮತ್ತು ನುಗ್ಗೆ ಅಥವಾ ಇನ್ನಾವುದೇ ಒಂದು ಸೊಪ್ಪು ಪಲ್ಯ ಪದಾರ್ಥವಾಗಿ ಇರಲೇಬೇಕು. ಪೂರ್ವಜರನ್ನು ಸ್ಮರಿಸಿ ಅವರಿಗೆ ಅಗೆಲ್ ಬಡಿಸುವ ಸಂಪ್ರದಾಯವೂ ಚಾಲ್ತಿಯಲ್ಲಿದೆ.

ಸೋಣ ಸಂಕ್ರಾಂದಿ:– ಆಟಿ ತಿಂಗಳು ಕಳೆದು ಸೋಣ ತಿಂಗಳು ಬರುವ ಹೊಸತರ ಸ್ವಾಗತವೇ ಸೋಣ ಸಂಕ್ರಾಂದಿ. ಸಂಕ್ರಮಣದ ಈ ದಿನದ ನಂತರ ಆರಾಧನಾ ಪರಂಪರೆಯ

ಎಲ್ಲ ಶುಭ ಕಾರ್ಯಗಳು ಆರಂಭಗೊಳ್ಳುತ್ತದೆ. ಇಡೀ ವರ್ಷದಲ್ಲಿ ಪ್ರಮುಖ ತಿಂಗಳಾದ 'ಆಟಿ' ಯು ಎಲ್ಲ ಶುಭ ಕಾರ್ಯಗಳಿಗೆ ನಿಷೇಧವಾದರೆ ಸೋಣ ತಿಂಗಳಲ್ಲಿ ದೈವ ದೇವರ ಆರಾಧನೆಗೆ ಹಾಕಿದ ಬಾಗಿಲುಗಳು ತೆರೆಯಲ್ಪಟ್ಟು ಶುಭ ಕಾರ್ಯ ಆರಂಭಗೊಳ್ಳುತ್ತದೆ. ತುಳುನಾಡಿನ ಒಡೆಯ ಬಲಿ ಚಕ್ರವರ್ತಿ ವರ್ಷದಲ್ಲಿ ಮೂರು ಬಾರಿ ಬೇರೆ ಬೇರೆ ಸ್ವರೂಪದಲ್ಲಿ ಆಗಮಿಸಿ ತನ್ನವರನ್ನು ನೋಡಿ ತೆರಳುತ್ತಾನೆ ಎಂಬ ನಂಬಿಕೆಯಿದೆ. ಆಟಿ ಅಮವಾಸ್ಯೆ, ಸೋಣ ಸಂಕ್ರಂದಿ ಕೊಡಿ ಪರ್ಬದಂದು ಬಲಿ ತುಳುವರನ್ನು ಕಂಡು ಸಂತೃಪ್ತಿಯಿಂದ ತೆರಳುವನೆಂಬ ಆಶಯದಲ್ಲಿ ಶ್ರಮ ಸಂಸ್ಕೃತಿ ಮತ್ತು ಭೂಮಿಯ ಅನುಭೋಗದ ಪರಿಕಲ್ಪನೆ ವಿಸ್ತೃತಗೊಂಡಿದೆ. ಬೆಳೆಯನ್ನು ಬೆಳೆದು ಅನುಭವಿಸಿ ಬಾಳಿದ ಕೃಷಿಕರ ವಿಶಾಲ ನೆಲೆಯ ಚಿಂತನೆ ಇಲ್ಲಿದೆ.

ಮನೆ ತುಂಬಿಸುವುದು : ಇಲ್ಲ್ ದಿಂಜಾವುನು (ಪುದ್ದರ್) ಕರಾವಳಿಯಲ್ಲಿ ಬರುವ ಮೊದಲ ಬೆಳೆ ಎಣೆಲಿನ ಸಾಗುವಳಿಯದು. ಹೀಗೆ ಬಂದ ಬೆಳೆಯನ್ನು ಕೊಯಿಲು ಮಾಡುವ ಪೂರ್ವದಲ್ಲಿ ಅದನ್ನು ಆದರಿಸುವ ಹಾಗೂ ಸ್ವಾಗತಿಸುವ ಕಾಯಕವೇ "ಇಲ್ಲ್ ದಿಂಜಾವುನು" ಇಲ್ಲವೇ "ಪುದ್ದರ್". ಹೊಸ ಬೆಳೆಯೊಂದಿಗೆ ಸಂಪತ್ತಿನ ಭಾಗವಾಗಿದ್ದ ಭತ್ತವನ್ನು ಸ್ವಾಗತಿಸುವ ಪರಿ ಪಾಠದ ಅಶಯ ಇಲ್ಲಿದೆ. ಹೊಟ್ಟೆಯನ್ನು ತಂಪಾಗಿಸುವ ಆಹಾರದ ಬೆಳೆಯ ಸಮೃದ್ಧಿಯೇ ಮನುಷ್ಯ ಜೀವಕ್ಕೆ ಸಂತೃಪ್ತಿಯನ್ನು ನೀಡಬಲ್ಲುದು. ಈ ಆಚರಣೆಯು ಪೂರ್ತಿಯಾಗಿ ಆಹಾರ ಸಂಸ್ಕೃತಿಯ ವೈಶಿಷ್ಟ್ಯವನ್ನು ಹೇಳಲು ಸಾಧ್ಯವಾಗಿದೆ.

ವಾರ್ಷಿಕ ಆವರ್ತನದಲ್ಲಿ ಗದ್ದೆಯಲ್ಲಿ ಬಂದ ಪಸಲನ್ನು ಒಂದು ಶುಭದಿನದಂದು ಮನೆ ತುಂಬಿಸುತ್ತಾರೆ. ಚೌತಿ ಪರ್ಬದ ಮೊದಲು ಯಾ ನಂತರ ಆಟಿ ಕಳೆದು ಶ್ರಾವಣ ಮಾಸದಲ್ಲಿ ಈ ಆಚರಣೆ ನಡೆಯುತ್ತದೆ. ನೋಂಪುವಿನಂದೂ ಮನೆ ತುಂಬಿಸುವವರಿದ್ದಾರೆ. ಫಸಲು ತುಂಬಿದ ಗದ್ದೆಗಳಿಂದ ಮನೆಯ ಯಜಮಾನ ತೆನೆಗಳನ್ನು ಬಂದ ಭತ್ತದ ಗದ್ದೆಗಳಿಂದ ಸಂಗ್ರಹಿಸಿ ತುದಿ ಬಾಳೆಯ ಎಲೆಯಲ್ಲಿ ಮನೆಯಿಂದ ಸ್ವಲ್ಪ ದೂರದ ದಾರಿಯಲ್ಲಿ ಮರೆಯಾಗಿ ಪೊದರುಗಳ ಮೇಲೆ ಇಡುತ್ತಾರೆ. ಮಾವು,ಹಲಸಿನ, ಸೊಪ್ಪು, ಬಿದಿರು ಸೊಪ್ಪು, ದಡ್ಡಲ್ ಅಥವಾ ದಡ್ಡಲೆಯ ಪಾಂದವು ತೆನೆ ಮತ್ತು ಅದರೊಂದಿಗೆ ಹೊಸದಾಗಿಬೆಳೆದ ಮನೆಯ ಫಲವಸ್ತುಗಳಾದ ಬೆಂಡೆ, ಮುಳ್ಳು ಸೌತೆ, ಹೀರೆ, ಹರಿವೆ, ಕೆಂಪು ಕೆಸು ಇವನ್ನೆಲ್ಲ ಒಂದೊಂದೇ ಸಂಗ್ರಹವಾಗಿ ಇಡುತ್ತಾರೆ. ಆ ಬಾಳೆ ಎಲೆಯನ್ನು ಮನೆಗೆ ಮಡಿಯುಟ್ಟು ತರುವಾಗ "ಪೊಲಿ ಪೊಲಿ" ಎಂದು ಹೇಳಿ ಸ್ವಾಗತಿಸುತ್ತಾರೆ. ಗುಡ್ಡದಲ್ಲಿ ಬೆಳೆವ ತುಂಬೆಯ ಹೂ ಮತ್ತು ಹೀರೆಕಾಯಿ ಹೂವನ್ನು ಒಂದಿಷ್ಟು ಅಕ್ಕಿಯೊಂದಿಗೆ ಬೆರೆಸಿ ಪಾವಿನಲ್ಲಿ ಸಂಗ್ರಹಿಸಿ ಇಡುತ್ತಾರೆ. ಹೂ ಮತ್ತು ಅಕ್ಕಿಯಿರುವ ಪಾವನ್ನು ಮನೆಯ ಹೆಣ್ಣು ಮಕ್ಕಳು ಹಿಡಿದಿದ್ದು ಪೊಲಿ ಪೊಲಿ ಎನ್ನುತ್ತ ಅಂಗಳಕ್ಕೆ ಕಾಲಿರಿಸಿದಾಗ ಸ್ವಾಗತಿಸುತ್ತಾರೆ. ಯಜಮಾನ ಹಿಂದಿನ ದಿನ ಜೋಡಿಸಿ ಇಟ್ಟ ಬಾಳೆ ಎಲೆ ಮತ್ತು ತೆನೆಯನ್ನು ಅತಿ ಎಚ್ಚರಿಕೆಯಿಂದ ಕೈಯಲ್ಲಿ ಹಿಡಿದು ಬರುತ್ತಾನೆ. ಮಡಿಯುಟ್ಟು ಬಂದ ಮನೆಯ ಯಜಮಾನನ ಕಾಲುಗಳೆರಡಕ್ಕೂ ನೀರನ್ನು ಹಾಕಿ ಶುಭ್ರಗೊಳಿಸಿ ಎದುರುಗೊಳ್ಳುತ್ತಾರೆ. ಮನೆಯಂಗಳದಲ್ಲಿದ್ದ ತುಳಸಿ ಕಟ್ಟೆಗೆ ಮೂರು ಪ್ರದಕ್ಷಿಣೆ ಬಂದು ಮನೆಯೊಳಗೆ ಬರುವಾಗ ಮತ್ತೊಮ್ಮೆ ಕಾಲಿಗೆ ನೀರೆರೆಯುತ್ತಾರೆ. ಪೊಲಿ ಪೊಲಿ ಎನ್ನುವವರು ಹಿಂದೆ ಹಿಂದೆ ತೆರಳಿದರೆ ಪೊಲಿಯನ್ನು ಹಿಡಿದವನು ಮುಂದೆ ಮುಂದೆ ಬಂದು ಮನೆ ತುಂಬಿಸುತ್ತಾರೆ. ಮನೆಯ ನಡುಮನೆಯಲ್ಲಿರಿಸಿದ

ಮರದ ಮಣೆ ಅಥವಾ ಸ್ಟೂಲ್‌ನ ಮೇಲೆ ತೆನೆ ತುಂಬಿದ ಬಾಳೆ ಎಲೆಯನ್ನು ಇಟ್ಟು ಅದಕ್ಕೆ ಎಲ್ಲರೂ ನಮಸ್ಕರಿಸುತ್ತಾರೆ. ಹಚ್ಚಿದ ದೀಪ, ಊದುಬತ್ತಿ, ತೆನೆಯ ರಾಶಿಯಿಂದ ಮನೆ ತುಂಬಿಸಿತ್ತಾರೆ. ಮನೆಯಲ್ಲಿರುವ ಧಾನ್ಯವನ್ನು ಅಳೆಯುವ ಸಾಧನಗಳನ್ನು ಶುಭ್ರಗೊಳಿಸಿ ಶೇಡಿ ಬರೆಯುತ್ತಾರೆ. ಧಾನ್ಯ ಒಕ್ಕಣೆಗೆ ಬಳಸುವ ಎಲ್ಲ ಸಲಕರಣೆಗಳಾದ ಗೆರಸೆ, ಕುರ್ವೆಗಳಿಗೆ ಸೆಗಣಿ ಸಾರಿಸಲಾಗುತ್ತದೆ. ಅಡಿಗೆಯ ಪಾತ್ರೆಗಳಿಗೂ ಶೇಡಿ ಬರೆಯುತ್ತಾರೆ. ಮನೆ ತುಂಬಿಸಿದ ತೆನೆಯಿಂದ ಬೆಸ ಸಂಖ್ಯೆಯಲ್ಲಿ ಅಕ್ಕಿಯನ್ನು ತಯಾರಿಸಿ "ಪುದ್ದರ್" ಅನ್ನದ ಇಲ್ಲವೆ ಪಾಯಸದ ಪಾತ್ರೆಗೆ ಮುತ್ತೈದೆಯರು ನಮಸ್ಕರಿಸಿ ಜತೆಯಾಗಿ ಹಾಕುತ್ತಾರೆ. ಬೆಸ ಸಂಖ್ಯೆಯಲ್ಲಿಯೇ ಪದಾರ್ಥಗಳನ್ನು ಮಾಡುತ್ತಾರೆ. ಏಳು ಒಂಭತ್ತು, ಹನ್ನೊಂದು ಬಗೆಯ ಪದಾರ್ಥಗಳಿಂದ ತುದಿ ಬಾಳೆಯ ಎಲೆಯಲ್ಲಿ ಮನೆ ಮಂದಿ ಎಲ್ಲರೂ ಒಟ್ಟಾಗಿ ಕುಳಿತು ಉಣ್ಣುತ್ತಾರೆ. ಹೀಗೆ ಉಣ್ಣುವಾಗಲೂ ಮನೆಗೆ ತೆನೆ ತುಂಬಿದ ಯಜಮಾನನಿಗೆ ಮೊದಲು ಅನ್ನವನ್ನು ಬಡಿಸುತ್ತಾರೆ. ಆತ ಅನ್ನದ ಸೌಟಿನ ತುದಿಯಿಂದ ಅನ್ನವನ್ನು ಎಲೆಗೆ ಎಳೆಯಬೇಕು. ಮೂರು ಬಾರಿ ಎಳೆದ ನಂತರ ಕೊದ್ದೆಲು ಹಾಕಿದ ಅನ್ನದ ಎಲೆಗೆ ಎಲ್ಲರೂ ನಮಸ್ಕರಿಸಿದ ಮೇಲೆ ಎಲ್ಲರೂ ಊಟ ಆರಂಭಿಸುತ್ತಾರೆ. ಊಟವಾದ ಮೇಲೆ ಎಲ್ಲರೂ ಜತೆಯಾಗಿ ಕುಳಿತು ಚಿಗುರೆಲೆಯ ವೀಳ್ಯದ ಎಲೆ ಅಡಿಕೆ–ಸುಣ್ಣವನ್ನು ಹಚ್ಚಿ ತಾಂಬೂಲ ಮೆಲ್ಲುತ್ತಾರೆ. ಆ ದಿನ ಮನೆಯ ಒಳಗಿನಿಂದ ಅಕ್ಕಿ ಧಾನ್ಯ, ದುಡ್ಡು ಯಾವುದನ್ನು ಹೊರಗಿನವರಿಗೆ ನೀಡುವಂತಿಲ್ಲ. ನೀಡಿದರೆ ಮನೆಯ ಸಂಪತ್ತು ಹೊರಹೊಗುತ್ತದೆ ಎಂಬ ನಂಬಿಕೆಯಿದೆ.

ಚೌತಿ ಪರ್ಬ :– ಪ್ರತಿ ತಿಂಗಳಲ್ಲಿ ಚೌತಿ ಪರ್ಬದ ಆಚರಣೆ ಇದ್ದರೂ ಕೃಷಿಕರು ಚೌತಿ ಪರ್ಬವನ್ನು ವರ್ಷದಲ್ಲಿ ಒಮ್ಮೆ ಮಾಡುತ್ತಾರೆ. ಗಣೇಶ ಚತುರ್ಥಿಯ ದಿನ ಕೃಷಿ ಚಟುವಟಿಕೆಯ ಕಟಾವಿಗಿಂತ ಮೊದಲು ಈ ಆಚರಣೆ ನಡೆಯುತ್ತದೆ. ತುಳುವರು ತುಳಸಿ ಕಟ್ಟೆಯ ಮುಂದೆ, ನಾಲ್ಕು ಕೋಲು ಕಬ್ಬು ನೆಟ್ಟು ಚೌಕಾಕಾರವಾಗಿ ಅಲಂಕರಿಸುತ್ತಾರೆ. ಅದರ ಎದುರಿಗೆ ದೇವರು ಇಡುವ ಕ್ರಮವಿದೆ. ಅದರಲ್ಲಿ ಅವಲಕ್ಕಿ ಬೆಲ್ಲ ಕಾಯಿ ಅರಳುಗಳ ಪಂಚಕಜ್ಜಾಯವನ್ನು ಬಡಿಸುತ್ತಾರೆ. ದ್ವಿದಳ ಧಾನ್ಯಗಳಾದ ಹೆಸರು, ಹುರುಳಿಗಳನ್ನು ಮಡಕೆ ಕವಚಿ ಹಾಕಿ ಒಂದು ವಾರ ಮೊದಲು ಬಿತ್ತಿ ಬೆಳಿಸಿದ ಸಸಿಯಾಗಿ ಧಾನ್ಯದ ಹೂ ಸಣ್ಣ ಕಟ್ಟುಗಳಾಗಿ ಜೋಡಿಸುತ್ತಾರೆ. ತುಳಸಿ ಕಟ್ಟೆಯ ಮುಂದೆ ಒಂದು ಸ್ಟೂಲ್ ಇಟ್ಟು ತುದಿ ಬಾಳೆ ಎಲೆ ಹಾಕುತ್ತಾರೆ ಅದರ ಮೇಲೆ ಗಣಪತಿಗೆ ಬಡಿಸಲಾಗುತ್ತದೆ. ಮನೆಯ ಯಜಮಾನ ಉಪವಾಸ ವೃತದಲ್ಲಿದ್ದು ಶುದ್ಧವಾಗಿ ಈ ದೇವರ ಕಾರ್ಯವನ್ನು ಮಾಡಬೇಕು. ಕಬ್ಬಿನ ಮಂಟಪಕ್ಕೆ ಹಲಸು, ಮಾವಿನ ಎಲೆಗಳ ತೋರಣ, ಮಿತಾಯಿ, ಶಂಖ ಪುಷ್ಪ, ರಥ ಹೂಗಳಿಂದ ಅಲಂಕರಿಸಲಾಗುತ್ತದೆ. ಎರಡು ಕಬ್ಬಿನ ಕೋಲನ್ನು 'ಜೋತಿರ್ ಕೋಲ್' ಎಂದು ಮುಂದೆ ಜೋಡಿಸುತ್ತಾರೆ. ಅಡ್ಡ , ನೀಟವಾಗಿ ಆರು ಸಾಲು ಇರಿಸಿದ ಕಬ್ಬುಗಳ ಮಧ್ಯೆ ಪಂಚಕಜ್ಜಾಯ ದೋಸೆ ಹಣ್ಣುಗಳನ್ನು ಬಡಿಸುತ್ತಾರೆ. ಪಕ್ಕದಲ್ಲಿ ಬಾಳೆ ಎಲೆಯಲ್ಲಿ ಗಣಪತಿ ಇಡುತ್ತಾರೆ. ಅಕ್ಕಿ, ಕಾಯಿ, ವೀಳ್ಯ ಅಡಿಕೆ , ಬಟ್ಟೆ, ಕಾಸಿಟ್ಟು ಆ ದೇವರನ್ನು ತುಳಸಿಯ ಮುಂದೆ ಪೂಜೆ ಮಾಡಿ ಮನೆಯೊಳಗೆ ನಡುಮನೆಯಲ್ಲಿ ಇಟ್ಟು ನಮಸ್ಕರಿಸುತ್ತಾರೆ. ಚೌತಿ ಹಬ್ಬದ ಊಟವಾದ ಮೇಲೆ ಅದನ್ನು ಎಲ್ಲರೂ ಹಂಚಿ ತಿನ್ನುತ್ತಾರೆ. ತುಳಸಿ ಕಟ್ಟೆಯ ಮಂಟಪವನ್ನು ಒಂದು

ವಾರವಾದ ಮೇಲೆ ತೆಗೆಯುತ್ತಾರೆ. ಬೆಳೆದ ಬೆಳೆಯನ್ನು ಸ್ವಾಗತಿಸುವ ಆರಂಭದ ಆಚರಣೆಯಿದು.

ಪೊಲಿಲೆಪ್ಪುನು : ಭತ್ತದ ಕೊಯಿಲು ಆದ ಮೇಲೆ ಭತ್ತದ ಸೂಡಿಯನ್ನು ಪಡಿ ಮಂಚಕ್ಕೆ ಬಡಿಯುತ್ತ ಭತ್ತ ಮತ್ತು ಬೈಹುಲ್ಲನ್ನು ಬೇರ್ಪಡಿಸುತ್ತಾರೆ. ಹೀಗೆ ಪೈರನ್ನು ಪಡಿಮಂಚಕ್ಕೆ ಬಡಿಯುವಾಗ ಒಂದೇ ಗದ್ದೆಯ ಭತ್ತವು ಪಡಿಮಂಚದ ನಾಲ್ಕು ಕಾಲುಗಳನ್ನು ಮುಳುಗಿಸುವಷ್ಟು ಭತ್ತ ರಾಶಿಯಾಗಿ ಅದು ಪಡಿಮಂಚದ ತುದಿಯನ್ನು ಮುಟ್ಟಿದಾಗ 'ಪೊಲಿ ಲೆಪ್ಪುನು' ಅನ್ನುವ ಆಚರಣೆಯನ್ನು ಆಚರಿಸಲಾಗುತ್ತದೆ. 'ಪೊಲಿ ಪೊಲಿ' ಎಂದು ಸಂಪತ್ತನ್ನು ಕೂಗಿ ಕರೆಯುತ್ತಾರೆ. ಆ ಜಾಲ ಪೊಲಿ ಈ ಜಾಲ ಪೊಲಿ ಮಾತಾ ಎಂಕಲ್ನ ಜಾಲ್‌ಗೇ ಬರಡ್ ಎಂದು ಹಾರೈಸುತ್ತಾರೆ. ಆ ಭತ್ತದ ರಾಶಿಯ ಪಡಿ ಮಂಚಕ್ಕೆ ಒಂದು ತೆಂಗಿನಕಾಯಿಯನ್ನು ಒಡಿಯಲಾಗುತ್ತದೆ. ಆ ಕಾಯಿಯ ನೀರನ್ನು ಭತ್ತಕ್ಕೆ ಹೊಯ್ದು, ಒಡೆದ ಕಾಯಿಯನ್ನು ಪೈರು ಬಡಿಯುತ್ತಿದ್ದವರೆಲ್ಲ ಹಂಚಿ ತಿನ್ನುತ್ತಾರೆ. ಹೀಗೆ ನಾಲ್ಕು ಕಾಲು ಮುಚ್ಚಿಹೋಗುವಷ್ಟು ಒಂದೇ ಗದ್ದೆಯಲ್ಲಿ ಭತ್ತವು ಬೆಳೆದರೆ ಮನೆಯಲ್ಲಿ ಬಹಳಷ್ಟು ಸಂಭ್ರಮವಿರುತ್ತದೆ. ಆ ಭತ್ತದ ರಾಶಿಯಲ್ಲಿ ಸುಮಾರು ಇಪ್ಪತ್ತೈದು ಮುಡಿಯಷ್ಟು ಭತ್ತ ಇರುತ್ತದೆ.

ತುಪ್ಪೆ ಪಾಡುನು : ತುಪ್ಪೆ ಕರಾವಳಿಯ ಜನರ ಕೃಷಿ ಬದುಕಿನ ಕಲಾವಂತಿಕೆಗೆ 'ರೂಪಕ'ವಾಗಿದೆ. ಎಣೆಲು ಬೆಳೆಯಲ್ಲಿ ತಾವು ಬೆಳೆದ ಭತ್ತವನ್ನು ಸಂಗ್ರಹವಾಗಿ ಇಡಲು ಇಲಿ, ಹೆಗ್ಗಣ, ಹಕ್ಕಿ, ಪಕ್ಕಿಗಳಿಂದ ರಕ್ಷಿಸಲು ಭತ್ತವು ಬೆಳೆಯುವ ಬೈಹುಲ್ಲನ್ನು ಬೇರೆ ಬೇರೆ ಸ್ವರೂಪಗಳಲ್ಲಿ ಸಂಯೋಜಿಸಿ ತುಪ್ಪೆ ಹಾಕಲಾಗುತ್ತದೆ. ಕಲ್ಲೆ, ಮೊರಜ, ಬೈತಬಲ್, ಪೆರ್ಮರಿ,ಅರೆಬೈಗಳನ್ನು ಬಳಸಿ ಕಲಾತ್ಮಕವಾಗಿ ರಚಿಸಲಾಗುತ್ತದೆ. ತುಪ್ಪೆ ಹಾಕುವ ಒಂದೆರಡು ದಿನಗಳ ಮೊದಲು ರಾಶಿ ಹಾಕಿದ ಭತ್ತವನ್ನು ಪಡಿ ಮಂಚಕ್ಕೆ ಹಾಕಿ ಹಾರಿಸಿ, ಒಣಗಿಸಿ ಒಕ್ಕಣೆ ಮಾಡಲಾಗುತ್ತದೆ. ಹೀಗೆ ಸಂಗ್ರಹಿಸಿದ ಭತ್ತವನ್ನು ಬೇರೆ ಪ್ರದೇಶಗಳಲ್ಲಿ ಯಂತೆ ಹಗೇವುಗಳಲ್ಲಿ ತುಂಬದೆ ಮನೆಯಂಗಳದಲ್ಲಿ ತುಪ್ಪೆ ಹಾಕುತ್ತಾರೆ. ಅದಕ್ಕೆ ನಿಗದಿತ ಸ್ಥಳವಿದ್ದು ಎಣೆಲು ಕೊಯಿಲು, ಸುಗ್ಗಿಯ ನಾಟಿ ಆದ ಮೇಲೆ ತುಪ್ಪೆ ಹಾಕಲಾಗುತ್ತದೆ. ಭತ್ತವನ್ನು ಒಕ್ಕಣೆ ಮಾಡಿಯಾದ ಮೇಲೆ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡು, ಮನೆಮಂದಿ ಮಾತ್ರವಲ್ಲ, ನೆರೆಹೊರೆಯ ಬಂಧುಗಳು ಕೃಷಿಕರು ಎಂಟು, ಹತ್ತು ಜನರು ಹೆಂಗಸರು-ಗಂಡಸರು ಒಟ್ಟು ಸೇರಿ ಈ ಕೆಲಸವನ್ನು ಮಾಡುತ್ತಾರೆ. ಮುಂಜಾನೆಯೇ ಕೆಲಸವನ್ನು ಆರಂಭಿಸಿ ಮಧ್ಯಾಹ್ನಕ್ಕೆ ತುಪ್ಪೆ ಹಾಕುವ ಕೆಲಸ ಮುಗಿಯಬೇಕು. ಆ ದಿನ ವಿಶೇಷವಾದ ಮೀನು-ಕೋಳಿಯ ಊಟದ ಜತೆಗೆ ಸಿಹಿಯಾದ ಪಾಯಸದ ಊಟವೂ ಇರುತ್ತದೆ.

ಪೊಸ ಅರಿ : ಕನ್ಯಾ ತಿಂಗಳಲ್ಲಿ ಎಣೆಲು ಬೆಳೆಯ ಮೊದಲ ಪೈರಿನ ಕಟಾವು ಆದ ಮೇಲೆ ಹೊಸ ಅಕ್ಕಿ ಊಟ ಎಂಬ ಆಚರಣೆ ಇದೆ. ಭತ್ತದ ಪೈರಿನ ಕೊಯಿಲು ಮಾಡಿ, ಭತ್ತವನ್ನು ಒಕ್ಕಣೆ ಮಾಡಿದ 'ದನಿ' ಭತ್ತವನ್ನು ಭತ್ತ ಬೇಯಿಸುವಂತೆ ಬೇಯಿಸುತ್ತಾರೆ. ದೊಡ್ಡ ಗುರ್ಕೆಯಲ್ಲಿ ಅಲ್ಲ. ಸಣ್ಣ ಕರದಲ್ಲಿ ಬೇಯಿಸುತ್ತಾರೆ. ಕುಚ್ಚಲಕ್ಕಿ ಬೇಯಿಸಲು ಅನುಸರಿಸುವ ಎಲ್ಲ ಕ್ರಮಗಳನ್ನು ಅನ್ವಯಿಸುತ್ತಾರೆ. ಹೊಸ ಭತ್ತವನ್ನು ಬೇಯಿಸುವ ಪಾತ್ರೆಯ ಬಾಯಿಗೆ ಹೂ ಬಿಟ್ಟ ಮುಳ್ಳು

ಸೌತೆ ಬಳ್ಳಿಯನ್ನು ಕಟ್ಟಲಾಗುತ್ತದೆ. ನೆನೆಸಿದ ಭತ್ತವನ್ನು ಬೇಯಿಸಿ ನೀರನ್ನು ಸೋಸಿ, ಹರವಿ, ಒಣಗಿಸಿ ಭತ್ತ ಬರಬರ ಎನ್ನುವಾಗ ಗುಡಿಸಿ ಮನೆಯಲ್ಲಿಯೇ ಒನಕೆಯಿಂದ ಅದನ್ನು ಕಟ್ಟುತ್ತಾರೆ. ಮೊದಲು ಬೇಯಿಸುವ ಭತ್ತವನ್ನು ಕಟ್ಟುವುದಕ್ಕೆ 'ನುರ್ಪುನು' ಎನ್ನುತ್ತಾರೆ. ಭತ್ತ ಮತ್ತು ಅಕ್ಕಿಯನ್ನು ಗೆರಸೆಯಿಂದ ಬೇರೆ ಬೇರೆಗೊಳಿಸುತ್ತಾರೆ. ಭತ್ತದ ದೊಡ್ಡ ಹೊಟ್ಟನ್ನು 'ಉಮಿ' ಎಂದೂ ಬಹಳಷ್ಟು ಚಿಕ್ಕದಾದ ಸಿಪ್ಪೆಯನ್ನು 'ತೌಡು' ಎಂದು ಕರೆಯುತ್ತಾರೆ. ಮೊದಲ ಬಾರಿಗೆ ಬೇಯಿಸಿದ ಭತ್ತವನ್ನು ಕುಟ್ಟುವುದಕ್ಕೆ ನುರ್ಪುನು ಎಂದಾದರೆ ಎರಡನೇ ಬಾರಿಗೆ ಭತ್ತವನ್ನು ಕಟ್ಟುವುದಕ್ಕೆ "ಅಬೆಪುನು" ಎಂದು ಕರೆಯುತ್ತಾರೆ. ಹೀಗೆ ಬೇರೆ ಬೇರೆ ಉಪಕಸುಬುಗಳಿಂದ ಭತ್ತವನ್ನು ಕುಟ್ಟಿ ಅಕ್ಕಿ ಮಾಡುತ್ತಾರೆ. ಆಗ ತಾನೇ ಭತ್ತವನ್ನು ಬೆಳೆದವರೂ ತಾವೇ ಅಕ್ಕಿಯನ್ನು ತಯಾರಿಸಿ ಅನ್ನ ಮಾಡುತ್ತಾರೆ. ಭತ್ತವನ್ನು ಬೇಯಿಸುವ ಪಾತ್ರೆಗೆ ಮುಳ್ಳುಸೌತೆ ಬಳ್ಳಿಯನ್ನು ಕಟ್ಟಿದಂತೆ ಅನ್ನದ ಕುದುಪೆಗೂ ಮುಳ್ಳುಸೌತೆಯ ಬಳ್ಳಿ ಕಟ್ಟಲಾಗುತ್ತದೆ.

ಹೊಸ ಅಕ್ಕಿಯ ಊಟಕ್ಕೆ ಮೇಲೋಗರವಾಗಿ ಮುಳ್ಳು ಸೌತೆಯ, ಕೊದ್ದೆಲನ್ನು , ಮೀನಿನ ರಸವನ್ನು ಕಡ್ಡಾಯವಾಗಿ ಮಾಡುತ್ತಾರೆ. ಆಗ ತಾನೇ ಬೆಳೆದ ಭತ್ತದ ಅಕ್ಕಿಯು ಸಿಹಿಯಾಗಿದ್ದು ಉಣ್ಣಲು ರುಚಿಯಾಗಿರುತ್ತದೆ. ಈ ಹೊಸ ಅಕ್ಕಿ ಊಟವನ್ನು ಸಾಮಾನ್ಯವಾಗಿ ರಾತ್ರಿಯ ಊಟಕ್ಕೆ ಸಿದ್ಧಪಡಿಸುತ್ತಾರೆ. ಒಂದು ಮುಡಿ ಅಕ್ಕಿಯಾಗಬೇಕು ಎಂದಾದರೆ ಆರು ಕಳಸೆ ಮತ್ತು ಆರು ಸೇರು ಭತ್ತ ಬೇಕು. ಇದು ಅಕ್ಕಿಯಾಗುವಾಗ ಒಂದು ಮುಡಿ ಒಂದು ಕಳಸೆ ಅಕ್ಕಿಯಾಗಿ ಸ್ವಲ್ಪ ಮೆದುಕುಳಿಯೂ ಸಿಗುತ್ತದೆ. 'ಮೆದುಕುಳಿ' ಎಂದರೆ ಭತ್ತವನ್ನು ಮೆದ್ದಿ ಅಕ್ಕಿ ಮಾಡಿದ ಮಜೂರಿಯೂ ಆಗಿರುತ್ತದೆ.

ಕಾವೇರಿ ಸಂಕ್ರಮಣ :– ಕನ್ಯಾ ತಿಂಗಳಲ್ಲಿ ಬರುವ ಕಾವೇರಿ ಸಂಕ್ರಮಣವು ಕಾವೇರಿ ನದಿ ತೀರ್ಥೋದ್ಭವದ ದಿನವೂ ಹೌದು. ಕೃಷಿ ಚಟುವಟಿಕೆಯಲ್ಲಿ ಈ ದಿನದಂದು ಭತ್ತವನ್ನು ಮುಟ್ಟಬಾರದು . ಭತ್ತದ ಕೃಷಿ ಕೆಲಸ ಅತ್ಯಂತ ತುರ್ತು ಇರುವ ತಿಂಗಳು ಅದು. ಆ ತಿಂಗಳಲ್ಲಿ ಬರುವ ಕಾವೇರಿ ಸಂಕ್ರಮಣಕ್ಕೆ ಒಂದು ದಿನದ ಕೃಷಿ ಕಾರ್ಯದ ವಿರಾಮವಿದೆ. ಈ ದಿನ ಒಂದು ವಿಶೇಷ ಖಾದ್ಯವನ್ನು ಮಾಡುತ್ತಾರೆ. ಇದನ್ನು 'ಮಣ್ಣಿ' ಎನ್ನುತ್ತಾರೆ. ಬೆಳ್ತಿಗೆ ಅಕ್ಕಿಯನ್ನು ಅರೆದು ಬೆಲ್ಲ ತೆಂಗಿನಕಾಯಿ ಹಾಕಿ ಕುದಿಸುತ್ತಾರೆ. ಗೆರಸೆ ಅಥವಾ ಚಾಪೆಯ ಮೇಲೆ ಬಾಳೆ ಎಲೆಗೆ ಎಣ್ಣೆ ಹಚ್ಚಿ ಅದರ ಮೇಲೆ ಹಾಕುತ್ತಾರೆ. ತಣ್ಣಗಾದ ಮೇಲೆ ಕತ್ತರಿಸಿ ತಿನ್ನುತ್ತಾರೆ. ಇನ್ನೊಂದು ರೀತಿಯಲ್ಲಿ ಬೆಳ್ತಿಗೆ ಅಕ್ಕಿಯನ್ನು ಬೆಲ್ಲ ತೆಂಗಿನಕಾಯಿಯೊಂದಿಗೆ ಅರೆದು, ಹಬೆಯಲ್ಲಿಟ್ಟು ಬೇಯಿಸುತ್ತಾರೆ. ಈ ವಿಶೇಷ ಖಾದ್ಯ ಕಾವೇರಿ ಸಂಕ್ರಮಣಕ್ಕೆ ಅಗಲೇಬೇಕು. ಭತ್ತದ ಬೆಳೆಯ ಸಮೃದ್ಧಿಯನ್ನು ಸ್ವಾಗತಿಸುವ ಆಶಯವು ಈ ಹಬ್ಬದ ಆಚರಣೆಯಲ್ಲಿದೆ.

ತುಳುವೆರ ಪರ್ಬ :– ಭೂಮಿಯ ಒಡೆತನದ ಪ್ರಜ್ಞೆಯನ್ನು ಇಂದಿಗೂ ಕಾಯ್ದುಕೊಂಡು ಬಂದಿರುವ ಹಬ್ಬವೇ ತುಳುವರ ಪರ್ಬ. ತುಳುನಾಡಿನ ಭೂಮಿಯ ಒಡೆಯನಾದ ಬಲಿಯೇಂದ್ರನನ್ನು ಮರಳಿ ಮತ್ತೆ ಬಾ ಎಂಬ ಅಶಯದಿಂದ ಅವನನ್ನು ಕೂಗಿ ಕರೆಯುತ್ತ ಗದ್ದೆ, ಹಟ್ಟಿ, ಗೊಬ್ಬರದ ರಾಶಿಗಳಿಗೆ "ತುಡಾರ್"" ದೀಪವನ್ನು ಇಡುತ್ತಾರೆ. ಕನ್ಯಾ ತಿಂಗಳು ಕಳೆದು ಬೊಂತೆಲ್ ತಿಂಗಳಲ್ಲಿ ಬರುವ ಈ ಕೊಡಿ ಪರ್ಬ ಮೂರು ದಿನದ ಆಚರಣೆ.

ಕೊನೆಯ ದಿನ ಭೂಮಿಯ ಒಡೆಯನಾದ ಬಲಿಯನ್ನು ಕೂಗಿ ಕರೆಯಲಾಗುತ್ತದೆ. ಯಾವುದು ಅಸಾಧ್ಯವೋ ಅದು ಸಾಧ್ಯವಾಗುವಾಗ ಬಲಿ ಮರಳಿ ಬರುತ್ತಾನೆ ಎಂಬ ಹಾಡನ್ನು ಹಾಡುವ ಮೂಲಕ ತಮಗಾದ ಅನ್ಯಾಯವನ್ನು ನೆನಪಿಸುತ್ತಲೇ ಪ್ರತಿಭಟಿಸುತ್ತಾರೆ. ತಾವೇ ಬಲಿಯೇಂದ್ರ ಪಾಡ್ದನವನ್ನು ಹಾಡಿ ಇನ್ನೊಂದು ಗುಂಪು 'ಕೂ' ಹಾಕಿ ಓಗೊಡುವ ಮೂಲಕ ಅವನು ಬಂದೇ ಬರುತ್ತಾನೆ ಎಂಬ ನಂಬಿಕೆ ತುಳುವರದು.

ಬಲಿಯನ್ನು ಸ್ವಾಗತಿಸಲು ಗದ್ದೆಯಲ್ಲಿ ಪೈರು ಕೊಯ್ದು ಹಾಕಿರಬಾರದು. ಅವನು ಬರುವಾಗ ನಾಡು ಸುಭಿಕ್ಷವಾಗಿರಬೇಕು. ಜನ ಸಂತುಷ್ಟಿಯಿಂದ ಇರುವುದನ್ನು ನೋಡಿ ಆತ ತೃಪ್ತನಾಗಬೇಕು. ಅದಕ್ಕಾಗಿ ಗದ್ದೆಯಲ್ಲಿ ಎಣೆಲಿನ ಕೊಯಿಲು ಮುಗಿದು , ಸುಗ್ಗಿಯ ನಾಟಿ ಆಗಿರಬೇಕು. ಗದ್ದೆಗಳಿಗೆ ತೆಂಗಿನ ಸೋಗೆಯ ಕೊತ್ತಲಿಂಗೆ (ದಿಂಡು) ಗಳಿಗೆ ಇಲ್ಲವೇ ಕೊದುಂಬುಗಳಿಗೆ ಬಿಳಿ ಬಟ್ಟೆ ಸುತ್ತಿ ಎಳ್ಳೆಣ್ಣೆಯಲ್ಲಿ ಮುಳುಗಿಸಿಟ್ಟು ತುಡಾರ್ ಸಿದ್ಧಪಡಿಸುತ್ತಾರೆ. ಅಥವಾ ಕೊತ್ತಲಿಂಗೆಯ ಕೋಲಿಗೆ ತೆಂಗಿನಕಾಯಿ ಚಿಪ್ಪನ್ನು ಸಿಕ್ಕಿಸಿ ಅದಕ್ಕೆ ದೀಪವನ್ನು ಹಚ್ಚುತ್ತಾರೆ. ಅದರ ಬುಡದಲ್ಲಿ ವೀಳ್ಯದೆಲೆ, ಅಡಿಕೆ, ಅವಲಕ್ಕಿ, ತೆಂಗಿನಕಾಯಿ ಚೂರು, ಕೇಪಳ, ಕುರ್ದಿ ಹೂ, ಪುಚ್ಚೆ ಹಣ್ಣಿನ ಎಲೆಗಳ ಮಿಶ್ರಣವನ್ನು ಅಲ್ಲಿ ಸಿಂಪಡಿಸಿ ಅದರ ಮೇಲೆ ಪುಟ್ಟ ದೋಸೆಯನ್ನು ಬಡಿಸಿ ಹೂ ಹಾಕಿ ಬರುತ್ತಾರೆ. ಕೆಲವರು ದೋಸೆಯನ್ನು ವೀಳ್ಯವನ್ನು ಹೆಕ್ಕಿ ತಂದು ತಿನ್ನುತ್ತಾರೆ. ಕೆಲವರು ತಿನ್ನುವುದಿಲ್ಲ. ಜನಪದರಲ್ಲಿ ಈ ಎರಡೂ ನಂಬಿಕೆಗಳೂ ಚಾಲ್ತಿಯಲ್ಲಿವೆ. ಇದಲ್ಲದೆ ಮನೆಯಲ್ಲಿ ಇರುವ ಭತ್ತದ ರಾಶಿ, ಹಟ್ಟಿಯಲ್ಲಿರುವ ಪಶು ಸಂಪತ್ತಿಗೆ 'ತುಡಾರ್' ದೀಪವನ್ನು ಗೆರೆಸೆಯಲ್ಲಿ ಹಿಡಿದು ತೋರುತ್ತಾರೆ. ಗೆರಸೆಯಲ್ಲಿ ಒಂದು ಸಾಲು ಭತ್ತ, ಒಂದು ಸಾಲು ಅಕ್ಕಿ, ಒಂದು ಸಾಲು ಅವಲಕ್ಕಿ ಹಾಕಿ ಮಧ್ಯದಲ್ಲಿ ಹಣತೆಗಳಲ್ಲಿ ದೀಪಗಳನ್ನು ಇಟ್ಟು ಭತ್ತದ ರಾಶಿ, ಹಟ್ಟಿಯ ಪಶು ಸಂಪತ್ತು ಹೆಚ್ಚಾಗಲಿ ಎಂದು ಪ್ರಾರ್ಥಿಸುತ್ತಾರೆ. ಭೂಮಿ ಮನುಷ್ಯ ಪ್ರಾಣಿ ಪ್ರಪಂಚವನ್ನು ಬೆಸೆಯುತ್ತ ಅದರ ಸಮೃದ್ಧಿಗಾಗಿ ಆಚರಿಸುವ ತುಳುವರ ಹಬ್ಬವೇ ಪರ್ಬ. ಮನೆಯಲ್ಲಿ ಹೆಬ್ಬಲಸಿನ ಎಲೆಯ ಸಿಹಿ ಮತ್ತು ಸಪ್ಪೆ ಗಟ್ಟಿ, ಹಳದಿ ಎಲೆಯ ಸಿಹಿ ಗಟ್ಟಿಯಲ್ಲದೆ ಮೀನಿನ ಸಾರು ಆಗಲೇಬೇಕು. ಆ ದಿನವೂ ಭೂತಕ್ಕೆ ಸತ್ತವರಿಗೆ ಬಡಿಸುವ ಕಾರ್ಯಕ್ರಮವಿದೆ.

ಕೆಡ್ಡಸ: ಕೆಡ್ಡಸವು ತುಳುವರ ಕೃಷಿ ಸಂಸ್ಕೃತಿಯಲ್ಲಿ ಮುಖ್ಯವೆನಿಸುವ ಒಂದು ಆಚರಣೆ ಇದು ಪುಯಿಂತೆಲ್ ತಿಂಗಳಲ್ಲಿ ಬರುವ ಮೂರು ದಿನದ ಆಚರಣೆಯಾಗಿದ್ದು ಹಿಂದಿನ ಪುಟದಲ್ಲಿ ಇದರ ವಿವರಣೆ ಬಂದಿರುತ್ತದೆ.

ಕಂಬಳ : ಎಣೆಲು ಬೇಸಾಯ ಕಳೆದು ಸುಗ್ಗಿಯ ನಾಟಿ ಮಾಡುವ ವಿಸ್ತಾರವಾದ ಬೈಲು ಗದ್ದೆಗಳಲ್ಲಿ ಕಂಬಳದಂತಹ ಕ್ರೀಡೆ ಆಚರಣೆಯಾಗಿಯೂ ನಡೆಯುತ್ತಿತ್ತು. ಕೃಷಿಕನೊಬ್ಬನ ಹೆಮ್ಮೆ ಮತ್ತು ಪ್ರತಿಷ್ಠೆಗಳಿಗೆ ಕಾರಣವಾಗುವ ಈ ಕ್ರೀಡೆ ಕೃಷಿಯ ಭಾಗವಾಗಿಯೂ ಇತ್ತು. ಹಟ್ಟಿಯಲ್ಲಿ ಕಂಬಳದ ಕೋಣಗಳನ್ನು ಕಟ್ಟಿದವ ಶ್ರೀಮಂತನೂ ಆಗಿರುತ್ತಿದ್ದ. ಊರು ಮತ್ತು ಗುತ್ತಿನ ಮನೆತನಗಳ ಉಳ್ಳವರು ಈ ಕ್ರೀಡೆಯನ್ನು ನಡೆಸುತ್ತಿದ್ದರೆ, ಸಾಮಾನ್ಯರು ಪ್ರೇಕ್ಷಕರಾಗಿ ರಂಜನೆಯನ್ನು ಪಡೆಯುತ್ತಿದ್ದರು. ಕರಾವಳಿಯ ಉದ್ದಗಲಕ್ಕೂ ಘನತೆ ಗೌರವವನ್ನು ಹೊಂದಿದ ಹಲವು ಕಂಬಳಗಳಿವೆ. ಹೆಣ್ಣು ಮಕ್ಕಳು ಇದನ್ನು ನೋಡಬಾರದು ಎಂಬ ನಿಷೇಧವಿದೆ.

ಕೊಯ್ಲಿನ ಶಾಸ್ತ್ರ :- ಕರಾವಳಿಯಲ್ಲಿ ಭತ್ತದ ತೆನೆ ಬಲಿತು ಕಟಾವಿಗೆ ಸಿದ್ಧವಾದಾಗ ಮಾಡುವ ಶಾಸ್ತ್ರ ಇದು. ಮೊದಲಿಗೆ ಗದ್ದೆಯಲ್ಲಿ ಸ್ವಲ್ಪ ಹಾಲು ಇಟ್ಟು ಎಲೆ ಅಡಿಕೆ ಇಟ್ಟು ಆ ಎಲೆಗೆ ಹೊಯ್ದು ಪ್ರಾರ್ಥಿಸಿ ಬರುತ್ತಾರೆ. ಒಂದು ಸೂಡಿಯಷ್ಟು ಪೈರನ್ನು ಮನೆ ಗಂಡಸರು ಕೊಯ್ಯುತ್ತಾರೆ. ಕಟಾವು ಮತ್ತು ಕೊಯಿಲಿನ ಕೆಲಸ ಬೇಗನೆ ಸಾಗಲು ಸುರಕ್ಷಣೆಯಿಂದ ಬೆಳೆ ಮನೆ ಸೇರಲು ಇದು ಅವಶ್ಯ ಎಂದು ನಂಬುತ್ತಾರೆ.

ಗದ್ದೆಗೆ ಬಾಳೆ ಹಾಕುವುದು :- ಮನೆ ಮುಂದಿರುವ ಸಾಕಷ್ಟು ಉದ್ದ ಅಗಲದ ಗದ್ದೆಗಳನ್ನು ಬಾಕಿಲ್‌ದ ಮಾರ್ 'ಬಾಕಿ ಮಾರ್' ಎಂದು ಕರೆಯುತ್ತಾರೆ. ಇಂತಹ ಗದ್ದೆಗಳನ್ನು ಬಾರೆ ಪಾಡು ಬಾಕ್ಯಾರ್ ಎಂದೇ ಉಲ್ಲೇಖಿಸುತ್ತಾರೆ. ಇಂತಹ ಗದ್ದೆಗಳು ದೇವಸ್ಥಾನದ ಮುಂದೆ ಇದ್ದರೆ ದೇವರ ಗದ್ದೆಯಾಗುತ್ತದೆ. ದೈವಸ್ಥಾನದ ಮುಂದಿದ್ದರೆ ಭೂತದ ಗದ್ದೆಯಾಗಿರುತ್ತದೆ. ಆ ಗದ್ದೆಯಲ್ಲಿ ಬಂದ ಫಸಲನ್ನು ದೇವರ, ಭೂತದ ಕಾರ್ಯಕ್ಕೆ ಬಳಸಿಕೊಳ್ಳುತಾರೆ. ಹೀಗಿರುವ ಗದ್ದೆಗಳನ್ನು ಒಂದೇ ದಿನದಲ್ಲಿ ನಾಟಿ ಮಾಡಲಾಗುತ್ತದೆ. ಅನಿವಾರ್ಯವಾಗಿ ಬಿತ್ತನೆ ಮಾಡಿದರೂ ಒಂದೇ ದಿನದಲ್ಲಿ ಬಿತ್ತನೆ ಮಾಡಿ ಗದ್ದೆಯ ಮಧ್ಯದಲ್ಲಿ ಬಾಳೆಯ ಗಿಡವೊಂದನ್ನು ನೆಡುತ್ತಾರೆ. ಆ ದಿನ ಗದ್ದೆಯಲ್ಲಿ ದುಡಿದ ಕೆಲಸದಾಳುಗಳಿಗೆ ವಿಶೇಷವಾದ ಸಿಹಿಯೂಟ ಬಡಿಸುತ್ತಾರೆ. ಬಾಳೆ ಗಿಡವು ಬೆಳೆದು ಪೈರು ಬಲಿಯುವಾಗ ಗೊನೆಯೊಂದನ್ನು ಹಾಕುತ್ತದೆ.

ಕೆಲವು ದೈವಸ್ಥಾನದ ಗದ್ದೆಗಳಲ್ಲಿ ಹೆಣ್ಣು ಮಕ್ಕಳು ಗದ್ದೆ ನಾಟಿ ಮಾಡಿ ಹಿಂದಿರುಗಿ ನೋಡದೆ ಮನೆಯಂಗಳಕ್ಕೆ ಹೋಗಬೇಕು. ಅವರು ಗದ್ದೆಯಿಂದ ಮೇಲಕ್ಕೇರುತ್ತಿದ್ದಂತೆ ದೈವಸ್ಥಾನದಿಂದ ಭೂತದ ಪಾತ್ರಿಯು ವಾಲಗದೊಂದಿಗೆ ಬಂದು ಗದ್ದೆಗೆ ಒಂದು ಪ್ರದಕ್ಷಿಣೆ ಬಂದು ತೆರಳುತ್ತದೆ. ಭೂತ ದೈವಸ್ಥಾನಕ್ಕೆ ಬಂದು ತಲುಪುವುದರ ಒಳಗಾಗಿ ಹೆಣ್ಣು ಮಕ್ಕಳು ಮನೆ ತಲುಪಬೇಕು ಎಂದು ಪ್ರಾದೇಶಿಕವಾದ ಕೆಲವು ವಿಶಿಷ್ಟ ಮತ್ತು ವಿಚಿತ್ರ ನಂಬಿಕೆಗಳು ಇವೆ.

ಪಡಿಮಂಚದ ಪೂಜೆ :- ಕರಾವಳಿಯಲ್ಲಿ ಭತ್ತವನ್ನು ಒಕ್ಕಣೆ ಮಾಡುವಾಗ ಎರಡೆರಡು ಸೂಡಿಗಳನ್ನು ಪಡಿಮಂಚಕ್ಕೆ ಬಡಿಯಲು, ಭತ್ತ ಕೆಳಗೆ ಬೀಳುತ್ತದೆ. ಭತ್ತ ಬೇರ್ಪಟ್ಟ ಬೈಹುಲ್ಲನ್ನು ಅಲ್ಲೇ ಸ್ವಲ್ಪ ದೂರಕ್ಕೆ ಬದಿಗೆಸೆಯುತ್ತಾರೆ. ಹೀಗೆ ಬಡಿಯುತ್ತಾ ಹೋದಂತೆ ಭತ್ತ ಪಡಿಮಂಚದ ಕೆಳಗೆ ರಾಶಿಯಾಗುತ್ತದೆ. ಒಂದೇ ಗದ್ದೆಯ ಭತ್ತದ ಕಾಳುಗಳಿಂದ ಪಡಿಮಂಚದ ನಾಲ್ಕು ಕಾಲುಗಳು ಮುಚ್ಚಿ ಅದರ ತುದಿಗೆ ತಾಗಿದರೆ ಆ ಗದ್ದೆಯಲ್ಲಿ 'ಇಂತಿಷ್ಟು' ಮುಡಿ ಭತ್ತವಾಯಿತೆಂದು ಸಂಕೇತ. ಪಡಿಮಂಚದ ಗಾತ್ರದ ಸಿದ್ಧ ಅಳತೆಗೆ ಅದು ಇಂತಿಷ್ಟು ಮುಡಿ ಆಗುತ್ತದೆಂಬ ಲೆಕ್ಕಾಚಾರ ಅದನ್ನು ಬಾಯಿಬಿಟ್ಟು ಹೇಳುವುದಿಲ್ಲ. ಈ ಸಂಭ್ರಮಕ್ಕಾಗಿ ಬಂದ ಇಳುವರಿಯನ್ನು ಸ್ವಾಗತಿಸುತ್ತಾರೆ. ತೆಂಗಿನಕಾಯಿಯೊಂದನ್ನು ಪಡಿಮಂಚದ ನಾಲ್ಕು ಕಾಲಿಗೂ ತಾಗಿಸಿ ಅದರ ಮೇಲಾಗಿ ಜೋರಾಗಿ ಹೊಡೆದು ಒಡೆಯುತ್ತಾರೆ. ಮತ್ತೆ ಒಂದು ಧೂಪದ ಆರತಿಯನ್ನು ಎತ್ತುತ್ತಾರೆ. ಭತ್ತದ ಸೂಡಿಗಳನ್ನು ಪಡಿಮಂಚದಲ್ಲಿ ಬಡಿದು ಬೇರ್ಪಡಿಸುವ ಮತ್ತು ಪೂಜೆಯ ಕಾರ್ಯವನ್ನು ಮಹಿಳೆಯರೇ ಮಾಡುತ್ತಾರೆ.

ಸಿಂಗೋಡೆ ಸಂಕ್ರಾಂದಿ :– ಕರಾವಳಿಯ ಕಾಲಮಾನದ ಲೆಕ್ಕಚಾರ ಸೂರ್ಯನ ಚಲನೆಯನ್ನು ಸಂಬಂಧಿಸಿದ್ದು ತಿಂಗಳುಗಳು ಬದಲಾಗುವ ದಿನವನ್ನು ಸಂಕ್ರಮಣ ಎನ್ನುತ್ತಾರೆ. ಸಂಕ್ರಮಣದ ಮರುದಿನ ಸಿಂಗೋಡೆ. ಸಿಂಗೋಡೆ ಮತ್ತು ಸಂಕ್ರಾಂದಿಯಂದು ಭೂಮಿಯನ್ನು ಅಗೆಯುವಂತಿಲ್ಲ. ಅಂದು ಮಣ್ಣನ್ನು ಮುಟ್ಟಬಾರದು . ಗದ್ದೆ ಉಳುಮೆಯ ಕಾಲದಲ್ಲಿ ಕೆಲಸ ಎಷ್ಟು ತುರ್ತಿನದು ಆದರೂ ಉಳುಮೆ ಮಾಡುವಂತಿಲ್ಲ. ಆ ದಿನಗಳಲ್ಲಿ ಕೃಷಿ ಚಟುವಟಿಕೆಗಳಿಗೆ ವಿರಾಮ ಹಾಗಾಗಿ ಭೂತ ಸ್ಥಾನಗಳಲ್ಲಿ ಸಂಕ್ರಮಣ ಕಳೆಯುವ ಕ್ರಮ ಇದೆ. ಗದ್ದೆಯನ್ನು ನಾಟಿ ಮಾಡಬಹುದು. ಉಳುಮೆ ಮಾಡಿದರೆ ಮಣ್ಣಲ್ಲಿ ರಕ್ತ ಒಸರುತ್ತದೆ. ಇದು ಅಪಾಯಕಾರಿ ಎಂಬ ನಂಬಿಕೆಯಿದೆ. ಸಿಂಗೋಡೆಯಂದು ಶುಭಕಾರ್ಯ ಮಾಡುವುದಿಲ್ಲ. ಕೊಡುವ ತರುವ ವ್ಯವಹಾರವಿಲ್ಲ. ಎಪ್ಪತ್ತು ಸಿಂಗೋಡೆಗೆ ಪುನರಾವರ್ತಿಸುತ್ತದೆ ಎಂಬ ನಂಬಿಕೆಯಿದೆ.

ಬಿಸು ಪರ್ಬ (ಯುಗಾದಿ):– ಕರಾವಳಿಯಲ್ಲಿ ಹೊಸ ವರ್ಷದ ಆಚರಣೆ 'ಬಿಸು' ವಿನಿಂದ ಆರಂಭವಾಗುತ್ತದೆ. ಸೂರ್ಯನ ಚಲನೆಯ ಸೌರಮಾನದ ಲೆಕ್ಕಾಚಾರದಿಂದ ಕಾಲಮಾನವನ್ನು ಅಳೆಯುತ್ತ ಕೃಷಿ ಚಟುವಟಿಕೆಯ ಆರಂಭಕ್ಕೂ ನಾಂದಿ ಹಾಡಲಾಗುತ್ತದೆ. ಭೂಮಿಯ ಒಡೆತನದ, ಅಧಿಕಾರ ಹಸ್ತಾಂತರದ ಲೆಕ್ಕಾಚಾರಗಳು ಆ ದಿನ ನಡೆಯುತ್ತಿತ್ತು. ಆ ದಿನ ಧಣಿಗಳಿಗೆ ಬಿಸುಕಣಿಯೊಂದಿಗೆ ಗೇಣಿಯ ಲೆಕ್ಕ ಪೂರೈಸಿ ಮರು ವರ್ಷದ ಸಾಗುವಳಿಯ ಹಕ್ಕನ್ನು ಪಡೆಯಲಾಗುತ್ತಿತ್ತು. ಇಲ್ಲದಿದ್ದರೆ ಭೂಮಿಯ ಸಾಗುವಳಿಯ ಹಕ್ಕು ಲಭಿಸುವುದಿಲ್ಲ. ಅದಕ್ಕಾಗಿ ಆ ದಿನ ಗೇಣಿಯ ಅಕ್ಕಿಮುಡಿಗಳಲ್ಲದೆ ಗದ್ದೆಯಲ್ಲಿ ಬೆಳೆದ ತರಕಾರಿ, ಹಣ್ಣು ಹಂಪಲು, ಗೇರು ಬೀಜ, ವಿಶೇಷವಾಗಿ ಬೆಳೆಸಿರುವ ಗಂಧ ಸಾಲೆ, ಮಸೂರಿಯಂತಹ ವಿಶೇಷ ತಳಿಯ ಅಕ್ಕಿಯನ್ನು ಉಡುಗೊರೆಯಾಗಿ ಧಣಿಗಳಿಗೆ ಕೊಡುತ್ತಿದ್ದರು. ತಾವು ಕಷ್ಟಪಟ್ಟು ಬೆಳೆದದ್ದನ್ನು ಒಡೆಯನ ಮನೆಗೆ ತಂದು ಒಪ್ಪಿಸುತ್ತಿದ್ದರು. ಇದನ್ನು ಭೂಮಾಲೀಕರು, ಭೂಮಿಯ ಒಡೆಯರು 'ಬಿಸುಕಣಿ' ಎಂದು ಇಟ್ಟು ಸಂಭ್ರಮದಿಂದ ಬೆಳೆ ಹೆಚ್ಚಲು ಪ್ರಾರ್ಥಿಸುತ್ತಿದ್ದರು. ತಾವು ಬೆಳೆದ ಎಲ್ಲ ಫಲವಸ್ತುಗಳನ್ನು ಬಂದ ಮೊದಲ ಫಲಗಳನ್ನು ಕಣಿ ಇಟ್ಟು ದೀಪ ಹಚ್ಚಿ ಎಲ್ಲರೂ ಶಿರಬಾಗಿ ನಮಸ್ಕರಿಸುತ್ತಿದ್ದರು. ಆ ದಿನ ಮನೆಯ ಹಿರಿಯರಿಂದ ಕಿರಿಯರು ಕಾಲುಮುಟ್ಟಿ ತಲೆಬಾಗಿ ನಮಸ್ಕರಿಸಿ, ಆಶೀರ್ವಾದವನ್ನು ಪಡೆಯಬೇಕು. ಎಲ್ಲರೂ ಹೊಸಬಟ್ಟೆ ಧರಿಸುತ್ತಾರೆ. ಕಾಣಿಕೆ ತಂದ ಒಕ್ಕಲಿನವರಿಗೂ ಹೊಸ ಬಟ್ಟೆಯನ್ನು ಕೆಲವರು ನೀಡುತ್ತಿದ್ದರು. ಅಲ್ಲದೆ ಆ ದಿನ ಎಳೆಯ ಗೇರು ಬೀಜ ಹಾಕಿ ಮಾಡಿದ ಪಲ್ಯವಲ್ಲದೆ ಸಿಹಿಯಾದ ಪಾಯಸದೂಟವೂ ಇರುತ್ತಿತ್ತು.

ಬಿಸು ಕಣಿ ಒಂದೆಡೆ ಸಡಗರ ಸಂಭ್ರಮವಾದ ಹೊಸವರ್ಷದ ಸಿಹಿಯೂಟವಾದರೆ, ಗೇಣಿ ನೀಡದವರಿಗೆ ಅವರ ವಶದಲ್ಲಿದ್ದ ಗದ್ದೆಗಳನ್ನು ಮರು ವಶಪಡಿಸಿಕೊಳ್ಳುತ್ತಿದ್ದರು. ಹಾಗಾಗಿ ಅದು ಸಂಕಟದ ದಿನವೂ ಆಗಿತ್ತು. ಧಣಿಯ ಮನೆಯ ಚಾವಡಿಗೆ ತಾವು ಬೆವರಿಳಿಸಿ ದುಡಿದದ್ದನ್ನು ತಂದು ಉಡುಗೊರೆಯಾಗಿ ನೀಡುವಲ್ಲಿ ಬಡ ರೈತರ ದಯನೀಯತೆಯೂ ಇಲ್ಲಿ ಬಹಳ ಮುಖ್ಯ. ಜನಪದರು ಆ ನೋವನ್ನು ಗಾದೆಯೊಂದರಲ್ಲಿ ಹೇಳುತ್ತಾರೆ. 'ಊರು ಎಲ್ಲಾ ಗೇಣಿ ಬಿರ್ಮೆ ಹಿಡಿದ ಓಣಿ' ಎಂಬ ಗಾದೆ ಮಾತು ಗೇಣಿದಾರರ ದಯನೀಯತೆಯನ್ನು ಜಮೀನ್ದಾರರ ದಾಷ್ಟ್ಯವನ್ನು ನಿರೂಪಿಸುತ್ತದೆ.

ಉಡುಪಿಯ ಕಡೆಗೆ ಯುಗಾದಿ ದಿವಸ ಗದ್ದೆಗೆ ಖಾತೆ ಬೇಸಾಯದ ಹುಲ್ಲು ಭತ್ತದ ಹೊಟ್ಟನ್ನು ತೆಗೆದುಕೊಂಡು ಹೋಗಿ ಸುಟ್ಟು ಬರುತ್ತಾರೆ. ಗೇರು ಬೀಜ ಬಲಿದು ಅದರ ಅಡ (ತಿರುಳು) ಹಾಕಿ ಪಾಯಸ ಮಾಡುತ್ತಾರೆ. ಹತ್ತು ದಿನ ಕಳೆದ ಮೇಲೆ ಹತ್ತರಾವಧಿ ಮಾಡುತ್ತಾರೆ. ಇದನ್ನು ತುಳುವಿನಲ್ಲಿ 'ಪತ್ತನಾಜೆಗ್ ಕೈ ಬಿತ್ತ್ ಪಾಡುನಿ' (ಹತ್ತರಾವಧಿಗೆ ಕೈ ಬಿತ್ತ್ ಹಾಕುವುದು) ಎನ್ನುತ್ತಾರೆ. ಇದು ಬೀಜ ಮುಹೂರ್ತ. ಆ ದಿನ ಸ್ವಲ್ಪ ಬೀಜ ಹಾಕಿ ಗದ್ದೆ ಉಳುಮೆ ಮಾಡುತ್ತಾರೆ. ಮತ್ತೆ ಕೆಲವು ಪ್ರದೇಶಗಳಲ್ಲಿ ಪಗ್ಗು ತಿಂಗಳಲ್ಲಿ ಹದಿನೆಂಟು ಕಳೆಯುವಾಗ ಪುಂಡಿ ಬಿತ್ತ್ ಹಾಕುತ್ತಾರೆ.

ಕೆಲವು ಆಚರಣೆಗಳಲ್ಲಿ ಕರಾವಳಿಯ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣಗಳಲ್ಲಿ ಒಂದಿಷ್ಟು ವ್ಯತ್ಯಾಸಗಳಿವೆ. ಆಚರಣೆಗಳ ಅಶಯ ಒಂದೇ ರೀತಿ ಇದೆ. ಎಲ್ಲ ಹಬ್ಬಗಳು ಕೃಷಿ ಸಂಬಂಧಿಸಿದ ಆಚರಣೆಗಳಾಗಿವೆ. ಸಾಂಸ್ಕೃತಿಕವಾಗಿ ನೆಲಮೂಲದ ಸತ್ವವನ್ನು ಹೊಂದಿರುವ ಕೃಷಿಯ ಅರ್ಥವನ್ನು ವಿಶ್ಲೇಷಿಸುವ ಅದನ್ನು ಪೂರಕವಾಗಿ ಬೆಳೆಸುವ ಅಂಶಗಳು ಇಲ್ಲಿವೆ. ಹಬ್ಬವೆಂದರೆ ಊಟ, ಬಿಡುವು, ಮನರಂಜನೆಯ ಮೂರು ಹಂತಗಳಲ್ಲಿ ತೊಡಗಿಕೊಂಡಿರುತ್ತದೆ. ಮನುಷ್ಯ ಜಗತ್ತು ಪ್ರಾಣಿ ಜಗತ್ತಿನ ಸಾಮುದಾಯಿಕ ಪಾಲ್ಗೊಳ್ಳುವಿಕೆಯಿಂದ ಕೃಷಿಯ ಪೂರಕ ಪರಿಸರ ನಿರ್ಮಾಣ ಪಡೆದುಕೊಂಡಿದೆ. ಅಲ್ಲದೆ ಹೊಸ ಅರ್ಥ ಸಾಧ್ಯತೆಗಳೊಂದಿಗೆ ಪ್ರಕೃತಿಯ ಒಡನಾಟವೂ ಮುಖ್ಯವಾಗಿದೆ.

ಅಧ್ಯಾಯ 9

ಕರಾವಳಿಯ ಕುಟುಂಬ ವ್ಯವಸ್ಥೆಗೂ ಕೃಷಿಗೂ ಇರುವ ಸಂಬಂಧ

ಕರಾವಳಿಯ ಕುಟುಂಬ ವ್ಯವಸ್ಥೆಯು ಹೆಣ್ಣನ್ನು ಕೇಂದ್ರವಾಗಿರಿಸಿದ ಮಾತೃ ಮೂಲೀಯ, ಮಾತೃಸ್ಥಾನೀಯ ಕುಟುಂಬ ವ್ಯವಸ್ಥೆಯನ್ನು ಹೊಂದಿದೆ. ಆದಿಮ ಜಗತ್ತಿಗೆ ಹತ್ತಿರವಾಗಿ ಹೆಣ್ಣನ್ನು ಮೂಲ ಸೆಲೆಯಲ್ಲಿರಿಸಿ ಹೆಣ್ಣಿನ ಸಂತಾನ ಮತ್ತು ಅವಳಿಂದ ಕುಟುಂಬದ ಅಸ್ತಿತ್ವವನ್ನು , ಅವಳ ಮೂಲಕ 'ಬಳಿ' ಗಳಾಗಿ ಬಂಧುತ್ವವನ್ನು ಗುರುತಿಸಲಾಗಿವೆ. ಕುಟುಂಬ ರಚನಾ ವಿನ್ಯಾಸದಲ್ಲಿ ಹೆಣ್ಣಿನ ಸ್ಥಾನಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು, ವಂಶದ ಮುಂದುವರಿಕೆಗೆ ಹೆಣ್ಣೇ ಕಾರಣ ಎಂಬ ನಂಬಿಕೆ ಇಂದಿಗೂ ಚಾಲ್ತಿಯಲ್ಲಿದೆ. ಒಂದು ತೆನೆಯ ಬೀಜವು ಸಾವಿರಾರು ಬೀಜಗಳ ಹುಟ್ಟಿಗೆ ಕಾರಣ ಎಂಬ ಅಶಯವೂ ಇಲ್ಲಿದೆ. ತನ್ನ ಸಂತಾನದ ಮೂಲವನ್ನು, ಅಸ್ತಿತ್ವವನ್ನು, ಸಾಮಾಜಿಕ ಗುರುತಿಸಿಕೊಳ್ಳುವಿಕೆಯನ್ನು ಹೆಣ್ಣಿನ ಮೂಲಕವೇ ಗುರುತಿಸಿ ಮಾನ್ಯ ಮಾಡಲಾಗುತ್ತದೆ. ತಂದೆ ಯಾರು ಎನ್ನುವುದಕ್ಕಿಂತ, ತಾಯಿ ಯಾರು ಎನ್ನುವುದೇ ಪ್ರಮುಖ ಅಂಶ. ವಂಶದ ಮುಂದುವರಿಕೆಗೆ ಗಂಡು ಸಂಗಾತಿಯಾಗಿ ಉಳಿಯುತ್ತಾನೆ. ಆಕೆಯ ಲೈಂಗಿಕತೆಯ ಸ್ವಾತಂತ್ರ್ಯ ಮತ್ತು ಆಯ್ಕೆ ಆಕೆಯ ಮುಷ್ಠಿಯೊಳಗೇ ಇತ್ತು. ತುಳುವರು ಒಂದು ಕಾಳು ನೂರು ಧಾನ್ಯದ ತತ್ವವನ್ನು ಹೊಂದಿ, ವಂಶವನ್ನು ಬೆಳೆಸಿದರು, ಹೆಣ್ಣಿನ ಮೂರು ಮುಖ್ಯ ಗುಣಗಳೆಂದು ಸೃಷ್ಟಿ, ಪೋಷಣೆ, ಧಾರಣೆಯ ಮೂಲಕ ಜೀವ ಜಾಲವನ್ನು ಬೆಳೆಸಿದವಳು ಅವಳೇ. ನಿಗ್ರಹಣದ ಗುಣವೂ ಅವಳಲ್ಲಿ ಇದ್ದುದ್ದು, ಆಕೆಯ ಸೃಷ್ಟಿ ಗುಣದ ಕಾರಣಕ್ಕೆ ಎಂಬುದು ಸ್ಪಷ್ಟ. ಹಾಗಾಗಿ ಆಕೆ ಕೆಡುಕನ್ನು ನಾಶ ಪಡಿಸುವ ಮಾರಿಯೂ ಆದಳು. ಕೆಟ್ಟದನ್ನು ನಿಗ್ರಹಿಸುತ್ತ ದೇವಿ ಸ್ವರೂಪಿಯೂ ಆದಳು, ಅವಳಿಗೆ ಪ್ರಾಕೃತಿಕವಾಗಿ ದಕ್ಕಿದ ಗುಣಗಳೇ ನೈಸರ್ಗಿಕ ಮುಂದಾಳುತ್ವವನ್ನು ಒದಗಿಸಿತು. ಹೆಣ್ಣಿಗೆ ಪ್ರಾಕೃತಿಕವಾದ ಹೆರುವ ಶಕ್ತಿ ಇರುವುದೇ ಅವಳನ್ನು ದೈವತ್ವಕ್ಕೆ ಏರಿಸಿತು. ಕುಟುಂಬ ರಚನೆ ಮತ್ತು ಪರ್ಯಾಯವಾಗಿ ಕಟ್ಟಿಕೊಂಡ ಸಾಮಾಜಿಕ ವ್ಯವಸ್ಥೆಯು ಇಂದಿಗೂ ಉಳಿದುಕೊಂಡು ಬಂದಿದೆ.

ಆದಿಮ ಸಮಾಜ ಮಾತೃ ಪ್ರಧಾನವಾದುದು. ಕರಾವಳಿ ಕರ್ನಾಟಕದ ಬಹುತೇಕ ಮೂಲ ನಿವಾಸಿ ಸಮುದಾಯಗಳು ಮಾತೃಪ್ರಧಾನ ವ್ಯವಸ್ಥೆಯವು. ಮಾತೃ ಪ್ರಧಾನ ವ್ಯವಸ್ಥೆಯ ಮುಖ್ಯ ಲಕ್ಷಣ ಮಾತೃ ವಂಶೀಯ ಹಾಗೂ ಮಾತೃ ಸ್ಥಾನೀಯ ನೆಲೆಗಳನ್ನು ಹೊಂದಿರುವುದು. ಕರಾವಳಿ ಕರ್ನಾಟಕದ ಎಲ್ಲ ಮೂಲ ಜನಸಮುದಾಯಗಳು ಈ ಎರಡೂ ನೆಲೆಗಳನ್ನು ಹೊಂದಿದ್ದು, ಈ ಸಂಸ್ಕೃತಿಯ ಒಳಗಿನವರು, ತಾಯಾಳಿಕೆ (ಕನ್ನಡ) ಪೊಣ್ಣಾಳ್ಮೆ (ತುಳು) ಪದ್ಧತಿಯಿಂದ ಗುರುತಿಸುತ್ತಾರೆ. ಮಾತೃ ಪ್ರಮಾಣ ಮತ್ತು ಪ್ರಧಾನ, ತಂದೆ ಅಪ್ರಮಾಣ ಮತ್ತು ಅಪ್ರಧಾನ. ಮಾತೃ ವಂಶೀಯ ಅಂದರೆ ವಂಶಾವಳಿ ಹಾಗೂ

ಉತ್ತರಾಧಿಕಾರವು ತಾಯಿ ಮೂಲದಿಂದ ಗುರುತಿಸುವುದು. ಮಾತೃ ಸ್ಥಾನೀಯ ಎಂದರೆ ವಿವಾಹಿತ ಮಗಳು ತನ್ನ ತಾಯಿ ಮನೆಯಲ್ಲಿಯೇ ವಾಸ ಮಾಡುವುದು. ತಾಯಿ ಮಕ್ಕಳು, ಮಗಳ ಮಕ್ಕಳು , ತಾಯಿ ಸೋದರ ಸೋದರಿಯರು ಒಂದೇ ಬಳಿಯ್ನನು ಹೊಂದಿದ್ದು, ಬಂಧುತ್ವ ಕುಟುಂಬವಾಗುತ್ತದೆ. ಕುಟುಂಬ ನೆಲೆಯಲ್ಲಿ ಹೆಣ್ಣು ಪಡೆದುಕೊಳ್ಳುವ ಈ ಬಗೆಯ ಸಮಷ್ಠಿ ಪ್ರಜ್ಞೆ ಮತ್ತು ಬಂಧುತ್ವದ ಸಾಕ್ಷಿ ಪ್ರಜ್ಞೆ ಮಾತೃರೂಪಿ ಸಂಸ್ಕ್ರತಿಯ ಹೆಣ್ಣೊಬ್ಬಳ ಶಕ್ತಿ ಮೂಲವೂ ಹೌದು. ಹೆಣ್ಣು ಸಂತತಿ ಆಗುವುದರಿಂದಲೇ ಮಾತೃ ರೂಪಿ ಸಂಸ್ಕೃತಿಯು ಹೆಚ್ಚು ಸ್ತ್ರೀ ಪರವೂ ಮಾನವ ಪರವೂ ಆಗಿದೆ. ಹೆಣ್ಣಿನ ಬದುಕಿನ ಮುಟ್ಟು ಚಟ್ಟು ಹೆರಿಗೆ, ಹೊಲೆಯಂತಹ ಎಲ್ಲ ಜೈವಿಕ ಕ್ರಿಯೆಗಳು ಪ್ರಕೃತಿಯೇ ಹೊರತು ಮೈಲಿಗೆಯಲ್ಲ. ವಿಚ್ಛೇದಿತೆ, ಮುತ್ತೈದೆ, ವಿಧವೆಯಂತಹ ಅಪಕಲ್ಪನೆಗಳು ಇಲ್ಲದಿರುವುದು ಲಿಂಗ ಸಮಾನತೆಗೆ ಬರೆದ ಹೊಸ ವ್ಯಾಖ್ಯೆಯಾಗುತ್ತದೆ.

ಮಾತೃ ಮೂಲ ಪರಿಕಲ್ಪನೆಯೆಂಬುದು ಸ್ತ್ರೀ ಸಂವೇದನೆಯ ಬದುಕು ಮತ್ತು ಆ ಮೂಲಕ ರಚನೆಯಾದ ಒಂದು ಸಾಮಾಜಿಕ ಸಂರಚನೆಯಾಗುತ್ತದೆ. ಸೃಷ್ಟಿಗೆ ಕಾರಣವಾದ ಹೆಣ್ಣು ತನ್ನ ಜೀವ ಸಂಕುಲದ ಉಳಿವಿಗಾಗಿ ರಕ್ಷಣೆಗಾಗಿ ಪ್ರಕೃತಿಯೊಂದಿಗೆ ಕಲಿತ ಸಂವೇದನೆಗಳನ್ನು ತನ್ನೊಳಗೆ ಅಂತರ್ಗತಗೊಳಿಸಿಕೊಳ್ಳುತ್ತಾಳೆ.

ವಿಕಾಸದ ಕಾಲಘಟ್ಟವನ್ನು ಭೇದಿಸುವಾಗ ಭೂಮಿಯನ್ನು ಆರಾಧಿಸುವ, ಪ್ರಕೃತಿಯನ್ನು ನಂಬಿಕೊಂಡು ಬದುಕುವ ಸಮುದಾಯಗಳು ಮಾತೃಮೂಲ ಸಮುದಾಯವನ್ನು ಅನುಸರಿಸಿಕೊಂಡು ಬಂದಿರುವುದನ್ನು ಕಾಣಬಹುದು. ಈ ಸಮುದಾಯಗಳ ಕುಟುಂಬ ಪದ್ಧತಿಯನ್ನೂ ಅಧ್ಯಯನ ಮಾಡುವಾಗ ಇಲ್ಲಿ ಸ್ತ್ರೀ ಪುರುಷ ಜೈವಿಕ ಭಿನ್ನತೆಗಳನ್ನು ಹೊರತು ಪಡಿಸಿ ಯಾವುದೇ ಭಿನ್ನತೆಗೊಳ್ಳದಿರುವುದನ್ನು ಕಾಣಬಹುದು. ಸ್ತ್ರೀ ಶೋಷಣೆಗೆ ಕಾರಣವಾಗುವ ಯಾವುದೇ ಆಚರಣೆಗಳಲ್ಲದೆ ಸ್ತ್ರೀಯ ಅಸ್ತಿತ್ವವನ್ನು ಗೌರವಿಸುವ ಕ್ರಮ ಈ ಪದ್ಧತಿಯಲ್ಲಿದೆ. ಸ್ತ್ರೀ ಪುರುಷ ಅನುಪಾತಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ.

ಸಂಸ್ಕೃತಿಯೊಂದರಲ್ಲಿ ಕುಟುಂಬ ಎನ್ನುವುದು ಬರಿಯ ಭೌತಿಕ ಅವಶ್ಯಕತೆಗಳನ್ನಷ್ಟೇ ನಿರ್ವಹಿಸುವ ಘಟಕವಷ್ಟೇ ಅಲ್ಲ. ಅದು ಸಾಮಾಜಿಕ ಹಾಗೂ ಭಾವನಾತ್ಮಕ ಬದ್ಧತೆಯನ್ನು ಒದಗಿಸುತ್ತದೆ. ಅಂದರೆ ಸಂಸ್ಕೃತಿಗೆ ಭೌತಿಕ ಪರಿಸರ ಇರುವಂತೆ ಮಾನಸಿಕ ಪರಿಸರ ಕೂಡಾ ಇದ್ದು ಇವೆರಡು ಅಂತರ್ ಸಂಬಂಧ ಉಳ್ಳ ಪೂರಕ ಜಗತ್ತುಗಳು ಆಗಿದೆ. ಸಂಸ್ಕೃತಿಯೊಂದರಲ್ಲಿ ಲಿಂಗಾಧಾರಿತ ಮೌಲ್ಯಗಳು ಆ ಸಂಸ್ಕೃತಿಯಲ್ಲಿ ಮಹಿಳೆಯನ್ನು ಹೇಗೆ ಕಾಣಲಾಗಿದೆ ಹಾಗೂ ಹೆಣ್ಣಿನ ಕುರಿತು ತಳೆದಿರುವ ಧೋರಣೆಯೇನು? ಆಕೆಯ ಸ್ಥಾನಮಾನ ಎಲ್ಲಿ ಎನ್ನುವುದನ್ನು ನಿರ್ದೇಶಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಅದಕ್ಕಾಗಿ ಸಬಲೀಕರಣದ ಪರಿಭಾಷೆಯನ್ನು ಆರ್ಥಿಕ ನೆಲೆಯಿಂದ ಸಾಂಸ್ಕೃತಿಕ ನೆಲೆಗೆ ವಿಸ್ತರಿಸಿ ಅರ್ಥೈಸಿಕೊಳ್ಳಬೇಕಾಗಿದೆ. ಹೆಣ್ಣಿನ ಚರಿತ್ರೆಯನ್ನು ನೆಲದ ಅಗೆತದಲ್ಲಿಯೇ ಶೋಧಿಸಬೇಕು. ಅದಕ್ಕೆ ಎರಡು ನೆಲೆಯಲ್ಲಿ ನಮ್ಮ ಪರಂಪರೆ ಯೊಂದಿಗೆ ಮುಖಾ ಮುಖಿಯಾಗಬೇಕು. ಒಂದು ಪರಂಪರೆಗೆ ಮುಖಾ ಮುಖಿಯಾಗಿ ನಿಂತು ಅಲ್ಲಿನ ಲಿಂಗಭೇಧವನ್ನು ಗುರುತಿಸುವುದು ಮತ್ತು ಪ್ರತಿರೋಧಿಸುವುದು. ಇನ್ನೊಂದು ಪರಂಪರೆಯೊಂದಿಗೆ ಮುಖಾಮುಖಿಯಾಗಿ ನಿಂತು ಅಲ್ಲಿನ ಸ್ತ್ರೀ ಶಕ್ತಿಯನ್ನು ಗುರುತಿಸುವುದು ಮತ್ತು ಸ್ವೀಕರಿಸುವುದು ಅವಶ್ಯ.

ಸಮುದಾಯಗಳ ಗುರುತಿಸುವಿಕೆ ಸ್ವೀಕರಣದೊಂದಿಗೆ ವಿಶ್ಲೇಷಣೆಯೂ, ಇಲ್ಲಿ ಬಹಳ ಮುಖ್ಯ. ಅದಕ್ಕೆ ಆಕರವಾಗಿ ಲಭಿಸುವುದು ಮಾತ್ರ ಮೂಲ ಸಮುದಾಯಗಳಲ್ಲಿನ ಬದುಕಿನ ಗ್ರಹಿಕೆಯ ಒಳನೋಟಗಳು, ಭಾವನಾತ್ಮಕ ಸಂಬಂಧಗಳು, ಸಮತೆಯ ಮೌಲ್ಯಗಳು, ವಿಧಿ ವಿಧಾನಗಳು, ಆಚರಣೆಗಳು ಹೆಣ್ಣಿನ ಬದುಕಿಗೆ ಆತ್ಮಸ್ಥೈರ್ಯವನ್ನು , ಸ್ವಾಭಿಮಾನವನ್ನು ಹೆಚ್ಚಿಸುವುದರೊಂದಿಗೆ ಅವರ ಲೋಕ ದೃಷ್ಟಿಯೂ ಅರ್ಥೈಸುವಂತಹುದು. ಅವು ವಾರ್ಷಿಕ ಆವರ್ತನ ಮತ್ತು ಜೈವಿಕ ಆವರ್ತನದಲ್ಲಿ ಆಚರಣೆಗಳಾಗಿ, ಹಬ್ಬ , ಉತ್ಸವ ಆರಾಧನೆಗಳಾಗಿ ಚಾಲ್ತಿಯಲ್ಲಿವೆ. ಅವೆಲ್ಲವೂ ಹೆಣ್ತನದ ಅಸ್ಮಿತೆಯ ಅನನ್ಯತೆಯನ್ನು ಸಾಬೀತು ಪಡಿಸುವಂತಹ ಅಂಶಗಳೇ ಆಗಿವೆ. ಸಂತಾನ ಮತ್ತು ಪಾಲನೆ ಪೋಷಣೆಯ ಮೂಲ ಆಶಯಗಳನ್ನು ಇರಿಸಿಕೊಂಡು ಇಲ್ಲಿಯ ಆರಾಧನಾ ಪರಂಪರೆ ಇದೆ. ಆರಾಧನೆಗಳು ಆಚರಣೆಗಳು ಭೂಮಿಯ ಫಲವಂತಿಕೆಯೊಂದಿಗೆ , ಹೆಣ್ಣಿನ ಫಲವಂತಿಕೆಯನ್ನು ಬಯಸುತ್ತಾ ಜೀವ ಪರವಾದ ಮೌಲ್ಯಗಳನ್ನೇ ಸಾಬೀತು ಪಡಿಸುತ್ತವೆ.

ಕರಾವಳಿಯ ಕೃಷಿ :– ಕರಾವಳಿಯಲ್ಲಿ ಆದಿಮ ಕುಟುಂಬ ವ್ಯವಸ್ಥೆಯೂ ಇರುವಂತೆ ಕೃಷಿಯ ಆದಿಮ ಹಂತವೂ ಇಲ್ಲಿ ಇದೆ. ಮಾನವ ವಿಕಾಸದ ಹಂತದಲ್ಲಿ ಆಹಾರ ಸಂಗ್ರಹಣೆಗಾಗಿ ಬೇಟೆಯಾಡುತ್ತಿರುವಾಗಲೇ ಪ್ರಾಣಿಗಳ ಚಲನ ವಲನಗಳನ್ನು ಗಮನಿಸಿ ಅದಿಮ ಕೃಷಿಯ ಉದಯವಾಯಿತು. ಹಂದಿ , ಕೋತಿಯಂತಹ ಪ್ರಾಣಿಗಳು ಮನುಷ್ಯನಿಗೆ ಮಾರ್ಗದರ್ಶಕವಾಗಿ ಬಿತ್ತುವ ಮೊಳಕೆಯೊಡೆಯುವ ಬೆಳೆಯುವ ವಿಚಾರಗಳೊಂದಿಗೆ, ಫಸಲು ಪಡೆಯುವ ಸಂಗತಿಗಳಾಗಿಯೂ ಮುಖ್ಯವೆನಿಸಿದವು. ಆದಿಮ ಕೃಷಿಯೊಂದಿಗೆ ಪಶುಪಾಲನೆ ಮತ್ತು ಮುಂದಿನ ಹಂತದ ಪಶುಪಾಲನೆಯಿಂದ ಕೃಷಿ ಈ ಹಂತಗಳು ಇಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಕಾಡನ್ನು ಕಡಿದು ನಾಡನ್ನಾಗಿ ಮಾಡುತ್ತ ಒಂದು ಪ್ರದೇಶದಿಂದ, ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತ ನಡೆಸುವ ಕೃಷಿ ಕಾರ್ಯವನ್ನು ಮಾಡದೆ ಕೇವಲ ಬೇಟೆಯಾಡಿ , ಕೃಷಿಗೆ ಪೂರಕವಾದ ಆಯಗಾರಿಕೆಯ ಉದ್ಯೋಗಗಳನ್ನು ಮಾಡುವ ಸಮುದಾಯಗಳು ಇಂದಿಗೂ ತುಂಡು ಭೂಮಿಯ ಒಡೆಯರಾಗಿಲ್ಲ. ಕೃಷಿ ಕೂಲಿ ಕಾರ್ಮಿಕರಾಗಿ ಜೀತದಾಳುಗಳಾಗಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಮತ್ತೊಂದು ಸಮುದಾಯ ಕೇವಲ ಪಶುಪಾಲನೆ ನಡೆಸುತ್ತಿದ್ದರೆ, ಪಶುಪಾಲನೆ ಮತ್ತು ಪಶುವಿನ ನೆರವಿನೊಂದಿಗೆ ನಡೆಸುವ ಕೃಷಿಯೂ ಇದೆ. ಕೃಷಿ ಜಗತ್ತು ಅನ್ವೇಷಣೆಗೊಂಡು ವಿಸ್ತರಣೆಗೊಂಡ ವಿವಿಧ ಹಂತಗಳಿಗೆ ಸಾಕ್ಷಿ ಪ್ರಜ್ಞೆಯಾಗಿದೆ ಕರಾವಳಿಯ ಕೃಷಿಯ ಬದುಕು. ದಿನವೊಂದಕ್ಕೆ ಒಂದು ಕೋರ್ಜಿಯ ಗಂಜಿ ಬೇಯಿಸುತ್ತಿದ್ದ ಕುಟುಂಬಗಳು ಅವಿಭಕ್ತ ಕೂಡು ಕುಟುಂಬಗಳಾಗಿ ಕರಾವಳಿಯಲ್ಲಿದ್ದವು. (ಒಂದು ಕೋರ್ಜಿಯೆಂದರೆ 42 ಮುಡಿ ಅಕ್ಕಿ) ಅಷ್ಟು ಜನ ಕುಟುಂಬ ಸದಸ್ಯರನ್ನು ಹೊಂದಿದ್ದ ಅವಿಭಕ್ತ ಕುಟುಂಬಗಳು ಇಂದು ವಿಭಕ್ತವಾಗಿದೆ. ಮನೆಯೊಂದರಲ್ಲಿ ಒಂದು ಸೇರಿನ ಗಂಜಿ ಬೇಯಿಸುವುದೇ ಬಹಳ ದೊಡ್ಡ ವಿಚಾರ ಎಂಬ ಕಾಲಘಟ್ಟದಲ್ಲಿ ಕೂಡಿ ಬಾಳುವ ಕೂಡು ಕಟ್ಟಿನ ಸಾಮುದಾಯಿಕ ಬದುಕು ನಾಶವಾಗುತ್ತ ಬಂದಿದೆ. ಕುಟುಂಬ ಸ್ವರೂಪಗಳು ಬದಲಾದಂತೆ ಕೃಷಿಯ ಸ್ವರೂಪಗಳೂ ಬದಲಾದವು. ಮೂರು ಬೆಳೆಯ ಗದ್ದೆಗಳು ಮಧ್ಯದಲ್ಲಿ ಅಮರೆ ಹಾಕಿ ವಿಭಾಗ ಮಾಡಿಕೊಂಡು ಕೃಷಿ ಭೂಮಿಯನ್ನು ಹರಿದು ಹಂಚಿಕೊಂಡದ್ದು ಇದೆ. ಮೊದಲು ಎಣೆಲು , ಸುಗ್ಗಿ, ಕೊಳಕೆಯ ಬೆಳೆಯಲ್ಲಿ ಎಣೆಲು ಮಾತ್ರ ಬೆಳೆದರೆ, ಎರಡನೆಯ ಹಂತಕ್ಕೆ ಗದ್ದೆಗಳು ಶ್ರಮ ಕಡಿಮೆ

ಮಾಡಿ ದುಡ್ಡು ಸಂಪಾದನೆ ಹೆಚ್ಚಿಸುವುದಕ್ಕಾಗಿ ತೋಟಗಳಾದವು. ತೋಟಗಳೂ ಲಾಭದಾಯಕವಲ್ಲವೆಂದಾದಾಗ ಹೊಲ-ಗದ್ದೆ-ತೋಟಗಳಿಗೆಲ್ಲ ಮಣ್ಣು ತುಂಬಿ ಸೈಟುಗಳಾದವು. ಕುಟುಂಬಗಳೂ ವಿಘಟನೆಗೊಂಡು ಚಿಕ್ಕ ಚಿಕ್ಕ ಕುಟುಂಬಗಳಾಗಿ ವಿಸ್ತಾರದ ಮನೆಗಳೆಲ್ಲ ಹರಿದು ಹಂಚಿ ಹೋದವು. ಸಣ್ಣ ಹಿಡುವಳಿದಾರರಾಗಿ ಮಾರ್ಪಟ್ಟ ಈ ಕುಟುಂಬಗಳಿಂದ ಕೃಷಿ ಶ್ರಮದ ದುಡಿಮೆ ಅಸಾಧ್ಯವಾದಾಗ ಹೊರನಾಡಿಗೆ, ಬೇರೆ ದುಡಿಮೆಗೆ, ಕಸುಬಿಗೆ ತೆರೆದುಕೊಳ್ಳುವಂತಾಯಿತು. ಆಹಾರದ ಮೂಲವಾಗಿದ್ದ ಸಾಗುವಳಿ ಯಾವಾಗ ದುಡ್ಡಿನ ಮೂಲವಾಯಿತೋ ಮನುಷ್ಯ ಸಂಬಂಧಗಳಲ್ಲೂ ಕೃತಕತೆ ಹುಟ್ಟಿತು.

ಜೀವನದ ಅನುಭವಗಳಿಗೆ ಮಾನ್ಯತೆ ಇಲ್ಲವಾಗಿ ಗಾಂಧಿ ಚಿತ್ರದ ಹಸಿರು ನೋಟುಗಳೇ ಮುಖ್ಯವಾದವು. ಬಹಳ ಸುಲಭವಾಗಿ ಸಂಪಾದಿಸುವ ರಿಯಲ್ ಎಸ್ಟೇಟ್ ದಂಧೆಕೋರರಾಗಿ ಕೃಷಿ ಕುಟುಂಬದ ಯುವಕರು ಪರಿವರ್ತನೆ ಹೊಂದಿದರು. ಇಂದು ಸಮುದಾಯದಲ್ಲಿ ಭೂಮಿಯ ಬಗೆಗಿರುವ ಪೂಜ್ಯ ಭಾವನೆಗಳು ಮಾಯವಾಗಿ ದುಡ್ಡು ತರುವ ಸರಕಾಗಿದೆ. ಯುವ ಪೀಳಿಗೆಯ ಯುವಕರು ಶ್ರಮವಿಲ್ಲದೆ, ದುಡಿಯುವ ಹಂತ ಮತ್ತು ಆದಾಯ ಗಳಿಕೆಯ ಹಂತವೇ ಮುಖ್ಯವೆನಿಸಿತು. ಸಹಜವಾಗಿ ಕೆಳಹಂತದ ಕೂಲಿಯಾಳುಗಳಾಗಿಯೂ ಪರಿವರ್ತನೆ ಹೊಂದಿದ ಕುಟುಂಬ ವ್ಯವಸ್ಥೆ ಬದಲಾದಂತೆ ಕೃಷಿಯಲ್ಲೂ ಸ್ಥಿತ್ಯಂತರಗಳಾದವು.

ಇಂದಿಗೂ ಕರಾವಳಿಯಲ್ಲಿ ಆದಿಮ ಕುಟುಂಬ ವ್ಯವಸ್ಥೆಯನ್ನು ಹೊಂದಿರುವ ಸಮುದಾಯಗಳು ಆರ್ಥಿಕವಾಗಿ ಭದ್ರವಾಗಿಲ್ಲ. ಆರ್ಥಿಕತೆ ಎನ್ನುವುದು ಭೂಮಿಯ ಒಡೆತನ ಮತ್ತು ಸಂಪತ್ತಿನ ಒಡೆತನವೂ ಆಗಿತ್ತು. ಕೆಲವು ಸಮುದಾಯಗಳು ಬೇಟೆ ಪಶುಪಾಲನೆಯಲ್ಲೇ ಉಳಿದು ದಲಿತರಾಗಿಯೇ ಉಳಿದುಕೊಂಡಿದ್ದಾರೆ. ಕೃಷಿ ಕೂಲಿ ಕಾರ್ಮಿಕರಾಗಿರುವವರೂ ಶ್ರೀಮಂತರಾಗಲಿಲ್ಲ. ಕೃಷಿಗೆ ಪೂರಕವಾದ ಆಯಗಾರಿಕೆಯ ವೃತ್ತಿ ಮಾಡಿಕೊಂಡಿದ್ದವರು ಅದೇ ದುಡಿಮೆಯಲ್ಲಿದ್ದಾಗಲೂ ಆರ್ಥಿಕ ಸಬಲತೆ ಲಭಿಸಿರಲಿಲ್ಲ. ಅನ್ನದ ಮೂಲವಾಗಿದ್ದ ದುಡಿಮೆ ದುಡ್ಡಿನ ಮೂಲವೂ ಆಗಿರಲಿಲ್ಲ. ಆಯಗಾರಿಕೆಯ ವೃತ್ತಿಗಳು ಸಮುದಾಯದಿಂದ ಪಲ್ಲಟಗೊಂಡು ಅವರ ಜ್ಞಾನ ಶಿಸ್ತುಗಳೂ ನಾಶವಾಗುತ್ತ ಬಂದವು. ಮತ್ತು ಎಲ್ಲ ಕಲಾಗಾರಿಕೆಗೂ ಪರ್ಯಾಯಗಳನ್ನು ಹುಡುಕುವ ಕೆಲಸಗಳೂ ನಡೆದವು. ಈ ಸ್ಥಿತ್ಯಂತರಕ್ಕೆ ಪ್ರಮುಖ ಕಾರಣವೂ ಇದೆ. ವಸಾಹತೀಕರಣ ಅಧುನಿಕತೆ ಚಾರಿತ್ರಿಕವಾದ ಕಾರಣಗಳಾದರೆ ಸಾಮಾಜಿಕವಾಗಿ ಕುಟುಂಬಗಳು ವಿಘಟನೆಗೊಂಡಿದ್ದು ಅಲ್ಲದೆ ಮಾತೃ ಮೂಲೀಯ ಕುಟುಂಬ ವ್ಯವಸ್ಥೆಯು ಆಧುನಿಕ ಸಮಾಜ ವ್ಯವಸ್ಥೆಯ ಭಾಗವಾಗಿ ಸ್ಥಿತ್ಯಂತರಗೊಳ್ಳುತ್ತ ಬಂತು.

ಹೆಣ್ಣು ಪ್ರಾಕೃತಿಕ ಶಕ್ತಿಯ ತತ್ವದಿಂದ ಪ್ರಾಕೃತಿಕ ಮುಂದಾಳತ್ವವನ್ನು ಹೊಂದಿ ಆರಾಧನೆ ಆಚರಣೆಯ ಮುಂದಾಳುವಾಗಿದ್ದರೆ, ನಿಧಾನವಾಗಿ ಆಕೆಯನ್ನು ಕುಟುಂಬದ ಗುರುತಿಸುವಿಕೆಯಲ್ಲಿ ಸ್ಥಾನ ಕೊಟ್ಟರೂ ಅಧಿಕಾರದಲ್ಲಿ ಹಿಂದಕ್ಕೆ ಸರಿಸಲಾಯಿತು. ಗಂಡನ್ನು 'ತಮೆರಿ' ಯಾಗಿ ಪ್ರತೀಕ ಮುಂದಾಳತ್ವವಾಗಿ ಇರಿಸಿಕೊಂಡು, ಹೆಣ್ಣನ್ನು ಗಂಡಿನ ಬೆಂಗಡೆಗೆ ನಿಲ್ಲಿಸಲಾಯಿತು. ಪರಿಣಾಮ ಪಶುಪಾಲನೆಯೊಂದಿಗೆ ಮುಂದುವರಿದ ಕೃಷಿ ಸಂಸ್ಕೃತಿಯಲ್ಲಿ ಗಂಡಿನ ಪ್ರಾತಿನಿಧ್ಯವನ್ನು ಹೊಂದಿ ಅಧಿಕಾರದ ಮುಂದಿನ ಕವಲುಗಳಾಗಿ ಕಂಬಳ ಕೋಳಿ ಅಂಕದ ಅಚರಣೆಗಳು ಚಾಲ್ತಿಗೆ ಬಂದವು. ಹೆಣ್ಣಿಗೆ ಅಲ್ಲಿ ಭಾಗವಹಿಸದಿರುವ ವಿಧಿ ನಿಷೇಧಗಳೂ

ಹುಟ್ಟಿಕೊಂಡವು. ಕುಟುಂಬ ವ್ಯವಸ್ಥೆಯಲ್ಲಿ ಇಲ್ಲದ ಅಧಿಕಾರಗಳನ್ನು ಪುರುಷರ ಸಾಮಾಜಿಕ ವ್ಯವಸ್ಥೆಯ ಆಚರಣೆಯ ವಿಧಿಗಳಲ್ಲಿ ಇರಿಸಲಾಯಿತು. ಕೃಷಿ ಕೆಲಸ ಕಾರ್ಯಗಳಿಗೆ ಲಭಿಸದ ವಿಧಿ ನಿಷೇಧಗಳು ಕಂಬಳ ಕೋಳಿ ಅಂಕ ನೋಡಬಾರದು , ಭಾಗವಹಿಸಬಾರದು ಎಂಬ ನಂಬಿಕೆಗಳಾಗಿ ಪರಿವರ್ತನೆ ಹೊಂದಿದವು. ಭೂಮಿಯ ಒಡೆತನದ ಪ್ರಭುತ್ವವನ್ನು ಸಾರುವುದಕ್ಕಾಗಿ ಕಂಬಳಗಳು ನಡೆದರೂ ಗುತ್ತಿನ, ಯಜಮಾನ್ತಿಯ ಹೆಣ್ಣಿನ ಹೆಸರಲ್ಲಿ ನಡೆದರೂ ಅದರಲ್ಲಿ ಅವಳು ಪಾಲುದಾರಳು ಅಲ್ಲ. ಇದು ಕೂಡು ಕಳೆಯ ವ್ಯವಸ್ಥೆಯಲ್ಲ. ಸರಳವಾಗಿ ನಿರೂಪಿಸುವುದಕ್ಕಿಂತಲೂ ಸಂಕೀರ್ಣವಾದ ವ್ಯವಸ್ಥೆಯಾಗಿದೆ. ಭೂಮಿ ಅಧಿಕಾರದ ಸಂಪತ್ತಿನ ಭಾಗವಾಗ ಭೂಮಿಯ ಒಡೆತನದ, ಕುಟುಂಬದ ಒಡೆತನಕ್ಕಿಂತ ಮುಖ್ಯವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ತನ್ನತನವನ್ನು ಗುರುತಿಸುವುದೂ ಅನಿವಾರ್ಯವಾಗಿತ್ತು. ಈ ಎಲ್ಲ ಸ್ಥಿತ್ಯಂತರಗಳು ಎಲ್ಲ ಒಂದಾದ ನಂತರ ಇನ್ನೊಂದು ಘಟಿಸಿದವು ಎನ್ನಲಾಗದು. ಹೀಗೆ ವ್ಯವಸ್ಥೆಯಲ್ಲಿ ಬದಲಾವಣೆಯಾದುದರಿಂದ ಕುಟುಂಬಗಳ, ಸಮುದಾಯದ ಆರ್ಥಿಕತೆ, ಅಧಿಕಾರ, ಕುಲಕಸುಬು, ಭೂಮಿಯ ಒಡೆತನ ಸಂಪತ್ತು ಬದಲಾಯಿತು ಎಂದು ಸರಳ ಸೂತ್ರದಲ್ಲಿ ಹೇಳಲಾಗದು. ಸಂಕೀರ್ಣ ಸಾಮಾಜಿಕ ವ್ಯವಸ್ಥೆಯೊಳಗೆ ಸ್ಥಿತ್ಯಂತರಗಳು ನಿಧಾನವಾಗಿ ಬದಲಾಗುತ್ತ ಹೋದವು.

ಕೃಷಿ ಜಗತ್ತು ನಿಧಾನವಾಗಿ ಪುರುಷಾಧೀನತೆಗೆ ಸಂದಂತೆ ಕೃಷಿ ಸಂಸ್ಕೃತಿಯಲ್ಲಿ ವ್ಯತ್ಯಯಗಳಾದಂತೆ ಕುಟುಂಬ ವ್ಯವಸ್ಥೆಯಲ್ಲೂ ವ್ಯತ್ಯಯಗಳಾದವು. ಹೆಣ್ಣಿನ ಕೃಷಿ ಸಂಸ್ಕ್ರತಿಯ ಶೋಧದ ನಡಿಗೆಯಲ್ಲಿ ಖಾಸಗಿತನ ಪರಿಕಲ್ಪನೆಯು ಹೆಣ್ಣು ಮತ್ತು ಅವಳ ಮಕ್ಕಳು ಮಾನವ ಸಂಪನ್ಮೂಲವಾಗಿ ಪರಿವರ್ತಿತವಾದರೂ ಅವೆಲ್ಲವೂ ಪುರುಷನ ಸೊತ್ತುಗಳಾದವು. ಆಳುವ ಮತ್ತು ಕಾಯುವ ಅಧಿಕಾರದ ಸ್ಥಿತ್ಯಂತರಗಳೇ ಪ್ರಮುಖವೆನಿಸಿ ಸಾಂಸ್ಕ್ರತಿಕ ವಿಕಲ್ಪಗಳಾಗಿ ಸ್ಮೃತಿಗಳೆಲ್ಲವೂ ವಿಸ್ಮೃತಿಗಳಾದದ್ದು ಕರಾವಳಿಯ ಕೃಷಿ ಸಂಸ್ಕ್ರತಿಯ ವೈರುಧ್ಯವೂ ಹೌದು. ವಾಸ್ತವಿಕತೆಯೂ ಹೌದು. ಕೃಷಿಯ ಪ್ರತಿಫಲನದ ಪಡಿಯಚ್ಚಾಗಿ ಕುಟುಂಬವೂ, ಕುಟುಂಬದ ಕನ್ನಡಿಯ ಪ್ರತಿಬಿಂಬವಾಗಿ ಕೃಷಿಯೂ ದಾಖಲೀಕರಣಗೊಂಡಿದೆ.

ಅಧ್ಯಾಯ 10

ಕರಾವಳಿಯ ಕೃಷಿ ಬದುಕಿನ ಅನನ್ಯತೆ

ಜಗತ್ತಿನ ಕೃಷಿ ಪ್ರಪಂಚದೊಂದಿಗೆ ಕರಾವಳಿಯ ಕೃಷಿ ಬದುಕನ್ನು ಸಮೀಕರಿಸಿದಾಗ ಕರಾವಳಿಯ ಕೃಷಿ ಬದುಕಿನ ಅನನ್ಯತೆಯನ್ನು ಗುರುತಿಸಬಹುದು. ಇಲ್ಲಿಯ ಭೌಗೋಳೀಕತೆ, ಎತ್ತರವಾದ ಬೆಟ್ಟ, ಗುಡ್ಡ, ಕಾಡು ,ಕಾನು, ಒಳ ಹರಿವಿನ ನದಿಗಳು, ವಿಸ್ತಾರವಾದ ಉಪ್ಪು ನೀರಿನ ಕಡಲು ಎಲ್ಲವೂ ಬೆಳೆಯಬೇಕಾದ ಫಸಲಿನ ಮೇಲೆ ಪರಿಣಾಮ ಬೀರುತ್ತಿತ್ತು. ಅದರೊಂದಿಗೆ ಅತ್ಯಂತ ರಭಸವಾಗಿ ಬೀಳುವ ಮಳೆಯಿಂದ ತುಂಬಿ ಹರಿಯುವ ನದಿ ಪಾತ್ರಗಳು, ಉಕ್ಕುವ ಕಡಲು, ಹವಾಮಾನ, ಮಣ್ಣು, ಎಲ್ಲವೂ ಕೃಷಿ ಜಗತ್ತಿನ ನಿರ್ಮಿತಿಯಲ್ಲಿ ಅನನ್ಯತೆಯನ್ನು ಹೊಂದಿದೆ.

ಉಪ್ಪು ನೀರು ಸಿಹಿ ನೀರಿಗೆ ಬೆರೆತರೆ ಯಾವ ಬೆಳೆಯ ಫಸಲನ್ನು ಪಡೆಯಲಾಗದ ರೈತರು, ಉಪ್ಪು ನೀರಿಗೆ ಕಟ್ಟಗಳನ್ನು ಕಟ್ಟಿ, ಉಪ್ಪು ನೀರು ಗದ್ದೆಗೆ ಇಳಿಯದಂತೆ ನೋಡಿಕೊಳ್ಳುತ್ತಾರೆ. ಮಣ್ಣಿನ ಸಾರವನ್ನು ಹೆಚ್ಚಿಸಲು ನದಿ ಬದಿಯ ನೀರಿನ, ಕಜನೆ, ಕಜೆಯಂತಹ ಕಳೆಗಳನ್ನೇ ಗೊಬ್ಬರವನ್ನಾಗಿ ಬಳಸಿ ಒಳ್ಳೆಯ ಫಸಲು ಪಡೆಯುತ್ತಾರೆ. ನದಿಯ ಸಿಹಿ ನೀರು ಸಮುದ್ರವನ್ನು ಸೇರುವ ಅಳಿವೆ ಬಾಗಿಲುಗಳಲ್ಲಿ ಭೂಮಿ ತನ್ನ ದಡವನ್ನು ಕಾಯುವಂತೆ ಕಾಂಡ್ಯದ ಸಸ್ಯಗಳನ್ನು ನೆಡುತ್ತಾರೆ. ಪ್ರಾಕೃತಿಕ ಸಹಜ ಕೃಷಿಗೆ ಒತ್ತು ಕೊಟ್ಟು ಬೆಳೆಯುವ ಬೆಳೆಗಳ ವೈವಿಧ್ಯವನ್ನು ನಾವು ಈಗಾಗಲೇ ಗಮನಿಸಿದ್ದೇವೆ.

ಅತಿಯಾದ ಮಳೆ, ಅತಿಯಾದ ಬಿಸಿಲು, ಹದವಾದ ಕಡಲ ಮೇಲಿಂದ ಬೀಸುವ ತೇವಾಂಶದ ಗಾಳಿ, ಹಿತವಾದ ಚಳಿಯ ವಾತಾವರಣದ ಭೌಗೋಳಿಕತೆಯನ್ನೇ ಬಂಡವಾಳವಾಗಿಸಿಕೊಂಡು ಬೆಳೆಯುವ ಬೆಳೆಗಳು ವೈಶಿಷ್ಟ್ಯಪೂರ್ಣವಾಗಿವೆ. ವಾರ್ಷಿಕ ಆವರ್ತನದಲ್ಲಿ ಮೂರು ಮುಖ್ಯ ಬೆಳೆಗಳಾದ ಎಣೆಲು, ಸುಗ್ಗಿ, ಕೊಳಕೆಯ ಭತ್ತದ ಬೆಳೆಯನ್ನು ಬೆಳೆದು ಪಡೆಯುವ ಫಸಲೇ ಕರಾವಳಿ ಕೃಷಿ ಬದುಕಿನ ಅನನ್ಯತೆ, ಕರ್ನಾಟಕದ ಉಳಿದ ಎಲ್ಲಾ ಪ್ರದೇಶಗಳಲ್ಲೂ ಎರಡು ಮುಖ್ಯ ಬೆಳೆಗಳನ್ನು ಬೆಳೆದರೆ ಇಲ್ಲಿ ಮೂರು ಮುಖ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಸುಗ್ಗಿ ಮತ್ತು ಕೊಳಕೆಯ ಗದ್ದೆಗಳಲ್ಲಿ ಭತ್ತದೊಂದಿಗೆ ದಾನ್ಯ, ತರಕಾರಿಗಳನ್ನು ಬೆಳೆಯುತ್ತಾರೆ. ಬೆಳೆಗಳ ವೈವಿಧ್ಯತೆ, ಮಣ್ಣಿನ ಸಾರಗುಣಗಳೊಂದಿಗೆ ಪರ್ಯಾಯ ಬೆಳೆ, ಮಿಶ್ರ ಬೆಳೆಗಳೂ, ಬಳಕೆಯಲ್ಲಿವೆ. ನದಿ ಬದಿಯ ಗದ್ದೆಗಳು, ಗುಡ್ಡದ ಬದಿಯ ಗದ್ದೆಗಳು, ಬೈಲು ಗದ್ದೆಗಳು ಹೀಗೆ ಪ್ರತಿಯೊಂದು ಭೂ ಹಿಡುವಳಿಯ ಪ್ರದೇಶಗಳನ್ನು ಬೆಳೆ ಬೆಳೆಯಲು ಯೋಗ್ಯವನ್ನಾಗಿಸುತ್ತ ಫಸಲನ್ನು ಪಡೆದದ್ದು ಮಾತ್ರವಲ್ಲ ಇಳುವರಿಯನ್ನು ಹೆಚ್ಚಿಸಿಕೊಂಡಿದ್ದರಲ್ಲೂ ಜಾಣ್ಮೆ ಇದೆ.

ಕೃಷಿಯ ಸ್ವರೂಪದಲ್ಲೂ ಕೃಷಿಗೆ ಉಳುಮೆಗೆ ಪ್ರಾಣಿಗಳಾಗಿ ಕೋಣಗಳನ್ನು ಬಳಸಿಕೊಂಡು ನಡೆಸುವ ಉಳುಮೆ, ಬಿತ್ತನೆ, ನಾಟಿ ಬೆಳೆಯ ನಿರ್ವಹಣೆ ಕಟಾವು, ಒಕ್ಕಣೆ, ಸಂಸ್ಕರಣೆ , ಸಂಗ್ರಹಣೆಯಲ್ಲೂ ವೈಶಿಷ್ಟ್ಯದ ಅಂಶಗಳಿದ್ದು ವಿಭಿನ್ನತೆಯನ್ನು ಕಾಪಾಡಿಕೊಳ್ಳುವಲ್ಲಿ ಸಫಲವಾಗಿದೆ. ಇಲ್ಲಿಯ ಹವಾಮಾನಕ್ಕೆ ಅನುಗುಣವಾಗಿ ಬಳಸಿದ ತಳಿಗಳು ಮತ್ತು ಆಹಾರವಾಗಿ ಬಳಸುವಾಗ ತಯಾರಿಸುವ ಕುಚ್ಚಲಕ್ಕಿಯೂ ಕರಾವಳಿಯ ಜೀವನ ಕ್ರಮಕ್ಕೊಂದು ಅನನ್ಯತೆಯನ್ನು ಒದಗಿಸಿಕೊಟ್ಟಿದೆ. ತನ್ನ ಆಹಾರ ಸಂಸ್ಕೃತಿಯ ವೈಶಿಷ್ಟ್ಯದೊಂದಿಗೆ ಕೃಷಿಯ ಅನನ್ಯತೆಯನ್ನು ಕಾಯ್ದುಕೊಂಡು ಇಡಿಯಾದ ಕೃಷಿಕರ ಬದುಕಿನ ಅಖಂಡತೆಯೇ ಸಾಂಸ್ಕೃತಿಕವಾಗಿ ತನ್ನ ಅಸ್ಮಿತೆಯ ಪಡಿಯಚ್ಚುಗಳನ್ನು ಮೂಡಿಸುವಂತಾಗಿದೆ.

1. ಅಧ್ಯಯನದ ಫಲಿತಗಳು

1. ಕರಾವಳಿಯ ಭೌಗೋಳಿಕತೆಯ ವೈಶಿಷ್ಟ್ಯವೇ ಕೃಷಿಯ ಅನನ್ಯತೆಗೆ ಕಾರಣವೆಂಬ ಸರಳ ಸತ್ಯ ಕೃಷಿಯ ಅನನ್ಯತೆಯಾಗಿ ತಿಳಿಯುತ್ತದೆ.
2. ಸಾಮುದಾಯಿಕ ಕೃಷಿಯ ಮೂಲಕ ಶ್ರಮದ ವಿಭಜನೆ ಮತ್ತು ಸಂಪತ್ತಿನ ಹಂಚಿಕೆಯ ತಾತ್ವಿಕತೆಯು ಸ್ಪಷ್ಟವಾಗಿರುವುದು.
3. ಸಂಸ್ಕೃತಿಯ ಮೂಲದ ತಾತ್ವಿಕತೆ ಕೃಷಿ ಬದುಕಿನ ಅನನ್ಯತೆಯ ಮೂಲಕ ತಿಳಿಯಲು ಸಾಧ್ಯವಾಗಿದೆ.
4. ವಿಕಾಸದ ಹಂತದಲ್ಲಿರುವ ಮಾನವ ಬದುಕಿನಲ್ಲಿ ಆದಿಮ ಜಗತ್ತಿನ ಮೂಲ ಸೆಲೆಗಳನ್ನು ಕೃಷಿ ಬದುಕಿನಲ್ಲಿ ಕಾಣಲು ಸಾಧ್ಯವಾಗಿದೆ.
5. ಮಾತೃ ಮೂಲ ಸಂಸ್ಕ್ರತಿಯ ಬೇರುಗಳನ್ನು ಕೃಷಿ ಸಂಸ್ಕೃತಿಯ ಆದಿಮ ಹಂತದಲ್ಲಿ ಗುರುತಿಸಲು ಸಾಧ್ಯವಾಗಿದೆ.
6. ಕೃಷಿ ಸಂಸ್ಕೃತಿಗೂ ಮಾತೃ ಮೂಲೀಯ ಕುಟುಂಬ ವ್ಯವಸ್ಥೆಗೂ ಪರಸ್ಪರ ಸಂಬಂಧ ಸ್ಪಷ್ಟವಾಗಿ ಗೋಚರವಾಗುತ್ತದೆ.
7. ಕೃಷಿ ಬದುಕಿಗೂ ಜನರು ಕಟ್ಟಿಕೊಂಡು ಬಂದಿರುವ ಜೀವನಕ್ರಮದ ವಿಶೇಷತೆಗೂ ಪರಸ್ಪರ ಸಂಬಂಧವಿದೆ.
8. ಜನರ ಲೋಕ ದೃಷ್ಟಿಯ ತಾತ್ವಿಕತೆ ಮತ್ತು ಗ್ರಹಿಕೆಗಳು ಕೃಷಿ ಸಂಸ್ಕೃತಿಯ ಅಧ್ಯಯನದಿಂದ ಅನಾವರಣಗೊಳ್ಳುತ್ತದೆ. ನೆಲಮೂಲ ಮತ್ತು ತಳ ಮೂಲದ ಮೌಲ್ಯಗಳು ಕೃಷಿ ಜಗತ್ತಿನಲ್ಲಿ ಪ್ರಮುಖ ಅಂಶವಾಗಿ ಗೋಚರಿಸುತ್ತದೆ.
9. ಕೃಷಿ ಸಂಸ್ಕೃತಿಗೂ ಸ್ತ್ರೀ ಮೂಲಕ್ಕೂ ಪರಸ್ಪರ ಸಂಬಂಧವಿದೆ. ಪ್ರಕೃತಿ ಸಂಸ್ಕ್ರತಿ ಮತ್ತು ಸ್ತ್ರೀ ಎಂಬ ಮೂರು ನಿಷ್ಪನ್ನಗಳು, ಪೂರಕ ಮತ್ತು ಪ್ರೇರಕವಾದವು.
10. ಜೀವ ಪರವಾದ ಮೌಲ್ಯಗಳು ಕೃಷಿ ಸಂಸ್ಕೃತಿ ಮತ್ತು ಮಾತೃ ಮೂಲೀಯ ಸಮುದಾಯದಲ್ಲಿವೆ. ಇದನ್ನು ಉಳಿಸಿ ಬೆಳೆಸಬೇಕಾದ ತುರ್ತು ಇದೆ.

ಆಕರ ಗ್ರಂಥಗಳು

1. ವಿವೇಕ ರೈ.ಬಿ.ಎ : 1984
ತುಳು ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

2. ಬಾಬು ಅಮೀನ ಬನ್ನಂಜೆ : 1994
ತುಳು ಜನಪದ ಆಚರಣೆಗಳು ಗುರುಭಾರತಿ ಅಧ್ಯಯನ ಕೇಂದ್ರ ಮಾತೃನಿಲಯ ದ.ಕ 576216

3. ಸುಮಿತ್ರ ಬಾಯಿ ಬಿ.ಎನ್ : 1997
ಸ್ತ್ರೀವಾದ –ಕರ್ನಾಟಕ ಸಾಹಿತ್ಯ ಅಕಾಡೆಮಿ ಮಂಗಳೂರು

4. ಪುರುಷೋತ್ತಮ ಬಿಳಿಮಲೆ : 1997
'ಕೂಡುಕಟ್ಟು' ಆನಂದ ಕಂದ ಗ್ರಂಥಮಾಲೆ ಮಲ್ಲಡಿ ಹಳ್ಳಿ

5. ದೇವಿಪ್ರಸಾದ ಚಟ್ಟೋಪಾಧ್ಯಾಯ : 1997
ಮಾತೆಯರು ಮಾನ್ಯರಾಗಿದ್ದಾಗ. ಅನುವಾದ : ಕುಮಾರಪ್ಪ ಜಿ. ನವಕರ್ನಾಟಕ ಪ್ರಕಾಶನ ಬೆಂಗಳೂರು.

6. ಬಾಲಗೋಪಾಲ್. ಕೆ. 1998
ಪ್ರಾಚೀನ ಭಾರತದ ಚರಿತ್ರೆ : ಡಿ.ಡಿ ಕೋಸಂಬಿಯವರ ಚಿಂತನೆಗಳು: ಅನುವಾದ : ಶ್ರೀಮತಿ ಎಚ್.ಎಸ್. ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಬೆಂಗಳೂರು

7. ಜ್ಯೋತ್ಸ್ನಾ ಕಾಮತ್ : 1999
ಮಹಿಳೆ ಒಂದು ಅಧ್ಯಯನ, ನವ ಕರ್ನಾಟಕ ಪ್ರಕಾಶನ ಬೆಂಗಳೂರು.

8. ಬೋರಲಿಂಗಯ್ಯ ಹಿ.ಚಿ. : 2000
ಬುಡಕಟ್ಟು ದೈವಾರಾಧನೆ ಪ್ರಸಾರಾಂಗ ಕನ್ನಡ ವಿ.ವಿ ಹಂಪಿ

9. ಸಂಧ್ಯಾ ರೆಡ್ಡಿ ಕೆ.ಆರ್ : 2003
ಮಹಿಳಾ ಜಾನಪದ – ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಭವನ , ಜೆ.ಸಿ ರಸ್ತೆ ಬೆಂಗಳೂರು –2

10. ಗಣೇಶ್ ಅಮೀನ ಸಂಕಮಾರ್ –2006
ನುಡಿ ಸಿಂಗಾರ –ಸಿರಿ ಪ್ರಕಾಶನ ಪಾವಂಜೆ ಹಳೆಯಂಗಡಿ, ಮಂಗಳೂರು –574146

11. ರಾಜಶ್ರೀ : 2008
ತುಳು ಜನಪದ ಕಾವ್ಯ ಇಹಪರ ಲೋಕದೃಷ್ಟಿ – ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ– ಮಂಗಳೂರು ವಿ.ವಿ

12. ಗುಣಪಾಲ ಶೆಟ್ಟಿ 2012–13
ಅಪ್ಪೆ , ಮಾತೃ ಮೂಲೀಯ ಪದ್ಧತಿ ಒಂದು ವಿಶ್ಲೇಷಣೆ, ಸಮಗ್ರ ಗ್ರಾಮೀಣ ಆಶ್ರಮ ಉಡುಪಿ.

13. ಜ್ಯೋತಿ ಚೇಳ್ಯಾರು – 2014
ಕೆಸರು ತುಳಿದು ಹಸಿರು ಬೆಳೆದ ಗುಲಾಬಿಯಕ್ಕ –2014 ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ ಉಡುಪಿ

14. ಬಾಬು ಶಿವ ಪೂಜಾರಿ : 2015
ಅನುಸಂಧಾನ– ಬಿಲ್ಲವ ಜಾಗೃತಿ ಬಳಗ ಮುಂಬೈ –400001.

ಕಳೆ ಗಿಡವಾದ ಕಜೆ – ಗೊಬ್ಬರವಾಗಿ
ಪಶು ಆಹಾರವಾಗಿ ಬಳಕೆ

ಭತ್ತದ ಗದ್ದೆಯಲ್ಲಿ ಕಳೆ ನಿರ್ವಹಣೆ

ಭತ್ತದ ಪೈರನ್ನು ಹೊತ್ತು ಸಾಗಿಸುವುದು

ಅಕ್ಕಿ / ಭತ್ತ / ಧಾನ್ಯ ಸಂಗ್ರಹಣೆಯ
ಮುಡಿ/ಕುರುಂಟು – ಬೈಹುಲ್ಲು

ಭತ್ತದ ಪೈರನ್ನು ಹೊತ್ತು ಸಾಗಿಸುವುದು

ಭತ್ತದ ಪೈರನ್ನು 'ಮದ್ಮಲ್' ಮಡಚುವುದು



ಕುರ್ಕಿಲ್ – ತರಗೆಲೆ ತುಂಬಿಸುವ ತೆಂಗಿನ
ಸೋಗೆಯಿಂದ ರಚಿಸಿದ ಸಾಧನ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳು ಭವನ, ಉರ್ವಸ್ಟೋರ್, ಮಂಗಳೂರು - 6

ಅಧ್ಯಕ್ಷೆರ್

ಎಮ್. ಜಾನಕಿ ಬ್ರಹ್ಮಾವರ

ರಿಜಿಸ್ಟ್ರಾರ್

ಚಂದ್ರಹಾಸ ರೈ. ಬಿ.

ಅರ್ಥಸದಸ್ಯೆರ್

ಡಿ. ಎಮ್. ರವಿ ಕುಮಾರ್

ಅಕಾಡೆಮಿದ ಸದಸ್ಯೆರ್

ಪ್ರೊ. ಡಿ. ವೇದಾವತಿ
ಶ್ರೀ ಡಿ. ಎಂ. ಕುಲಾಲ್
ಶ್ರೀ ಸುಭಾಶ್ಚಂದ್ರ ಪಡಿವಾಳ್
ಶ್ರೀ ದುರ್ಗಾಪ್ರಸಾದ್ ರೈ ಕುಂಬ್ರ
ಶ್ರೀಮತಿ ಜಯಶೀಲ
ಶ್ರೀ ವಸಂತ ಶೆಟ್ಟಿ ಬೆಳ್ಳಾರೆ
ಶ್ರೀ ಕೃಷ್ಣಪ್ಪ ಉಪ್ಪೂರು
ಶ್ರೀ ರಘು ಇಡ್ಕಿದು
ಶ್ರೀ ಮೋಹನ್ ಕೊಪ್ಪಲ ಕದ್ರಿ
ಶ್ರೀಮತಿ ರೂಪಕಲಾ ಆಳ್ವ
ಶ್ರೀ ನವೀನ್ ಡಿ. ಪಡೀಲ್
ಶ್ರೀ ಕೆ. ಟಿ. ವಿಶ್ವನಾಥ
ಡಾ. ದಿವಾ ಕೊಕ್ಕಡ

...ಪ್ರಪಂಚದ ಇತಿಹಾಸದ ಆರಂಭದಿಂದಲೂ ಕೃಷಿಕಾರ್ಯದಲ್ಲಿ ಮಹಿಳೆಯರದು ಪುರುಷರೊಂದಿಗೆ ಸಹಭಾಗಿತ್ವದ, ಸಮಭಾಗಿತ್ವದ ದುಡಿಮೆ. ಕರಾವಳಿ ಪ್ರದೇಶದ ಬಹುತೇಕ ಮಹಿಳೆಯರೂ ಕೃಷಿಕಾಯಕದಲ್ಲಿ ತೊಡಗಿಸಿಕೊಂಡವರೇ ಮತ್ತು ಕೃಷಿ ಬದುಕಿನ ಇಷ್ಟಕಷ್ಟಗಳನ್ನು ಅನುಭವಿಸಿದವರೇ. ಕರಾವಳಿ ಪ್ರದೇಶವನ್ನು ಬಹುಬಗೆಯ ಬೆಳೆಗಳಿಂದ ಸಂಪನ್ನಗೊಳಿಸಿದವರೇ. 'ದುಡಿಮೆಯೇ ದೇವರು' ಎಂಬ ತಾತ್ವಿಕತೆಯಲ್ಲಿ ಬದುಕು ಸವೆಸುತ್ತಾ ಕೃಷಿ ಸಂಸ್ಕೃತಿಯ ಉಳಿವು, ಏಳಿಗೆಗಾಗಿ ಶ್ರಮಿಸಿದ ಈ ಬಹುಸಂಖ್ಯಾತ ಮಹಿಳೆಯರ ಸಮಷ್ಟಿ ಸಾಧನೆಗಳೆಡೆಗೆ ಬೆಳಕು ಚೆಲ್ಲುವ ಈ ಅಧ್ಯಯನ ಗ್ರಂಥವನ್ನು ಪ್ರಕಟಿಸಲು ಅಕಾಡೆಮಿಯು ಸಂತೋಷ ಪಡುತ್ತಿದೆ.

ಎಮ್. ಜಾನಕಿ ಬ್ರಹ್ಮಾವರ
ಅಧ್ಯಕ್ಷೆರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ